ISSN 2321 - 3590



ಇತಿಹಾಸ ದರ್ಪಣ

(ತ್ರೈಮಾಸಿಕ)

ಕನ್ನಡದ ಹೆಮ್ಮೆಯ ಇತಿಹಾಸ ಸಂಶೋಧನ ನಿಯತಕಾಲಿಕೆ

ಪುಸ್ತಕ 35

ಅಕ್ಟೋಬರ್ - ಡಿಸೆಂಬರ್ 2017

Itihasa Darpana

(Kannada Quarterly)

A Peer Reviewed Journal of Historical Research in Kannada

Book 35

October - December 2017

ಚಂದಾದಾರರಾಗ ಬಯಸುವಿರಾ?

'ಇತಿಹಾಸ ದರ್ಪಣ'ದ ಚಂದಾದಾರರಾಗ ಬಯಸುವವರು ನಿಮ್ಮ ಆಯ್ಕೆಯ ಚಂದಾ ಹಣವನ್ನು ಡಿ.ಡಿ /ಚೆಕ್/ ಎಂ.ಓ ಮೂಲಕ ಕೆಳಕಂಡ ವಿಳಾಸಕ್ಕೆ ಕಳುಹಿಸಿ ಕೊಡಬಹುದು.

– ಡಿ.ಡಿ ಕಳುಹಿಸಿಕೊಡುವವರು "EDITOR, ITIHASA DARPANA" ಹೆಸರಿಗೆ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಡಿ.ಡಿ.ಯನ್ನು ತೆಗೆಸಿ, ಅದನ್ನು ನಿಮ್ಮ ವಿಳಾಸವುಳ್ಳ ಪತ್ರದೊಂದಿಗೆ ನಮಗೆ ಕಳುಹಿಸಿ ಕೊಡಿ.

– ಚೆಕ್ ಕಳುಹಿಸಿಕೊಡುವವರು ಚೆಕ್ಕನ್ನು "EDITOR, ITIHASA DARPANA" ಹೆಸರಿಗೆ ಬರೆದು, ಚೆಕ್ಕಿನ ಮೇಲ್ಭಾಗದ ಎಡಮೂಲೆಯಲ್ಲಿ "ಅಕೌಂಟ್ ಪೇ" ಎಂದು ನಮೂದಿಸಿ, ನಿಮ್ಮ ವಿಳಾಸದ ಪತ್ರದೊಂದಿಗೆ ಕಳುಹಿಸಿ. **ಬೆಂಗಳೂರಿನ ಹೊರಗಡೆಯ ಚೆಕ್ಕುಗಳಾಗಿದ್ದಲ್ಲಿ ಬ್ಯಾಂಕಿನ ಸೇವಾಶುಲ್ಕ ೩೦/– ರೂ.ಗಳನ್ನು** ಚಂದಾ ಹಣದ ಮೊತ್ತದಲ್ಲಿ ಸೇರಿಸಿ ಕಳುಹಿಸಿ ಕೊಡಬೇಕು.

– ಎಂ.ಓ ಮಾಡುವವರು ನಿಮ್ಮ ವಿಳಾಸವನ್ನು ಎಂ.ಓ ಅರ್ಜಿಯ ಮೇಲ್ಭಾಗದಲ್ಲಿರುವ ಸಂದೇಶ ಎಂಬ ಸ್ಥಳದಲ್ಲಿ ತಪ್ಪದೇ ನಿಮ್ಮ ವಿಳಾಸ ಬರೆಯಿರಿ. ಇ.ಎಂ.ಓ ಮಾಡಿದ್ದಲ್ಲಿ ಎರಡುದಿನಗಳ ನಂತರ ಕರೆಮಾಡಿ ನಿಮ್ಮ ವಿಳಾಸವನ್ನು ನಮಗೆ ತಿಳಿಸಿ.

– ಇಲ್ಲವಾದಲ್ಲಿ ಬೆಂಗಳೂರಿನ ಚಾಮರಾಜಪೇಟೆಯ ಅಪೆಕ್ಸ್ ಬ್ಯಾಂಕಿನ ಪ್ರಧಾನ ಶಾಖೆಯಲ್ಲಿರುವ "EDITOR, ITIHASA DARPANA" ಹೆಸರಿನ ಚಾಲ್ತಿಖಾತೆ **ಸಂ: 101 882** ಕ್ಕೆ ಚಂದಾಹಣವನ್ನು ನಿಮ್ಮ ಹೆಸರಿನಲ್ಲಿ ಜಮಾ ಮಾಡಿ, ಸ್ವೀಕೃತಿಯ ನಕಲನ್ನು, ನಿಮ್ಮ ವಿಳಾಸದ ಪತ್ರದೊಂದಿಗೆ ನಮಗೆ ಕಳುಹಿಸಿಕೊಡಿ.

ಚಂದಾ ವಿವರ

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) – ೩೦೦/– ರೂ.ಗಳು. (**ಶಾಲಾಕಾಲೇಜು ಮತ್ತು ಸಂಘ ಸಂಸ್ಥೆಗಳಿಗೆ** – ೫೦೦/–ರೂ.ಗಳು)

ದ್ವೈವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) – ೫೦೦/– ರೂ.ಗಳು. (**ಶಾಲಾಕಾಲೇಜು ಮತ್ತು ಸಂಘ ಸಂಸ್ಥೆಗಳಿಗೆ** – ೯೦೦/–ರೂ.ಗಳು).

ಚಂದಾ ಕಳುಹಿಸಿಕೊಡಬೇಕಾದ ವಿಳಾಸ:

ಸಂಪಾದಕರು, 'ಇತಿಹಾಸ ದರ್ಪಣ',
೩೩ ಎ, ಐ.ಟಿ.ಐ ಕಾಲೇಜು ಹತ್ತಿರ,
ಕೆಂಪೇಗೌಡನಗರ, ವಿಶ್ವನೀಡಂ – ಅಂಚೆ,
ಬೆಂಗಳೂರು–೫೬೦೦೯೧.
ಮೊ– ೭೮೨೯೪೦೪೦೬೩.

The Editor, 'Itihasa Darpana'
33 A, Near I.T.I College,
Kempegowda Nagara,
Vishwaneedam-Post,
Bengaluru- 560091.
Mob- 7829404063

ISSN 2321 - 3590

ಕನ್ನಡದ ಹೆಮ್ಮೆಯ ಇತಿಹಾಸ ಸಂಶೋಧನ ನಿಯತಕಾಲಿಕೆ

ಇತಿಹಾಸ ದರ್ಪಣ

(ತ್ರೈಮಾಸಿಕ)

A Peer Reviewed Journal of
Historical Research in Kannada



ಇತಿಹಾಸ ದರ್ಪಣ
(ತ್ರೈಮಾಸಿಕ)

ಪುಸ್ತಕ ೩೫

ಅಕ್ಟೋಬರ್ - ಡಿಸೆಂಬರ್ ೨೦೧೭

Itihasa Darpana
(Kannada Quarterly)

Book 35

October - December 2017

ಸಂಪಾದಕರು
ಹಂ.ಗು. ರಾಜೇಶ್
ಮೊ: ೭೮೨೯೪ ೦೪೦೬೩

ಉಪ ಸಂಪಾದಕರು
ಸುಂಕಂ ಗೋವರ್ಧನ
ರಶ್ಮಿ ಎಸ್.
ಶಿವಕುಮಾರಿ ಎಂ.ಎಸ್.

ಪುಸ್ತಕ ವಿನ್ಯಾಸ
ಶ್ವೇತ ಬಿ.ಎಸ್.

ನಮ್ಮ ವಿಳಾಸ
ಸಂಪಾದಕರು, ಇತಿಹಾಸ ದರ್ಪಣ
#೩೩/ಎ, ಐ.ಟಿ.ಐ. ಕಾಲೇಜು
ಹತ್ತಿರ, ಕೆಂಪೇಗೌಡನಗರ
ವಿಶ್ವನೀಡಂ-ಅಂಚೆ
ಬೆಂಗಳೂರು - ೫೬೦ ೦೯೧.
ಮೊ.: ೭೮೨೯೪೦೪೦೬೩

Editor
H.G. Rajesh
Mob: 78294 04063

Sub Editors
Sunkam Govardhan
Rashmi S.
Shivakumari M.S.

ಸ್ವಾನ್ ಪ್ರಿಂಟರ್ಸ್
ಹತ್ತರ ಮುದ್ರಿತ ಹೊಸತರ ತುದಿತ
☎ 080-26742233

Our Address
Editor, ITIHASA DARPANA
33/A, Near ITI College,
Kempegowda Nagar
Vishwaneedam Post
Bengaluru - 560 091
Mob: 78294 04063

E-mail: itihasadarpana@gmail.com
Website: itihasadarpana.wordpress.com

ಓದುಗರ ಸಲಹೆ-ಸೂಚನೆಗಳನ್ನು 'ಇತಿಹಾಸ ದರ್ಪಣ'ವು ಮುಕ್ತವಾಗಿ ಸ್ವಾಗತಿಸುತ್ತದೆ.

ಲೇಖನಗಳಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳು ಲೇಖಕರ ಅಭಿಪ್ರಾಯಗಳೇ ವಿನಃ ಪತ್ರಿಕೆಯ ಅಭಿಪ್ರಾಯವಲ್ಲ. -ಸಂ.

"THE PUBLICATION OF THIS JOURNAL HAS BEEN FINANCIALLY SUPPORTED BY THE INDIAN COUNCIL OF HISTORICAL RESEARCH. THE RESPONSIBILITY FOR THE FACTS STATED ON OPINIONS EXPRESSED IS ENTIRELY OF THE AUTHOR AND NOT OF THE I.C.H.R."

ಪರಿವಿಡಿ. . .

‘ಇತಿಹಾಸ ದರ್ಪಣ’ಕ್ಕೆ ಪ್ರಬಂಧವನ್ನು ಕಳುಹಿಸುವ ಮುನ್ನ...

‘ಇತಿಹಾಸ ದರ್ಪಣ’ಕ್ಕೆ ಸಂಶೋಧನ ಪ್ರಬಂಧವನ್ನು ಕಳುಹಿಸುವವರು ಈ ಕೆಳಕಂಡ ಕ್ರಮಗಳನ್ನು ಪಾಲಿಸಬೇಕು.

- ಪ್ರಬಂಧವು ಅಪ್ರಕಟಿತವಾಗಿರಬೇಕು ಮತ್ತು ನವ ಶೋಧನೆ, ವಿನೂತನ ವಿಶ್ಲೇಷಣೆ, ಆಲೋಚನೆ ಹಾಗೂ ಸಂಶೋಧನಾ ವಿಧಾನಗಳಿಂದಾಗಿ ಹೊಸತನದಿಂದ ಕೂಡಿದ ಮತ್ತು ಚರಿತ್ರೆಯ ಅಧ್ಯಯನದ ಮೇಲೆ ಹೊಸ ಬೆಳಕು ಚೆಲ್ಲುವ ಪ್ರಬಂಧವಾಗಿರಬೇಕು.
- ಪ್ರಬಂಧವನ್ನು ‘ನುಡಿ’ ತಂತ್ರಾಂಶದಲ್ಲಿ ಬೆರಳಚ್ಚು ಮಾಡಿ ಇ-ಮೇಲ್ ಮಾಡುವುದು ಹೆಚ್ಚು ಸೂಕ್ತವಾಗಿರುತ್ತದೆ. ಉಲ್ಲೇಖದ ಟಿಪ್ಪಣಿಗಳನ್ನು ಉಲ್ಲೇಖ, ಹೆಚ್ಚಿನ ಮಾಹಿತಿ ಹಾಗೂ ಅಗತ್ಯ ವಿವರಣೆಗಳನ್ನು ಕೊನೆ ಟಿಪ್ಪಣಿಗಳ ರೂಪದಲ್ಲಿ ನೀಡಬೇಕು.
- ಕೊನೆ ಟಿಪ್ಪಣಿಗಳನ್ನು ನೀಡುವಾಗ ಲೇಖಕರ ಹೆಸರು, ಪ್ರಕಟಣಾ ವರ್ಷ, ಕೃತಿಯ ಶೀರ್ಷಿಕೆ (ಬೋಲ್ಡ್‌ನಲ್ಲಿ), ಸ್ಥಳ, ಪ್ರಕಾಶಕರು ಮತ್ತು ಪುಟಗಳ ವಿವರಗಳನ್ನು ಮೊದಲ ಬಾರಿ ನೀಡಬೇಕು. ಪುನರುಕ್ತಗೊಳ್ಳುವಾಗ ಲೇಖಕರ ಹೆಸರು, ವರ್ಷ ಬರೆದು ‘ಪೂರ್ವೋಕ್ತ’ ಎಂದು ಕೃತಿಯ ಹೆಸರ ಸ್ಥಳದಲ್ಲಿ ನಮೂದಿಸಿ ಪುಟಗಳ ಸಂಖ್ಯೆ ಸೂಚಿಸಬೇಕು. ತತ್ಕೂಡಲೇ ಉಲ್ಲೇಖಿಸುವ ಸಂದರ್ಭದಲ್ಲಿ ‘ಇಲ್ಲೇ’ ಎಂದು ನಮೂದಿಸಿ ಪುಟಗಳ ಸಂಖ್ಯೆ ಸೂಚಿಸಬೇಕು.
- ಲೇಖನಗಳನ್ನು ಉಲ್ಲೇಖಿಸುವಾಗ– ಲೇಖಕನ ಹೆಸರು, ಪ್ರಕಟಣಾ ವರ್ಷ, ಲೇಖನದ ಶೀರ್ಷಿಕೆ (‘ ’ ಈ ಚಿಹ್ನೆಯಲ್ಲಿ ಕೊಡುವುದು), ಈ ಲೇಖನ ಪ್ರಕಟವಾದ ನಿಯತಕಾಲಿಕೆ ಹೆಸರು (ಬೋಲ್ಡ್‌ನಲ್ಲಿ), ಸಂಚಿಕೆ, ಸಂಪುಟ, ವರ್ಷ, ಪ್ರಕಟವಾಗುತ್ತಿರುವ ಸ್ಥಳ ಮತ್ತು ಪುಟಗಳ ವಿವರ ಸೂಚಿಸುವುದು.
- ಸಂಪಾದಿತ ಕೃತಿಯಲ್ಲಿನ ಲೇಖನವನ್ನು ಉಲ್ಲೇಖಿಸುವಾಗ– ಲೇಖಕನ ಹೆಸರು, ಪ್ರಕಟಣಾ ವರ್ಷ, ಲೇಖನದ ಶೀರ್ಷಿಕೆ (‘ ’), ಸಂಪಾದಕರ ಹೆಸರು, ಕೃತಿಯ ಶೀರ್ಷಿಕೆ ಸ್ಥಳ, ಪ್ರಕಾಶಕರು, ಪುಟಗಳ ವಿವರ ಸೂಚಿಸುವುದು.
- ಪ್ರಬಂಧಕ್ಕೆ ಪೂರಕವಾದ ಚಿತ್ರಗಳನ್ನು ಕಳುಹಿಸಿಕೊಡಬಹುದು. ಅವುಗಳಿಗೆ ಕಡ್ಡಾಯವಾಗಿ ಚಿತ್ರ ಶೀರ್ಷಿಕೆಗಳನ್ನು ನೀಡಿರಬೇಕು.
- ಇತಿಹಾಸ ದರ್ಪಣ ಚಂದಾದಾರರಾಗಿರುವವರಿಗೆ ಮೊದಲ ಆದ್ಯತೆ.
- ಪ್ರಕಟಣೆಗೆ ಬರುವ ಪ್ರಬಂಧಗಳನ್ನು ಪೂರ್ವಾವಲೋಕನಕ್ಕಾಗಿ ತಜ್ಞರಿಗೆ ಕಳುಹಿಸಿ ಕೊಡಲಾಗುವುದು. ಆಯ್ಕೆಯಾದ ಪ್ರಬಂಧಗಳನ್ನು ಪ್ರಕಟಣಾ ಪೂರ್ವದಲ್ಲಿಯೇ ಲೇಖಕರಿಗೆ ತಿಳಿಸಲಾಗುವುದು.
- ಪ್ರಕಟವಾದ ಪ್ರಬಂಧಗಳಿಗೆ ಯಾವುದೇ ಸಂಭಾವನೆಯನ್ನು ನೀಡಲಾಗುವುದಿಲ್ಲ ಮತ್ತು ತಾವು ಕಳುಹಿಸಿಕೊಟ್ಟ ಲೇಖನ ಸಂಬಂಧ ಯಾವುದೇ ಪತ್ರ ವ್ಯವಹಾರ ಮತ್ತು ದೂರವಾಣಿ ಸಂಭಾಷಣೆಗೆ ಅವಕಾಶವಿರುವುದಿಲ್ಲ.
- ಪ್ರಬಂಧಗಳನ್ನು **‘itihasadarpana@gmail.com’**ಗೆ ಇ-ಮೇಲ್ ಮಾಡುವುದು.

–ಸಂಪಾದಕರು

ಚರಿತ್ರೆಯ ಹೊಸ ಸವಾಲುಗಳು

'ಚರಿತ್ರೆ' ಎಲ್ಲ ವಿಷಯಗಳ ಮಾಹಿತಿ ಕೋಶವಿದ್ದಂತೆ. ಯಾವುದೇ ವಿಷಯದ ಐತಿಹಾಸಿಕ ಸಂಗತಿಗಳ ಬಗೆಗಿನ ಅನುಮಾನಗಳನ್ನು ಪರಿಹರಿಸಿಕೊಳ್ಳಲು ಅಥವಾ ವಿಷಯ ಮೂಲವನ್ನು ಗುರುತಿಸಿಕೊಳ್ಳಲು ಚರಿತ್ರೆ ಒಂದು ಸಾಧನವಾಗಿದೆ. ಅನೇಕ ವೇಳೆ ವಸ್ತುನಿಷ್ಠ ಚರಿತ್ರೆ ಹೊರಸೂಸುವ ಅಂಶಗಳು ನಮ್ಮ ಮೂಲಭೂತ ಅಭಿಪ್ರಾಯಗಳನ್ನೇ ಬುಡಮೇಲು ಮಾಡುವಂತಿರುತ್ತವೆ. ಅಂತಹ ಸಂದರ್ಭಗಳಲ್ಲಿ ನಾವು ನಮ್ಮ ಅಭಿಪ್ರಾಯಗಳನ್ನು ಪರಿಷ್ಕರಿಸಿಕೊಳ್ಳಬೇಕೇ ವಿನಃ ಚರಿತ್ರೆಯನ್ನೆ ತಿದ್ದಲು ಹೋಗಬಾರದು. ಏಕೆಂದರೆ, ಆಧಾರಗಳ ಮೂಲಕ ನಡೆದದ್ದನ್ನು ನಡೆದಂತೆಯೇ ನಿರೂಪಿಸುವುದು ಚರಿತ್ರೆಯ ಮುಖ್ಯ ಲಕ್ಷಣವಾಗಿದೆ. ಅದೇ ರೀತಿ ಚರಿತ್ರೆಗೆ ಬಹುಮುಖ ಆಯಾಮಗಳು ಇರುವುದು ಕೂಡ ಮತ್ತೊಂದು ಲಕ್ಷಣವಾಗಿದೆ. ಈ ಹಿನ್ನೆಲೆಯಲ್ಲಿ ಇಂದು ಚರಿತ್ರೆಯ ಗುಣಲಕ್ಷಣಗಳಿಗೆ ದೊಡ್ಡ ಸವಾಲುಗಳು ಎದುರಾಗಿವೆ. ಅದೇನೆಂದರೆ, ಚರಿತ್ರೆಯನ್ನು ತಮ್ಮ ತಮ್ಮ ಹಿತಾಸಕ್ತಿಗಳಿಗೆ ಅನುಗುಣವಾಗಿ ತಿರುಚುವ ಪ್ರಯತ್ನಗಳು ನಡೆಯುತ್ತಿವೆ. ಮುಖ್ಯವಾಗಿ ಪರಂಪರೆಯಲ್ಲಿ ಇಲ್ಲದ್ದನ್ನು ಇತ್ತು ಎಂತಲೂ, ಇದ್ದುದನ್ನು ಇಲ್ಲವೆಂತಲೂ ಸಾಧಿಸಲು ಚರಿತ್ರೆಯನ್ನು ದುರ್ಬಳಕೆ ಮಾಡಿಕೊಳ್ಳುವ ಪರಿಪಾಠ ಇಂದು ಅತಿರೇಕಕ್ಕೆ ಹೋಗಿದೆ. ಚರಿತ್ರೆಯನ್ನು ತಿರುಚುವಂತಹ ಕೃತ್ರಿಮ ಕಾರ್ಯದಲ್ಲಿ ಕೆಲವು ಹುಸಿ ಇತಿಹಾಸಕಾರರು, ಸ್ವಯಂ ಘೋಷಿತ ಇತಿಹಾಸ ಸಂಶೋಧಕರು ತೊಡಗಿರುವುದು ಮಹಾದುರಂತವೇ ಸರಿ. ಈ ಪ್ರವೃತ್ತಿ ಹೀಗೇ ಮುಂದುವರೆದರೆ ಮೂಲಭೂತವಾದದ ಚರಿತ್ರೆಯೇ ವಿಜೃಂಭಿಸಲಾರಂಭಿಸುತ್ತದೆ. ಪರಿಣಾಮವಾಗಿ, ಸಮಾಜದ ಸ್ವಾಸ್ಥ್ಯವೇ ಕದಡಿ ಹೋಗುವ ಸಂಭವವೇ ಹೆಚ್ಚಿರುತ್ತದೆ.

ಇತ್ತೀಚಿನ ದಿನಗಳಲ್ಲಿ ಹುಸಿ ಇತಿಹಾಸಕಾರರು ಮೂಲಭೂತವಾದದ ಚರಿತ್ರೆಯನ್ನು ಕಟ್ಟಿ ಮಾಧ್ಯಮಗಳಲ್ಲಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ವಿಜೃಂಭಿಸುತ್ತಿರುವ ಪರಿ ಅಸಹ್ಯಕರವಾಗಿದೆ. ಅದೇ ರೀತಿ ಚರಿತ್ರೆಯನ್ನು ಕನಿಷ್ಠ ಸಂಕೋಚವೂ ಇಲ್ಲದೆ ನಿರ್ಲಜ್ಜೆಯಿಂದ ಮನಬಂದಂತೆ ಮಾತನಾಡುವ ಮತ್ತು ಬರೆಯುವ ಮೂಲಕ ಅಜ್ಞಾನದ ಪ್ರದರ್ಶನಗಳು ನಡೆಯುತ್ತಿವೆ. ಈ ಪ್ರವೃತ್ತಿಗಳು ಇತಿಹಾಸವೇ ಗೊತ್ತಿಲ್ಲದವರಲ್ಲಿ ತಪ್ಪು ತಿಳಿವಳಿಕೆ ಮತ್ತು ಭ್ರಮೆಯನ್ನು ಸೃಷ್ಟಿಸುತ್ತದೆ. ಮುಂದಿನ ಅನಾಹುತಗಳಿಗೆ ದಾರಿಮಾಡಿಕೊಡುತ್ತದೆ. ಏಕೆಂದರೆ, ಅಜ್ಞಾನದಿಂದ ಅಜ್ಞಾನವನ್ನಷ್ಟೆ ಸೃಷ್ಟಿಸಲು ಸಾಧ್ಯ!

ಸಂ.ಗು. ರಾಜೇಶ್

ಕೆಲವು ತಿಂಗಳುಗಳ ಹಿಂದೆ ಸಮುದಾಯವೊಂದರ ಸಾಂಸ್ಕೃತಿಕ ನಾಯಕನ ಜಯಂತಿಯನ್ನು ಆಚರಿಸಲು ಸರ್ಕಾರ ಮುಂದಾಯಿತು. ಜಯಂತಿ ಆಚರಿಸುವುದಾದರೆ ಆ ನಾಯಕ ಜನಿಸಿದ ದಿನದಂದೆ ಆಚರಿಸಬೇಕು. ಆದರೆ ಆ ನಾಯಕ ಯಾವ ದಿನ ಜನಿಸಿದ್ದಾನೆ ಎನ್ನುವುದರ ಬಗೆಗೆ ಯಾವುದೇ ಮಾಹಿತಿ ಇಲ್ಲ. ಯಾವ ದಿನ ಆಚರಿಸಬೇಕು ಎಂಬ ಕುರಿತು ತಿಳಿಸುವಂತೆ ಆ ಸಮುದಾಯದ ಮಠಾಧೀಶರನ್ನು ಮತ್ತು ಮುಖಂಡರನ್ನು ಸರ್ಕಾರ ಕೇಳಿತು. ಈ ಸಂದರ್ಭದಲ್ಲಿ ಗತಿಸಿಹೋಗಿರುವ ಆ ಸಾಂಸ್ಕೃತಿಕ ನಾಯಕನಿಗೆ 'ಜನನ ಪ್ರಮಾಣಪತ್ರ' ವಿತರಿಸುವ ಸಲುವಾಗಿ 15ಕ್ಕೂ ಹೆಚ್ಚು ಮಂದಿಯನ್ನು ಒಳಗೊಂಡ 'ತಜ್ಞಾ(ಐನಾ)ತಿತಜ್ಞರ' ಸಮಿತಿಯು ರಚನೆಗೊಂಡಿತು. ಈ ಸಮಿತಿಯ ಸದಸ್ಯರೆಲ್ಲರೂ ಸೇರಿ ಗಹನವಾದ ಚರ್ಚೆ ನಡೆಸಿ, ಏಪ್ರಿಲ್ ತಿಂಗಳ ಒಂದು ದಿನವನ್ನು ಸೂಚಿಸಿದರು. ಆ ದಿನಾಂಕದಂದೆ ಆಚರಿಸಲು ಸರ್ಕಾರ ಕೂಡ ಸಮ್ಮತಿಸಿತು. ಅಷ್ಟರಲ್ಲಿ ಮತ್ತಾರೋ ಚಾಣಕ್ಷನೊಬ್ಬ ಸಮುದಾಯದ ಮಠಾಧೀಶರ ಗಮನ ಸೆಳೆದು "ಸ್ವಾಮಿ, ಏಪ್ರಿಲ್ ತಿಂಗಳಲ್ಲಿ ಶಾಲಾ ಕಾಲೇಜುಗಳಿಗೆ ಬೇಸಿಗೆ ರಜೆ ಇರುತ್ತದೆ. ಈ ಸಮಯದಲ್ಲಾದರೆ ಶಾಲೆ-ಕಾಲೇಜುಗಳಲ್ಲಿ ಜಯಂತಿ ಆಚರಿಸುವುದಿಲ್ಲ; ಹೀಗಾದರೆ, ಮಕ್ಕಳಿಗೆ ನಮ್ಮ ನಾಯಕನ ಪರಿಚಯವಾಗುವುದಿಲ್ಲ. ಈ ದಿನಾಂಕದ ಬದಲಿಗೆ ಜೂನ್‌ನಲ್ಲಿ ಶಾಲೆ-ಕಾಲೇಜುಗಳು ತೆರೆಯುವುದರಿಂದ ಜೂನ್ ಅಂತ್ಯದ ಹೊತ್ತಿಗೆ ಆಚರಿಸುವುದು ಸೂಕ್ತ"ವೆಂದು ಸಲಹಾ ರೂಪದಲ್ಲಿ ವಿನಂತಿಸಿದ. ಈ ವಿಚಾರ ಸರಿ ಎಂದು ಮನಗಂಡ ಮಠಾಧೀಶರು ಪುನಃ 'ತಜ್ಞಾ(ಐನಾ)ತಿತಜ್ಞರ' ಕೂಟವನ್ನು ಕರೆದು ಜೂನ್ ತಿಂಗಳ ಕೊನೆಯ ದಿನಾಂಕ ಒಂದಕ್ಕೆ ಸೂಕ್ತವಾಗುವಂತೆ ನಿಗದಿಪಡಿಸಲು ಸೂಚಿಸಿದರು. ಕೊನೆಗೆ ಜೂನ್ ಅಂತ್ಯದಲ್ಲಿ ಒಂದು ದಿನವನ್ನು ಗೊತ್ತು ಮಾಡಿದ 'ತಜ್ಞಾ(ಐನಾ)ತಿತಜ್ಞರ' ಕೂಟ ಕೊನೆಗೂ 'ಸಾಂಸ್ಕೃತಿಕ ನಾಯಕ'ನಿಗೆ 'ಮರುಜನನ ಪ್ರಮಾಣ ಪತ್ರ'ವನ್ನು ಕೊಟ್ಟು ಬಿಟ್ಟರು!

ಇಲ್ಲಿ, ನಡೆದಿರುವ ಪ್ರಕರಣವೊಂದನ್ನು ನಾನು ತುಸು ರಂಜನೀಯವಾಗಿ ದಾಖಲಿಸಿರಬಹುದು. ಆದರೆ ವಸ್ತುಸ್ಥಿತಿಯ ಚೌಕಟ್ಟಿನಲ್ಲಿಯೇ ಹೇಳಿರುವ ಈ ಪ್ರಕರಣದಲ್ಲಿ ನನ್ನ ಆಕ್ಷೇಪಣೆ ಇಷ್ಟೇ, ಸಾಂಸ್ಕೃತಿಕ ನಾಯಕನ ಜಯಂತಿಯ ಆಚರಣೆಗೆ ದಿನಾಂಕ ಗೊತ್ತು ಮಾಡಲು ಇಷ್ಟೆಲ್ಲ ಪ್ರಹಸನ ಬೇಕೇ? ಪ್ರತಿಯೊಬ್ಬ ವ್ಯಕ್ತಿ ವರ್ಷದ ಯಾವುದೋ ಒಂದು ದಿನ ಹುಟ್ಟಿರಲೇ ಬೇಕು. ನಿರ್ದಿಷ್ಟ ಜನ್ಮ ದಿನಾಂಕ ಗೊತ್ತಿಲ್ಲದ ಕಾರಣ, ಆಚರಣೆಗೆ ಅನುಕೂಲವಾಗುವ ದಿನಾಂಕವೊಂದನ್ನು ಸೂಚಿಸುತ್ತಿರುವ ಬಗ್ಗೆ ಮುಕ್ತವಾಗಿ ಹೇಳಿಕೊಂಡಿದ್ದರೆ ಅವಮಾನವೂ ಅಲ್ಲ; ಆ ಬಗ್ಗೆ ಆಕ್ಷೇಪಣೆಗಳೂ ಇರುತ್ತಿರಲಿಲ್ಲ. ತಜ್ಞಾ(ಐನಾ)ತಿತಜ್ಞರನ್ನು ಸೇರಿಸಿ ಇಂತಹ ದಿನದಂದೆ ಐತಿಹಾಸಿಕ ವ್ಯಕ್ತಿ ಜನಿಸಿದನೆಂದು Birth and Rebirth Certificate ನೀಡುವ ಪ್ರಹಸನ ನಡೆದಿದ್ದು ಮಾತ್ರ ಚರಿತ್ರೆಗೆ ಮಾಡಿದ ಅಪಚಾರವೇ ಸರಿ.

ಇನ್ನೊಂದು ಪ್ರಕರಣವನ್ನು ಇಲ್ಲಿ ಹಂಚಿಕೊಳ್ಳಲು ಇಷ್ಟಪಡುತ್ತೇನೆ. ರಾಜ್ಯ ಸರ್ಕಾರ ನಡೆಸಲು ಉದ್ದೇಶಿಸಿದ್ದ ಟಿಪ್ಪು ಜಯಂತಿಯ ಹಿನ್ನೆಲೆಯಲ್ಲಿ 'ಟಿಪ್ಪು... ತಪ್ಪು... ಒಪ್ಪು...'

ಎಂಬ ವಿಷಯ ಕುರಿತು ಚರ್ಚೆಗೆ ಖಾಸಗಿ ವಾಹಿನಿಯೊಂದರ ಸ್ನೇಹಿತರು ಕರೆದರು. ಮೊದಲು ನಯವಾಗಿಯೇ ನಿರಾಕರಿಸಿದೆ. ಆದರೂ ಅವರ ಒತ್ತಾಯಕ್ಕೆ ಮಣಿದು ಹೋಗಬೇಕಾಯಿತು. ಅಲ್ಲಿ ನಡೆದ ಚರ್ಚೆ ನನಗೆ ಮುಜುಗರ ಮತ್ತು ಕಸಿವಿಸಿಯನ್ನುಂಟು ಮಾಡಿದವು. ನನ್ನೊಡನೆ ಚರ್ಚೆಯಲ್ಲಿ ಒಬ್ಬರು ಸಾಹಿತಿ, ಮತ್ತೊಬ್ಬರು ಕಾಂಗ್ರೆಸ್ ಮುಖಂಡರು, ಇನ್ನೊಬ್ಬರು ರಾಷ್ಟ್ರೀಯ ನಿಯತಕಾಲಿಕೆಯೊಂದರ ಪತ್ರಕರ್ತರು ಭಾಗವಹಿಸಿದ್ದರು. ಪತ್ರಕರ್ತ ಮತ್ತು ಸಾಹಿತಿಯ ಮಧ್ಯೆ ಏರ್ಪಟ್ಟ ಟಿಪ್ಪು ಪರ ಮತ್ತು ವಿರುದ್ಧದ ಖಂಡತುಂಡ ವಾದಗಳ ನಡುವೆ ನನ್ನ ವಾದ ಮತ್ತು ಟಿಪ್ಪುವಿನ ನೈಜ ವ್ಯಕ್ತಿತ್ವ ಎರಡೂ ಕಳೆದು ಹೋದವು. ನಿರೂಪಕಿ ಸಹ ನನ್ನ ಮಾತುಗಳನ್ನು ತುಂಡರಿಸಲು ತೋರುತ್ತಿದ್ದ ಆತುರ ಹಾಗೂ ಪ್ರಚೋದನಕಾರಿ ಮಾತುಗಳಿಗೆ ಅವರು ನೀಡುತ್ತಿದ್ದ ಮನ್ನಣೆಯನ್ನು ನೋಡಿದರೆ ಒಂದಂತೂ ಸ್ಪಷ್ಟವಾಗುತ್ತಿತ್ತು. ವಸ್ತುನಿಷ್ಠ ಮಾತುಗಳಿಗಿಂತ ಪ್ರಚೋದನಕಾರಿ ಮಾತುಗಳಿಗೆ ಮಾತ್ರ ಮನ್ನಣೆ ದೊರೆಯುತ್ತಿತ್ತು. ಅಂತಿಮವಾಗಿ ನಾನು ಹೇಳಬೇಕಾದುದನ್ನು ಹೇಳಲಾಗಲೇ ಇಲ್ಲ. ಹೇಳಬೇಕೆಂದುಕೊಂಡದ್ದು ಇಷ್ಟೇ: "ಯಾವನೇ ಪ್ರಭುವಾದರೂ ಕೂಡ ತನ್ನ ಅಸ್ತಿತ್ವಕ್ಕೆ ಧಕ್ಕೆಯಾದಾಗ ನಿರ್ದಯವಾಗಿ ವರ್ತಿಸುತ್ತಾನೆ. ಅಶೋಕ ಲಕ್ಷಾಂತರ ಜನರನ್ನು ಕಳಿಂಗ ಯುದ್ಧದಲ್ಲಿ ಹತ್ಯೆ ಮಾಡಲಿಲ್ಲವೇ? ಮೈಸೂರಿನ ಒಡೆಯರೊಬ್ಬ 300 ಜನ ಜಂಗಮರನ್ನು ಕಗ್ಗೊಲೆ ಮಾಡಲಿಲ್ಲವೇ? ಇವುಗಳು ಪ್ರಭುತ್ವದ ಅಸ್ತಿತ್ವದ ದೃಷ್ಟಿಯಿಂದ ಆಯಾಯ ಸಂದರ್ಭಕ್ಕೆ ಅನಿವಾರ್ಯವಾಗಿತ್ತು ಎನ್ನುವುದಾದರೆ, ಕೊಡಗು ಮತ್ತು ಮಲಬಾರಿನಲ್ಲಿ ಟಿಪ್ಪುವು ನಡೆಸಿದ ಹತ್ಯೆಯನ್ನು ಕೂಡ ಅದೇ ಚೌಕಟ್ಟಿನಲ್ಲಿಟ್ಟು ನೋಡಬೇಕು... ಟಿಪ್ಪು ಜನವಿರೋಧಿಯಾಗಿದ್ದರೆ ಜನಪದರು ಅವನ ಮೇಲೆ ಲಾವಣಿಗಳನ್ನು ಕಟ್ಟಿ ಹಾಡುತ್ತಿರಲಿಲ್ಲ... ಜಗತ್ತಿನಲ್ಲಿ ಯಾವೊಬ್ಬ ರಾಜನೂ ಪರಿಪೂರ್ಣನಲ್ಲ. ಹಾಗೆಯೇ ಟಿಪ್ಪುವಿನ ವ್ಯಕ್ತಿತ್ವದಲ್ಲಿಯೂ ತಪ್ಪು-ಒಪ್ಪುಗಳಿರುವುದು ಸಹಜವೇ ಆಗಿದೆ... ಇಂದು ಸಾಂಸ್ಕೃತಿಕ ನಾಯಕರ ಜಯಂತಿಗಳನ್ನು ಆಚರಿಸುವುದು ಸರ್ಕಾರದ ಕೆಲಸವಾಗಬಾರದು. ಕಲ್ಯಾಣ ರಾಜ್ಯ ನಿರ್ಮಾಣ ಸರ್ಕಾರದ ಆದ್ಯತೆಗಳಾಗಬೇಕು. ಜನರು ತಮಗೆ ಇಷ್ಟ ಬಂದ ವ್ಯಕ್ತಿಗಳ ಜಯಂತಿಗಳನ್ನು ಆಚರಿಸಿಕೊಳ್ಳಲು ಸ್ವತಂತ್ರರು. ಅದನ್ನು ಅವರಿಗೆ ಬಿಟ್ಟುಬಿಡಿ. ಜಾತಿಗೊಬ್ಬ ಸಾಂಸ್ಕೃತಿಕ ನಾಯಕನ ಜಯಂತಿ; ಈ ಹಿನ್ನೆಲೆಯಲ್ಲಿ ಸರ್ಕಾರಿ ರಜೆ ಘೋಷಣೆ; ಇವೆಲ್ಲ ಸರ್ಕಾರದ ಆದ್ಯತೆಗಳಾಗಬಾರದು..." ಇತ್ಯಾದಿ ನನ್ನ ನಿಲುವಾಗಿತ್ತು. ಆದರೆ ಪರ ಮತ್ತು ವಿರೋಧದ ಆರ್ಭಟಗಳ ನಡುವೆ ಟಿಪ್ಪುವಿನ ನೈಜ ವ್ಯಕ್ತಿತ್ವ ಕಣ್ಮರೆಯಾಗಿ ಹೋಯಿತು.

ಇನ್ನೊಂದು ಪ್ರಕರಣದಲ್ಲಿ ನಮ್ಮ ಅಕಾಡೆಮಿಕ್ ವಲಯದ ಬೌದ್ಧಿಕ ದಿವಾಳಿತನದ ಒಂದು ಸಂದರ್ಭವನ್ನು ಇಲ್ಲಿ ಹಂಚಿಕೊಳ್ಳಲು ನನಗೆ ನೋವು ಮತ್ತು ಮುಜುಗರ ಎರಡೂ ಆಗುತ್ತಿದೆ. ಆದರೂ ಇಂತಹ ವಿಚಾರಗಳನ್ನು ಇಲ್ಲಲ್ಲದೆ ಮತ್ತೆಲ್ಲಿ ಹೇಳಿಕೊಳ್ಳಲಿ? ಕೆಲವು ಸಮಯದ ಹಿಂದೆ ವಿಶ್ವವಿದ್ಯಾಲಯವೊಂದರಲ್ಲಿ ಪಿಎಚ್.ಡಿ ಸಂಶೋಧನಾ ಮಹಾಪ್ರಬಂಧದ ಮಂಡನೆ ನಡೆಯುತ್ತಿತ್ತು. ಅಲ್ಲಿ ಮಹಾಪ್ರಬಂಧದ ಮೌಲ್ಯಮಾಪಕರೂ

ಸಹ ಉಪಸ್ಥಿತರಿದ್ದರು. ಮಹಾಪ್ರಬಂಧದವು ಪ್ರಸಿದ್ಧ ಇತಿಹಾಸಗಾರ್ತಿ ರೋಮಿಲಾ ಥಾಪರ್ ಅವರ ಅಧ್ಯಯನವನ್ನು ಕೇಂದ್ರೀಕರಿಸಿತ್ತು. ಚರ್ಚೆಯ ಸಂದರ್ಭದಲ್ಲಿ ಮೌಲ್ಯಮಾಪಕರು ರೋಮಿಲಾ ಥಾಪರ್ ಅವರ ಚಿಂತನಾ ಶಾಲೆಯ ಬಗೆಗೆ ಹೇಳಿದ ಮಾತುಗಳು ನನ್ನಲ್ಲಿ ದಿಗ್ಭ್ರಮೆ ಮೂಡಿಸಿತು. ಕಾರ್ಯಕ್ರಮದಲ್ಲಿದ್ದ ಕೆಲವು ಇತಿಹಾಸಕಾರರು ಮುಖಾಮುಖಿ ನೋಡಿಕೊಳ್ಳುವಂತೆ ಮಾಡಿತು. ಆ ಮೌಲ್ಯಮಾಪಕರು ಹೇಳಿದ್ದು ಇಷ್ಟೆ: "ರೋಮಿಲಾ ಥಾಪರ್, Totalitarian Historian… Free Historian…" ನನಗೆ ತಿಳಿದಿರುವಂತೆ Totalitarian ಎಂಬುದು ನಿರಂಕುಶ, ಸರ್ವಾಧಿಕಾರಿ ಎಂಬ ಅರ್ಥಗಳನ್ನು ಕೊಡುತ್ತದೆ. ಆಶ್ಚರ್ಯ ಎಂದರೆ ಥಾಪರ್ ಅವರು ಅದಕ್ಕೆ ವ್ಯತಿರಿಕ್ತವಾದ ನಿಲುವು ಮತ್ತು ಆಶಯಗಳನ್ನು ಹೊಂದಿರುವವರು. ಆ ಕಾರ್ಯಕ್ರಮದಲ್ಲಿ ಥಾಪರ್ ಅವರು ಇದ್ದಿದ್ದರೆ ಬಹುಶಃ ಅವರಿಗೆ ಆಘಾತವಾಗುತ್ತಿದ್ದುದು ಗ್ಯಾರಂಟಿ!

ಬಹುಶಃ ಅನೇಕರಿಗೆ ಗೊತ್ತಿರಲಾರದು. ಥಾಪರ್ ಅವರು ಎರಡು ಬಾರಿ ಪದ್ಮಭೂಷಣ ಪ್ರಶಸ್ತಿಗೆ ಆಯ್ಕೆಯಾಗಿದ್ದರು. ಎರಡೂ ಬಾರಿಯೂ ಪ್ರಶಸ್ತಿಯನ್ನು ನಿರಾಕರಿಸಿದರು. ಅದಕ್ಕೆ ಅವರು ಕೊಟ್ಟ ಕಾರಣ ಪ್ರಶಸ್ತಿಯನ್ನು ಹೊಡೆದುಕೊಳ್ಳುವವರಿಗೆ ಮತ್ತು ಪಡೆದುಕೊಳ್ಳುವವರಿಗೆ ಇಬ್ಬರಿಗೂ ಎಚ್ಚರಿಕೆಯ ಮಾತಾಗಿತ್ತು. "ಪ್ರಭುತ್ವ ನೀಡುವ ಪ್ರಶಸ್ತಿಗಳು ನನಗೆ ಬೇಡ; ಶೈಕ್ಷಣಿಕ ಮತ್ತು ವೃತ್ತಿಪರ ಪ್ರಶಸ್ತಿಗಳನ್ನು ಮಾತ್ರ ಒಪ್ಪುತ್ತೇನೆ." ಸಾಮಾನ್ಯವಾಗಿ, ರೋಮಿಲಾ ಥಾಪರ್ ಮಾರ್ಕ್ಸ್‌ವಾದಿ ಇತಿಹಾಸಕಾರರೆಂದೇ ಗುರ್ತಿಸಲ್ಪಡುತ್ತಾರೆ. ತಾತ್ವಿಕವಾಗಿ ಮಾರ್ಕ್ಸ್‌ವಾದಿಗಳು ಸರ್ವಾಧಿಕಾರ ಧೋರಣೆಯ ವಿರೋಧಿಗಳು. ಅಂಥವರನ್ನೆ ಮಹಾಪ್ರಬಂಧದ ಮೌಲ್ಯಮಾಪಕರು Totalitarian ಎಂದಿದ್ದು ಅಚ್ಚರಿಪಡುವಂತೆ ಮಾಡಿತು. ಅದೇ ರೀತಿ ಆ ತಜ್ಞರು ಬಳಸಿದ ಮತ್ತೊಂದು ಪದ Free Historian. ಇಂತಹ ಒಂದು ಇತಿಹಾಸಕಾರರ ಶಾಲೆ ಅಥವಾ ಪಂಥ ಇದೆಯೇ ಎಂಬುದು ನನಗೆ ಈವರೆಗೂ ತಿಳಿದಿಲ್ಲ. ನನ್ನ ಸೀಮಿತ ತಿಳಿವಳಿಕೆಯನ್ನು ಬದಿಗಿಟ್ಟು ಅಂತರ್ಜಾಲದಲ್ಲಿಯೂ ಜಾಲಾಡಿದೆ. ಅಲ್ಲಿಯೂ ಅದರ ಸುಳಿವೂ ಸಿಗಲಿಲ್ಲ. ಈ ರೀತಿಯಾಗಿ ಅಕಾಡೆಮಿಕ್ ವಲಯದಲ್ಲಿ ಇತಿಹಾಸ ಪ್ರಾಧ್ಯಾಪಕರೊಬ್ಬರು ಬಾಯಿಗೆ ಬಂದಂತೆ ಮಾತನಾಡುತ್ತಾರೆಂದರೆ ಅವರ ಬೋಧನೆ ಕೇಳಿ ಕಲಿಯುವವರ ಕಥೆಯೇನು? ಭವಿಷ್ಯದ ಚರಿತ್ರೆಯ ಗತಿ ಏನು?

ಕೊನೆಯದಾಗಿ, ಒಂದು ಪ್ರಕರಣವನ್ನು ಹೇಳಲೇ ಬೇಕು. ಇತ್ತೀಚೆಗೆ ನಾನು ಸಂಶೋಧನೆಯನ್ನು ಕೈಗೊಳ್ಳುತ್ತಿರುವ ಕ್ಷೇತ್ರವೊಂದಕ್ಕೆ ಸಂಬಂಧಿಸಿದ ಶಾಸನ ಸಂಪುಟವನ್ನು ಅಧ್ಯಯನ ನಡೆಸುತ್ತಿದ್ದೆ. ಅದು ಬೆಂಗಳೂರು ವಿಶ್ವವಿದ್ಯಾಲಯದ ಪೀಠವೊಂದರಿಂದ ಹೊರಬಂದಿರುವ ಪಾಳೇಗಾರ ಮನೆತನವೊಂದಕ್ಕೆ ಸೇರಿದ ಶಾಸನ ಸಂಪುಟ. ಅದರ ಸಂಪಾದಕರು ಶಾಸನಗಳ ಪರಿಷ್ಕರಣೆಯ ನೆಪದಲ್ಲಿ ಕೆಲವು ಶಾಸನಗಳನ್ನು ವಸ್ತುನಿಷ್ಠತೆಗೆ ವಿರುದ್ಧವಾಗಿ ತಿರುಚಿದ್ದಾರೆ. ಈ ಸಂಪುಟದ ಬಹುತೇಕ ಶಾಸನಗಳನ್ನು ನೂರು ವರ್ಷಗಳಿಗೂ ಹಿಂದೆ ಬಿ.ಎಲ್.ರೈಸ್ ಅವರು **ಎಪಿಗ್ರಾಫಿಯ ಕರ್ನಾಟಿಕ** ಸಂಪುಟಗಳಲ್ಲಿ ಪ್ರಕಟಿಸಿದ್ದರು. ಅಂದು ರೈಸ್ ಅವರು ಓದಲು ಆಗದಿರುವುದನ್ನು ಪ್ರಸ್ತುತ ಸಂಪಾದಕರು ನೀರುಕುಡಿದಷ್ಟು

ಸಲೀಸಾಗಿ ಪರಿಷ್ಕರಿಸಿರುವಂತೆ ಕಾಣುತ್ತದೆ. ಶಾಸನ ಪರಿಷ್ಕರಣೆ ಎಂದರೆ ರೈಸ್ ಅವರು ಪ್ರಕಟಿಸಿರುವ ಶಾಸನಗಳನ್ನು ಹುಡುಕಿ, ಅವುಗಳನ್ನು ಮರು ಓದಿಗೆ ಒಳಪಡಿಸಿ ರೈಸ್ ಅವರು ಕೊಟ್ಟಿರುವ ಪಾಠಕ್ಕೂ ಮರುಓದಿನ ಸಂದರ್ಭದಲ್ಲಿ ಕಂಡುಬರುತ್ತಿರುವ ಪಾಠಕ್ಕೂ ಇರುವ ವ್ಯತ್ಯಾಸವನ್ನು ಗುರುತಿಸುವುದೇ ಪರಿಷ್ಕರಣೆ. ಅಂದು ರೈಸ್ ಅವರು ಓದಿದ ಶಾಸನಗಳು ಇಂದು ಎಷ್ಟೋ ಕಡೆ ಸಿಗುವುದೂ ಇಲ್ಲ. ಸಿಕ್ಕರೂ, ಅವತ್ತಿಗೂ ಇವತ್ತಿಗೂ ಅಕ್ಷರಗಳು ಸಾಕಷ್ಟು ಹಾನಿಗೊಂಡಿರುತ್ತವೆ. ಈ ಎಲ್ಲ ಸವಾಲುಗಳ ನಡುವೆಯೂ ರೈಸ್ ಓದಿರುವ ಪಾಠವನ್ನು ಪರಿಷ್ಕರಿಸುವುದು ಮತ್ತೂ ಸವಾಲಿನ ಕೆಲಸ! ಆದರೆ ಸಂಪಾದಕರು ಈ ಎಲ್ಲ ಸವಾಲುಗಳನ್ನು ಗಂಭೀರವಾಗಿ ಪರಿಗಣಿಸಿದಂತೆ ಕಾಣುತ್ತಿಲ್ಲ. ಏಕೆಂದರೆ, ಕೆಲವು ಕಡೆಗಳಲ್ಲಿ ಉದ್ದೇಶಪೂರ್ವಕವಾಗಿಯೇ ಶಾಸನದ ಪಾಠಗಳನ್ನು ತಿರುಚಿ ಕೃತ್ರಿಮ ಪಾಠಗಳನ್ನು ನೀಡಿರುವ ಶಂಕೆ ವ್ಯಕ್ತವಾಗುತ್ತಿದೆ. ಅದಕ್ಕೊಂದು ಸಣ್ಣ ನಿದರ್ಶನವೆಂದರೆ, ಸಂಪುಟದ ಸಂಪಾದಕರು ಎಂ.ಎ.ಆರ್.ನಲ್ಲಿ ನೀಡಿರುವ ಶಾಸನದ ಸಾರಾಂಶವನ್ನು ಆಧರಿಸಿ 20 ಸಾಲುಗಳ ಶಾಸನ ಪಾಠವನ್ನು ತಮ್ಮ ಬುದ್ಧಿಕೌಶಲ್ಯದ ಮೂಲಕ ಮರುಸೃಷ್ಟಿಸಿದ್ದಾರೆ! ಈ ಶಾಸನ ಸಂಪುಟವನ್ನು ಸೂಕ್ಷ್ಮವಾಗಿ ಅಧ್ಯಯನ ನಡೆಸುತ್ತಾ ಹೋದಂತೆಲ್ಲ ಇದರ ಹಿಂದೆ ಬೇರೆಯದೇ ಆದ ಹಿತಾಸಕ್ತಿ ಅಡಗಿರುವುದಂತೂ ಸ್ಪಷ್ಟವಾಗುತ್ತದೆ. ಶಾಸನ ಸಂಪಾದನಾ ಶಾಸ್ತ್ರಕ್ಕೆ ವಿರುದ್ಧವಾಗಿ ಸಂಪಾದಕರು ನಡೆಸಿರುವ ಕಾರ್ಯ ಅಕ್ಷಮ್ಯ. ಈ ಸಂಪುಟವನ್ನು ಆಧರಿಸಿ, ಚರಿತ್ರೆಯ ಅಧ್ಯಯನಕ್ಕಿಳಿದರೆ ಸಂಶೋಧಕರು ಹಳ್ಳಹಿಡಿಯುವುದಂತು ಗ್ಯಾರಂಟಿ! ಜನಪ್ರಿಯ ಶಾಸನತಜ್ಞರೇ ಈ ಕೆಲಸ ಮಾಡಿದರೆ ಮುಂದೇನು ಗತಿ? ಈ ಬಗ್ಗೆ ಲೇಖನವೊಂದನ್ನು ಬರೆಯುವ ಇರಾದೆ ಇದೆ. ಅದರಲ್ಲಿ ಶಾಸನ ಸಂಪುಟದಲ್ಲಿನ ಶಾಸನ ಪಾಠಗಳ ಕೃತ್ರಿಮತೆಯ ಬಗೆಗೆ ಮತ್ತಷ್ಟು ಬೆಳಕು ಚೆಲ್ಲಲಿದ್ದೇನೆ.

ಹೀಗೆ ಹೇಳುತ್ತಾ ಹೋದರೆ ಇಂತಹ ಪ್ರಕರಣಗಳು ಒಂದೊಂದಾಗಿ ಕಣ್ಮುಂದೆ ಬರುತ್ತಲೇ ಹೋಗುತ್ತವೆ. ಆದರೆ ಇಲ್ಲಿ ನನಗೊಂದು ಮಿತಿ ಇರುವುದರಿಂದ ಹೆಚ್ಚು ಲಂಬಿಸಲು ಹೋಗುವುದಿಲ್ಲ. ಒಟ್ಟಾರೆ, ನಿಜವಾದ ಸಂಶೋಧಕನಿಗೆ ವಸ್ತುನಿಷ್ಠ ಚರಿತ್ರೆ ಆದ್ಯತೆಯಾಗಬೇಕು ಮತ್ತು ವಾಸ್ತವದ ಹುಡುಕಾಟ ಉದ್ದೇಶವಾಗಬೇಕು. ಇತಿಹಾಸದ ಬಗೆಗೆ ಕಳಕಳಿ ಮತ್ತು ಬದ್ಧತೆಯುಳ್ಳವರು ಅದರ ಉಳಿವಿಗಾಗಿ ಹುಸಿ ಇತಿಹಾಸಕಾರರ ಮತ್ತು ಕೃತ್ರಿಮ ಸಂಶೋಧಕರ ವಿರುದ್ಧ ಇಂದು ನಿಷ್ಠುರವಾಗಿ ಧ್ವನಿ ಎತ್ತಬೇಕಿದೆ. ಇಲ್ಲವಾದರೆ ಭವಿಷ್ಯದ ದಿನಗಳಲ್ಲಿ ಹುಸಿ ಇತಿಹಾಸವೇ ಮೆರೆಯಲಿದೆ! ಇದೇ ಪ್ರಸ್ತುತ ಚರಿತ್ರೆಗೆ ಎದುರಾಗಿರುವ ಹೊಸ ಸವಾಲುಗಳು.

ಹಂ.ಗು. ರಾಜೇಶ್
ಸಂಪಾದಕರು

ಚಂದಾದಾರರಾಗ ಬಯಸುವಿರಾ?

'ಇತಿಹಾಸ ದರ್ಪಣ'ದ ಚಂದಾದಾರರಾಗ ಬಯಸುವವರು ನಿಮ್ಮ ಆಯ್ಕೆಯ ಚಂದಾ ಹಣವನ್ನು ಡಿ.ಡಿ /ಚೆಕ್/ ಎಂ.ಓ ಮೂಲಕ ಕೆಳಕಂಡ ವಿಳಾಸಕ್ಕೆ ಕಳುಹಿಸಿ ಕೊಡಬಹುದು.

– ಡಿ.ಡಿ ಕಳುಹಿಸಿಕೊಡುವವರು "EDITOR, ITIHASA DARPANA" ಹೆಸರಿಗೆ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಡಿ.ಡಿ.ಯನ್ನು ತೆಗೆಸಿ, ಅದನ್ನು ನಿಮ್ಮ ವಿಳಾಸವುಳ್ಳ ಪತ್ರದೊಂದಿಗೆ ನಮಗೆ ಕಳುಹಿಸಿ ಕೊಡಿ.

– ಚೆಕ್ ಕಳುಹಿಸಿಕೊಡುವವರು ಚೆಕ್ಕನ್ನು "EDITOR, ITIHASA DARPANA" ಹೆಸರಿಗೆ ಬರೆದು, ಚೆಕ್ಕಿನ ಮೇಲ್ಭಾಗದ ಎಡಮೂಲೆಯಲ್ಲಿ "ಅಕೌಂಟ್ ಪೇ" ಎಂದು ನಮೂದಿಸಿ, ನಿಮ್ಮ ವಿಳಾಸದ ಪತ್ರದೊಂದಿಗೆ ಕಳುಹಿಸಿ. **ಬೆಂಗಳೂರಿನ ಹೊರಗಡೆಯ ಚೆಕ್ಕುಗಳಾಗಿದ್ದಲ್ಲಿ ಬ್ಯಾಂಕಿನ ಸೇವಾಶುಲ್ಕ ೩೦/- ರೂ.ಗಳನ್ನು** ಚಂದಾ ಹಣದ ಮೊತ್ತದಲ್ಲಿ ಸೇರಿಸಿ ಕಳುಹಿಸಿ ಕೊಡಬೇಕು.

– ಎಂ.ಓ ಮಾಡುವವರು ನಿಮ್ಮ ವಿಳಾಸವನ್ನು ಎಂ.ಓ ಅರ್ಜಿಯ ಮೇಲ್ಭಾಗದಲ್ಲಿರುವ ಸಂದೇಶ ಎಂಬ ಸ್ಥಳದಲ್ಲಿ ತಪ್ಪದೇ ನಿಮ್ಮ ವಿಳಾಸ ಬರೆಯಿರಿ. ಇ.ಎಂ.ಓ ಮಾಡಿದ್ದಲ್ಲಿ ಎರಡುದಿನಗಳ ನಂತರ ಕರೆಮಾಡಿ ನಿಮ್ಮ ವಿಳಾಸವನ್ನು ನಮಗೆ ತಿಳಿಸಿ.

– ಇಲ್ಲವಾದಲ್ಲಿ ಬೆಂಗಳೂರಿನ ಚಾಮರಾಜಪೇಟೆಯ ಅಪೆಕ್ಸ್ ಬ್ಯಾಂಕಿನ ಪ್ರಧಾನ ಶಾಖೆಯಲ್ಲಿರುವ "EDITOR, ITIHASA DARPANA" ಹೆಸರಿನ ಚಾಲ್ತಿಖಾತೆ **ಸಂ: 101 882** ಕ್ಕೆ ಚಂದಾಹಣವನ್ನು ನಿಮ್ಮ ಹೆಸರಿನಲ್ಲಿ ಜಮಾ ಮಾಡಿ, ಸ್ವೀಕೃತಿಯ ನಕಲನ್ನು, ನಿಮ್ಮ ವಿಳಾಸದ ಪತ್ರದೊಂದಿಗೆ ನಮಗೆ ಕಳುಹಿಸಿಕೊಡಿ.

ಚಂದಾ ವಿವರ

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) – ೩೦೦/- ರೂ.ಗಳು. (**ಶಾಲಾಕಾಲೇಜು ಮತ್ತು ಸಂಘ ಸಂಸ್ಥೆಗಳಿಗೆ – ೫೦೦/-ರೂ.ಗಳು**)

ದ್ವೈವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) – ೫೦೦/- ರೂ.ಗಳು. (**ಶಾಲಾಕಾಲೇಜು ಮತ್ತು ಸಂಘ ಸಂಸ್ಥೆಗಳಿಗೆ – ೯೦೦/-ರೂ.ಗಳು**).

ಚಂದಾ ಕಳುಹಿಸಿಕೊಡಬೇಕಾದ ವಿಳಾಸ:

ಸಂಪಾದಕರು, 'ಇತಿಹಾಸ ದರ್ಪಣ',
೩೩ ಎ, ಐ.ಟಿ.ಐ ಕಾಲೇಜು ಹತ್ತಿರ,
ಕೆಂಪೇಗೌಡನಗರ, ವಿಶ್ವನೀಡಂ – ಅಂಚೆ,
ಬೆಂಗಳೂರು–೫೬೦೦೯೧.
ಮೊ– ೭೮೨೯೪೦೪೦೬೩.

The Editor, 'Itihasa Darpana'
33 A, Near I.T.I College,
Kempegowda Nagara,
Vishwaneedam-Post,
Bengaluru- 560091.
Mob- 7829404063

ತುಂಗಭದ್ರಾ ನದಿ ತೀರದಲ್ಲಿ ಇತ್ತೀಚೆಗೆ ಶೋಧಿಸಿದ ಪ್ರಾಗಿತಿಹಾಸಿಕ ಬಂಡೆಗಲ್ಲು ಚಿತ್ರಗಳು

ಮೋಹನ ಆರ್
ಡಾ. ಸರ್ವೇಪಲ್ಲಿ ರಾಧಾಕೃಷ್ಣನ್ ಪೋಸ್ಟ್ ಡಾಕ್ಟರಲ್ ಫೆಲೋ (ಯು.ಜಿ.ಸಿ.)
ಡೆಕ್ಕನ್ ಕಾಲೇಜ್, ಸ್ನಾತಕೋತ್ತರ ಮತ್ತು ಸಂಶೋಧನ ಸಂಸ್ಥೆ
ಸ್ವಾಯತ್ತ ವಿಶ್ವವಿದ್ಯಾನಿಲಯ, ಪುಣೆ 411 006
ಮೊ: 09980774716
mohangulya@gmail.com

ತುಂಗಭದ್ರಾ ನದಿಯು ದಕ್ಷಿಣ ಭಾರತದ ಪ್ರಮುಖ ನದಿಗಳಲ್ಲಿ ಒಂದಾಗಿದ್ದು, ಕರ್ನಾಟಕದ ಪಶ್ಚಿಮ ಘಟ್ಟದಲ್ಲಿ ಉಗಮವಾಗುವ ತುಂಗಾ ಮತ್ತು ಭದ್ರಾ ನದಿಗಳ ಸಂಗಮವಾಗಿದೆ. ಈ ನದಿಯ 531 ಕಿ.ಮೀ. ಹರಿದು ಆಂಧ್ರ ಪ್ರದೇಶದ ಕರ್ನೂಲ್ ಬಳಿ ಕೃಷ್ಣಾ ನದಿಯೊಂದಿಗೆ ವಿಲೀನವಾಗುತ್ತದೆ. ಪುರಾತತ್ತ್ವ ದೃಷ್ಟಿಕೋನದಲ್ಲಿ ನೋಡುವುದಾದರೆ, ಈ ನದಿಯ ಪಾತ್ರದುದ್ದಕ್ಕೂ ಆದಿ ಮಾನವನ ಛಾಯೆಯನ್ನು, ವಿದ್ವಾಂಸರು 19ನೇ ಶತಮಾನದ ಆದಿ ಭಾಗದಿಂದಲೂ ನಡೆಸಿದ ಸಂಶೋಧನೆ ಹಾಗೂ ಅಧ್ಯಯನಗಳಿಂದ ದೃಢಪಡಿಸಿದ್ದಾರೆ.

ಪೂರ್ವ ಸಂಶೋಧನೆಗಳು

ತುಂಗಭದ್ರ ನದಿ ತೀರದಲ್ಲಿ ಮೊಟ್ಟ ಮೊದಲ ಬಾರಿಗೆ ಕೆಯಿಸ್‌ರವರು ಹಿರೇ ಬೆಣಕಲ್‌ನ ಬೃಹತ್ ಶಿಲಾಯುಗ ನೆಲೆಯನ್ನು 1835 ರಲ್ಲಿ ಶೋಧಿಸಿದರು. ಆದರೆ ಈ ವರದಿಯನ್ನು ಕೆ. ಮೆಡೂಸ್ ಟೈಲರ್‌ರವರು 1941ರ ತಮ್ಮ ಲೇಖನದಲ್ಲಿ ಉಲ್ಲೇಖಿಸಿದ್ದಾರೆ.[1] ಈ ಬೃಹತ್ ಶಿಲಾಯುಗ ನೆಲೆಯು ದಕ್ಷಿಣ ಭಾರತೀಯ ಪ್ರಮುಖ

ನೆಲೆಗಳಲ್ಲೊಂದಾಗಿರುವುದರಿಂದ ಅನೇಕ ವಿದ್ವಾಂಸರ ಗಮನ ಸೆಳೆದು ಸಾಕಷ್ಟು ಕ್ರಮಬದ್ಧ ಅಧ್ಯಯನಕ್ಕೆ ನಾಂದಿಯಾಯಿತು.[2] ಪ್ರಾಗಿತಿಹಾಸ ಕಾಲದ ಚಿತ್ರಗಳ ಹಿನ್ನಲೆಯಲ್ಲಿ ಫಾಸೆಟ್‌ರವರು ದಕ್ಷಿಣ ಭಾರತದಲ್ಲಿಯೇ ಮೊದಲ ಬಾರಿಗೆ 1892ರಲ್ಲಿ ಈ ನದಿ ತೀರದ ಕಪ್ಪಗಲ್ಲು ನೆಲೆಯಲ್ಲಿ ಕುಟ್ಟು ಚಿತ್ರಗಳನ್ನು ಶೋಧಿಸಿದರು.[3] ನಂತರ ಇವುಗಳ ಹೆಚ್ಚಿನ ವಿವರಣೆಯನ್ನು ಫೂಟ್ ಸಂಶೋಧನೆ ಸಂಗ್ರಹ ಕೃತಿಯಾದ **'ದಿ ಫೂಟ್ ಕಲೆಕ್ಷನ್ ಆಫ್ ದಿ ಇಂಡಿಯನ್ ಪ್ರಿ ಹಿಸ್ಟಾರಿಕ್ ಆ್ಯಂಡ್ ಪ್ರೊಟೋ ಹಿಸ್ಟಾರಿಕ್ ಆ್ಯಂಟಿಕ್ವಿಟೀಸ್: ನೋಟ್ಸ್ ಆನ್ ದೇರ್ ಏಜಸ್'** ಹೊತ್ತಿಗೆಯಲ್ಲಿ ಕಾಣಬಹುದು.[4] ನಂತರ ಈ ನೆಲೆಯಲ್ಲಿನ ಕಲ್ಗುಳಿಗಳು ಬೋವಿನ್ ರವರಿಂದ ಶೋಧಿಸಿಲ್ಪಟ್ಟವು.[5] ಲಿಯೋನಾರ್ಡ್ ಮನ್‌ರವರು 1915 ರಲ್ಲಿ ಹಿರೇ ಬೆಣಕಲ್ ವರ್ಣಚಿತ್ರಗಳನ್ನು ಶೋಧಿಸಿದ ಬೆನ್ನಲೇ ಬಿಲ್ಲಮರಾಯನಗುಡ್ಡ ಕುಟ್ಟು ಮತ್ತು ಗೀರು ಚಿತ್ರಗಳನ್ನು ಸಹ ಬೆಳಕಿಗೆ ತಂದರು.[6] ನಂತರ ಗೊರ್ಡನ್ ಮತ್ತು ಆಲ್ಚಿನ್‌ರವರು 20ನೇ ಶತಮಾನದ ಮಧ್ಯಾರ್ಧದಲ್ಲಿ ಕಪ್ಪಗಲ್ಲು, ಮಲ್ಲಾಪುರ ಮತ್ತು ಹಿರೇ ಬೆಣಕಲ್‌ನ ಚಿತ್ರಗಳನ್ನು ಪುನರ್ ಪರಿಶೀಲಿಸಿ ಪ್ರಕಟಿಸಿದ್ದಾರೆ.[7] ಸುಂದರ ರವರು ಕರ್ನಾಟಕದ ಪ್ರಾಗಿತಿಹಾಸ ಕಾಲದ ಕಲೆಯ ವ್ಯವಸ್ಥಿತ ಶೋಧನೆ ಮತ್ತು ಅಧ್ಯಯನಕ್ಕೆ ನಾಂದಿಹಾಡಿದ್ದರು. ಅವರು 1968 ರಲ್ಲಿ ಲಿಯೋನಾರ್ಡ್‌ಮನ್ ರವರು ಹಿರೇಬೆನಕಲ್ಲಿನಲ್ಲಿ ಶೋಧಿಸಿದ ಚಿತ್ರಗಳ ಕಲ್ಲಾಸರೆಗಳನ್ನು ಹುಡುಕುವ ಸಂದರ್ಭದಲ್ಲಿ ಇನ್ನೂ ಒಂಬತ್ತು ಹೊಸ ಕಲ್ಲಾಸರೆಗಳನ್ನು ಬೆಳಕಿಗೆ ತಂದರು.[8] ತದನಂತರ ಅವರು ಕರ್ನಾಟಕದ ಹಲವಾರು ಭಾಗಗಳಲ್ಲಿ ಭೂ ಅನ್ವೇಷಣೆ ಕಾರ್ಯವನ್ನು ಕೈಗೊಂಡು **ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ** ಶೀರ್ಷಿಕೆಯಡಿ 1994ರಲ್ಲಿ ಹೊತ್ತಿಗೆಯನ್ನು ಹಾಗೂ ಅನೇಕ ಲೇಖನಗಳನ್ನು ಪ್ರಕಟಿಸಿದ್ದಾರೆ.[9] ಇವರ ಸಮಾನಾಂತರ ಅವಧಿ ಮತ್ತು ಕ್ರಮೇಣವಾಗಿ ತೆಕ್ಕಲಕೋಟೆ[10] ಸಂಗನಕಲ್ಲು[11] ಕರುಗೋಡು,[12] ಹಂಪಿ,[13] ಕಮಲಾಪುರ[14] ನೆಲೆಗಳು ಶೋಧಿಸ್ಪಟ್ಟವು. ನಂತರ ಶರಣಬಸಪ್ಪ ಕೋಲ್ಕಾರರವರು ತಮ್ಮ ಪಿಎಚ್.ಡಿ[15] ಅಧ್ಯಯನಕ್ಕೆ ತುಂಗಭದ್ರಾ ನದಿ ತೀರದ ಕೊಪ್ಪಳ-ಹಂಪಿ ಪ್ರದೇಶದ ವರ್ಣಚಿತ್ರಗಳ ಅನ್ವೇಷಣೆಯನ್ನು ಮುಖ್ಯ ಭೂಮಿಕೆಯಾಗಿರಿಸಿಕೊಂಡು ನಡೆಸಿದ ಭೂ ಕಾರ್ಯ ಅನ್ವೇಷಣೆಯಲ್ಲಿ 17 ಹೊಸ ನೆಲೆಗಳ ಜೊತೆಗೆ ಒಟ್ಟಾರೆ 76 ಹೊಸ ಗವಿ ಮತ್ತು ಕಲ್ಲಾಸರೆಗಳನ್ನು ಶೋಧಿಸಿ **ಶಿಲಾಯುಗದ ಗವಿ ಚಿತ್ರಗಳು** ಶೀರ್ಷಿಕೆಯ ಹೊತ್ತಿಗೆಯನ್ನು ಪ್ರಕಟಿಸಿದ್ದರು.[16] ಕಡೇ ಬಾಗಿಲು ನೆಲೆಯು ಹೆಚ್ಚು ಮಹತ್ವವನು ಪಡೆದುಕೊಂಡಿದೆ. ಯಾಕೆಂದರೆ ನೆಲೆಯಲ್ಲಿ ದೊರೆತ ಬೃಹತ್ ಶಿಲಾಯುಗ ಕಾಲದ ಕಪ್ಪು ಮತ್ತು ಕೆಂಪು ಮಡಿಕೆ ಚೂರಿನ ಮೇಲೆ ಕೆಂಪು ವರ್ಣದ ಚಿತ್ರಗಳಿದ್ದು, ಅವು ಅಲ್ಲಿನ ಕಲ್ಲಾಸರೆಯೊಂದರಲ್ಲಿನ ಮನುಷ್ಯ ವರ್ಣಚಿತ್ರಗಳಂತೆ ಚಿತ್ರಿಸಿರುವುದು ಹಾಗೂ ಅವುಗಳ ಜೊತೆ ಹೆಚ್ಚು ಸಾಮ್ಯತೆಯನ್ನು ಹೋಲುವುದರಿಂದ. ಕಾಲನಿರ್ಣಯದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ.[17] ಯಾಕೆಂದರೆ ಭಾರತೀಯ ವರ್ಣಚಿತ್ರಗಳ ವೈಜ್ಞಾನಿಕ ಕಾಲನಿರ್ಣಯ ಇಂದಿಗೂ ಕಗ್ಗಂಟಾಗಿ ಪರಿಣಮಿಸಿದೆ. ಇಂತಹ ಆಧಾರಗಳು ಪ್ರಾಗಿತಿಹಾಸ ಕಾಲದ ಚಿತ್ರಗಳ ಕಾಲನಿರ್ಣಯದಲ್ಲಿ ಪ್ರಧಾನ ಪಾತ್ರವಹಿಸುವಲ್ಲಿ

ಎರಡು ಮಾತಿಲ್ಲ. ಪ್ರಸ್ತುತ ಲೇಖಕರು ಇತ್ತೀಚಿಗೆ ನಡೆಸಿದ ಸಂಶೋಧನೆ ಕಾರ್ಯಕ್ಷೇತ್ರ ಅನ್ವೇಷಣೆಯಲ್ಲಿ ನೂರಕ್ಕೂ ಹೆಚ್ಚು ಕಲ್ಲಾಸರೆಗಳನ್ನು ಬೆಳಕಿಗೆ ತಂದಿರುವ ಚಿತ್ರಣವನ್ನು ಇಲ್ಲಿ ಭಿತ್ತರಿಸಲಾಗಿದೆ.

ಹಿರೇ ಬೆಣಕಲ್ (ಚಿತ್ರ 1) ನೆಲೆಯಲ್ಲಿ ಒಟ್ಟು 37 ಸ್ಥಳಗಳಲ್ಲಿ ವರ್ಣ ಹಾಗೂ ಕಲ್ಲುಗುಳಿಗಳು ಕಂಡುಬಂದಿವೆ. ಅದರಲ್ಲಿ 17 ಕಲ್ಲಾಸರೆಗಳು ಪೂರ್ವ ಶೋಧಿತ, ಉಳಿದವು ಪ್ರಸ್ತುತ ಲೇಖಕರಿಂದ ಶೋಧಿಸಲ್ಪಟ್ಟವು. ಈ ಕಲ್ಲಾಸರೆಗಳಿರುವ ಸ್ಥಳಗಳು ದುರ್ಗದ ದಡಿ, ಗಿಡ್ಡ ಕುಟ್ರಿ, ಸಾಪಾದ ಕುಟ್ರಿ, ಗಾಳಿ ದಿಬ್ಬದ ಡಬ್ಬಸ್, ಮೌರ್ಯರ ಮನೆ ಬೆಂಚ್ಚಿ, ದರ್ಗದ ಕಿಲೇವು, ಹಿರೇ ತಳವಾರ್ ಮೂಲೆ, ನಗರಿ ಗುಂಡು, ನಾದ ಗುಂಡು, ಬೋಳಮ್ಮನ ಕೆರೆ, ತಣ್ಣೀರು ಫಡಿ ಕುಟ್ರಿ, ಮೌರ್ಯರ ಬೆಂಚ್ಚಿ ಬಯಲು, ಕರೆಕಲ್ಲು ತಗ್ಗಿನ ಬಂಡೆ, ಮ್ಯಾದರ ಬಂಡೆ ಹೀಗೆ ಹಲವಾರು ಹೆಸರುಗಳಿಂದ ಸ್ಥಳೀಯವಾಗಿ ನಾಮಾಂಕಿತವಾಗಿವೆ. ಇದರಲ್ಲಿ ಪ್ರಮುಖವಾಗಿ ದುರ್ಗದ ದಡಿಯೊಂದರಲ್ಲಿಯೇ ಹತ್ತಕ್ಕೂ ಹೆಚ್ಚು ಕಲ್ಲಾಸರೆಗಳಿದ್ದು, ನೂರಾರು ವರ್ಣಚಿತ್ರಗಳನ್ನು ಕಾಣಬಹುದು. ಈ ನೆಲೆಯಲ್ಲಿ ಪ್ರಮುಖವಾಗಿ ಪ್ರಾಣಿ (ಚಿತ್ರ 2), ಮಾನವಾಕೃತಿ ಹಾಗೂ ಜ್ಯಾಮಿತಿ ಚಿತ್ರಗಳ ಜೊತೆಗೆ ಕಲ್ಲುಗುಳಿಗಳು (ಚಿತ್ರ 3) ಸಾಕಷ್ಟು ಪ್ರಮಾಣದಲ್ಲಿ ಕಂಡುಬಂದಿವೆ. ಮಲ್ಲಪುರದ ನೆಲೆಯ ಹಿರೇ ಬೆಣಕಲ್‌ನ ಮುಂದುವರೆದ ಗುಡ್ಡಗಾಡು ಪ್ರದೇಶವಾಗಿದೆ. ದೊಡ್ಡ ಅಳತೆಯ ಬೆತ್ತಲೆ ಮನುಷ್ಯ, ಪ್ರಾಣಿ ಹಾಗೂ ಜ್ಯಾಮಿತಿ ಚಿತ್ರಗಳು ಬಹಳಷ್ಟು ಸಂಖ್ಯೆಯಲ್ಲಿ ಕಂಡುಬಂದಿವೆ.

ಚಿಕ್ಕ ರಾಂಪುರದ ಒನಕೆ ಕಂಡಿಯು 1961 ರಲ್ಲಿ ಸುಂದರ ರವರಿಂದ ಬೆಳಕಿಗೆ ಬಂದ ನಂತರ ಕ್ರಮೇಣವಾಗಿ ಜನರಿಗೆ ಚಿರಪರಿಚಿತವಾಗಿ ಕ್ರಮೇಣ ಪ್ರವಾಸಿ ತಾಣವಾಗಿ ಆಕರ್ಷಿತವಾಗಿದೆ. ಈ ನೆಲೆಯಲ್ಲಿ ಒಟ್ಟು ಆರು ಕಲ್ಲಾಸರೆಗಳನ್ನು ಸುಂದರರವರು ಶೋಧಿಸಿ ಅವುಗಳ ಸುದೀರ್ಘ ವಿವರಣೆಯನ್ನು ಕುರಿತಾದ ಲೇಖನವನ್ನು 1987 ರಲ್ಲಿ ಪ್ರಕಟಿಸಿದರು.[18] ಅದರಲ್ಲಿ ಬೃಹತ್ ಶಿಲಾಯುಗದ ಶಿಲಾವೃತ್ತ ವರ್ಣಚಿತ್ರವು ಹೆಚ್ಚು ಆಕರ್ಷಿತ ಹಾಗೂ ಸ್ವಾರಸ್ಯಕರವಾಗಿದೆ. ಲೇಖಕರ ಸಂಶೋಧನೆಯ ಅವಧಿಯಲ್ಲಿ ಇನ್ನೂ ಹನ್ನೆರಡು ಹೊಸ ಕಲ್ಲಾಸರೆಗಳು ಶೋಧಿಸಲ್ಪಟ್ಟಿವೆ. ಈ ಚಿತ್ರಿತ ಚಿತ್ರಗಳಲ್ಲಿ ಜಾನುವಾರು, ಮನುಷ್ಯ ಹಾಗೂ ಜ್ಯಾಮಿತಿ ಚಿತ್ರಗಳು ಮತ್ತು ಕಲ್ಲುಗುಳಿಗಳಿದ್ದು, ಪೂರ್ವ ಶೋಧಿತ ಮಂಡಲ ವರ್ಣಚಿತ್ರಗಳ (ಚಿತ್ರ 4a-b) ಜೊತೆಗೆ ಕುಟ್ಟು ಮಂಡಲ ಚಿತ್ರವು ಸಹ ಅದರ ನೈಜ ಸ್ವರೂಪವನ್ನು ಉಳಿಸಿಕೊಂಡಿರುವಂತೆ ಚಿತ್ರಿಸಲಾಗಿದೆ (ಚಿತ್ರ 4c). ಇಂತಹ ಚಿತ್ರಗಳು ಧಾರ್ಮಿಕ ಆಚಾರ–ವಿಚಾರಗಳಲ್ಲಿ ನೈಜತೆಯನ್ನು ಬಿಂಬಿಸುವಲ್ಲಿ ಹೆಚ್ಚಿನ ಪಾತ್ರವನ್ನು ಹೊಂದಿರುತ್ತವೆ.


ನಮನಕಲ್ಲು ಗುಡ್ಡದಲ್ಲಿ ವಿಶೇಷವಾಗಿ ದೊಡ್ಡ ಅಳತೆಯ ಮನುಷ್ಯ ಚಿತ್ರಗಳು, ಪ್ರಾಣಿ ಹಾಗೂ ಜ್ಯಾಮಿತಿ ಚಿತ್ರಗಳಿವೆ. ಇದರಲ್ಲಿ ತಲೆ ಕೆಳಗಾಗಿ ಚಿತ್ರಿಸಿರುವ ಪ್ರಾಣಿಯ ವರ್ಣಚಿತ್ರವು ಹೆಚ್ಚು ವಿಶೇಷವಾಗಿದೆ (ಚಿತ್ರ 5). ಡಮುನ ಕುಟ್ರಿಯಲ್ಲಿ ಮುಖವಾಡ ಧರಿಸಿದ ದೊಡ್ಡ ಅಳತೆಯ ಮನುಷ್ಯ ಚಿತ್ರ ಹೆಚ್ಚು ವಿಶೇಷತೆಯನ್ನು ಹೊಂದಿದೆ. ಹಾಗೆಯೇ



ಚಿತ್ರ 1. ಹಿರೇ ಬೆಣಕಲ್ ನೆಲೆ ಪರಿಸರದ ವಿಹಂಗಮ ನೋಟ




ಚಿತ್ರ 2. ಹಿರೇ ಬೆಣಕಲ್:
ಉದ್ದ ಕೋಡುಗಳುಳ್ಳ ಪ್ರಾಣಿಗಳು



ಚಿತ್ರ 3. ಹಿರೇ ಬೆಣಕಲ್:
ಕಲ್ಮನೆಗಳು



ಚಿತ್ರ 4. ಚಿಕ್ಕ ರಾಂಪುರ: ಮಂಡಲಗಳು ವರ್ಣಚಿತ್ರ (**a-b**) ಹಾಗೂ ಕುಟ್ಟು ಚಿತ್ರ (**c**)



ಚಿತ್ರ 5. ನಮನಕಲ್ಲು ಗುಡ್ಡ: ತಲೆ ಕೆಳಗಾಗಿ ಚಿತ್ರಿಸಿರುವ ಪ್ರಾಣಿಯ ವರ್ಣಚಿತ್ರ


ಕಲ್ಲಾಸರೆಗೆ ಅನತಿ ದೂರದಲ್ಲಿರುವ ಮತ್ತೊಂದು ಕಲ್ಲಾಸರೆಯಲ್ಲಿ ಮಾಸಿದ ರೇಖಾ ವರ್ಣಚಿತ್ರಗಳಿವೆ, ಅಂಜನ ಹಳ್ಳಿಯ ಸರಹದ್ದಿನಲ್ಲಿರುವ ಕಲ್ಲಾಸರೆಯಲ್ಲಿ ಸುಂದರರವರು ಹಡಗಿನ ವರ್ಣಚಿತ್ರವನ್ನು ಬೆಳಕಿಗೆ ತಂದರು, ಇತ್ತೀಚಿನ ಸಂಶೋಧನೆಯ ವೇಳೆಯಲ್ಲಿ ಹಸ್ತಮುದ್ರೆಗಳ ವರ್ಣಚಿತ್ರ ಮತ್ತು ಇತಿಹಾಸ ಕಾಲದ ನಂದಿ ಮತ್ತು ಶಿವಲಿಂಗ ಗೀರುಚಿತ್ರಗಳು ಕಂಡುಬಂದಿವೆ. ವಿಶೇಷವಾಗಿ ಹಸ್ತಮುದ್ರೆಗಳ ವರ್ಣಚಿತ್ರಗಳು ಪಾಶ್ಚಿಮಾತ್ಯ ವರ್ಣಚಿತ್ರ ನೆಲೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ ಹಾಗೂ ಇವುಗಳ ಸುದೀರ್ಘ ಸಂಶೋಧನೆ ಹಾಗೂ ವೈಜ್ಞಾನಿಕ ಅಧ್ಯಯನಗಳು ನಡೆದಿರುವುದರಿಂದ ಅವುಗಳ ಮಹತ್ವವನ್ನು ಅರ್ಥೈಯಿಸಿದ್ದಾರೆ. ಇತ್ತೀಚೆಗೆ ಪ್ರಸ್ತುತ ಲೇಖಕರು ಹಂ.ಗು. ರಾಜೇಶ್‌ರವರ ಜೊತೆಗೂಡಿ ಬೆಂಗಳೂರು ಸಮೀಪ ಶೋಧಿಸಿದ ಬಂಕರಸನಗುಂಡು ನೆಲೆಯಲ್ಲಿನ ಹಸ್ತಮುದ್ರೆಗಳನ್ನು ಬೆಳಕಿಗೆ ತಂದರು. ಪ್ರಾಚೀನ ಕಾಲದಿಂದ ಇತ್ತೀಚಿನ ಕಾಲದವರೆಗೆ ಕಂಡುಬರುವ ಈ ಹಸ್ತಮುದ್ರೆಗಳ ಮಹತ್ವ ಮತ್ತು ಪಾತ್ರ ಕುರಿತಾಗಿ ಅಧ್ಯಯನ ನಡೆಸಿದ್ದಾರೆ.[19] ಎಮ್ಮಿ ಗುಡ್ಡ, ತೆಂಬಾ, ಕರಡಿ ವಟ್ಲ (ಸಂಗಾಪುರ) ನೆಲೆಗಳಲ್ಲಿಯೂ ಜಾನುವಾರು, ಮನುಷ್ಯ ಹಾಗೂ ಜ್ಯಾಮಿತಿ ಚಿತ್ರಗಳು ಸಾಮಾನ್ಯವಾಗಿವೆ.

ಯಲ್ಲಮ್ಮ ಗುಡ್ಡ ನೆಲೆಯಲ್ಲಿ ಒಟ್ಟು 23 ಸ್ಥಳಗಳಲ್ಲಿ ವರ್ಣಚಿತ್ರ ಮತ್ತು ಕಲ್ಗುಳಿಗಳು ಕಂಡುಬಂದಿವೆ. ಅದರಲ್ಲಿನ ಒಂದು ಕಲ್ಲಾಸರೆಯಲ್ಲಿ ವಿಶೇಷ ಮಾನವ ವರ್ಣಚಿತ್ರಗಳಿದ್ದು, ಅವು ಹೆಚ್ಚು ಶೃಂಗಾರಮಯ ವೇಷ ಭೂಷಣಗಳಿಂದ ಕೂಡಿವೆ (ಚಿತ್ರ 6). ಹಾಗೇ ಮತ್ತೊಂದು ಕಲ್ಲಾಸರೆಯಲ್ಲಿ ಅತ್ಯಂತ ವಿಶೇಷವಾಗಿ ಕಾಣುವ ದಪ್ಪ ಗೆರೆಯ ವೃತ್ತಾಕಾರದ ವರ್ಣಚಿತ್ರಗಳಿದ್ದು, ಅದರೊಳಗೆ ಚಿಕ್ಕ ಚಿಕ್ಕ ಚುಕ್ಕೆಗಳಿಂದ ಅಲಂಕರಿಸಿದ್ದಾರೆ. ಇವುಗಳ ಮಧ್ಯದಲ್ಲಿಯೇ ಮನುಷ್ಯ ಅಂಗಾತ ಮಲಗಿರುವಂತೆ ಚಿತ್ರಿಸಲಾಗಿದೆ ಅದರ ಎಡ ಮೂಲೆಯಲ್ಲಿ ನಾಲ್ಕು ಮನುಷ್ಯರು ಒಬ್ಬರ ಕೈ ಒಬ್ಬರು ಹಿಡಿದುಕೊಂಡು ನಿಂತಿರುವಂತೆ, ಹಾಗೂ ಇದರ ಕೆಳಗೆ ಮತ್ತೊಂದು ವರ್ಣಚಿತ್ರವನ್ನು ಕಾಣಬಹುದು (ಚಿತ್ರ 7). ಮತ್ತೊಂದು ಕಲ್ಲಾಸರೆಯಲ್ಲಿ ಆರು ಗೂಳಿಗಳು ಡುಬ್ಬದ ಜೊತೆಗೆ ಶಿಶ್ನವನ್ನು ಪ್ರಧಾನವಾಗಿ ತೋರಿಸಲಾಗಿದೆ (ಚಿತ್ರ 8). ಇನ್ನುಳಿದ ಕಲ್ಲಾಸರೆಗಳಲ್ಲಿಯೂ ಗಮನ ಸೆಳೆಯುವಂತ ವರ್ಣಚಿತ್ರಗಳು ಉರುಮಂಜು (ಕೆಮ್ಮಣ್ಣು) ಮತ್ತು ಬಿಳಿ ಬಣ್ಣದಲ್ಲಿ ದೊರೆತಿದ್ದು, ಇದರಲ್ಲಿ ಪ್ರಮುಖವಾಗಿ ಜಾನುವಾರು, ವಿಶಿಷ್ಟ ಆಕೃತಿ ಮತ್ತು ಭಂಗಿಯಲ್ಲಿರುವ ಮನುಷ್ಯರ ಚಿತ್ರಗಳು, ಜ್ಯಾಮಿತಿ ಚಿತ್ರಗಳ ಜೊತೆಗೆ ಕಲ್ಗುಳಿಗಳನ್ನು ಕಾಣಬಹುದು. ಆದರೆ ಈ ನೆಲೆಯ ಸಾಕಷ್ಟು ಭಾಗ ಕಲ್ಲು ಗಣಿಗಾರಿಕೆಯಿಂದ (ಚಿತ್ರ 9) ಮತ್ತಷ್ಟು ವರ್ಣಚಿತ್ರಗಳಿರುವ ಕಲ್ಲಾಸರೆಗಳು ಧ್ವಂಸಗೊಂಡಿರುವುದು ಆತಂಕಕಾರಿ ವಿಶೇಷ.

ಸೋನಿಯ ನಗರಕ್ಕೆ ಹೊಂದಿಕೊಂಡಿರುವ ತಾಯಮ್ಮ ಬಂಡೆಯಲ್ಲಿ ಮೂರು ಕಲ್ಲಾಸರೆಗಳು ಹಾಗೂ ಐನೇರ್ ಗದ್ದೆ ಹತ್ತಿರವರುವ ಗುಡ್ಡದಲ್ಲಿನ ಒಂದು ಕಲ್ಲಾಸರೆಯಲ್ಲಿ ವರ್ಣಚಿತ್ರಗಳಿವೆ. ನವಶಿಲಾಯುಗ ಸೇರಿದ ಗೂಳಿವರ್ಣಚಿತ್ರಗಳು ಅದರಲ್ಲಿ ನಿರ್ದಿಷ್ಟವಾದ



ಚಿತ್ರ 6. ಯಲ್ಲಮ್ಮ ಗುಡ್ಡ: ಶೃಂಗಾರಮಯ ವೇಷ ಭೂಷಣಗಳಿಂದ ಕೂಡಿದ ಮನುಷ್ಯ ಮತ್ತು ಪ್ರಾಣಿಯ ವರ್ಣಚಿತ್ರಗಳು



ಚಿತ್ರ 7. ಯಲ್ಲಮ್ಮ ಗುಡ್ಡ: ಅಲಂಕೃತ ವೃತ್ತಗಳ ಜೊತೆಗೆ ಮನುಷ್ಯರ ವರ್ಣಚಿತ್ರಗಳು



ಚಿತ್ರ 8. ಯಲ್ಲಮ್ಮ ಗುಡ್ಡ: ಆರು ಗೂಳಿಗಳಿದ್ದು ಡುಬ್ಬ ಮತ್ತು ಕೋಡು ಪ್ರಧಾನವಾಗಿ ತೋರಿಸಲಾಗಿದೆ

ಕೋಡುಗಳು ಹಾಗೂ ದೇಹದ ವಿನ್ಯಾಸವು ಈ ಸಂಸ್ಕೃತಿ ಮುಖ್ಯ ಲಕ್ಷಣಗಳಾಗಿವೆ. ಇಲ್ಲಿ ಒಟ್ಟು ಏಳು ಗೂಳಿಗಳು, ಇಬ್ಬರು ಮನುಷ್ಯ ಹಾಗೂ ಏಣಿಯ ಚಿತ್ರಗಳಿವೆ. ಒಂದು ಗೂಳಿಯ ಶಿಶ್ನವನ್ನು ಪ್ರಧಾನವಾಗಿ ಬಿಂಬಿಸಿದ್ದು, ಅದರ ಪಕ್ಕದಲ್ಲಿಯೇ ಮನುಷ್ಯ ಚಿತ್ರವಿರುವುದನ್ನು ಕಾಣಬಹುದು. ಎರಡು ಗೂಳಿಗಳು ಮುಖಾಮುಖಿ ನಿಂತಿದ್ದು, ಉಳಿದವು ಅಲ್ಲಲ್ಲಿ ಚದುರಿವೆ (ಚಿತ್ರ 10). ಇನ್ನುಳಿದ ಕಲ್ಲಾಸರೆಗಳಲ್ಲಿ ಮಾನವಾಕೃತಿ, ಪ್ರಾಣಿ ಹಾಗೂ ಜ್ಯಾಮಿತಿ ವರ್ಣಚಿತ್ರಗಳಿವೆ. ಇದರ ಸರಹದ್ದಿನಲ್ಲಿಯೇ ವೀರಗಲ್ಲು (ಚಿತ್ರ 11) ದೊರೆತಿದೆ.

ಅರಮಟ್ಟಿ ನೆಲೆಯು ರಾಂಪುರ ಹಳ್ಳಿಯ ಸರಹದ್ದಿನಲ್ಲಿದ್ದು, ಮೂರು ಚಿತ್ರಿತ ಕಲ್ಲಾಸರೆಗಳನ್ನೊಳಗೊಂಡಿದೆ. ಅದರಲ್ಲೊಂದು ಕಲ್ಲಾಸರೆಯಾಗದೆ ಒಂದು ಬೃಹತ್ ಬಂಡೆಯಾಗಿದ್ದು, ಅದರ ಪಾರ್ಶ್ವಭಾಗದಲ್ಲಿ ವಿಚಿತ್ರ ಪ್ರಾಣಿಯೊಂದನ್ನು ಓಡುವ ಭಂಗಿಯಲ್ಲಿ (ಚಿತ್ರ 12) ಚಿತ್ರಿಸಿರುವುದು ವಿಶೇಷವೆನಿಸಿದೆ. ಕಲ್ಲಾಸರೆ 2ರಲ್ಲಿ ಪ್ರಾಣಿಗಳ ಸಂಭೋಗ ಸಂದರ್ಭ, ಜಿಂಕೆ ಹಾಗೂ ದೊಡ್ಡ ಅಳತೆಯ ಮನುಷ್ಯ ವರ್ಣಚಿತ್ರಗಳಿದ್ದರೆ, 3ನೇ ಕಲ್ಲಾಸರೆಯಲ್ಲಿ (ಚಿತ್ರ 13) ಕೆಲವು ಮನುಷ್ಯ ಮತ್ತು ಜ್ಯಾಮಿತಿ ಚಿತ್ರಗಳಿದ್ದು ಮಾಸಿ ಹೋಗಿವೆ.


ಹಿರೇ ಗುಡ್ಡ ಹಳೇ ಮಲ್ಲಾಪುರ ಹಾಗೂ ರಾಂಪುರ ಮಧ್ಯಭಾಗದ ಗುಡ್ಡಗಾಡು ಪ್ರದೇಶವಾಗಿದೆ. ಇಲ್ಲಿ ಒಟ್ಟು ಮೂರು ಸ್ಥಳಗಳಲ್ಲಿ ಮಾನವಾಕೃತಿ. ಪ್ರಾಣಿ ಹಾಗೂ ಹಸ್ತ ಮುದ್ರೆ ವರ್ಣಚಿತ್ರಗಳ ಜೊತೆಗೆ ಆಟದ ಚೌಕವು ಗೀರು ಚಿತ್ರವಾಗಿದೆ. ಪೊತ್ತು ಗುಡ್ಡವು




ಚಿತ್ರ 9. ಯಲ್ಲಮ್ಮ ಗುಡ್ಡ: ಕಲ್ಲು ಗಣಿಗಾರಿಕೆಯಿಂದ ಅನೇಕ ಚಿತ್ರಿತ ಕಲ್ಲಾಸರೆಗಳು ಧ್ವಂಸವಾಗಿರುವ ಚಿತ್ರಣ




ಚಿತ್ರ 10. ಸೋನಿಯ ನಗರ (ತಾಯಮ್ಮ ಬಂಡೆ): ಏಳು ಗೂಳಿಗಳು, ಮನುಷ್ಯ ಹಾಗೂ ಏಣಿಯ ವರ್ಣಚಿತ್ರ



ಚಿತ್ರ 11. ಸೋನಿಯ ನಗರ (ತಾಯಮ್ಮ ಬಂಡೆ): ವೀರಗಲ್ಲು




ಚಿತ್ರ 12. ಅರಮಟ್ಟಿ: ಓಡುವ ಭಂಗಿಯಲ್ಲಿರವ ಪ್ರಾಣಿ



ಚಿತ್ರ 13. ಅರಮಟ್ಟಿ: ಕಲ್ಲಾಸರೆಯಲ್ಲಿ ಮನುಷ್ಯ ಮತ್ತು ಜ್ಯಾಮಿತಿ ಚಿತ್ರಗಳಿದ್ದು ಮಾಸಿಹೋಗಿವೆ



ಚಿತ್ರ 14. ರಾಯರೆಡ್ಡಿ ಕುಟ್ರಿ: 'X' ಮಾದರಿಯ ಮನುಷ್ಯ



ಚಿತ್ರ 15. ಮೌರ್ಯರ ಗುಡ್ಡ: ಗೂಳಿಯ ಗೀರು ಚಿತ್ರ

ರಾಂಪುರದ ವಿದ್ಯುತ್ ಕಾರ್ಯಗಾರ ಹಿಂಬದಿಯ ಗುಡ್ಡವಾಗಿದ್ದು, ಬಿಳಿವರ್ಣದ ಮಾನವಾಕೃತಿ ಹಾಗೂ ಪ್ರಾಣಿ ಚಿತ್ರಗಳು ಕಂಡುಬಂದಿವೆ. ರಾಯರೆಡ್ಡಿ ಕುಟ್ರಿಯಲ್ಲಿ ಮಾನವಾಕೃತಿ, ಜ್ಯಾಮಿತಿ ಚಿತ್ರಗಳಿದ್ದು, 'X' ಮಾದರಿಯ ಮನುಷ್ಯ ವರ್ಣಚಿತ್ರವು (ಚಿತ್ರ 14) ಹೆಚ್ಚು ಆಕರ್ಷಕವಾಗಿದೆ.

ಒಂಟೆ ಕಲ್ಲು ಗುಡ್ಡವು ದೂರದಿಂದ ಒಂಟೆ ಪ್ರಾಣಿಯಂತೆ ಕಾಣುವುದರಿಂದ ಇದನ್ನು ಸ್ಥಳೀಯವಾಗಿ ಈ ಹೆಸರಿನಿಂದಲೇ ನಾಮಾಂಕಿತವಾಗಿದೆ. ಇಲ್ಲಿನ ಒಂದು ಕಲ್ಲಾಸರೆಯಲ್ಲಿ ಮಾತ್ರ ಕೆಲವು ದೊಡ್ಡ ಅಳತೆಯ ರೇಖಾ ಹಾಗೂ ಜ್ಯಾಮಿತಿ ಚಿತ್ರಗಳು ಕಂಡುಬಂದಿವೆ. ಮೌರ್ಯರ ಗುಡ್ಡವು ಒಂಟೆಕಲ್ಲು ಗುಡ್ಡಕ್ಕೆ ಹೊಂದಿಕೊಂಡಂತೆಯಿದ್ದು ಮನುಷ್ಯ, ಪ್ರಾಣಿ ಮತ್ತು ಜ್ಯಾಮಿತಿ ವರ್ಣಚಿತ್ರಗಳ ಜೊತೆಗೆ ಗೂಳಿಯ (ಚಿತ್ರ 15) ಗೀರು ಚಿತ್ರಗಳು ಸಹ ದೊರೆತಿದ್ದು ಸ್ಥಳೀಯವಾಗಿ ಕರೆಕಲ್ಲು ಬಂಡೆಗಳೆಂದು ಕರೆಯುವುದು ವಾಡಿಕೆ. ಈ ಪ್ರದೇಶದ ಕೆಲವೇ ನೆಲೆಗಳಲ್ಲಿ ಗೀರು ಚಿತ್ರಗಳು ಕಂಡುಬಂದಿವೆ. ಈ ಗುಡ್ಡದ ಮೇಲುಭಾಗದ ಸಮತಟ್ಟಾದ ಪ್ರದೇಶದಲ್ಲಿ ಕೆಲವು ಬೃಹತ್ ಶಿಲಾಯುಗದ ಸಮಾಧಿಗಳಿದ್ದು (ಚಿತ್ರ 16) ಅದರಲ್ಲಿ ಬಹಳಷ್ಟು ಕಲ್ಲು ಗಣಿಗಾರಿಕೆಯಿಂದ ಧ್ವಂಸವಾಗಿವೆ.

ತಣ್ಣೀರು ಫಡಿ ಕಲ್ಲಾಸರೆಯ ಉದ್ದಕ್ಕೂ ಮನುಷ್ಯ, ಪ್ರಾಣಿ ಹಾಗೂ ಜ್ಯಾಮಿತಿ ಚಿತ್ರಗಳನ್ನು ಕಾಣಬಹುದು. ಸಣ್ಣಾಪುರ ಕೆರೆ ಹತ್ತಿರವಿರುವ ಕಲ್ಲಾಸರೆಯಲ್ಲಿ ಮನುಷ್ಯ

ಹಾಗೂ ಜ್ಯಾಮಿತಿ ಚಿತ್ರಗಳು ಕೆಂಪುವರ್ಣದಲ್ಲಿ ದೊರೆತಿವೆ. ಆದರೆ ಇತ್ತೀಚಿನ ದಿನಗಳಲ್ಲಿ ಬಿಳಿ ಸುಣ್ಣದಿಂದ ಸೂರ್ಯ ಮತ್ತು ಚಂದ್ರ ಚಿಹ್ನೆಗಳನ್ನು ಇದರ ಮೇಲೆ ಮೂಡಿಸಲಾಗಿದೆ. ಮಡೇರ ಕುಟ್ರಿ ನೆಲೆಯಲ್ಲಿ ಮಾನವಾಕೃತಿ, ಪ್ರಾಣಿ ಹಾಗೂ ಜ್ಯಾಮಿತಿ ಚಿತ್ರಗಳು ಬಿಳಿ ಮತ್ತು ಉರುಮಂಜು ಬಣ್ಣದಲ್ಲಿವೆ. ಒಂದು ಕಲ್ಲಾಸರೆಯಲ್ಲಿ ಉದ್ದ ಕೋಡುಗಳುಳ್ಳ ದನಗಳು ಸ್ವಲ್ಪ ಭಿನ್ನವಾಗಿವೆ (ಚಿತ್ರ 17). ಬಸವ ದುರ್ಗದ ಹಿಂಬದಿ ಗುಡ್ಡ ಪ್ರದೇಶದಲ್ಲಿನ ಕಲ್ಲಾಸರೆಯಲ್ಲಿ ದಪ್ಪ ಕಡ್ಡಿ ಗೆರೆಗಳ ಮಾದರಿಯಲ್ಲಿ ಪ್ರಾಣಿ ಹಾಗೂ ಮನುಷ್ಯ ವರ್ಣಚಿತ್ರವನ್ನು ಛಾಯಾ ರೂಪದಲ್ಲಿ ತೋರಿಸಲಾಗಿದೆ (ಚಿತ್ರ 18). ಸ್ಥಳೀಯರು ಹೇಳುವಂತೆ ಪ್ರಾರಂಭದಲ್ಲಿ ವರ್ಣಚಿತ್ರಗಳಿದ್ದಂತಹ ಮೂರು ಕಲ್ಲಾಸರೆಗಳು ಕಲ್ಲ ಗಣಿಗಾರಿಕೆಯಿಂದ ಸಂಪೂರ್ಣವಾಗಿ


ಕ್ರ. ಸಂ.	ನೆಲೆ	ಪೂರ್ವ ಶೋಧಿತ ಸ್ಥಳಗಳು	ಪ್ರಸ್ತುತ ಶೋಧಿತ ಸ್ಥಳಗಳು	ಒಟ್ಟು
೧.	ಹಿರೇ ಬೆಣಕಲ್	೧೭	೨೦	೩೭
೨.	ಮಲ್ಲಾಪುರ	೧೬	೦೭	೨೩
೩.	ಚಿಕ್ಕ ರಾಂಪುರ	೦೬	೧೨	೧೮
೪.	ನಮನಕಲ್ಲು ಗುಡ್ಡ	೦೧	೦೭	೦೮
೫.	ಡಮುನ ಕುಟ್ರಿ	೦೧	೦೧	೦೨
೬.	ಅಂಜನ ಹಳ್ಳಿ	೦೨	೦೧	೦೩
೭.	ಎಮ್ಮಿ ಗುಡ್ಡ	೦೨	೦೨	೦೪
೮.	ತೆಂಬಾ	೦೫	೦೫	೧೦
೯.	ಕರಡಿ ವಟ್ಲ (ಸಂಗಾಪುರ)	೧೦	೦೨	೧೨
೧೦.	ಯಲ್ಲಮ್ಮ ಗುಡ್ಡ	–	೨೩	೨೩
೧೧.	ಸೋನಿಯ ನಗರ	–	೦೯	೦೯
೧೨.	ಅರಮುಟ್ಟಿ (ರಾಂಪುರ)	–	೦೩	೦೩
೧೩.	ಹಿರೇ ಗುಡ್ಡ	–	೦೩	೦೩
೧೪.	ಪೊತ್ತು ಗುಡ್ಡ	–	೦೧	೦೧
೧೫.	ರಾಯರೆಡ್ಡಿ ಕುಟ್ರಿ	–	೦೧	೦೧
೧೬.	ಒಂಟಿ ಕಲ್ಲು ಗುಡ್ಡ	–	೦೧	೦೧
೧೭.	ಮೌರ್ಯರ ಗುಡ್ಡ	–	೦೪	೦೪
೧೮.	ತಣ್ಣೀರು ಫಡಿ	–	೦೧	೦೧
೧೯.	ಸಣ್ಣಾಪುರ ಕೆರೆ	–	೦೧	೦೧
೨೦.	ಮಡೇರ ಕುಟ್ರಿ	–	೦೨	೦೨
೨೧.	ಬಸವ ದುರ್ಗ	–	೦೧	೦೧
		೬೦	೧೦೨	೧೬೨



ಚಿತ್ರ 16. ಮೌರ್ಯರ ಗುಡ್ಡ: ಬೃಹತ್ ಶಿಲಾಯುಗದ ಸಮಾಧಿ (Cist Burial)



ಚಿತ್ರ 17. ಮಡೇರ ಕುಟ್ರಿ: ಉದ್ದ ಕೋಡುಗಳುಳ್ಳ ಜಾನುವಾರು ವರ್ಣಚಿತ್ರಗಳು



ಚಿತ್ರ 18. ಬಸವ ದುರ್ಗ: ದಪ್ಪ ಕಡ್ಡಿ ಗೆರೆಗಳ ಮಾದರಿಯಲ್ಲಿ ಪ್ರಾಣಿಗಳು ಹಾಗೂ ಛಾಯ ರೂಪದ ಮನುಷ್ಯ

ಸಮಾರೋಪ

ಪ್ರಸ್ತುತ ಸಂಶೋಧನೆಗಳು ನನ್ನ ಪೋಸ್ಟ್ ಡಾಕ್ಟರಲ್‌ನ ಭಾಗವಾಗಿದ್ದು, ಈ ಪ್ರದೇಶದ ಹೆಚ್ಚಿನ ಅಧ್ಯಯನಕ್ಕೆ ದಾರಿಯಾಗಿದೆ. ನನ್ನ ಡಾಕ್ಟರಲ್‌ನ ಉಪ ಮಾರ್ಗದರ್ಶಕರು ಹಾಗೂ ಪೂಜ್ಯ ಗುರುಗಳಾದ ಅ. ಸುಂದರರವರು, 2013–2015ರ ಅವಧಿಯಲ್ಲಿ ಮಲಪ್ರಭಾ ನದಿ ತೀರದ ಸಂಶೋಧನೆಗಳ ದತ್ತಾಂಶಗಳ[20] ಬಗ್ಗೆ ಚರ್ಚಿಸುತ್ತಿದ್ದಾಗ ಅವರು ಮಲಪ್ರಭಾ ನದಿತೀರದಂತೆಯೇ, ತುಂಗಭದ್ರಾ ನದಿ ತೀರದಲ್ಲಿ ಅಡಗಿರುವ ಭವ್ಯ ಸಂಸ್ಕೃತಿ ಅದರಲ್ಲೂ ವಿಶೇಷವಾಗಿ ಹೆಚ್ಚು ವರ್ಣಚಿತ್ರಗಳು ಇರುವ ಸಾಧ್ಯತೆ ಮತ್ತು ಅವುಗಳ ಮಹತ್ವವನ್ನು ವಿವರಿಸಿದರು. ಹಾಗೆಯೇ ಇದು ಮಧ್ಯ ಪ್ರದೇಶದ ವಿಶ್ವ ಪಾರಂಪರಿಕ ವರ್ಣಚಿತ್ರ ತಾಣ ಬೀಂಬೆಟ್ಕ ಪ್ರದೇಶಕ್ಕಿಂತ ಹೆಚ್ಚು ವರ್ಣಚಿತ್ರ ನೆಲೆಗಳಿವೆಯೆಂಬುದು ಅವರ ಪೂರ್ವ ಸಂಶೋಧನೆಗಳ ಹಿನ್ನಲೆಯಲ್ಲಿನ ಅಭಿಪ್ರಾಯವಾಗಿತ್ತು. ಇದು ನನಗೆ ಸ್ಫೂರ್ತಿಯಾಗಿ, ಇಲ್ಲಿನ ಪೂರ್ವ ಸಂಶೋಧನೆಗಳಲ್ಲಿ, ವಿಶೇಷವಾಗಿ ಶರಣಬಸಪ್ಪ ಕೋಲ್ಕಾರರವರ **ಶಿಲಾಯುದ ಗವಿಚಿತ್ರಗಳು** ಹೊತ್ತಿಗೆಯು ಹೆಚ್ಚು ಗಮನ ಸೆಳೆಯಿತು. ಇದರ ಪ್ರತಿಫಲವಾಗಿ ನಡೆದ ಇತ್ತೀಚಿನ ಸಂಶೋಧನೆಯು ಸುಂದರರವರ ವಾದಕ್ಕೆ ಪುಷ್ಟಿಯನ್ನು ನೀಡಿದೆ. ಇದು ಬೀಂಬೆಟ್ಕ ಪ್ರದೇಶಕ್ಕಿಂತ ಹೆಚ್ಚು ವರ್ಣಚಿತ್ರ ನೆಲೆಗಳಲ್ಲಿ ಬಹುಸಂಖ್ಯೆಯಲ್ಲಿ ಕಲ್ಲಾಸರೆಗಳನ್ನು ಹೊಂದಿರುವುದರಲ್ಲಿ ಯಾವುದೇ ಪ್ರಶ್ನೆಯಿಲ್ಲ. ಇನ್ನು ಸಾಕಷ್ಟು ಅಧ್ಯಯನಗಳು ಚಾಲ್ತಿಯಲ್ಲಿದ್ದು, ಇನ್ನು ಮುಂದಿನ ಕೆಲವು ದಿನಗಳಲ್ಲಿ ಒಳ್ಳೆಯ ಫಲಿತಾಂಶ ಬರಬಹುದೆಂಬುದು ನನ್ನ ನಂಬಿಕೆ.

ವರ್ಣಚಿತ್ರ ನೆಲೆಗಳಲ್ಲಿ ಮನುಷ್ಯ, ಪ್ರಾಣಿ ಮತ್ತು ಜ್ಯಾಮಿತಿ ಚಿತ್ರಗಳು ಸಾಮಾನ್ಯವಾಗಿವೆ. ಆದರೆ ಕರ್ನಾಟಕದ ಇನ್ನುಳಿದ ಭಾಗದ ಚಿತ್ರಗಳಿಗಿಂತ ಭಿನ್ನವಾಗಿವೆ. ಕಲ್ಗುಳಿಗಳು ಅಲ್ಲಲ್ಲಿ ಕಂಡುಬಂದಿವೆ. ಇವುಗಳ ಜೊತೆಜೊತೆಯಲ್ಲಿ ಸೂಕ್ಷ್ಮ ಮತ್ತು ನವ ಶಿಲಾಯುದ ಉಪಕರಣಗಳು, ಬೃಹತ್ ಶಿಲಾಯುದ ಸಮಾಧಿಗಳು ಮತ್ತು ಮಡಿಕೆ ಚೂರುಗಳು ಅತ್ಯಧಿಕ ಸಂಖ್ಯೆಯಲ್ಲಿ ದೊರೆತಿವೆ.

ಕೃತಜ್ಞತೆ

ಸಂಶೋಧನೆಯ ಸ್ಫೂರ್ತಿ ನನ್ನ ಪೂಜ್ಯ ಗುರುಗಳಾದ ಅ. ಸುಂದರ ಹಾಗೂ ಸುಷಮ ಜಿ. ದೇವ್ ರವರಿಗೆ ಹೃದಯ ಪೂರ್ವಕ ನಮಸ್ಕರಗಳು. ಸಂಶೋಧನೆಯ ವೇಳೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಮೋಹನ್ ಪಾರ್ಥಿ, ಯೊಗೇಶ್ ಮಲ್ಲಿನಾಥ್‌ಪುರ, ಶರಣಬಸಪ್ಪ ಕೋಲ್ಕಾರ, ನೀತ್ ಅಗರವಾಲ್, ಹಲೇಶ್ ಕಂದರಿ, ಹೇಮಂತ್ ದಳಪಿ, ಸಿದ್ದರಾಜು ಎಂ. ಕಪ್ಪಸೋಗೆ, ನವೀನ್ ಕುಮಾರ್ ಕಲ್ಮನೆ, ಅನಿಲ್, ಮಂಜ ಮತ್ತು ಅನ್ವೇಷಣೆ ವೇಳೆ ನನಗೆ ಸ್ಥಳೀಯವಾಗಿ ಸಹಕಾರ ನೀಡಿದ ರಾಮುಲು (ಅಡಿನ ರಾಮು, ರಾಂಪುರ, ಇವರು ಅನಕ್ಷರಸ್ಥರಾದರೂ ಆಯುರ್ವೇದದ ಬಗ್ಗೆ ಹೆಚ್ಚಿನ ಜ್ಞಾನವನ್ನು ಹೊಂದಿರುವ ಜೊತೆಗೆ ಗರಡಿ ಮನೆಯಲ್ಲಿ ಪಳಗಿ, ಇತಿಹಾಸ ಹಾಗೂ ಕಲಾ ಅಭಿರುಚಿಯನ್ನು ಮೈಗೂಡಿಸಿಕೊಂಡಿದ್ದಾರೆ), ಐಯನ್ ಗೌಡ, ಜ್ಞಾನಪ್ಪ, ವಕರಣೆ ನಾಗಪ್ಪ, ದೇವಪ್ಪ ಯಾದವ್, ಸೂಳೆಕಲ್ಲು ಮಂಜ, ರಾಮಚಂದ್ರ (ಮಲ್ಲಾಪುರ), ನಾಗಪ್ಪ, ಹುಸೇನ್ ಬಾಷ, ವಿರೇಶ್ ಅಂಗಡಿ, ಪಂಪಾಪತಿ (ಹಿರೇ ಬೆಣಕಲ್), ಜಗದೀಶ್ ಜೋಷಿ ಮತ್ತು ಮಹೇಶ್ ನಾಯಕ್ (ಎಮ್ಮಿಗುಡ್ಡ). ನನ್ನ ಊಟೋಪಚಾರವನ್ನು ನೋಡಿಕೊಂಡ ಶ್ರೀಮತಿ ಅನ್ನಮ್ಮ ಮಲ್ಲಾಪುರ ರವರಿಗೆ ಹೃದಯಪೂರ್ವಕ ಕೃತಜ್ಞತೆಗಳು.

ಟಿಪ್ಪಣಿಗಳು ಮತ್ತು ಆಕರ ಸೂಚಿ

1 Taylor 1941.
2 Sundara 1969, 1975; Venkateshaiah 2001-02; Bauer & Trivedi 2013.
3 Fawcett 1892
4 Foote 1916
5 Bovin 2004
6 Munn 1934, 1935
7 Gordon 1951; Gordon & Allchin 1955.
8 Sundara 1985.
9 ಸುಂದರ 1974, Sundara 1984, 1987, 2006, 2014.
10 Nagaraja Rao & Malhotra 1965
11 Ansari & Nagaraja Rao 1969,
12 Krishnamurthy 1977; ಸುಂದರ 1981; ಕೋಲ್ಕಾರ 2004
13 Bopardikar & Joshi 1976-77; Sundara 1985
14 ಶಂಭುಲಿಂಗಪ್ಪ 1993; ಪಾಟೀಲ 1994
15. ಕೋಲ್ಕಾರ 2002
16. ಕೋಲ್ಕಾರ 2010
17. Sinopoli 2011
18. Sundara 1961-62, 1987
19. ಮೋಹನ & ರಾಜೇಶ್ 2017
20. Mohana 2015, 2016

* * *

- ಕೋಲ್ಕಾರ, ಶರಣಬಸಪ್ಪ 2002. **ಕೊಪ್ಪಳ–ಹಂಪಿ ಪ್ರದೇಶದ ಪ್ರಾಗಿತಿಹಾಸ ಕಾಲದ ಕಲೆ**. ಪಿಎಚ್.ಡಿ. ಮಹಾ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಕೋಲ್ಕಾರ, ಶರಣಬಸಪ್ಪ 2004. 'ಪ್ರಾಚ್ಯಾರಿತ್ರಿಕ ಚಿತ್ರಕಲೆ', **ಕುರುಗೋಡು** (ಸಮ್ಮೇಳನ ಪ್ರತಿ), ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಕೋಲ್ಕಾರ, ಶರಣಬಸಪ್ಪ 2010, **ಶಿಲಾಯುಗದ ಗವಿಚಿತ್ರಗಳು**, ಬಸವ ಪ್ರಕಾಶನ ಮತ್ತು ಪುಸ್ತಕ ವ್ಯಾಪಾರಿಗಳು, ಗುಲಬರ್ಗಾ.
- ಪಾಟೀಲ, ಜಿ. ಸಿ. 1994. **ಕೊಪ್ಪಳ ಸಾಂಸ್ಕೃತಿಕ ಪರಂಪರೆ,** ಪುಟ. 13–18.
- ಮೋಹನ, ಆರ್. ಮತ್ತು ಹಂ.ಗು. ರಾಜೇಶ್. 2017. 'ಬೆಂಗಳೂರು ಸಮೀಪ (ಬಂಕರಸನಗುಂಡು) ಕೈಗುರುತು ವರ್ಣಚಿತ್ರಗಳ ಶೋಧನೆ'. **ಇತಿಹಾಸ ದರ್ಪಣ** ಪುಸ್ತಕ: 31–32 (ಅಕ್ಟೋಬರ್ 2016–ಮಾರ್ಚ್ 2017): 57–68
- ಶಂಭುಲಿಂಗಪ್ಪ, ಟಿ. 1993. 'ರಾಯಚೂರು ಜಿಲ್ಲೆಯ ಗುಹಾಚಿತ್ರಗಳು'. **ತಿರುಳ್ಗನ್ನಡ**. ಪುಟ. 23–29.
- ಸುಂದರ ಅ., 1974. 'ಕರ್ನಾಟಕದಲ್ಲಿಯ ಪ್ರಾಗ್ಯೈತಿಹಾಸಿಕ ವರ್ಣಚಿತ್ರಗಳು'. **ಸವಿಚಂಚಯ** (ಶ್ರೀ ಸದಾಶಿವ ಒಡೆಯರ 50 ನೇ ಹುಟ್ಟುಹಬ್ಬ ಉತ್ಸವ ಸಮಿತಿ, ಚೌಡಯ್ಯದಾನಪುರ). ಮನೋಹರ ಪ್ರಿಂಟಿಂಗ್ ಪ್ರೆಸ್, ದಾನಾಪುರ.

- ಸುಂದರ ಅ. 1981. 'ಉತ್ತರ ಕರ್ನಾಟಕದಲ್ಲಿ ಬಂಡೆಗಲ್ಲಿನ ವರ್ಣಚಿತ್ರಗಳು'. ಬೆಳ್ಳೂಲ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
- ಸುಂದರ ಅ., 1994, **ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ,** ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು.
- Ansari, Z.D., and Nagaraja Rao, M.S. 1969. **Excavations at Sanganakallu - 1964-65.** Poona: Deccan College.
- Bauer, A.M. and Trivedi, M. 2013. 'Contextualizing Megalithic Places: Survey and Surface Documentation in the Environs of Hire Benakal (Koppal District, Karnataka)', **Man and Environment** XXXVIII (2), 46-61.
- Bopardikar B.P and S.K. Joshi 1976-77. 'Exploration District Bellary'. **Indian Archaeology: A Review**976-77: 24.
- Boivin, N. 2004. 'Rock Art and Rock Music: Petroglyphs of the South Indian Neolithic', **Antiquity** 78(2): 38-53.
- Venkateshaiah S.V. 2001-02. 'Excavation at Hire Benakal' District Koppal. **Indian Archaeology: A Review, 2001-02:103**
- Fawcett, F. 1892. 'Prehistoric Rock Paintings near Bellary', South India, **Asiatic Quarterly Review** (New Series) III: 147-157.
- Foote, R.B. 1916. **The Foote Collection of Indian Prehistoric and Protohistoric Antiqueties, Notes on their Ages and Distributions.** Madras: Govt. of Madras Presidency.
- Krishnamurthy, M.S. 1977. 'Kurugodu an Archaeological', **Archaeological Studies 2:** 106-110. University of Mysore,
- Gordon, D.H. 1951. 'The Rock Engravings of Kupgallu hill, Bellary, Madras', **Man** LI(204-205): 117-119.
- Gordon, D.H. and F.R. Allchin 1955. 'Rock Paintings and Engravings in Raichur, Hyderabad,' **Man** LV(114): 97-99.
- Mohana, R. 2015. Reading **Rock Art: Interpreting Temporal and Geographic Variability** in the Lower Malaprabha Basin, Karnataka. Ph.D. Dissertation. Pune: Deccan College, Post Graduate and Research Institute.
- Mohana, R. 2016. **Rock Art Exploration in the Malaprabha Basin: A Holistic Approach.** Submitted to Nehru Trust for the Indian Collection at the Victoria and Albert Museum (NTICVA), United Kingdom.
- Munn. L. 1934. 'Prehistoric and Protohistoric Finds', **The Journal Hyderabad Geological Society** 1 (2): 121-135.
- Munn, C.L. 1935. 'Prehistoric and Protohistoric Finds of the Raichur and Shorapur Districts of H. E. H. the Nizam's State', **Man in India** XV(4): 225-250.

- Nagaraja Rao, M.S. and K.C. Malhotra 1965. **The Stone Age hill Dwellers of Tekkalakota.** Pune: Deccan College, Post Graduate and Research Institute.
- Sinopoli, C.M. 2011. 'Human Reorientation in the South Indian Iron Age: Examples from Kadebakele, South India'. **Man in India** 91(2): 373-385.
- Sundara, A. 1961-62. 'Megalithic and Early Historic Site, Anegondi, District Raichur'. **Indian Archaeology: A Review** 1961-62: 102.
- Sundara, A. 1961-62. 'Painted Rock Shelter and Chalcolithic Site Chickrampur, Disrtict Raichur'. **Indian Archaeology: A Review** 1961-62: 102.
- Sundara, A. 1969. **Megalithic Tombs in North Karnataka,** Ph.D Desertation, Pune: Deccan College, Post Graduate and Research Istitute.
- Sundara, A. 1975.**The Early Chamber Tombs of South India: A Study of the Iron Age Megalithic Monuments of North Karnataka. New** Delhi: University Publishers
- Sundara, A. 1984. 'Some Selected Rock Paintings from North Karnataka', in Rock Art of India (K.K. Chakravarty Ed.), pp. 137-48. New Delhi.
- Sundara, A. 1985. 'Rock Bruisings in North Karnataka with particular reference to Billamarayanagudda', **Studies in Karnataka History and Cultures** (Proceeding of Karnataka History Congress) 1: 160-167
- Sundara, A.1987. 'Some Noteworthy Rock Paintings in Chik Rampur (Particularly regarding the painted Megalithic stone circle burial)', **Journal of Karnataka University** (Social Sciences): XXIII: 184-205.
- Sundara, A. 2006 . 'Karnataka Rock Art: Some Distinctive Aspects', **Purakala** 16: 35-49.
- Sundara, A. 2014. 'Some Insights into Rock Art Research in Karnataka', **Purakala** 24: 27-42.
- Taylor, M. 1841. **Megalithic Tombs and other Ancient Remains in the Dekhan.** Hyderabad: Department of Archaeology, Hyderabad State.

■

ಸಾದರ ಸ್ವೀಕಾರ

- **ಪುರಾಣದ ರೂಪಕಗಳು**

– ಯೋಗೇಶ್ ಮಾಸ್ಟರ್
ಪ್ರಕಾಶಕರು: ರಾಜಮಾರ್ಗ ಸಾಹಿತ್ಯ ಸಂಸ್ಕೃತಿ, ಬೆಂಗಳೂರು.
ವರ್ಷ: 2015 ಪುಟಗಳು: 190/– ಬೆಲೆ: 150/–

- **ದೊಡ್ಡಬಳ್ಳಾಪುರ ಚಾರಿತ್ರಿಕ ಅಧ್ಯಯನ: ಇತಿಹಾಸ ಪೂರ್ವಕಾಲದಿಂದ ಏಕೀಕರಣದವರೆಗೆ**

– ಎಸ್. ವೆಂಕಟೇಶ್
ಪ್ರಕಾಶಕರು: ದೃಶ್ಯ ಪ್ರಕಾಶನ, ದೊಡ್ಡಬಳ್ಳಾಪುರ.
ವರ್ಷ:2016 ಪುಟಗಳು: 454 ಬೆಲೆ:400/–

- **ಒನಕೆ ಓಬವ್ವ : ದಲಿತ ಸಂವೇದನೆಗಯೊಂದಿಗೆ ಮುಖಾಮುಖಿ**

– ಎನ್. ಚಿನ್ನಸ್ವಾಮಿ ಸೋಸಲೆ
ಪ್ರಕಾಶಕರು: ಗೌತಮ ಬುಕ್ ಹೌಸ್.
ವರ್ಷ: 2016 ಪುಟಗಳು: 100 ಬೆಲೆ: 100/–

- **ನಾಯಕತನ ಪದ್ಧತಿ**

– ಡಿ.ಎನ್. ಯೋಗೀಶ್ವರಪ್ಪ
ಪ್ರಕಾಶಕರು: ಪ್ರಗತಿ ಗ್ರಾಫಿಕ್ಸ್, ಬೆಂಗಳೂರು.
ವರ್ಷ: 2016 ಪುಟಗಳು: 200 ಬೆಲೆ: 200/–

ಸಾದರ ಸ್ವೀಕಾರ ಮತ್ತು ಕೃತಿ ವಿಮರ್ಶೆಗೆ ಪುಸ್ತಕ ಕಳುಹಿಸುವ ಲೇಖಕರು ಮತ್ತು ಪ್ರಕಾಶಕರಲ್ಲಿ ಮನವಿ

- ಸಾದರ ಸ್ವೀಕಾರ ಮತ್ತು ವಿಮರ್ಶೆಗೆ ಕಳುಹಿಸುವ ಕೃತಿಗಳು ಇತಿಹಾಸ, ಪುರಾತತ್ತ್ವ, ಸಂಸ್ಕೃತಿ, ಕಲೆ ಮತ್ತು ವಾಸ್ತುಶಿಲ್ಪ, ಶಾಸನ, ನಾಣ್ಯಶಾಸ್ತ್ರ, ಪ್ರವಾಸೋದ್ಯಮ ಮುಂತಾದ ಚರಿತ್ರೆಯೊಂದಿಗೆ ಬೆಸೆದುಕೊಂಡಿರುವ ವಿಷಯಗಳಿಗೆ ಸಂಬಂಧಿಸಿರಬೇಕು.
- ಕೃತಿಯ ಒಂದು ಪ್ರತಿ ಕಳುಹಿಸಿಕೊಟ್ಟಲ್ಲಿ ಸಾದರ ಸ್ವೀಕಾರಕ್ಕೆ ಎಂತಲೂ, ಎರಡು ಪ್ರತಿಗಳನ್ನು ಕಳುಹಿಸಿಕೊಟ್ಟಲ್ಲಿ ಸಾದರ ಸ್ವೀಕಾರ ಮತ್ತು ಕೃತಿ ವಿಮರ್ಶೆಗೆ ಎಂತಲೂ ಪರಿಗಣಿಸಲಾಗುವುದು.
- ವಿಮರ್ಶೆಗೆ ಬರುವ ಕೃತಿಗಳನ್ನು ಆದ್ಯತಾನುಸಾರ ಪರಿಗಣಿಸಲಾಗುವುದು.

ಪ್ರತಿಗಳನ್ನು ಕಳುಹಿಸಿಕೊಡಬೇಕಾದ ವಿಳಾಸ
ಸಂಪಾದಕರು,
ಇತಿಹಾಸ ದರ್ಪಣ
#33/ಎ, ಐ.ಟಿ.ಐ ಕಾಲೇಜು ಹತ್ತಿರ, ಕೆಂಪೇಗೌಡನಗರ, ವಿಶ್ವನೀಡಂ–ಅಂಚೆ,
ಬೆಂಗಳೂರು–560091. ಮೊ: 7829404063.

ಮಾದಿಗ ಸಮುದಾಯ ಅಧ್ಯಯನಗಳು ಒಂದು ಟಿಪ್ಪಣಿ

ರಹಮತ್ ತರೀಕೆರೆ
ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ 583 276
ಮೊ: 94802 49101
rtarikere@gmail.com

ಕರ್ನಾಟಕದಲ್ಲಿ ಮಾದಿಗ ಸಮುದಾಯವನ್ನು ವಿಭಿನ್ನ ಕಾಲಘಟ್ಟಗಳಲ್ಲಿ ಅಧ್ಯಯನ ಮಾಡಿಕೊಂಡು ಬರಲಾಗಿದೆ. ಈ ಅಧ್ಯಯನಗಳ ಹಿಂದಿರುವ ತಾತ್ವಿಕತೆಯನ್ನು ಪರಿಶೀಲಿಸುವುದು ಈ ಟಿಪ್ಪಣಿಯ ಉದ್ದೇಶ. ಸಂಶೋಧನೆಯಲ್ಲಿ ಅಧ್ಯಯನ ವಿಧಾನವೆಂದರೆ, ಲೋಕವನ್ನು ನೋಡುವ ದೃಷ್ಟಿಕೋನ ಎಂದೇ ಅರ್ಥ. ಈ ಹಿನ್ನೆಲೆಯಲ್ಲಿ ಮಾದಿಗ ಸಮುದಾಯ ಕುರಿತ ಅಧ್ಯಯನಗಳ ವಿಧಾನಗಳ ಹಿಂದಿನ ತಾತ್ವಿಕತೆಯನ್ನು ಮಾತ್ರವಲ್ಲ, ಅದರ ಪರಿಣಾಮಗಳನ್ನು ಸಹ ವಿಚಾರ ಮಾಡುವ ಅಗತ್ಯವಿದೆ. ಇದಕ್ಕೆ ಕೇವಲ ಶೈಕ್ಷಣಿಕವಲ್ಲದ ರಾಜಕೀಯ ಮತ್ತು ಸಾಂಸ್ಕೃತಿಕ ಕಾರಣಗಳೂ ಇವೆ. ಕರ್ನಾಟಕದ ಮಾದಿಗ ಸಮುದಾಯಕ್ಕೆ ಸೇರಿದ ಆಸಾದಿ ಗಾಯಕರು ಹಾಡುವ ಹಾಡುಗಳ ಪರಂಪರೆ ಭಾರತದಲ್ಲೇ ವಿಶಿಷ್ಟವಾಗಿದ್ದು, ಈ ಗಾಯಕರು ನೆರೆಯುವ ಅಂತರಗಟ್ಟೆಯ ಜಾತ್ರೆಯ ಜತೆ ನನಗೆ ಬಾಲ್ಯದಿಂದಲೂ ಸಂಬಂಧವಿದೆ. ಕರ್ನಾಟಕದ ಶಾಕ್ತಪಂಥದ ಸಂಶೋಧನೆ ಮಾಡಿರುವ ನನಗೆ, ಎಡಗೈ ಬಣಕ್ಕೆ ಸೇರಿದ ಮಾದಿಗ ಸಮುದಾಯವು ಶಾಕ್ತೇಯ ಸಮುದಾಯಗಳಲ್ಲೇ ಪ್ರಧಾನವಾಗಿರುವುದು ತಿಳಿಯಿತು. ದಲಿತ ಸಂಘರ್ಷ ಸಮಿತಿಯು, ಈಚೆಗೆ ದಲಿತರ ಎಡಗೈ-ಬಲಗೈ ಸಂಘರ್ಷಗಳು ಬಿರುಕಿಗೆ

ಕಾರಣವಾಗಿದ್ದು, ಕೂಡುಹೋರಾಟದ ಸೈದ್ಧಾಂತಿಕ ಮತ್ತು ರಾಜಕೀಯ ಪರಿಕಲ್ಪನೆ ಕ್ಷೀಣವಾಗುತ್ತಿರುವುದು, ನನ್ನನ್ನು ಕಾಡುತ್ತಿದೆ.

ಮಾದಿಗ ಸಮುದಾಯವು ಭಾರತಾದ್ಯಂತ ಇರುವ ಅಸ್ಪೃಶ್ಯ ಜಾತಿಗಳಲ್ಲಿ ತಳಸ್ತರದಲ್ಲಿರುವ ಪಂಗಡಗಳಲ್ಲಿ ಒಂದು. ಈ ಸಮುದಾಯವು ಚಾರಿತ್ರಿಕವಾಗಿ ಮಹತ್ವ ಪಡೆಯಲು ಅದಕ್ಕಿದ್ದ ಚರ್ಮಗಾರಿಕೆಯ ವೃತ್ತಿ ಕುಶಲತೆ ಮುಖ್ಯ ಕಾರಣ. ಜಗತ್ತಿನಾದ್ಯಂತ ಕಾಣಬರುವ ಈ ಚರ್ಮಕಾರ ವೃತ್ತಿಯು ಪ್ರಾಚೀನ ಕೈಕಸುಬುಗಳಲ್ಲಿ ಒಂದು; ಇದು ಆರ್ಥಿಕವೂ ಸಾಮಾಜಿಕವೂ ಧಾರ್ಮಿಕವೂ ಆದ ಸಮೃದ್ಧ ಪರಂಪರೆಗಳಿಗೆ ಕಾರಣವಾಗಿದೆ. ಪ್ರಾಚೀನವಾದ ಮತ್ತು ದಟ್ಟವಾದ ಪುರಾಣ ಪರಂಪರೆ ಹೊಂದಿರುವ ಸಮುದಾಯವಿದು. ಈ ಪುರಾಣ ಪರಂಪರೆಯ ಹಿಂದೆ ಅದರದ್ದೇ ಆದ ದಾರ್ಶನಿಕ ಹಿನ್ನೆಲೆಯಿದೆ; ಗುರುಮಠಗಳಿವೆ; ಹಾಡುಪರಂಪರೆಯಿದೆ. ಸಮಾಜಕ್ಕೆ ಉಪಯುಕ್ತವಾದ ಉತ್ಪಾದಕ ಕುಶಲತೆಯಿದ್ದರೂ ಸಾಮಾಜಿಕವಾಗಿ ನಿಕೃಷ್ಟವಾಗಿ ನೋಡಲ್ಪಟ್ಟ ಸಮುದಾಯವಿದು. ಇದರ ವೃತ್ತಿಕುಶಲತೆಯ ಮಹತ್ವ ಸೂಚಿಸುವ ಹಲವಾರು ಮಿತ್‌ಗಳಿವೆ. ತಮ್ಮ ಮೈದೊಗಲಿಂದ ಹರಳಯ್ಯ ದಂಪತಿಗಳು ಮಾಡಿದ ಚಪ್ಪಲಿಯನ್ನು ಚಳವಳಿಯ ನಾಯಕ ಬಸವಣ್ಣ ತಲೆಯ ಮೇಲೆ ಹೊರುವ ಕತೆ; ಮಲೆಯ ಮಾದೇಶ್ವರ ಕಾವ್ಯದಲ್ಲಿ ಉರಿಚಮ್ಮಾಳಿಗೆಯನ್ನು ಮೆಟ್ಟಿಸಿ ಗರ್ವಿಷ್ಟನಾದ ಸವಣದೊರೆಯನ್ನು ಸುಟ್ಟುಭಸ್ಮವಾಗಿಸುವ ಪವಾಡ; ತನ್ನನ್ನು ಅಪಮಾನಿಸುವ ಗೌಡನ ಹೆಂಡತಿಯನ್ನು ಮಾದಿಗರ ತರುಣ ಸುಂದರವಾದ ಚಪ್ಪಲಿ ಮಾಡಿ ಗೆಲ್ಲುವ ಸಿಂದ್‌ಮಾದಿಗರಲ್ಲಿರುವ ಕತೆ; ಬಿಜಾಪುರದ ಆದಿಲಶಾಹಿಯು ತಿರುಳಿಲ್ಲದ ನಿಂಬೆಹಣ್ಣಿನೊಳಗೆ ಹುದುಗಿಸುವಷ್ಟು ಮೃದುವಾದ ತೊಗಲಿನಿಂದ ಮಾಡಿದ ಚಪ್ಪಲಿಗೆ ಬೆರಗಾಗಿ ಚರ್ಮಕಾರನಿಗೆ ಬೇಡಿದಷ್ಟು ಭೂಮಿ ಇನಾಮು ಕೊಡುವ ಕತೆ –ಇವೆಲ್ಲವೂ ಮಾದಿಗರ ವೃತ್ತಿಕುಶಲತೆಯನ್ನು ಮಾತ್ರವಲ್ಲ, ಈ ಕುಶಲತೆಯಿಂದಲೇ ಅಪಮಾನಗಳ ವಿರುದ್ಧ ಹೋರಾಡುವ ಕೆಚ್ಚನ್ನೂ ಪ್ರಕಟಿಸುವ ರೂಪಕಗಳಾಗಿವೆ. ಆದಿಜಾಂಬವ ಪುರಾಣದಲ್ಲಿ ಜಾಂಬವ ಮುನಿ ಮಾಡುವ ಲೋಕಸೃಷ್ಟಿ ಕಥನದಲ್ಲಿ ತನ್ನ ಮಕ್ಕಳ ರಕ್ತಮಾಂಸ ಎಲುಬುಗಳ ಮೂಲಕ ಕೃಷಿಗೆ ಬೇಕಾದ ಭೂಮಿಯನ್ನೂ ಲೋಕಕ್ಕೆ ಬೇಕಾದ ಉಪಕರಣವನ್ನು ಹುಟ್ಟಿಸಿಕೊಡುತ್ತಾನೆ. ಈ ಕಥೆಯ ಆಶಯ ರೋಚಕ ಮಾತ್ರವಲ್ಲ, ಮಾನವೀಯವಾಗಿದೆ. ಇಷ್ಟೊಂದು ಸಾಂಸ್ಕೃತಿಕವಾಗಿ ಶ್ರೀಮಂತ ಪರಂಪರೆ ಬಹುಶಃ ಉಳಿದ ಅಸ್ಪೃಶ್ಯ ಸಮುದಾಯಗಳಿಗಿಲ್ಲ. ಈ ಪುರಾಣ ಪರಂಪರೆಯ ಪರಿಣಾಮವನ್ನು ಕೆ.ಬಿ. ಸಿದ್ದಯ್ಯ ಹಾಗೂ ಸಿದ್ಧಲಿಂಗಯ್ಯನವರ ಕಾವ್ಯಗಳಲ್ಲಿರುವ ವ್ಯತ್ಯಾಸದಲ್ಲಿ ಕಾಣಬಹುದು. ಸಿದ್ಧಲಿಂಗಯ್ಯನವರು ಪುರಾಣಗಳಲ್ಲಿ ಅಡಗಿರುವ ವೈಚಾರಿಕ ಮತ್ತು ಮಾನವೀಯ ಲೋಕದೃಷ್ಟಿಯನ್ನು ಹೊರತೆಗೆದು ತೋರಿಸುತ್ತಾರೆ: ಅವನ್ನು ವೈಚಾರಿಕ ವಿನೋದ ಪ್ರಜ್ಞೆಯಿಂದ ನೋಡುವ ದೃಷ್ಟಿಯೇ ಅಲ್ಲಿ ಪ್ರಧಾನವಾಗಿದೆ. ಆದರೆ ಸಿದ್ದಯ್ಯನವರ ಕಾವ್ಯದಲ್ಲಿ ಈ ಪುರಾಣ ಪರಂಪರೆಯನ್ನು ಶ್ರದ್ಧೆಯಿಂದ ಹುಡುಕುವ ಹಾಗೂ ಅದನ್ನು ಆಧುನಿಕ ಮೌಲ್ಯಗಳ ಹಿನ್ನೆಲೆಯಲ್ಲಿ ಮರುಸೃಷ್ಟಿಸುವ ಯತ್ನವಿದೆ.

ಆಧುನಿಕಪೂರ್ವ ಕಾಲಘಟ್ಟದಲ್ಲಿ ಮಾದಿಗರ ಮೇಲೆ 'ಅಧ್ಯಯನ' ರೀತಿಯ ಬರೆಹಗಳು ಕಾಣುವುದಿಲ್ಲ. ಆದರೆ ಶಾಸನ, ಕಾವ್ಯ ಮತ್ತು ಶಾಸ್ತ್ರಗಳಲ್ಲಿ ಬರುವ ಮಾದಿಗರ

ವಿಭಿನ್ನ ಚಿತ್ರಗಳಲ್ಲಿ ದೃಷ್ಟಿಕೋನವೊಂದು ಇದ್ದೇಯಿದೆ. ಮಧ್ಯಕಾಲೀನ ರಾಜಪ್ರಭುತ್ವಗಳು ಯುದ್ಧಸಂಸ್ಕೃತಿಗೆ ಉಪಯುಕ್ತವಾಗಿದ್ದ ಮಾದಿಗರ ಯೋಧಗುಣ ಮತ್ತು ಚರ್ಮೋತ್ಪನ್ನ ಕುಶಲತೆಗಳನ್ನು ಹಲವು ಬಗೆಯಲ್ಲಿ ಮನ್ನಿಸಿದವು. ಇದರಿಂದ ಮಾದಿಗರು ದಂಡಿಗೆ ಏರುವ, ನೆತ್ತರ ಕೊಡಿಗೆಯಾಗಿ ಭೂಹಿಡುವಳಿ ಪಡೆಯುವ ಕೆಲವು ಸಾಮಾಜಿಕ ಆರ್ಥಿಕ ಸೌಲಭ್ಯ ಮತ್ತು ಪ್ರತಿಷ್ಠೆಗಳನ್ನು ಪಡೆದುಕೊಂಡರು. ಅವರ ಚರ್ಮಗೆಲಸದ ಕುಶಲತೆಗೆ ದೊಡ್ಡ ಮನ್ನಣೆಯನ್ನು ಆದಿಲಶಾಹಿ-ಬಹಮನಿಗಳು ಕೊಟ್ಟಿರುವ ಮಿತ್‌ಗಳಿವೆ. ಆದರೆ ಇವು ವೈಯಕ್ತಿಕವಾಗಿ ಸೈನಿಕರಿಗೆ ಕುಶಲಕರ್ಮಿಗಳಿಗೆ ಜಾತಿಚೌಕಟ್ಟನ್ನು ಲೆಕ್ಕಿಸದೆ ಪ್ರಭುತ್ವ ಕೊಟ್ಟಿರುವ ಮನ್ನಣೆಗಳೇ ಹೊರತು, ಇಡೀ ಸಮುದಾಯವನ್ನು ಅದರ ಸಾಮಾಜಿಕ ಅಪಮಾನಗಳಿಂದ ಬಿಡುಗಡೆಗೊಳಿಸುವ ಹಾಗೂ ಅವರ ಉತ್ಪಾದನ ಚಟುವಟಿಕೆಗೆ ಘನತೆ ಒದಗಿಸುವ ಕಾರ್ಯಗಳಲ್ಲ. ಈ ಹಿನ್ನೆಲೆಯಲ್ಲಿ ಮಾದಿಗ ಸಮುದಾಯಕ್ಕೆ ಸಾಮಾಜಿಕ ನೆಲೆಯಲ್ಲಿ ಘನತೆ ಒದಗಿಸಿದ ಶರಣ ಚಳುವಳಿಯನ್ನು ಗಮನಿಸಬಹುದು. ಶರಣರು ಚರ್ಮದ ಚೀಲದಲ್ಲಿರುವ ಎಣ್ಣೆ ತುಪ್ಪಗಳನ್ನು ಬಳಸುವ ಮೇಲ್ಜಾತಿಯವರ ಮಡಿವಂತಿಕೆಯನ್ನು ವಿಡಂಬಿಸಿದರು; ಮಾದಿಗ ಹಿನ್ನೆಲೆಯಿಂದ ಬಂದ ಮಾದರ ಚನ್ನಯ್ಯ, ಡೋಹರ ಕಕ್ಕಯ್ಯ, ಹರಳಯ್ಯರನ್ನು ಸಂಗಾತಿಗಳನ್ನಾಗಿ ಸ್ವೀಕರಿಸಿದರು. ಆದರೆ ಲಿಂಗದೀಕ್ಷೆ ಪಡೆಯದ ಮಾದಿಗರ ಶಾಕ್ತೇಯ ಮತವನ್ನಾಗಲಿ, ಅದರ ಅವಿನಾ ಭಾಗವಾಗಿದ್ದ ಪ್ರಾಣಿಬಲಿ, ಚರಗ ಚೆಲ್ಲುವಿಕೆ, ಮಾತಂಗಿ ಪದ್ಧತಿ, ಮದ್ಯ ಮತ್ತು ಮಾಂಸಸೇವನೆ ಮುಂತಾದ ಆಚರಣೆಗಳನ್ನಾಗಲಿ ಮನ್ನಿಸಲಿಲ್ಲ. ಅವರ ಪರ್ಯಾಯ ಸಮಾಜ ಮತ್ತು ಧರ್ಮದ ಚೌಕಟ್ಟಿನಲ್ಲಿಯೇ ಮಾದಿಗರ ಸಾಂಸ್ಕೃತಿಕ ಜಗತ್ತನ್ನು ಒಳಗೊಳ್ಳುವ ಸ್ಪೇಸ್ ಇರಲಿಲ್ಲ. ಈ ವೈರುಧ್ಯದ ಮೇಲೆ ತಾತ್ವಿಕವಾದ ಹಾಗೂ ಮಾರ್ಮಿಕವಾದ ಪ್ರಶ್ನೆ ಎತ್ತಿದವಳೆಂದರೆ ಕಾಳವ್ವೆ. ಉಳಿದಂತೆ ಬಹುತೇಕ ಮಾದಿಗ ಶರಣರು ಬಸವಾದಿ ಪ್ರಮಥರು ರೂಪಿಸಿದ ಲಿಂಗದೀಕ್ಷೆಯ ಚೌಕಟ್ಟಿನಲ್ಲಿ ತಮ್ಮ ಸಮುದಾಯದ ಸಾಂಸ್ಕೃತಿಕ ಲೋಕಕ್ಕೆ ಬೆನ್ನುಕೊಟ್ಟರು. ಎಂತಲೇ, ಶರಣರ ವಚನಗಳಿಗೆ ಹೋಲಿಸಿದರೆ, ಮಾದಿಗ ಸಮುದಾಯವು ತನ್ನ ಬಗ್ಗೆ ಕಟ್ಟಿಕೊಂಡಿರುವ ಪುರಾಣಗಳು, ಆತ್ಮಕಥಾನಕವಾದ ಕತೆ-ಹಾಡುಗಳು ಸಾಂಸ್ಕೃತಿಕವಾಗಿ ಮಹತ್ವದವೆನಿಸುವುದು. ಇವುಗಳಲ್ಲಿ ಮಾದಿಗರು ತಾವು ಅನುಭವಿಸುತ್ತಿದ್ದ ಸಾಮಾಜಿಕ ದಮನದೊಳಗೂ ಅಭಿಮಾನವನ್ನೂ ತಮ್ಮ ಲೋಕದೃಷ್ಟಿಯನ್ನೂ ದಿಟ್ಟವಾಗಿ ಪ್ರಕಟಿಸಿಕೊಂಡಿರುವ ಕುರುಹುಗಳಿವೆ. ಇಲ್ಲಿ ಮಾಂಸಾಹಾರ ಸವಿಯುವ ಚಿತ್ರಗಳಿವೆ; ತಮ್ಮ ಚರ್ಮಕಾರಿಕೆಯ ಪ್ರತಿಭೆಯಿಂದ ದೊರೆಗಳನ್ನು ಮೆಚ್ಚಿಸಿದ, ಭೂಮಾಲಿಕರನ್ನು ಸೋಲಿಸಿದ, ಉಚ್ಚಜಾತಿಯ ಮಹಿಳೆಯರನ್ನು ವಶಪಡಿಸಿಕೊಂಡ ಸಾಹಸದ ಉಲ್ಲೇಖಗಳಿವೆ; ಜಾತಿವಾದಿ ಸಮಾಜದ ತಳಾದಿಗೆ ಸಿಕ್ಕ ಸಮುದಾಯವು ತನ್ನ ಚೈತನ್ಯವನ್ನು ಪುರಾಣ ಕಥನಗಳಲ್ಲಿ ಉಳಿಸಿಕೊಂಡಿರುವ ಈ ಪರಿ ಅಪೂರ್ವವಾಗಿದೆ. ಈ ಚಿತ್ರಗಳು ಸಾಂಸ್ಕೃತಿಕವಾಗಿ ಎಷ್ಟೇ ಮಹತ್ವದವಾಗಿದ್ದು ಇವುಗಳೊಳಗೆ ಒಂದು ನಿಲುವು ಪ್ರಕಟವಾಗಿದೆ. ಆದರೆ ಇವು 'ಅಧ್ಯಯನ'ಗಳಲ್ಲ. ಅಧ್ಯಯನಕ್ಕೆ ಆಕರಗಳು.

ಈ ಹಿನ್ನೆಲೆಯಲ್ಲಿ ಮಾದಿಗ ಸಮುದಾಯಕ್ಕೆ ಸಂಬಂಧಿಸಿದ ಆಕರಗಳನ್ನು ಬೌದ್ಧಿಕ ವಿಶ್ಲೇಷಣೆಗೆ ಒಳಪಡಿಸುವ ಕೆಲಸ 19ನೇ ಶತಮಾನದ ಕೊನೆಯ ಭಾಗದಿಂದ ಆರಂಭವಾಯಿತು. ಶೈಕ್ಷಣಿಕ ಅರ್ಥದಲ್ಲಿ ಅಧ್ಯಯನ ಎಂದು ಕರೆಯಬಹುದಾದ ಇವು ಪ್ರಮುಖವಾಗಿ ಐದು ಮಾದರಿಗಳನ್ನು ರೂಪಿಸಿದವು.

ಅ. ವಸಾಹತುಶಾಹಿ ಮಾದರಿ. ಇದರಲ್ಲಿ ಯೂರೋಪಿಯನ್ ವಿದ್ವಾಂಸರು, ಅರ್ಥಾತ್ ಪಾದ್ರಿಗಳು ಹಾಗೂ ಅಧಿಕಾರಿಗಳು ಮಾಡಿದ ದಾಖಲಾತಿ ಮತ್ತು ವಿಶ್ಲೇಷಣೆಗಳಿವೆ. ಜಾತಿ ಮತ್ತು ಬುಡಕಟ್ಟು ಅಧ್ಯಯನಗಳ ಭಾಗವಾಗಿ ಯೂರೋಪಿಯನ್ ಪಾದ್ರಿ ಹಾಗೂ ಬ್ರಿಟಿಶ್ ಅಧಿಕಾರಿಗಳು ಇದನ್ನು ಆರಂಭಿಸಿದರು. ದಕ್ಷಿಣ ಭಾರತದ ಗ್ರಾಮದೇವತೆಗಳ ಭಾಗವಾಗಿ ಪಾದ್ರಿಯಾಗಿದ್ದ ಹೆನ್ರಿ ವೈಟ್‌ಹೆಡ್, ಶಾಕ್ತಲೋಕದಲ್ಲಿ ಮಾದಿಗರ ಮಹತ್ವದ ಪಾತ್ರವನ್ನು ದಾಖಲಿಸುತ್ತಾನೆ. ಮುಂದೆ ಆಂಗ್ಲಾಧಿಕಾರಿಗಳು ಸಾಮ್ರಾಜ್ಯದ ಆಡಳಿತ ಸುಸೂತ್ರವಾಗಿ ನಡೆಯುವುದಕ್ಕೆ ಪೂರಕವಾಗಿ, ಭಾರತದ ಜಾತಿ ಮತ್ತು ಬುಡಕಟ್ಟುಗಳನ್ನು ಸಮೀಕ್ಷೆ ಕೈಗೊಂಡರು. ಕರ್ನಾಟಕವು ಹೈದರಾಬಾದ್, ಮುಂಬೈ, ಮದರಾಸ್, ಮೈಸೂರು ಎಂಬ ನಾಲ್ಕು ಪ್ರಾಂತ್ಯಗಳಲ್ಲಿ ಹರಡಿಹೋಗಿತ್ತಾಗಿ, ಈ ದಾಖಲಾತಿಗಳು ನಾಲ್ಕೂ ರಾಜಧಾನಿಗಳಿಂದ ನಡೆದವು. ಈ ರಾಜಕೀಯ ಪ್ರಾಂತ್ಯಗಳಲ್ಲಿ ನಡೆದ ಅಧ್ಯಯನಗಳನ್ನು ತೌಲನಿಕವಾಗಿ ನೋಡಿದರೆ, ಕೆಲವು ಸ್ವಾರಸ್ಯಕರವಾದ ಸಂಗತಿಗಳು ತಿಳಿಯುತ್ತವೆ. ಮದರಾಸು, ಮುಂಬೈ ಹಾಗೂ ಮೈಸೂರು ಪ್ರಾಂತ್ಯಗಳಲ್ಲಿ ನಡೆಸಲಾದ ಸಮೀಕ್ಷೆ ಮತ್ತು ವಿಶ್ಲೇಷಣೆಗಳಲ್ಲಿ, ವಸಾಹತುಶಾಹಿ ಆಡಳಿತದ ದೃಷ್ಟಿಕೋನದ ಭಾಗವಾಗಿ ಕಂಡ ಚಿತ್ರಗಳಿವೆ. ಎತ್ನಾಲಜಿ ಮತ್ತು ಆಂತ್ರೊಪಾಲಜಿ ಹೆಸರಲ್ಲಿ ನಡೆದ ಈ ಅಧ್ಯಯನಗಳು, ಮನುಷ್ಯ ಸಮುದಾಯಗಳನ್ನು ಪಶುಗಳ ಗಣತಿ ಮಾಡಿವೆ. ಎಡ್ಗರ್ ಥರ್ಸ್ಟನ್ 'ಮಾದಿಗ' ಶಬ್ದಕ್ಕೆ ಅನಾಗರಿಕ ('ಬ್ಯಾರ್ಬಾರಿಕ್') ಎಂಬರ್ಥ ಕೊಡುತ್ತಾನೆ. ಸಮುದಾಯವೊಂದನ್ನು 'ಅನಾಗರಿಕ' ಎಂದು ಕರೆಯುವುದಕ್ಕೆ ಯೂರೋಪಿಯನ್ ಬಿಳಿಯ ದೃಷ್ಟಿಕೋನ ಮಾತ್ರವಲ್ಲ, ಅವರಿಗೆ ಸಹಾಯಕರಾಗಿದ್ದ ಸ್ಥಳೀಯ ಮೇಲ್ಜಾತಿ ವಿದ್ವಾಂಸರ ವಿವರಣೆಗಳೂ ಕಾರಣವಾಗಿರಬಹುದು. ಮುಂಬೈ ಗೆಜೆಟಿಯರಿನಲ್ಲಿ ಅನಂತ ಕೃಷ್ಣ ಐಯ್ಯರ್ ಮತ್ತು ವೆಂಕಟ ರಂಗೋಕಟ್ಟಿಯವರು ಮಾದಿಗರ ಮೇಲೆ ಮಾಡಿರುವ ಟಿಪ್ಪಣಿಗಳು, ಸಾಮಾಜಿಕ ನಿಕೃಷ್ಟ ದೃಷ್ಟಿಗೆ ಮಾತ್ರವಲ್ಲ, ಕರ್ನಾಟಕದ ಸಂಸ್ಕೃತಿಯನ್ನು ಪರಕೀಯವಾಗಿ ನೋಡುವ ದೃಷ್ಟಿಕೋನಕ್ಕೂ ಸಾಕ್ಷಿಯಾಗಿವೆ.

ಅಸ್ಪೃಶ್ಯ ಸಮುದಾಯಗಳನ್ನು ಹೀಗೆ ಕೀಳಾಗಿ ನೋಡಿದರೂ, ವಸಾಹತುಶಾಹಿ ಆಡಳಿತವು ಅವನ್ನು ಬಳಸಿಕೊಳ್ಳುವ ಪ್ರಯೋಜನವಾದಿ ದೃಷ್ಟಿಕೋನವನ್ನೂ ಹೊಂದಿತ್ತು. ಮುಂಬೈ ಪ್ರೆಸಿಡೆನ್ಸಿಯಲ್ಲಿ ಮಹಾರ್ ಸಮುದಾಯವು ಆಂಗ್ಲಸೈನ್ಯಕ್ಕೆ ಸೇರಲು ಅವಕಾಶ ಕಲ್ಪಿಸಿತು. ಇದರಂತೆ ಮಾದಿಗರ ರೆಜಿಮೆಂಟನ್ನು ಅದು ಸ್ಥಾಪಿಸಿದಂತೆ ಕಾಣವುದಿಲ್ಲ. ಆದರೆ ವಸಾಹತುಶಾಹಿ ಪೂರ್ವದ ಸ್ಥಳೀಯ ಪ್ರಭುತ್ವಗಳು ತಮ್ಮದೇ ಆದ ರೀತಿಯಲಿ ಮಾದಿಗ ರೆಜಿಮೆಂಟನ್ನು ಹೊಂದಿದ್ದವು. ಚರ್ಮ, ಪ್ರಾಣಿಬಲಿ, ಮಾಂಸಾಹಾರಗಳ ಜತೆ ಸಂಬಂಧವಿದ್ದ ಈ ಸಮುದಾಯವನ್ನು ಸೈನ್ಯಕ್ಕೆ, ಕೋಟೆಕಾವಲಿಗೆ ಮತ್ತು ಗಲ್ಲಿಗೇರಿಸುವ ಕೆಲಸಗಳಲ್ಲಿ ಅವು ತೊಡಗಿಸಿದ್ದವು. ಅದರಲ್ಲೂ ವಿಜಯನಗರದ ಆರ್ಥಿಕತೆ ಯುದ್ಧನೀತಿ ಸಾಮ್ರಾಜ್ಯ ವಿಸ್ತರಣೆಯಲ್ಲಿ ಮುಖ್ಯ ಪಾತ್ರವಹಿಸಿದ್ದು ಅರಬಸ್ಥಾನದ ಕುದುರೆಗಳು. ಮಹಾನವಮಿ ದಿಬ್ಬದ ತುಂಬ ಪಳಗಿದ ಕುದುರೆಗಳ ಚಿತ್ರಗಳಿವೆ. ಇವಕ್ಕೆ ಬೇಕಾದ ಜೀನು ತಡಿಕೆಗಳನ್ನು ಮಾಡುವುದಕ್ಕೆ ಸಾಮ್ರಾಜ್ಯದಲ್ಲಿ ಬಹುಶಃ ದೊಡ್ಡ ಪ್ರಮಾಣದಲ್ಲಿ ಚರ್ಮಕಾರರಿದ್ದರು. ಇದಕ್ಕೆ ಸಾಕ್ಷಿಯೆಂಬಂತೆ, ಈಗಲೂ ಹಂಪಿ ಪಕ್ಕದಲ್ಲಿರುವ ಕಮಲಾಪುರದಲ್ಲಿ ದೊಡ್ಡ ಸಂಖ್ಯೆಯಲ್ಲಿ ಮಾದಿಗರಿದ್ದಾರೆ. ಅವರ ಮನೆಗಳ ಮುಂದೆ ಚರ್ಮ ನೆನೆಸುವ ಗಲ್ಲೆಬಾನಿಗಳಿವೆ. ಇವು ಈ ಸಮುದಾಯವು ತನ್ನ ವೃತ್ತಿಕುಶಲತೆಯಿಂದ

ವಿಜಯನಗರದ ಸೈನಿಕ ಸಂಸ್ಕೃತಿಯ ಭಾಗವಾಗಿತ್ತೆಂಬ ಊಹೆಗೆ ಆಧಾರದಂತಿವೆ. ಕೃಷಿಗೆ ಬೇಕಾದ ಬಾರು ನುಲಿ ಕಪಿಲೆ ಮುಂತಾದವುಗಳ ಜತೆಗೆ, ಸೈನ್ಯಕ್ಕೆ ಬೇಕಾದ ಜಲಸಾಗಣೆಯ ತಿತ್ತಿ, ಕಬ್ಬಿಣದ ಅದಿರು ಕರಗಿಸುವ ಕುಲುಮೆಗೆ ಬೇಕಾದ ತಿದಿ, ದಂಡಯಾತ್ರೆ ಹೊರಡುವ ಸೈನ್ಯಕ್ಕೆ ಬೇಕಾದ ಚಪ್ಪಲಿ, ಕತ್ತಿಯಿಡುವ ಒರೆ– ಹೀಗೆ ಚರ್ಮಕಾರಿಕೆಯ ದೊಡ್ಡ ಅಗತ್ಯವನ್ನು ಈ ಸಮುದಾಯ ಪೂರೈಸಿದಂತಿದೆ. ಇದರ ಜತೆಗೆ ಮಾದಿಗರು ಸೈನಿಕರಾಗಿ ಮತ್ತು ದೊರೆಯ ಅಂಗರಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದರು. ಇದಕ್ಕೆ ಹೋಲಿಸಿದರೆ ದಕ್ಷಿಣ ಕರ್ನಾಟಕದಲ್ಲಿ ಟಿಪ್ಪು ಹಾಗೂ ಮೈಸೂರಿನ ಒಡೆಯರು ಹೊಲೆಯ ಸಮುದಾಯವನ್ನು ಸೈನಿಕ ಸಂಸ್ಕೃತಿಯ ಭಾಗವಾಗಿಸಿ ಮೇಲ್ಚಲನೆಗೆ ಒಳಪಡಿಸಿದರು. ಈ ಅವಕಾಶ ಮಾದಿಗ ಸಮುದಾಯಕ್ಕೆ ಮೂಡಿದಂತೆ ತೋರುವುದಿಲ್ಲ. ವಿಭಿನ್ನ ಪ್ರಭುತ್ವಗಳು ಮಾಡಿಕೊಂಡಿರುವ ಈ ಆಯ್ಕೆಯ ಹಿನ್ನೆಲೆ ಸ್ಪಷ್ಟವಾಗುವುದಿಲ್ಲ. ಕರ್ನಾಟಕದ ಉತ್ತರ ಭಾಗದಲ್ಲಿ ಮಾದಿಗ ಸಮುದಾಯವೂ ದಕ್ಷಿಣದಲ್ಲಿ ಹೊಲೆಯ ಸಮುದಾಯವೂ ಯಾಕೆ ಪ್ರಧಾನವಾಗಿ ನೆಲೆಸಿದೆ ಎಂಬುದಕ್ಕೂ ಕಾರಣಾನ್ವೇಷಣೆ ಮಾಡಬೇಕಿದೆ.

ಬ್ರಿಟಿಶ್ ಅಧಿಕಾರಿ ಥರ್ಸ್ಟನ್ ನಿಂದ ಆರಂಭವಾದ ಮೈಸೂರು ರಾಜ್ಯದ ಜಾತಿ ಮತ್ತು ಬುಡಕಟ್ಟುಗಳ ಸಂಪುಟಗಳಲ್ಲಿ, ಮಾದಿಗರನ್ನು ಕುರಿತ ಮಾಹಿತಿಪೂರ್ಣ ದಾಖಲಾತಿಯಿದೆ. ಮಾದಿಗರ ಕೆಲವು ವಿಶಿಷ್ಟ ಆಚರಣೆಗಳ ದಾಖಲಾತಿಗೆ ಸ್ವತಃ ಥರ್ಸ್ಟನ್ ಕ್ಷೇತ್ರಕಾರ್ಯ ಮಾಡಿದನು. ಆತ ಹೊಸಪೇಟೆಗೆ ಬಂದಾಗ ಜಾತ್ರೆಯಲ್ಲಿ ಮಾತಂಗಿ ಉಚ್ಚಜಾತಿಯವರ ಮೇಲೆ ಉಗಿಯುವ ಆಚರಣೆಯನ್ನು ನೋಡಿದ್ದನ್ನು ದಾಖಲಿಸುತ್ತಾನೆ. ಮಾದಿಗರನ್ನು ಆತ 'ನಟೋರಿಯಸ್ ಡ್ರಂಕರ್ಸ್' ಎಂದು ಕರೆಯುತ್ತಾನೆ. ವಸಾಹತುಶಾಹಿ ಮಾನವಶಾಸ್ತ್ರಜ್ಞರು ಬಲಿಬೇಡುವ ದೈವಗಳನ್ನು 'ಕ್ರಿಮಿನಲ್ ಗಾಡ್ಸ್' ಎಂದೂ, ತಾಂತ್ರಿಕ ಆಚರಣೆಯುಳ್ಳ ಮತಪಂಥಗಳನ್ನು ಅನಾಗರಿಕ ಕ್ರೂರ ಮೌಢ್ಯ ಎಂದೂ ಕರೆಯುವುದು ಸಾಮಾನ್ಯವಾಗಿತ್ತು. ಸಮುದಾಯದ ಕಸುಬು, ದೈವಾರಾಧನೆ, ಆಹಾರ ಪದ್ಧತಿ, ಕಲಾಲೋಕಗಳ ನಡುವೆ ಅಂತರ್ ಸಂಬಂಧವಿರುವುದಾಗಲಿ, ಅವುಗಳ ಹಿಂದೆ ತನ್ನದೇ ಲೋಕದೃಷ್ಟಿಯುಳ್ಳ ದರ್ಶನ ಇರುವುದಾಗಲಿ ಅವರಿಗೆ ಅರ್ಥವಾಗಲಿಲ್ಲ ಅಥವಾ ಮುಖ್ಯವೆನಿಸಲಿಲ್ಲ. ವಾಸ್ತವವಾಗಿ ಮಾದಿಗರ ಸಾಹಿತ್ಯ ಕಲೆ ಹಾಡಿಕೆ ಆಚರಣೆಗಳ ಹಿಂದೆ ಶಾಕ್ತ ಮತ್ತು ತಂತ್ರ ಸಂಪ್ರದಾಯಗಳಿವೆ. ವಸಾಹತುಶಾಹಿ ಅಧ್ಯಯನಗಳ ಪ್ರಾಥಮಿಕ ಸಮಸ್ಯೆಯೆಂದರೆ, ಅವಕ್ಕೆ ಸಮುದಾಯಗಳನ್ನು ಮನುಷ್ಯ ಚೌಕಟ್ಟಿನಲ್ಲಿ ನೋಡಲು ಅಸಾಧ್ಯವಾಗಿದ್ದು. ಹೀಗಾಗಿ ಜನರ ಆರಾಧನೆ ಆಹಾರ ವೃತ್ತಿಯ ಆಚರಣೆಗಳನ್ನು ಸಾಂಸ್ಕೃತಿಕ–ತಾತ್ವಿಕ ಭಿತ್ತಿಯಲ್ಲಿಟ್ಟು ನೋಡುವ ಮಾತು ದೂರ ಉಳಿಯಿತು. ಅದೊಂದು ಅಧಿಕಾರಸ್ಥ ಮತ್ತು ಸಾಂಸ್ಕೃತಿಕ ಗರ್ವದಿಂದ ಕೂಡಿದ ಅಮಾನುಷ ದೃಷ್ಟಿಕೋನವಾಗಿತ್ತು. ಪಾದ್ರಿಗಳು ಧರ್ಮಪ್ರಸಾರದ ದೃಷ್ಟಿಯಿಂದ ಭಾರತೀಯ ಪಂಥ ಮತ್ತು ಸಮುದಾಯಗಳನ್ನು ಅನಾಗರಿಕವಾಗಿ ಕಾಣಿಸುವ ಅಧ್ಯಯನಗಳನ್ನು ಬ್ರಿಟಿಶ್ ಆಡಳಿತಗಾರರು ಆಡಳಿತದ ಕಾರಣದಿಂದಲೂ ಒಪ್ಪಿಕೊಂಡಿದ್ದರು. ಧರ್ಮಪ್ರಸಾರಕರ–ಆಡಳಿತಗಾರರ ನಡುವಣ ಈ ತಾತ್ವಿಕ ಸಹಮತದ ಕಾರಣದಿಂದಲೇ ಅವುಗಳ ಅಧ್ಯಯನ ವಿಧಾನಗಳಲ್ಲಿಯೂ ಸಾಮ್ಯತೆಗಳಿವೆ.

ಆ. ವಸಾಹತುಶಾಹಿ ವಿದ್ವಾಂಸರಿಗೂ ಅಧಿಕಾರಿಗಳಿಗೂ ಸಹಾಯಕರಾಗಿದ್ದ ದೇಶೀ ಪಂಡಿತರ ಮಾದರಿ. ಇದರಲ್ಲಿ ಬ್ರಿಟಿಶರಿಗೆ ಸಹಾಯಕರಾಗಿ ವೆಂಕಟರಂಗೋ ಕಟ್ಟಿ, ಅನಂತಕೃಷ್ಣ ಐಯ್ಯರ್, ಎಚ್.ವಿ. ನಂಜುಂಡಯ್ಯ ಮುಂತಾದವರು ಮಾಡಿದ ಕೆಲಸಗಳಿವೆ. ಈ ದೇಶೀ ಅಧಿಕಾರಿಗಳು ಆಂಗ್ಲರಿಂದ ಪಡೆದ ತರಬೇತಿಯಿಟ್ಟುಕೊಂಡು ಸಮುದಾಯಗಳ ದಾಖಲಾತಿ ಕಾರ್ಯವನ್ನು ಮುಂದುವರೆಸಿದರು. ಇವರು ಮೇಲ್ಜಾತಿವರಾಗಿದ್ದು, ದಲಿತರ ಸಂಸ್ಕೃತಿಯ ಬಗ್ಗೆ ಸಹಾನುಭೂತಿಯಿಲ್ಲದ ದೃಷ್ಟಿಕೋನ ಹೊಂದಿದ್ದರು. ಇವರ ದೃಷ್ಟಿಕೋನದ ಸಮಸ್ಯೆಯೆಂದರೆ, ಬ್ರಾಹ್ಮಣ ಸಂಪ್ರದಾಯಗಳನ್ನು ಭಾರತದ ಸಂಪ್ರದಾಯಗಳೆಂಬ ಗ್ರಹಿಕೆಯಲ್ಲಿ ಉಳಿದ ಸಮುದಾಯಗಳನ್ನು ನೋಡುವುದು ಮತ್ತು ಅವುಗಳ ಸಂಸ್ಕೃತಿಯನ್ನು ಮೌಲ್ಯಮಾಪನ ಮಾಡುವುದು. ಇಲ್ಲಿ ವಸಾಹತುಶಾಹಿ ದೃಷ್ಟಿಕೋನದ ಸಾಂಸ್ಕೃತಿಕ ಪರಕೀಯತೆಗಿಂತ, ದಲಿತ ಸಮುದಾಯವನ್ನು ಅದರ ವೃತ್ತಿಯನ್ನು ದೈವಪದ್ಧತಿಯನ್ನು ಆಹಾರವನ್ನು ಹಾಗೂ ಆಚರಣಾ ಲೋಕವನ್ನು ಕೀಳಾಗಿ ನೋಡುವ ಸನಾತನವಾದಿ ನೋಟಕ್ರಮವಿದೆ. ಆದರೂ ಇಲ್ಲಿ ಮಾದಿಗರಲ್ಲಿರುವ ಕೂಡಿಕೆ ಮದುವೆಯಂತಹ ಆಚರಣೆಗಳ ಬಗ್ಗೆ, ಅದರಲ್ಲೂ ಕೂಡಿಕೆಯಾದವನು ಹೆಂಡತಿಯಾದವಳ ಹಳೆಯ ಮಕ್ಕಳು ಸಮೇತ ಕೂಡಿಕೆ ಮಾಡಿಕೊಳ್ಳುವ ಬಗ್ಗೆ ಗೌರವಪೂರ್ವಕ ಉಲ್ಲೇಖಗಳು ಕಾಣುತ್ತವೆ. ಆದರೆ ಮಾದಿಗರ ಸಾಹಿತ್ಯದ ವಿಷಯ ಬಂದೊಡನೆ ಅವನ್ನು 'ಅಶ್ಲೀಲ'ವೆಂದು ಕರೆದುಬಿಡುವ ಅವಸರವೂ ಇದೆ. ತಾವು ಆರಾಧಿಸುವ ದೈವವನ್ನೇ ಶೃಂಗಾರ ದೃಷ್ಟಿಯಿಂದ ನೋಡುವ ಆಸಾದಿ ಹಾಡುಗಳು ಅವರಿಗೆ ವಿಚಿತ್ರವೆನಿಸಿರಬೇಕು. ಆಸಾದಿಹಾಡುಗಳ ಹಿಂದೆ ಸಾಮಾಜಿಕ ಆಕ್ರೋಶ ವೇದನೆ ಮತ್ತು ಫಲವಂತಿಕೆಯ ಆಶಯಗಳು ಇವೆ ಎನ್ನುವುದು ಅವರಿಗೆ ಅರ್ಥವಾಗಲಿಲ್ಲ. ಜಾತ್ರೆಗಳಲ್ಲಿ ರಾಸುಗಳನ್ನ ಕೊಂಡುಕೊಳ್ಳುವವರು ಅವುಗಳ ಹಲ್ಲು ಸುಳಿ ನೋಡುವ ರೀತಿಯಲ್ಲಿ ಮನುಷ್ಯರನ್ನು ನೋಡುವ ದೃಷ್ಟಿಕೋನದಲ್ಲಿ ತಮ್ಮದೇ ದೇಶದ ಜನರ ಬದುಕನ್ನು ದಾಖಲಿಸುವಾಗ ಕಾಣಿಸುವ ಈ ಅಧ್ಯಯನಗಳಲ್ಲಿರುವ ನಿರ್ಲಿಪ್ತತೆ ಮತ್ತು ಅಮಾನುಷತೆ ದಿಗಿಲು ಹುಟ್ಟಿಸುತ್ತದೆ. ಐಯ್ಯರ್ ಮಾಡುವ ಟಿಪ್ಪಣಿಗಳಲ್ಲಿ ಕೆಲವು ಸ್ವಾರಸ್ಯಕರ ಸಂಗತಿಗಳಿವೆ. ಆತ ಮಾದಿಗರ ವೃತ್ತಿ ಪ್ರಯೋಜನತೆಯನ್ನು ಯಾವ ರೀತಿ ಪಡೆದುಕೊಳ್ಳಬಹುದು ಎಂಬ ಚರ್ಚೆಯನ್ನು ಮಾಡುತ್ತಾನೆ. ಅವರ ಧೃಢಕಾಯದ ಬಗ್ಗೆ ಉಲ್ಲೇಖಿಸುತ್ತ, ಅವರ ದೈಹಿಕ ಶ್ರಮಶಕ್ತಿಯ ಮಹತ್ವವನ್ನು ಆತ ಗುರುತಿಸುತ್ತಾನೆ. ಆ ಶ್ರಮವನ್ನು ಪಡೆದುಕೊಳ್ಳುವ ಫ್ಯೂಡಲ್ ವ್ಯವಸ್ಥೆಯ ಪರವಾಗಿ ನಿಂತು, ಅದು ಮಾದಿಗರಿಗೆ ಕೂಲಿರೂಪದಲ್ಲಿ ಕೊಡುವ ಪ್ರತಿಫಲವನ್ನು (ತಂಬಾಕು, ಲಂಗೋಟಿ ಬಟ್ಟೆ, ಸತ್ತಪ್ರಾಣಿ ಇತ್ಯಾದಿ) ಉತ್ಪ್ರೇಕ್ಷೆಯಿಂದ ವರ್ಣಿಸುತ್ತಾನೆ. ಇದೊಂದು ಊಳಿಗಮಾನ್ಯ ಪರವಾದ ನಿಲುವು. ಮಾದಿಗರು ತಮ್ಮ ಕೂಲಿಯ ಜತೆ ಸುದ್ದಿವಾಹಕ (ಕೊರಿಯರ್) ಕೆಲಸಗಳನ್ನು ಬಿಟ್ಟಿಯಾಗಿ ಮಾಡಬೇಕಿತ್ತು. ಐಯ್ಯರ್ ಪ್ರಕಾರ ಮಾದಿಗರ ಕೇರಿಗಳು ಕೊಳಕಾಗಿರುತ್ತವೆ. ಇದಕ್ಕೆ ಕಾರಣ ಮಾದಿಗರ ವೃತ್ತಿ ಊರು ಸ್ವಚ್ಛ ಮಾಡುವುದು ಮತ್ತು ಸತ್ತ ಪ್ರಾಣಿಗಳನ್ನು ಎತ್ತಿಹಾಕುವುದು ಆಗಿರುವುದು. ಮುಂದುವರೆದು ಮಾದಿಗರು 'ಸೋಮಾರಿಗಳು ಮತ್ತು ಕೊಳಕರು' ಆಗಿರುವುದು ಸಹ ಕಾರಣವೆಂದು ಆತ ವ್ಯಾಖ್ಯಾನಿಸುತ್ತಾನೆ. ಆತನಿಗೆ ದಲಿತರ ಸಮೃದ್ಧವಾದ ಪುರಾಣ ಮತ್ತು ಕಲಾಲೋಕದ ಬಗ್ಗೆ ಚೂರೂ ಆಸಕ್ತಿಯಿಲ್ಲ. ಆದರೆ ಗಂಡು–ಹೆಣ್ಣುಗಳ ಸಂಬಂಧಗಳ ವಿಷಯ ಬಂದಾಗ ಪ್ರಚಲಿತದಲ್ಲಿರುವ ಪುರಾಣಗಳನ್ನು

ಜಾತಿಪಾವಿತ್ರ್ಯ ರಕ್ಷಿಸುವ ಧೋರಣೆಯಲ್ಲಿ ವ್ಯಾಖ್ಯಾನಿಸುತ್ತಾನೆ. ಮಾದಿಗರ ತರುಣನು ಬ್ರಾಹ್ಮಣ ಹುಡುಗಿಗೆ ಜಾತಿಹೆಸರನ್ನು ಮರೆಮಾಚಿ ಮದುವೆಯಾದ ಮಾರಮ್ಮನ ಮಿತ್ತನ್ನು ವಿಶ್ಲೇಷಿಸುತ್ತ ಉಚ್ಚಜಾತಿಯ ಹೆಣ್ಣಿನ ಎದೆಯ ಮೇಲೆ ಮಾದಿಗರ 'ಅಪವಿತ್ರ ಕೈ' ಹಾಕಿದ್ದರಿಂದ ಅವನ ಕೊಲೆಯಾಗಿದ್ದು ಸಹಜವಾಗಿತ್ತು ಎಂಬುದು ಅವನ ನಿಲುವಾಗಿದೆ.

ಐಯ್ಯರ್ ಸಂಪಾದಿಸಿದ ಸಂಪುಟಗಳಲ್ಲಿ ಮಾದಿಗ ಸಮುದಾಯದಲ್ಲಿರುವ ಹುಟ್ಟು, ಮದುವೆ, ಮೈನೆರೆಯುವ, ಬಸವಿಬಿಡುವ, ವಿಧವಾವಿವಾಹ, ಆಸ್ತಿಹಕ್ಕು, ಉತ್ತರಾಧಿಕಾರ, ನ್ಯಾಯಪದ್ಧತಿ, ಸಾವು, ಸಂಸ್ಕಾರ, ಕಸುಬುಗಾರಿಕೆ, ಸಾಮಾಜಿಕ ಅಂತಸ್ತು, ಔಷಧಿ ಮತ್ತು ಆಭರಣಗಳ ವಿಷಯಗಳನ್ನು ದಾಖಲಿಸಲಾಗಿದೆ. ಈ ಮಾಹಿತಿಗಳು ಥರ್ಸ್ಟನ್ ಮಾಡಿಕೊಟ್ಟ ವಿಭಾಗಕ್ರಮದಲ್ಲೇ ಮಂಡಿತವಾಗಿವೆ. ಇವುಗಳಲ್ಲಿ ಅನೇಕ ಸಂಗತಿಗಳು ಬ್ರಿಟಿಷರಿಗೆ ಮತ್ತು ಮೈಸೂರು ರಾಜರಿಗೆ ಆಡಳಿತದ ದೃಷ್ಟಿಯಿಂದ ಮುಖ್ಯವಾಗಿದ್ದವು. ಈ ದೇಶೀ ವಿದ್ವಾಂಸರಲ್ಲಿ ವಸಾಹತುಶಾಹಿ ದೃಷ್ಟಿಕೋನದ ಜತೆಗೆ–ಬಹುಶಃ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಾಮಾಜಿಕ ಧೋರಣೆಯ ಕಾರಣದಿಂದಲೊ ಏನೊ– ಕೊಂಚ ಉದಾರವಾದಿ ದೃಷ್ಟಿಕೋನ ಕಾಣುತ್ತದೆ. ಈ ಕುಶಲಕರ್ಮಿ ಸಮುದಾಯಗಳು ಮೈಸೂರಿನ ಪ್ರಜೆಗಳೂ ಆಗಿರುವುದರಿಂದ, ಒಡೆಯರು ಅವರ ಆರ್ಥಿಕ ಸಾಮಾಜಿಕ ಸ್ಥಿತಿ ಸುಧಾರಣೆ ಮಾಡುವ ಅಗತ್ಯವಿದೆ ಎಂಬ ದನಿಯೂ ಕ್ವಚಿತ್ತಾಗಿ ಅಲ್ಲಿ ಕಾಣುತ್ತದೆ.

'ಕ್ಯಾಸ್ಟ್ ಅಂಡ್ ಟ್ರೈಬ್ಸ್ ಆಫ್ ಮೈಸೂರು' ಸಂಪುಟಗಳನ್ನು ಪ್ರಕಟಿಸುವ ಹಿಂದೆ ಆಡಳಿತ ಮಾಡುವುದಕ್ಕೆ ಸಮಾಜವನ್ನು ಅರ್ಥಮಾಡಿಕೊಳ್ಳುವ ಸ್ಪಷ್ಟವಾದ ರಾಜಕೀಯ ಉದ್ದೇಶಗಳಿದ್ದವು. ಆದರೆ ಈ ಸಂಪುಟಗಳು ಇದಕ್ಕೆ ಹೊರತಾಗಿ ಸಾಮಾನ್ಯ ಓದುಗರಿಗೂ ('ಜನರಲ್ ರೀಡರ್ಸ್') ಲಭ್ಯವಾಗಬೇಕು, ಸಿವಿಲ್ ಸರ್ವಿಸ್ ಪರೀಕ್ಷೆ ಬರೆಯುವವರಿಗೆ ಕರ್ನಾಟಕ ಸಮಾಜ ಅರ್ಥಮಾಡಿಕೊಳ್ಳಲು ಪಠ್ಯಗಳಾಗಬೇಕು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಸಮಾಜಶಾಸ್ತ್ರ ಓದುವವರಿಗೆ ಪಠ್ಯಕ್ರಮ ಮಾಡುವುದಕ್ಕೆ ಬಳಕೆಯಾಗಬೇಕು ಎಂಬ ಆಶಯವು ಅಲ್ಲಿ ವ್ಯಕ್ತವಾಗಿದೆ. ಈ ಸಂಪುಟಗಳು ಪ್ರಕಟವಾದ ಕೆಲವು ವರ್ಷಗಳ ಬಳಿಕ (1909), ಮೈಸೂರು ವಿಶ್ವವಿದ್ಯಾನಿಲಯವು (1916) ಅಸ್ತಿತ್ವಕ್ಕೆ ಬಂದಿತು.

ಇ. ವಿಶ್ವವಿದ್ಯಾಲಯಗಳ ಜಾನಪದ ಮಾನವಶಾಸ್ತ್ರ ಹಾಗೂ ಬುಡಕಟ್ಟು ಅಧ್ಯಯನದ ವಿಭಾಗಗಳು ಅಧ್ಯಯನಗಳು. ವಸಾಹತುಶಾಹಿ ಮತ್ತು ಮೇಲ್ಜಾತಿವಾದಿ ನೋಟಕ್ರಮವು 20ನೇ ಶತಮಾನದ ಮೊದಲ ಘಟ್ಟದ ಈ ಅಧ್ಯಯನಕಾರರಲ್ಲಿ ಮುಂದುವರೆಯಿತು. 50ರ ದಶಕದ ನಂತರ ಕರ್ನಾಟಕದ ವಿಶ್ವವಿದ್ಯಾಲಯಗಳ ಬುಡಕಟ್ಟು, ಜಾನಪದ ಮಾನವಶಾಸ್ತ್ರ ಅಧ್ಯಯನ ವಿಭಾಗಗಳಿಂದ ಸಮುದಾಯ ಅಧ್ಯಯನಗಳಲ್ಲಿ, ಮೊದಲೆರಡು ಮಾದರಿಗಳಲ್ಲಿದ್ದ ನಿಕೃಷ್ಟ ಭಾವ ಇರಲಿಲ್ಲ. ಆದರೆ ಅದರ ಕುರುಹುಗಳು ಇನ್ನೂ ಉಳಿದುಕೊಂಡಿದ್ದವು. ಈ ಮಾದರಿಯ ವಿದ್ವಾಂಸರು ಆಂಗ್ಲರಂತೆ ವಿದೇಶಿಗರಾಗಿರಲಿಲ್ಲ; ಐಯ್ಯರ್–ನಂಜುಂಡಯ್ಯ ಅವರಂತೆ ಉಚ್ಚಜಾತಿಯಿಂದ ಬಂದವರೂ ಆಗಿರಲಿಲ್ಲ. ಸಾಮಾಜಿಕವಾಗಿ ಹಿಂದುಳಿದ ಜಾತಿಗೆ ಸೇರಿದವರಾಗಿದ್ದು, ಹೆಚ್ಚಿನವರು ತಾವು ಅಧ್ಯಯನ ಮಾಡುವ ಸಮುದಾಯಗಳಿಂದಲೇ ಬಂದಿದ್ದರು. ಆದರೆ ಪ್ರಚಲಿತವಾಗಿದ್ದ ಅಧ್ಯಯನ ಮಾದರಿಗಳನ್ನು ತಾತ್ವಿಕವಾಗಿ ಮುರಿದು ಕಟ್ಟಿಕೊಳ್ಳಲಿಲ್ಲವಾಗಿ, ಅವರ ಅಧ್ಯಯನಗಳಲ್ಲಿ ಸಮುದಾಯ ವಿರೋಧಿ ಅಂಶಗಳು ಮುಂದುವರೆದವು.

ಈ. 70ರ ದಶಕದ ನಂತರ ಸಾಮಾಜಿಕ ಬದಲಾವಣೆಯಲ್ಲಿ ನಂಬುಗೆಯಿಟ್ಟ ಹಾಗೂ ಚಳುವಳಿಗಳ ಜತೆ ಸಂಬಂಧವುಳ್ಳ ವಿದ್ವಾಂಸರ ಅಧ್ಯಯನಗಳು. ಮುಖ್ಯವಾಗಿ ಕೆ. ರಾಮಯ್ಯ, ಲಕ್ಷ್ಮೀಪತಿ ಕೋಲಾರ, ಎಸ್.ಎಸ್. ಹಿರೇಮಠ ಅವರ ಕೃತಿಗಳು. ಮೊದಲ ಮೂರು ಪೂರ್ವಗ್ರಹೀತ ಮಾದರಿಗಳನ್ನು ಭಗ್ನಗೊಳ್ಳಲು 80ರ ದಶಕದವರೆಗೆ ಕಾಯಬೇಕಾಯಿತು. ಮಾದಿಗ ಸಂಸ್ಕೃತಿಯಲ್ಲಿರುವ ಜೀವಚೈತನ್ಯವನ್ನು ಶೋಧಿಸುವ ಈ ಮಾದರಿಯ ಅಧ್ಯಯನಗಳನ್ನು ಎಡಪಂಥೀಯ ದಲಿತ ಚಳುವಳಿಗಳಿಂದ ಬಂದ ಚಿಂತಕರು ಕೈಗೆತ್ತಿಕೊಂಡರು. ಆಂತ್ರೊಪಾಲಜಿಕಲ್ ದಾಖಲಾತಿ ವಿಧಾನದೊಳಗಿರುವ ನಿಕೃಷ್ಟತೆ ಕನಿಕರಗಳನ್ನು ಬಿಟ್ಟುಕೊಟ್ಟು, ಸಮುದಾಯಗಳನ್ನು ಶ್ರದ್ಧೆ ಗೌರವದಿಂದ ನೋಡುವ, ಅವುಗಳ ಸಂಸ್ಕೃತಿಯಲ್ಲಿರುವ ಆರೋಗ್ಯಕರ ಮೌಲ್ಯಗಳನ್ನು ಶೋಧಿಸುವ ಯತ್ನವನ್ನು ಇವು ಮಾಡಿದವು. ಈ ಯತ್ನಗಳಲ್ಲಿ ಹೊಸಸಮಾಜದ ನಿರ್ಮಾಣಕ್ಕೆ ಬೇಕಾದ ಸತ್ವಗಳನ್ನು ಸಮುದಾಯಗಳಿಂದ ನಾಗರಿಕ ಸಮಾಜವು ಪಡೆದುಕೊಳ್ಳಬೇಕು ಎಂಬ ದನಿಯೂ ಇದೆ. ಇವನ್ನು ದಲಿತ ಮತ್ತು ಎಡವಾದಿ ರಾಜಕೀಯ ಪ್ರಜ್ಞೆಯಲ್ಲಿ ಮೂಡಿದ ವಿಮೋಚನ ಆಶಯದ ದಲಿತಾಧ್ಯಯನಗಳು ಎನ್ನಬಹುದು. ಈ ಅಧ್ಯಯನಗಳಲ್ಲಿ ಮಾದಿಗ ಸಮುದಾಯದ ಸತ್ವಶೀಲತೆಯ ಹುಡುಕಾಟ ಮಾತ್ರವಲ್ಲ, ಅದರ ಮೂಲಕ ಎಲ್ಲ ದಮನಿತ ಸಮುದಾಯಗಳ ಮೇಲೆ ತಾನೇ ಶ್ರೇಷ್ಠವೆಂಬ ನಂಬಿಕೆ ಮತ್ತು ಅಹಂಕಾರದಲ್ಲಿ ಯಜಮಾನಿಕೆ ಮಾಡುತ್ತಿರುವ ಉಚ್ಚಜಾತಿಯ ಸಂಸ್ಕೃತಿಗಳ ವಿಮರ್ಶೆಯೂ ಇದೆ. ಜೀವಪರವಾದ ದಲಿತ ಮತ್ತು ಶ್ರಮಿಕ ವರ್ಗದ ಸಂಸ್ಕೃತಿಯ ಮೇಲೆ ತನ್ನ ಜೀವವಿರೋಧಿ ಸಂಸ್ಕೃತಿಯನ್ನು ಹೇರಿ ಸಾಂಸ್ಕೃತಿಕವಾಗಿ ಭ್ರಷ್ಟಗೊಳಿಸುತ್ತಿದೆ. ಇದರಿಂದ ತಳವರ್ಗದ ಸಮುದಾಯಗಳಲ್ಲಿ ಆತ್ಮವಿಶ್ವಾಸ ಕ್ಷೀಣಿಸುತ್ತಿದೆ. ಕಳೆದುಹೋಗಿರುವ ಈ ಆತ್ಮವಿಶ್ವಾಸವನ್ನು ಮರಳಿ ಸ್ಥಾಪಿಸಬೇಕು ಎಂಬುದು ಈ ಅಧ್ಯಯನಗಳ ತುಡಿತ. ಹೀಗಾಗಿಯೇ ಸಾಹಿತ್ಯ ಅಕಾಡೆಮಿಯಿಂದ ಪ್ರಕಟವಾದ ಸಮುದಾಯ ಅಧ್ಯಯನದ ಮಾಲೆಯಲ್ಲಿ ಬಳಕೆಯಾದ 'ಉಪಸಂಸ್ಕೃತಿ' ಪರಿಭಾಷೆಯನ್ನು ಇವರು ಒಪ್ಪಲಿಲ್ಲ. ಅದನ್ನು 'ಮೂಲಸಂಸ್ಕೃತಿ' ಎಂದು ಕರೆದರು. "ತಮ್ಮ ಸಂಸ್ಕೃತಿ ಸೌಂದರ್ಯ. ಪರಂಪರೆಯ ಸತ್ವವನ್ನು ಮನಗಾಣದೇ ಬದುಕುತ್ತಿರುವ ಜನಾಂಗಕ್ಕೆ ಕೊಂಚ ಮಟ್ಟಿಗೆ ಆತ್ಮಸ್ಥೈರ್ಯ ತಂದು ಕೊಡುವುದು" ತಮ್ಮ ಅಧ್ಯಯನದ ಉದ್ದೇಶವೆಂದು ಕೆ. ರಾಮಯ್ಯನವರು ಸ್ಪಷ್ಟಪಡಿಸುತ್ತಾರೆ. ದುಡಿಯುವ ತಳಸ್ತರದ ಸಮುದಾಯಗಳಿಗೆ ಸಮೃದ್ಧವಾದ ಸಂಸ್ಕೃತಿಯಿದೆ. ಮೌಲ್ಯಪ್ರಜ್ಞೆಯಿದೆ. ಅನೇಕ ಚಾರಿತ್ರಿಕ ಕಾರಣಗಳಿಂದ ಅವು ಸ್ವಸ್ವರೂಪದ ಅರಿವನ್ನು ಕಳೆದುಕೊಂಡಿವೆ. ಅದನ್ನು ಮರಳಿಸುವುದು ಅಧ್ಯಯನಗಳು ಮಾಡಬೇಕಾದ ಸಾಂಸ್ಕೃತಿಕ ರಾಜಕಾರಣ ಎಂದು ಈ ಅಧ್ಯಯನಗಳು ಭಾವಿಸುತ್ತವೆ. ಇವು ನಿರ್ದಿಷ್ಟ ಸಮುದಾಯದ ಅಧ್ಯಯನ ಮಾಡುತ್ತಾ, ಒಟ್ಟಾರೆ ಮಾನವ ನಾಗರಿಕತೆ ಮತ್ತು ಸಂಸ್ಕೃತಿಗಳ ವಿಶಾಲ ಭಿತ್ತಿಗೂ ಚಲಿಸುತ್ತವೆ. ಲೋಕದ ಸಮಸ್ತ ದಮನಿತ ಸಮುದಾಯಗಳನ್ನು ವಿಮುಕ್ತಗೊಳಿಸಲು ಅಗತ್ಯವಾದ ಚಳುವಳಿಗೆ ಕೇವಲ ರಾಜಕೀಯ ಸಿದ್ಧಾಂತಗಳು ಸಾಲುವುದಿಲ್ಲ. ಸಾಂಸ್ಕೃತಿಕ ಸಿದ್ಧಾಂತಗಳು ಬೇಕು. ಅವನ್ನು ಸಮುದಾಯಗಳ ಆಪ್ತ ಅಧ್ಯಯನದಿಂದ ಪಡೆಯಲು ಸಾಧ್ಯವೆಂದು ಇವು ಭಾವಿಸುತ್ತವೆ.

ಉ. ಸಾಂಸ್ಕೃತಿಕ ಅನನ್ಯತೆಯ ಹುಡುಕಾಟದ ನೆಲೆಯಲ್ಲಿ ಮಾಡಲಾಗುತ್ತಿರುವ ಅಧ್ಯಯನಗಳು. ಇದಕ್ಕೆ ಕೆ.ಬಿ. ಸಿದ್ದಯ್ಯ, ಎಚ್. ಗೋವಿಂದಯ್ಯ, ವಡ್ಡಗೆರೆ ನಾಗರಾಜಯ್ಯ,

ಎಲ್. ಹನುಮಂತಯ್ಯ ಮುಂತಾದವರ ಚಿಂತನೆ, ಭಾಷಣ ಮತ್ತು ಬರೆಹಗಳನ್ನು ಗಮನಿಸಬಹುದು. ಇವನ್ನು ಸಮುದಾಯಗಳ ಅಸ್ಮಿತೆಯ ಹುಡುಕಾಟದ ಮಾದರಿಯೆಂದೂ ಕರೆಯಬಹುದು. ಈ ಮಾದರಿಯ ಅಧ್ಯಯನಗಳನ್ನು ಸಮುದಾಯದೊಳಗಿಂದಲೇ ಬಂದ ವಿದ್ವಾಂಸರು ರೂಪಿಸಿದರು. ಈ ಮಾದರಿಗಳಲ್ಲಿ ಪ್ರಮುಖವಾಗಿ ಮೂರು ಆಶಯಗಳು ಕಾಣುತ್ತವೆ. 1. ಎಲ್ಲ ದಮನಿತ ಸಮುದಾಯಗಳನ್ನು ವಿಮೋಚನೆ ಮಾಡುವ ವರ್ಗಹೋರಾಟದ ಪರಿಕಲ್ಪನೆಯುಳ್ಳ ಚಳುವಳಿಗಳು ಸೋತಿವೆ ಎಂಬ ಗ್ರಹಿಕೆ. 2. ತಮ್ಮ ಸಮುದಾಯಕ್ಕೆ ವಿಶಿಷ್ಟವಾದ ಸಾಮಾಜಿಕ ಆರ್ಥಿಕ ಚಾರಿತ್ರಿಕ ಹಿನ್ನೆಲೆಯಿದ್ದು ಅದನ್ನು ಶೋಧಿಸಬೇಕು ಎನ್ನುವ ಹಂಬಲ. ಈ ಹಂಬಲದೊಳಗೆ ಸಮುದಾಯವು ಪ್ರಭುತ್ವ ಮತ್ತು ಉಚ್ಚಜಾತಿಗಳಿಂದ ಮಾತ್ರ ಶೋಷಿತವಾಗಿಲ್ಲ, ಅಸ್ಪೃಶ್ಯರಲ್ಲೇ ಸಾಮಾಜಿಕ ರಾಜಕೀಯ ಅಧಿಕಾರದ ಹಂಚಿಕೆಯ ವಿಷಯದಲ್ಲಿ ಅನ್ಯಾಯಕ್ಕೆ ಒಳಗಾಗಿದೆ ಎಂದು ಗ್ರಹಿಕೆಯಿದೆ. 3. ತಮ್ಮ ಸಮುದಾಯದೊಳಗೆ ತಾವೇ ದಮನಿಸಿರುವ ದಕ್ಕಲರು ಎಂಬ ಅಲ್ಪಸಂಖ್ಯಾತ ಪಂಗಡಗಳಿವೆ ಎಂಬ ಅರಿವು. ಆದರೆ ಈ ಸ್ವಸಮುದಾಯ ಶೋಧಕ ಮಾದರಿಯು ಸಂಶೋಧಕರು ಸ್ವಾನುಭವದ ಜತೆಗೆ ಅಧ್ಯಯನ ಮಾಡುವ ಉಪಯುಕ್ತತೆಯನ್ನು ಸೂಚಿಸುತ್ತದೆ. ನ್ಯಾಯಸಮ್ಮತ ಹಕ್ಕಿನ ಪ್ರಜ್ಞೆಯ ಜತೆಗೇ ತಾವೂ ದಮನಕಾರರು ಎಂಬ ಆತ್ಮವಿಮರ್ಶೆಯ ರಾಜಕೀಯ ಪ್ರಜ್ಞೆಯನ್ನು ಒಳಗೊಂಡಿದೆ. ಆದರೆ ಸ್ವಾಭಿಮಾನ ಪಡೆದುಕೊಳ್ಳುವ ತವಕದಲ್ಲಿರುವ ಕೆಲವು ಅಧ್ಯಯನಗಳು ವೈಚಾರಿಕ ನಿಷ್ಠುರತೆಯನ್ನು ಬಿಟ್ಟುಕೊಟ್ಟು ವೈಭವೀಕರಣದ ಅಂಚನ್ನು ಪಡೆಯುತ್ತವೆ. ಈ ಅಧ್ಯಯನಗಳಲ್ಲಿರುವ ವೈಭವೀಕರಣ ಪ್ರವೃತ್ತಿಗೆ ಚಾರಿತ್ರಿಕ ಕಾರಣವೂ ಇದೆ. ಇದನ್ನು ಜಾತಿ ಮತ್ತು ಉಪಜಾತಿಗಳು ಶಕ್ತಿರಾಜಕಾರಣದಲ್ಲಿ ತಮ್ಮ ಹಕ್ಕುಮಂಡನೆ ಕಂಡುಕೊಂಡ ಹಾದಿಯಲ್ಲಿ ನೋಡಬಹುದು. 1947ರ ಬಳಿಕ ದಮನಿತ ಸಮುದಾಯಗಳ ಬದುಕಿಗೆ ಹೊಸದೊಂದು ಚಲನಶೀಲತೆ ಸಿಕ್ಕಿತಾದರೂ, ಅವುಗಳ ಅಸಮಾನ ಸಾಮಾಜಿಕ ಬೆಳವಣಿಗೆ ಮತ್ತು ಸಂಖ್ಯಾಬಲಗಳಿಂದ ಸಮಾನವಾದ ಸಂಪನ್ಮೂಲ ಮತ್ತು ರಾಜಕೀಯ ಅಧಿಕಾರದ ಹಂಚಿಕೆಯಾಗಲಿಲ್ಲ. ಹೀಗಾಗಿ ಇವು ಅನ್ಯಾಯಕ್ಕೊಳಗಾದ ಪ್ರಜ್ಞೆಯಿಂದ ಜಾತಿ/ಧಾರ್ಮಿಕ ಸಂಘಟಿತಗೊಂಡು ಶಕ್ತಿರಾಜಕಾರಣದಲ್ಲಿ ಒತ್ತಡ ಗುಂಪುಗಳಾಗಿ ರೂಪಾಂತರಗೊಂಡವು. ಪ್ರಜಾಪ್ರಭುತ್ವದ ಮತ್ತು ಅಭಿವೃದ್ಧಿಯ ಫಲಗಳನ್ನು 1947ರ ನಂತರ ಎಲ್ಲಾ ಸಮುದಾಯ ಅಥವಾ ವರ್ಗಗಳಿಗೆ ಸಮನಾಗಿ ಹಂಚಿಕೆಯಾಗಿದ್ದರೆ, ಇಂತಹ ಐಡೆಂಟಿಟಿ ರಾಜಕಾರಣವಾಗಲಿ, ಅದಕ್ಕೆ ಬೇಕಾದ ಸಂಶೋಧನ ಮಾದರಿಗಳ ಹುಟ್ಟಾಗಲಿ ಬಹುಶಃ ಅಗತ್ಯವಿರಲಿಲ್ಲ. ಆದರೆ ಉಚ್ಚಜಾತಿಗಳು ತಮ್ಮ ಯಜಮಾನಿಕೆ ಉಳಿಸಿಕೊಳ್ಳಲು ಸಂಘಟನೆಗೊಳ್ಳುತ್ತಿರುವ ವಾಸ್ತವದ ಎದುರು, ತಬ್ಬಲಿಯಾಗಿದ್ದ ಸಮುದಾಯಗಳು ತಮಗೆ ಸಹಜವಾಗಿ ಸಿಗಬೇಕಾಗಿದ್ದ ಪಾಲನ್ನು ಪಡೆಯಲು ಸಂಘಟನೆಗೊಳ್ಳುವ ಒತ್ತಡಕ್ಕೆ ಒಳಗಾದವು. ತಮ್ಮ ಪಂಗಡಕ್ಕೆ ನ್ಯಾಯ ಪಡೆಯಲು ಒಳಮೀಸಲಾತಿ ಹಂಚಿಕೆಯಾಗಬೇಕೆಂದು ನಂಬಿರುವ ಎಡಗೈ ಪಂಗಡದ ಎಚ್ಚೆತ್ತ ನಾಯಕರು ಪರಿಭಾವಿಸಿದರು. ಅವರು ದಲಿತ ಎಂಬ ಏಕೀಕೃತ ಪರಿಕಲ್ಪನೆಯನ್ನು ಛಿದ್ರಗೊಳಿಸುವಂತೆ, ತಮಗೆ ಆಗಿರುವ ಅನ್ಯಾಯವನ್ನು ದಲಿತ ಕಮ್ಮಟ ಮತ್ತು ವಿಚಾರಗೋಷ್ಠಿಗಳಲ್ಲಿ ನೇರವಾಗಿ ಮುಂದಿಡಲಾರಂಭಿಸಿದರು. ಬೀದಿಗಿಳಿದು ಹೋರಾಟ ಶುರುಮಾಡಿದರು. ಇದಕ್ಕೆ ಫಲವಾಗಿ ವಿಶ್ವವಿದ್ಯಾಲಯಗಳಲ್ಲಿ ಅಂಬೇಡ್ಕರ್

ಮತ್ತು ಬಾಬು ಜಗಜೀವನರಾಂ ಪ್ರತ್ಯೇಕ ಪೀಠಗಳು ಆರಂಭವಾದವು. ಈ ವಿದ್ಯಮಾನಗಳ ಹಿನ್ನೆಲೆಯಲ್ಲಿ ಮಾದಿಗ ಸಮುದಾಯಗಳ ಸ್ವಶೋಧಕ ಸಾಂಸ್ಕೃತಿಕ ಅಧ್ಯಯನಗಳ ತಾತ್ವಿಕತೆಯನ್ನು ಗಮನಿಸಬೇಕಿದೆ. ಇಲ್ಲಿ ಸಾಂಸ್ಕೃತಿಕ ರಾಜಕಾರಣ ಹಾಗೂ ಸಾಂಸ್ಕೃತಿಕ ಅಧ್ಯಯನಗಳ ಏಕೀಭವಿಸುವಿಕೆಯು ತನ್ನ ತರ್ಕದ ತುದಿಯನ್ನು ಮುಟ್ಟುವುದನ್ನೂ ಕಾಣಬಹುದು. ಇದರಿಂದ ಸಮಾನತೆಗಾಗಿ ಆರಂಭವಾದ ಚಳುವಳಿಗಳ ಒಳಗೇ ಹೊಸ ವೈಚಾರಿಕ ಮಥನ ಆರಂಭವಾಗಿದೆ. ಮಾದಿಗ ಸ್ತ್ರೀಸಂವೇದನೆಯ ಅಥವಾ ದಕ್ಕಲರಂತಹ ತಳಾದಿ ಬಣಗಳ ನೆಲೆಯಿಂದ ಅಧ್ಯಯನಗಳು ಆರಂಭವಾಗುತ್ತಿದ್ದು, ಈ ಮಥನಕ್ಕೆ ಹೊಸದಿಸೆಯನ್ನು ಕೊಡುತ್ತಿವೆ.

20ನೇ ಶತಮಾನದಲ್ಲಿ ಮಾದಿಗ ಸಮುದಾಯದ ಮೇಲೆ ಬಂದಿರುವ ಅಧ್ಯಯನಗಳ ಮಾದರಿಗಳು ಸಾಧ್ಯತೆಗಳ ಜತೆಗೇ ಸಮಸ್ಯೆಗಳನ್ನು ತಮ್ಮೊಳಗೆ ಇರಿಸಿಕೊಂಡಿವೆ. ಉದಾರೀಕರಣ ಮತ್ತು ಖಾಸಗೀಕರಣದ ಕಾಲಘಟ್ಟದಲ್ಲಿ, ಕೋಮುವಾದವು ಸಮುದಾಯಗಳನ್ನು ಆಪೋಶನ ತೆಗೆದುಕೊಳ್ಳುತ್ತಿರುವ ಸನ್ನಿವೇಶದಲ್ಲಿ, ಕೂಡುಹೋರಾಟಗಳು ದುರ್ಬಲಗೊಳಿಸುವಂತೆ ಪಂಗಡಗಳ ರಾಜಕಾರಣವು ಹೊಮ್ಮುತ್ತಿದೆ; ದಮನಿತ ಸಮುದಾಯಗಳೆಲ್ಲ ಒಂದಾಗಿ ಹೋರಾಡುವ ಮತ್ತು ಫಲಗಳನ್ನು ಸಮಾನವಾಗಿ ಹಂಚಿಕೊಳ್ಳುವ ಚಳುವಳಿಯ ಪರಿಭಾಷೆ ಹಿಂಜರಿದಿದೆ. ಇಂಥ ಇಕ್ಕಟ್ಟಿನಲ್ಲಿ ಸಾಮಾಜಿಕ ನ್ಯಾಯ ಪಡೆಯುವ ಹಾದಿಯಲ್ಲಿರುವ ಸಮುದಾಯಗಳ ಅಧ್ಯಯನಕ್ಕೆ ಹೊಸ ಮಾದರಿಗಳೇ ಹುಟ್ಟಬೇಕಿದೆ. ಈ ಪರ್ಯಾಯ ಮಾದರಿಗಳಲ್ಲಿ ಸಮುದಾಯಗಳಿಂದ ಚೈತನ್ಯಶೀಲವಾಗಿರುವ ಪರಂಪರೆಯಿಂದ ಕಸುವನ್ನು ಪಡೆದುಕೊಳ್ಳುವ ಹಾಗೂ ಅವುಗಳೊಳಗಿರುವ ಕೇಡುಗಳಿಗೆ ನಿಷ್ಠುರವಾಗಿ ಪ್ರತಿಕ್ರಿಯಿಸುವ ಅನುಸಂಧಾನ ಇರಬೇಕಿದೆ. ಆಗ ಅಧ್ಯಯನಗಳು ಶೈಕ್ಷಣಿಕ ಕ್ರಿಯೆ ಮಾತ್ರವಲ್ಲದೆ ರಾಜಕೀಯ ಕ್ರಿಯೆಯೂ ಆಗಬಲ್ಲವು. ಇಲ್ಲದಿದ್ದರೆ, ಅಸ್ಮಿತೆಯ ರಾಜಕಾರಣವು ಸ್ವವಿಶಿಷ್ಟತೆಯ ಧ್ಯಾನದಲ್ಲಿ ದ್ವೀಪವಾಗುವ, ಉಪಜಾತಿ ರಾಜಕಾರಣದ ಸೀಮಿತತೆಗೆ ಹೋಗಿ ನಿಲ್ಲುವ ಸಾಧ್ಯತೆಯಿದೆ. ಅಸ್ಮಿತೆಯ ಹುಡುಕಾಟ ಮಾಡುವ ಅಧ್ಯಯನಗಳು ಸಮುದಾಯಗಳಿಗೆ ರಾಜಕೀಯ ಸಾಂಸ್ಕೃತಿಕ ಘನತೆ ಮತ್ತು ಆತ್ಮವಿಶ್ವಾಸ ಕೊಡುತ್ತಲೇ ಎಲ್ಲ ತಬ್ಬಲಿ ಸಮುದಾಯಗಳ ಬಿಡುಗಡೆಯ ವಿಶಾಲ ರಾಜಕಾರಣದ ಭಾಗವಾಗಿ ಜೋಡಣೆಗೊಳ್ಳಬೇಕಿದೆ. (ಗುಜರಾತಿನ ಈಚಿನ ಚುನಾವಣೆಯಲ್ಲಿ ಜಿಗ್ನೇಶ್ ಮೇವಾನಿಯವರ ಗೆಲುವಿನ ಹಿಂದೆ ಇಂತಹ ರಾಜಕಾರಣವಿದೆ.) ಇದಕ್ಕಾಗಿ ಈ ಹಿಂದಿನ ಜಾತಿಹೋರಾಟಗಳ ಭಾಗವಾಗಿ ರೂಪುಗೊಂಡಿರುವ ರಾಜಕೀಯ ಚೌಕಟ್ಟು ಸಾಲುವುದಿಲ್ಲ. ಕಾರ್ಪೊರೇಟ್ ಶಕ್ತಿಗಳು ಪ್ರಭುತ್ವವನ್ನು ನಿಯಂತ್ರಿಸುತ್ತಿರುವ ಸದ್ಯದ ರಾಜಕೀಯ ಆರ್ಥಿಕ ಸನ್ನಿವೇಶದಲ್ಲಿ, ಸಮುದಾಯಗಳ ಹಾಗೂ ಅಧ್ಯಯನಗಳು ಹೊಸ ರಾಜಕೀಯ ಪ್ರಜ್ಞೆಯನ್ನು ಪಡೆದುಕೊಳ್ಳಬೇಕಿದೆ ಅನಿಸುತ್ತದೆ.

ಆಕಾರ ಸೂಚಿ

- ಕೋಟಿಗಾನಹಳ್ಳಿ ರಾಮಯ್ಯ. 1993. **ಏಂದ್ ಮಾದಿಗರ ಸಂಸ್ಕೃತಿ.** ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಚಿದಾನಂದಮೂರ್ತಿ ಎಂ., 1985. **ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ.** ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ.

- ಚೆಲುವರಾಜು, 1993, **ದಕ್ಕಲರ ಸಂಸ್ಕೃತಿ,** ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಮೈಲಹಳ್ಳಿ ರೇವಣ್ಣ, 1996, **ಚಿತ್ರದುರ್ಗ ಜಿಲ್ಲೆಯ ಮಾದಾರ ಜನಾಂಗದ ಜಾನಪದ ಕಾವ್ಯಗಳು,** ಮೈಸೂರು: ಮೈಸೂರು ವಿಶ್ವವಿದ್ಯಾಲಯ.
- ರಾಜಕುಮಾರ್ ಕೆ.ಆರ್.ಜೆ., 2012, **ಸ್ವಾತಂತ್ರ್ಯೋತ್ತರ ಕರ್ನಾಟಕದಲ್ಲಿ ಮಾದಿಗರು,** ಕಸ್ತೂರಿ ರಂಗಪ್ಪನಹಳ್ಳಿ: ಜೈಭೀಮ್ ಪ್ರಕಾಶನ.
- ಲಕ್ಷ್ಮೀಪತಿ ಕೋಲಾರ, 1993, **ಮಾಷ್ಟಿಕರ ಸಂಸ್ಕೃತಿ,** ಬೆಂಗಳೂರು ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಸಿದ್ದಯ್ಯ ಕೆ.ಬಿ., 1988, **ಬಕಾಲ** (ಖಂಡಕಾವ್ಯ), ತುಮಕೂರು: ಚಲನ ಪ್ರಕಾಶನ.
- ಸಿದ್ದಯ್ಯ ಕೆ.ಬಿ., 2009, **ಗಲ್ಲೆಬಾನಿ** (ಖಂಡಕಾವ್ಯ), ತಿಪಟೂರು: ನಮ್ಮ ಪ್ರಕಾಶನ.
- ಸಿದ್ಧಲಿಂಗಯ್ಯ, 1997, **ಗ್ರಾಮದೇವತೆಗಳು,** ಬೆಂಗಳೂರು: ಮೂಲಭಾರತಿ ಪ್ರಕಾಶನ.
- ಹಿರೇಮಠ ಎಸ್.ಎಸ್., 1992, **ಕರ್ನಾಟಕ ಸಂಸ್ಕೃತಿ ಪರಂಪರೆ ಭಾಗ 1: ಹಬ್ಬಗಳು,** ಹರಪನಹಳ್ಳಿ: ಸಮತಾ ಪ್ರಕಾಶನ.
- ಹಿರೇಮಠ ಎಸ್.ಎಸ್., 1993, **ಕರ್ನಾಟಕ ಸಂಸ್ಕೃತಿ ಪರಂಪರೆ ಭಾಗ 2: ಜಾತ್ರೆಗಳು,** ಹರಪನಹಳ್ಳಿ: ಸಮತಾ ಪ್ರಕಾಶನ.
- ವೆಂಕಟರಂಗೋ ಕಟ್ಟೀ (ಅನು):, 1893, **ಗ್ಯಾಝೆಟೀಯರು ಮುಂಬಯಿಾ ಇಲಾಖೆಗೆ ಶೇರಿದ ಕರ್ನಾಟಕ ಭಾಗದ್ದು,** ಮುಂಬಯಿ: ಗವರ್ನಮೆಂತ ಸೆಂತ್ರಲ್ ಬುಕ್ ಡಿಪೊ.
- Edgar Thurston, Anatakrishna Iyer, 1935, **The Mysore Caste and Tribes, Mysore:** University of Mysore.
- Edgar Thurston, Ananth Krishna Iyer, 1987, **Cast and Tribe of Southern India-4,** Madras: Asian Educational Service.

■

ಉತ್ತರ ಕನ್ನಡ ಜಿಲ್ಲೆಯ ಮಾಳಿಗೆ ಬಾವಿಗಳ ಐತಿಹಾಸಿಕ ಅಧ್ಯಯನ

ಸದಾಶಿವಪ್ಪ .ಜಿ.ಸಿ.
ಸಹಾಯಕ ಪ್ರಾಧ್ಯಾಪಕರು
ಇತಿಹಾಸ ವಿಭಾಗ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ದಾವಣಗೆರೆ
ಮೊ: 9481343311
sadadeepika@gmail.com

ಕರ್ನಾಟಕ ರಾಜ್ಯದಲ್ಲಿ ಪ್ರಾಚೀನ ಕಾಲದಿಂದಲೂ ಅನೇಕ ರಾಜಮನೆತನಗಳು ಆಳ್ವಿಕೆ ಮಾಡಿವೆ. ಇಲ್ಲಿಯ ಕಲೆ ಮತ್ತು ವಾಸ್ತುಶಿಲ್ಪದ ಬೆಳವಣಿಗೆಗೆ ವಿವಿಧ ಕಾಲಘಟ್ಟದಲ್ಲಿ ಆಳಿದ ರಾಜರುಗಳ ಕೊಡುಗೆ ಅಪಾರವಾಗಿದೆ. ಉತ್ತರಕನ್ನಡ ಜಿಲ್ಲೆಯು ಇಂದು ಹನ್ನೆರಡು ತಾಲ್ಲೂಕುಗಳನ್ನು ಒಳಗೊಂಡ ಕರ್ನಾಟಕದಲ್ಲಿಯ ಕರಾವಳಿ ಭಾಗದ ಪ್ರಮುಖ ಜಿಲ್ಲೆಯಾಗಿದೆ. ಇದು ಹಿಂದೂ ಮತ್ತು ಮುಸ್ಲಿಂ ಸಾಮ್ರಾಜ್ಯದ ಭಾಗವಾಗಿತ್ತು. ಹಾಗೆಯೇ ಪ್ರಾದೇಶಿಕವಾಗಿ ಆಳ್ವಿಕೆ ಮಾಡಿದ ಬೀಳಗಿ ಅರಸರು, ಸೋದೆಯ ಅರಸರುಗಳ ಆಳ್ವಿಕೆಯ ಕಾಲದಲ್ಲಿ ವೈವಿಧ್ಯಮಯವಾದ ವಾಸ್ತುಶಿಲ್ಪಗಳ ನಿರ್ಮಾಣ ಈ ಪ್ರದೇಶದಲ್ಲಿ ಆಗಿದೆ. ಮಾಳಿಗೆ ಬಾವಿಗಳ ಕಟ್ಟುವಿಕೆಯು ಈ ಭಾಗದ ಪ್ರಮುಖ ವಾಸ್ತುಶಿಲ್ಪಕಲೆಯಾಗಿ ಆಕರ್ಷಣೆ ಪಡೆದಿದೆ. ನೈಸರ್ಗಿಕವಾಗಿ ಇಲ್ಲಿ ಹೆಚ್ಚು ಮಳೆ ಬೀಳುವುದರಿಂದ ವೈಜ್ಞಾನಿಕವಾಗಿ ಜಲನಿರ್ವಹಣೆ ಮಾಡಲಾಗಿಲ್ಲ. ಆದರೆ ಅರಮನೆಯ ಆವರಣ ಮತ್ತು ಕೋಟೆಗಳಲ್ಲಿ ಮಾಳಿಗೆ ಬಾವಿಗಳ ಮೂಲಕ ದೈನಂದಿನ ಅವಶ್ಯಕತೆಗಳಿಗೆ ಜಲನಿರ್ವಹಣೆ ಮಾಡಿರುವುದು ವಿಶೇಷವಾದ ಸಂಗತಿಯಾಗಿದೆ.

ಮನುಷ್ಯನಿಗೆ ನೀರು ತೀರಾ ಅತ್ಯವಶ್ಯಕವಾದುದು, ಭಾರತದಲ್ಲಿ ಪ್ರಾಚೀನ ಕಾಲದಿಂದ ಅದರ ಮಹತ್ವವನ್ನು ಕಂಡುಕೊಂಡು ಭೂಮಿಯನ್ನು ಅಗೆದು ಬಾವಿಗಳ ಮೂಲಕ ನೀರನ್ನು ಪಡೆಯಲಾರಂಭಿಸಿದ. ಈ ಬಾವಿಯ ಕಟ್ಟಡಗಳ ವಾಸ್ತುವಿನ್ಯಾಸವು ಕಾಲದಿಂದ ಕಾಲಕ್ಕೆ ಬೆಳೆಯುತ್ತಾ ಸಾಮಾಜಿಕ ಮತ್ತು ಧಾರ್ಮಿಕ ಸಂಪ್ರದಾಯವಾಗಿ ಬೆಳೆದಿದೆ. ಅತ್ಯಂತ ಪ್ರಾಚೀನ ಉದಾಹರಣೆಗಳಲ್ಲಿ ಸಿಂಧೂ ಬಯಲಿನ ನಾಗರೀಕತೆಯ ಕಾಲದ (ಕ್ರಿಪೂ. 3000–1500) ಮೊಹೆಂಜಾದಾರೋ ನಗರದಲ್ಲಿ ದೊರೆತಿರುವ ಬೃಹತ್ ಸ್ನಾನಗೃಹವು ಬಹಳ ಮುಖ್ಯವಾದುದಾಗಿದೆ.[1] ಇದರ ಕೊಳದ ಸುತ್ತಲೂ ಎರಡು ಅಂತಸ್ತುಗಳಲ್ಲಿ ಹಲವು ಕೋಣೆಗಳಿಂದ ಕೂಡಿದ ಕಟ್ಟಡವನ್ನು ಕಟ್ಟಲಾಗಿದೆ. ಕೊಳಕ್ಕೆ ಕಾಲುವೆಯಿಂದ ನೀರನ್ನು ಹಾಯಿಸುವ ಮತ್ತು ಉಪಯೋಗಿಸಿದ ನೀರು ಹೊರ ಹೋಗಲು ವ್ಯವಸ್ಥೆ ಮಾಡಲಾಗಿದೆ. ಪ್ರಾಚೀನ ಕಾಲದಲ್ಲಿ ಬೌದ್ಧ ಗುಹಾಲಯಗಳ ಬಳಿ ಬಂಡೆಗಳನ್ನು ಕೊರೆದು ಮೆಟ್ಟಿಲು ಬಾವಿಗಳನ್ನು ನಿರ್ಮಿಸಿರುವುದು ಕಂಡುಬರುತ್ತದೆ. ಇದಕ್ಕೆ ಪೋಡಿ ಎಂದು ಕರೆಯುತ್ತಾರೆ. ಕ್ರಿ.ಶ. ಹನ್ನೊಂದನೆಯ ಶತಮಾನದಲ್ಲಿ ಭಾರತಕ್ಕೆ ಭೇಟಿ ನೀಡಿದ್ದ ವಿದೇಶಿ ಯಾತ್ರಿಕನಾದ ಅಲ್ಬೆರೂನಿಯು ಭಾರತೀಯರು ಮುಸ್ಲಿಂರಿಗಿಂತ ಜಲವಾಸ್ತುಗಳನ್ನು ಸುಂದರವಾಗಿ ಮತ್ತು ಅಲಂಕಾರಿಕವಾಗಿ ಕಟ್ಟಡಗಳನ್ನು ಹಲವು ಅಂತಸ್ತುಗಳಲ್ಲಿ ಕಟ್ಟಿ ಬಾವಿಗೆ ಇಳಿಯಲು ಮೆಟ್ಟಿಲುಗಳನ್ನು ಕಟ್ಟುತ್ತಾರೆ. ಇವನ್ನು ಕಟ್ಟುವುದರಲ್ಲಿ ಇವರ ತಂತ್ರಜ್ಞಾನವು ಉನ್ನತ ಮಟ್ಟದ್ದಾಗಿದೆ ಎಂದು ತನ್ನ ಗ್ರಂಥದಲ್ಲಿ ಅಭಿಪ್ರಾಯ ಪಟ್ಟಿದ್ದಾನೆ.[2]

ಜಲಸಯೋತ್ಸರ್ಗತತ್ವ ಎಂಬ ಪ್ರಾಚೀನ ಕಾಲದ ಗ್ರಂಥದಲ್ಲಿ ಮನುಷ್ಯನು ಕೂಪ, ವಾಪಿ, ಪುಷ್ಕರಣಿ ಮತ್ತು ತಡಾಗ ಎಂಬ ನಾಲ್ಕು ಬಗೆಯ ಕಟ್ಟಡಗಳನ್ನು ನೀರಿನ ಉಪಯೋಗಕ್ಕಾಗಿ ಕಟ್ಟುತ್ತಿದ್ದನು ಎಂದು ತಿಳಿಸಲಾಗಿದೆ.[3] ಕೂಪ ಎಂದರೆ ಬಾವಿ, ಪುಷ್ಕರಣಿ ಎಂದರೆ ನಾಲ್ಕು ದಿಕ್ಕಿನಲ್ಲಿ ಮೆಟ್ಟಿಲು ಇರುವ ಬಾವಿ. ತಡಾಗ ಎಂದರೆ ಹರಿಯುವ ನೀರಿಗೆ ಅಡ್ಡವಾಗಿ ಒಡ್ಡನ್ನು ಕಟ್ಟಿರುವ ಕೆರೆ ಎಂಬ ಅರ್ಥಗಳನ್ನು ನೀಡುತ್ತದೆ. ಇವುಗಳಲ್ಲಿ ಎರಡನೇ ಪ್ರಕಾರವಾದ ವಾಪಿಗಳು ವಿಶೇಷವಾದ ಜಲಸಂಬಂಧೀ ಕಟ್ಟಡಗಳಾಗಿವೆ. ಮೂಲತಃ ವಾಪಿ ಎಂಬುದು ಸಂಸ್ಕೃತ ಭಾಷೆಯ ಪದ. ಭಾರತದ ವಿವಿಧ ಭಾಗಗಳಲ್ಲಿ ಇವನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಗುಜರಾತ್ ರಾಜ್ಯದಲ್ಲಿ ವಾವ್ ಅಥವಾ ವಾಡಿ ಎಂದೂ, ದೆಹಲಿ, ಆಗ್ರಾ, ರಾಜಸ್ಥಾನಗಳಲ್ಲಿ ಬೋಲಿ ಎನ್ನುತ್ತಾರೆ.[4] ಕರ್ನಾಟಕದಲ್ಲಿ ಬಾವಡಿ ಅಥವಾ ಬೌರಿ (Baudi or Bowri) ಎಂದು ಕರೆಯಲಾಗಿದೆ.[5] ವಾಪಿಗಳನ್ನು ಮಾಳಿಗೆ ಬಾವಿಗಳು (Roofed Wells) ಎಂದು ಕರೆಯುವುದು ಸೂಕ್ತವಾಗಿದೆ. "ಮಾಳಿಗೆ" ಎಂಬ ಪದದ ಅರ್ಥ ಮುಚ್ಚಿಗೆ ಎಂಬುದಾಗಿದೆ.[6] ಇವುಗಳ ಪ್ರವೇಶದಾರಿಯ ಮೆಟ್ಟಿಲುಗಳ ಮೇಲೆ ಮೇಲ್ಛಾವಣಿಯನ್ನು ಕಟ್ಟಲಾಗಿರುತ್ತದೆ. ಸಂಪೂರ್ಣ ಕಟ್ಟಡವು ಭೂಮಿಯ ಒಳಭಾಗದಲ್ಲಿಯೇ ಒಂದು ಅಥವಾ ಎರಡಕ್ಕಿಂತ ಹೆಚ್ಚು ಅಂತಸ್ತುಗಳಲ್ಲಿ ಕಟ್ಟಲ್ಪಟ್ಟಿರುತ್ತದೆ. ಇದನ್ನು ಗಮನಿಸಿದಾಗ ವಾಪಿ ಎಂಬುದರ ಅರ್ಥ ಭೂಮಿಯ ಒಳಭಾಗದಲ್ಲಿರುವ ಒಂದು ಕಟ್ಟಡದ ಮಧ್ಯದಲ್ಲಿ ಇರುವಂತಹ ಬಾವಿ ಎಂಬ ಅರ್ಥವನ್ನು

ನೀಡುತ್ತದೆ.[7] ಮುಖ್ಯವಾಗಿ ಬಾವಿಯ ಸುತ್ತಲೂ ಪಡಸಾಲೆ ಅಥವಾ ಕೋಣೆಗಳನ್ನು ಹೊಂದಿರುವಂತಹ ಕಟ್ಟಡಗಳನ್ನು ಕಟ್ಟಿದ್ದರೆ ಮಾತ್ರ ಅವುಗಳನ್ನು ವಾಪಿ ಅಥವಾ ಮಾಳಿಗೆ ಬಾವಿ (Vapi, Stepwell or Roofed Well) ಎಂದು ಕರೆಯಬೇಕು. ಪ್ರಸ್ತುತ ಸಂಶೋಧನಾ ಲೇಖನದಲ್ಲಿ ಉತ್ತರ ಕನ್ನಡ ಜಿಲ್ಲೆಯ ವಿವಿಧ ಭಾಗಗಳಲ್ಲಿ ಕಂಡುಬರುವ ಕ್ರಿ.ಶ. 16 ಮತ್ತು 17ನೇ ಶತಮಾನಗಳಲ್ಲಿ ಕಟ್ಟಲಾದ ಮಾಳಿಗೆ ಬಾವಿಗಳ ಕಲೆ ಮತ್ತು ವಾಸ್ತುಶಿಲ್ಪವನ್ನು ಅಧ್ಯಯನ ಮಾಡಲಾಗಿದೆ.

ಮಾಳಿಗೆ ಬಾವಿಗಳ ಐತಿಹಾಸಿಕತೆ

ಶಿಲ್ಪಶಾಸ್ತ್ರಗಳಲ್ಲಿ ದೊರೆಯುವ ಮಾಹಿತಿ ಪ್ರಕಾರ ಸಾಂಪ್ರದಾಯಿಕವಾಗಿ ಕಟ್ಟಲಾಗಿರುವ ನಾಲ್ಕು ಪ್ರಕಾರದ ಜಲವಾಸ್ತುಗಳಲ್ಲಿ ಮೆಟ್ಟಿಲುಬಾವಿ ಮತ್ತು ತಡಾಗಗಳನ್ನು ಕಟ್ಟುವ ತಂತ್ರಜ್ಞಾನವು ಕರ್ನಾಟಕದಲ್ಲಿ ಕದಂಬರ ಕಾಲದಿಂದ ಆರಂಭವಾಗಿರುವುದು ಕ್ಷೇತ್ರಕಾರ್ಯದಲ್ಲಿ ದೃಢಪಟ್ಟಿದೆ. ಪುಷ್ಕರಣಿಗಳನ್ನು ಕಟ್ಟುವುದು ಕ್ರಿ.ಶ. ಎಂಟನೇ ಶತಮಾನದ ನಂತರ ನಮ್ಮ ರಾಜ್ಯದಲ್ಲಿ ವಿಕಾಸ ಆದಂತೆ ಕಾಣುತ್ತದೆ. ಆದರೆ ಮಾಳಿಗೆ ಬಾವಿಗಳನ್ನು ಕಟ್ಟುವ ಶೈಲಿಯು ಪ್ರಥಮವಾಗಿ ಗುಜರಾತ್ ರಾಜ್ಯದಲ್ಲಿ ಕ್ರಿ.ಶ. ಆರನೇ ಶತಮಾನದ ಉತ್ತರಾರ್ಧ ಭಾಗದಲ್ಲಿ ಆರಂಭವಾಗಿದೆ.[8] ನಂತರ ರಾಜಸ್ಥಾನ, ಸೌರಾಷ್ಟ್ರ ಪ್ರಾಂತ್ಯಗಳಿಗೆ ಪ್ರಸರಿಸಲ್ಪಟ್ಟಿದೆ. ಹೀಗೆ ಇಡೀ ಪಶ್ಚಿಮ ಭಾರತದ ಭಾಗದಲ್ಲಿ ಬೆಳೆದು ಮಧ್ಯಕಾಲದ ಹೊತ್ತಿಗೆ ಉಚ್ಛ್ರಾಯ ಸ್ಥಿತಿಯನ್ನು ತಲುಪಿದೆ. ಮಾಳಿಗೆ ಬಾವಿಗಳನ್ನು ಕಟ್ಟುವ ತಂತ್ರಜ್ಞಾನವು ಈ ಭಾಗದಲ್ಲಿ ಬೆಳೆಯುವುದಕ್ಕೆ ಬಹುಮುಖ್ಯವಾದ ಕಾರಣವೆಂದರೆ, ಅಲ್ಲಿನ ಒಣಹವೆ ಮತ್ತು ಆ ರಾಜ್ಯದಲ್ಲಿ ನೀರಿನ ಅಭಾವ ಹೆಚ್ಚಾಗಿ ಇರುವುದರಿಂದ ಜನತೆಯು ಅತಿಯಾದ ತಾಪದಿಂದ ತಪ್ಪಿಸಿಕೊಳ್ಳಲು ಭೂಮಿಯಲ್ಲಿ ಬಹಳ ಆಳವಾಗಿ ಅನೇಕ ಅಂತಸ್ತುಗಳಲ್ಲಿ ಕಲ್ಲಿನಿಂದ ಕಟ್ಟಿದಂತಹ ಈ ಬಾವಿಗಳಲ್ಲಿಯ ಹವಾಗುಣವು ಸಹಜವಾಗಿಯೇ ಭೂಮಿಯ ಮೇಲ್ಭಾಗಕ್ಕಿಂತ ತಂಪಾಗಿರುತ್ತದೆ. ಹಾಗಾಗಿ ವಿಶ್ರಾಂತಿ ಪಡೆಯಲು ಬಹು ಅನುಕೂಲಕರವಾಗಿದ್ದವು. ಮಾಳಿಗೆ ಬಾವಿಗಳನ್ನು ಕಟ್ಟುವುದು ಪಶ್ಚಿಮ ಭಾರತದಿಂದ ಕರ್ನಾಟಕಕ್ಕೆ ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಪ್ರಭಾವಿಸಲ್ಪಟ್ಟಿದೆ. ಆದರೆ ಅದು ಕ್ರಿ.ಶ. ಹದಿನೈದನೇ ಶತಮಾನದ ನಂತರ ಇಂಡೋ-ಇಸ್ಲಾಮಿಕ್ ಶೈಲಿಯೊಂದಿಗೆ ಮುಸ್ಲಿಂ ಮತ್ತು ಪ್ರಾದೇಶಿಕ ಅರಸರುಗಳ ಹಾಗೂ ಜನಸಮುದಾಯಗಳ ಪಾಲ್ಗೊಳ್ಳುವಿಕೆಯಿಂದ ಒಂದು ಜಲಸಂಸ್ಕೃತಿಯಾಗಿ ಬೆಳೆದು ನಿಂತಿದೆ.

ಮಾಳಿಗೆ ಬಾವಿಗಳು ಕಂಡುಬರುವ ಪ್ರದೇಶಗಳು

ವ್ಯಾಪಿಗಳನ್ನು ನೀರಿನ ಸೌಕರ್ಯಕ್ಕಾಗಿಯೇ ಕಟ್ಟಲಾಗಿರುವುದರಿಂದ ಹಲವಾರು ರೀತಿಯ ಉಪಯೋಗಗಳಿಗೆ ಬಳಕೆ ಮಾಡಿಕೊಳ್ಳುತ್ತಾರೆ. ಕೆಲವು ವಿಶೇಷವಾದ ಸ್ಥಳಗಳಲ್ಲಿ ಮಾತ್ರ ಇವನ್ನು ಕಟ್ಟಿರುತ್ತಾರೆ. ಇಲ್ಲಿ ಕಟ್ಟುವುದರಿಂದ ಅವುಗಳ ಮಹತ್ವವೂ ಸಹ ಹೆಚ್ಚಾಗುತ್ತದೆ. ವಾಸ್ತುವಿನ್ಯಾಸವೂ ಸಹ ಸ್ಥಳಗಳಿಗೆ ಅನುಗುಣವಾಗಿಯೇ ಇರುತ್ತದೆ. ಉದ್ದೇಶವೂ ಸಹ ಭಿನ್ನ ಭಿನ್ನವಾಗಿಯೇ ಇರುತ್ತದೆ. ಕೆಳಗಿನ ಈ ಮೂರು ಪ್ರದೇಶಗಳಲ್ಲಿ ಮುಖ್ಯವಾಗಿ ಕಂಡುಬರುತ್ತವೆ. ಇತರ ಪ್ರದೇಶಗಳಲ್ಲಿಯೂ ಸಹ ಕಂಡು ಬರಬಹುದು. ಕಾರಣ ನೀರಿನ

ಸೌಕರ್ಯಕ್ಕಾಗಿಯೇ ಇರುವುದರಿಂದ ಇತರ ಪ್ರದೇಶಗಳಲ್ಲಿ ಕಾಣಬರುವುದರಲ್ಲಿ ಸಂದೇಹವಿಲ್ಲ.

1. **ದೇವಾಲಯಗಳ ಆವರಣ:** ದೇವಾಲಯಗಳ ನೀರಿನ ಉಪಯೋಗಕ್ಕಾಗಿ ಇಲ್ಲಿ ಮಾಳಿಗೆ ಬಾವಿಗಳನ್ನು ಕಟ್ಟಲಾಗಿರುತ್ತದೆ. ಈ ಪ್ರದೇಶಗಳಲ್ಲಿ ಕಟ್ಟುವಂತಹ ಬಾವಿಗಳ ವಾಸ್ತುವಿನ್ಯಾಸವು ಇತರೇ ಬಾವಿಗಳಿಗಿಂತ ಭಿನ್ನವಾಗಿರುತ್ತದೆ. ಸಾಮಾನ್ಯವಾಗಿ ಇವುಗಳಲ್ಲಿ ಒಂದು ಅಥವಾ ಎರಡು ದಿಕ್ಕುಗಳಲ್ಲಿ ಪಡಸಾಲೆಗಳ ಕಟ್ಟಡವನ್ನು ಕಟ್ಟಲಾಗಿರುತ್ತದೆ. ಉಳಿದ ದಿಕ್ಕುಗಳಲ್ಲಿ ಮೆಟ್ಟಿಲುಗಳಿರುತ್ತವೆ. ಇದು ಆಯಾಯ ಪ್ರದೇಶಗಳಲ್ಲಿ ಇರುವ ರೂಢಿ ಸಂಪ್ರದಾಯದಂತೆ ಕಟ್ಟಡಗಳಲ್ಲಿ ವ್ಯತ್ಯಾಸಗಳು ಇರುತ್ತವೆ.

2. **ಅರಮನೆಗಳ ಆವರಣ:** ಈ ಪ್ರದೇಶಗಳಲ್ಲಿರುವ ಬಾವಿಗಳು ಪ್ರತ್ಯೇಕವಾಗಿ ಅರಮನೆಯ ಉಪಯೋಗಕ್ಕಾಗಿ ಇರುತ್ತವೆ. ಇಲ್ಲಿಯ ಬಾವಿಗಳ ವಾಸ್ತುವಿನ್ಯಾಸವು ಸಾಮಾನ್ಯವಾಗಿ ಒಂದೇ ರೀತಿಯಾಗಿರುತ್ತದೆ. ಇವುಗಳನ್ನು ಮುಚ್ಚಿದ ರೀತಿಯಲ್ಲಿ (ಮುಸುಕಿನಬಾವಿ) ಕಟ್ಟಿರುತ್ತಾರೆ. ಕಟ್ಟಡದ ಒಂದು ದಿಕ್ಕಿನಲ್ಲಿ ಮಾತ್ರ ಬಾವಿಗೆ ಇಳಿಯಲು ಮೆಟ್ಟಿಲುಗಳು ಇರುತ್ತವೆ.

3. **ಪ್ರಮುಖ ವ್ಯಾಪಾರಿ ಮಾರ್ಗಗಳಲ್ಲಿ:** ಮಾಳಿಗೆ ಬಾವಿಗಳನ್ನು ಅರವಟ್ಟಿಗೆಯಾಗಿ ಬಳಕೆ ಮಾಡಿಕೊಳ್ಳುವುದು ಸಾಮಾನ್ಯ. ಹಾಗಾಗಿ ಪ್ರಮುಖ ವ್ಯಾಪಾರಿ ಮಾರ್ಗಗಳಲ್ಲಿ ಮತ್ತು ಪಟ್ಟಣಗಳ ಮುಖ್ಯ ಭಾಗದಲ್ಲಿ ಕಟ್ಟುವುದರಿಂದ ಇವುಗಳ ಪ್ರಾಮುಖ್ಯತೆ ಹೆಚ್ಚಾಗುತ್ತದೆ.

ಮಾಳಿಗೆ ಬಾವಿಗಳ ಲಕ್ಷಣಗಳು

ಜಲವಾಸ್ತುಗಳಲ್ಲಿಯೇ ಅತ್ಯಂತ ಕುತೂಹಲಕಾರಿಯಾಗಿ ಮಾಳಿಗೆ ಬಾವಿಗಳನ್ನು ಗುರುತಿಸಲಾಗಿದೆ. ಶಿಲ್ಪಶಾಸ್ತ್ರದ ಬಗ್ಗೆ ಹೆಚ್ಚು ಮಾಹಿತಿಯನ್ನು ನೀಡುವ ಸಮರಾಂಗಣ ಸೂತ್ರಧಾರ ಗ್ರಂಥದಲ್ಲಿ ರಾಜನು ವಾಸ ಮಾಡಲು ಅರಮನೆಯನ್ನು ಕಟ್ಟುವಾಗ ಅದರ ಆವರಣದಲ್ಲಿ ಮಾಳಿಗೆ ಬಾವಿಯನ್ನು (ವಾಪಿ) ನಿರ್ಮಿಸಬೇಕು ಎಂಬ ನಿರ್ದೇಶನವನ್ನು ನೀಡುತ್ತದೆ.[8] ಇವುಗಳ ವಾಸ್ತುವಿನ್ಯಾಸವನ್ನು ಗಮನಿಸಿದಾಗ ಶತ್ರುಗಳ ಆಕ್ರಮಣದ ಸಂದರ್ಭದಲ್ಲಿ ರಾಜನು ರಕ್ಷಣೆ ಪಡೆದುಕೊಳ್ಳಲು ಇವು ಬಳಕೆ ಆಗುತ್ತಿರಬೇಕು. ಇದಕ್ಕೆ ಪೂರಕವಾಗಿ ಇವುಗಳಲ್ಲಿ ಸುರಂಗಮಾರ್ಗ ಇರುತ್ತದೆ ಎಂಬ ಮಾಹಿತಿಯು ಜನಪದರ ಮೂಲಕ ಸಿಗುತ್ತದೆ. ಈ ಅಂಶವನ್ನು ಗಮನಿಸಿದಾಗ ಉತ್ತರ ಕನ್ನಡ ಜಿಲ್ಲೆಯಲ್ಲಿ ಅಧ್ಯಯನ ಮಾಡಲಾದ ಬಾವಿಗಳನ್ನು ಕೋಟೆ ಮತ್ತು ಅರಮನೆ ಆವರಣದಲ್ಲಿ ಕಟ್ಟಿರುವುದು ವಿಶೇಷ ಸಂಗತಿ ಇದಲ್ಲದೆ ಇನ್ನೂ ಹಲವು ಲಕ್ಷಣಗಳು ಕೆಳಗಿನಂತಿವೆ.

1) ಮಾಳಿಗೆ ಬಾವಿಗಳನ್ನು ಜನನಿಬಿಡ ಪ್ರದೇಶಗಳಿಂದ ದೂರದಲ್ಲಿ ಪ್ರತ್ಯೇಕತೆಗಾಗಿ ಕಟ್ಟಲಾಗಿರುತ್ತದೆ.
2) ಭಾಗಶಃ ಇವು ಅರಸು ಮನೆತನಗಳಿಗೆ ಮೀಸಲಾಗಿರುತ್ತವೆ.
3) ಸೂರ್ಯನ ಬೆಳಕು ಬಾವಿಯ ಮೂಲಕ ಒಳಪ್ರವೇಶಿಸಿ ಪ್ರಕಾಶಿಸುತ್ತದೆ. ಇದು ಮನಸ್ಸಿಗೆ ಮುದ ನೀಡುತ್ತದೆ.

4) ಬಾವಿಗಳ ಒಳಗಿನ ಹವಾಗುಣವು ಸರ್ವಕಾಲದಲ್ಲಿಯೂ ತಂಪಾಗಿರುತ್ತದೆ.

5) ಸರಳ ರೇಖಾ ಮಾದರಿಯ (Quite linear in design) ಶೈಲಿಯಲ್ಲಿ ನಿರ್ಮಾಣ ಮಾಡಲಾಗಿರುತ್ತದೆ.


ಮಾಳಿಗೆ ಬಾವಿಗಳ ಉಪಯೋಗ

ಪ್ರಾಚೀನ ಮತ್ತು ಮಧ್ಯಕಾಲದಲ್ಲಿ ವ್ಯಾಪಾರಿ ವರ್ಗವು ತಮ್ಮ ವೃತ್ತಿಯನ್ನು ಮಾಡಲು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಅನೇಕ ದಿವಸಗಳ ಕಾಲ ತಮ್ಮ ಸರಕುಗಳೊಂದಿಗೆ ಪ್ರಯಾಣ ಮಾಡುತ್ತಿತ್ತು. ಇವರು ಸಹಜವಾಗಿ ಗ್ರಾಮದ ದೇವಾಲಯಗಳ ಬಳಿ ರಾತ್ರಿ ಹೊತ್ತು ತಂಗುತ್ತಿದ್ದರು. ಆದರೆ ದೂರ ಪ್ರಯಾಣ ಮಾಡುವ ಸಂದರ್ಭದಲ್ಲಿ ಈ ವ್ಯಾಪಾರಿಗಳಿಗೆ ಮತ್ತು ಅವರ ಪರಿವಾರಕ್ಕೆ ವಿಶ್ರಾಂತಿ ತಂಗುದಾಣಗಳಾಗಿ ಮಾಳಿಗೆ ಬಾವಿಗಳನ್ನು ಪ್ರಮುಖ ವ್ಯಾಪಾರಿ ಮಾರ್ಗಗಳಲ್ಲಿ ರಾಜರು ನಿರ್ಮಿಸುತ್ತಿದ್ದರು.[10] ಹಂಪಿಯ ಪಕ್ಕದಲ್ಲಿ ಇರುವ ಮಲಪನಗುಡಿ ಗ್ರಾಮಕ್ಕೆ ಹೊಂದಿಕೊಂಡಂತೆ ವಿಜಯನಗರ ಸಾಮ್ರಾಜ್ಯಕ್ಕೆ ಪಶ್ಚಿಮದ ವ್ಯಾಪಾರೀ ಮಾರ್ಗಗಳು ಪ್ರವೇಶಿಸಲು ಒಂದು ಮುಖ್ಯದ್ವಾರವು ಇದ್ದು, ಇದರ ಸಮೀಪದಲ್ಲಿಯೇ ಮಾಳಿಗೆ-ಕೂಪ-ಆರಾಮ ಹೆಸರಿನ ಮಾಳಿಗೆ ಬಾವಿಯು ಕಂಡುಬರುವುದರಿಂದ ಬಹುಶಃ ಇಲ್ಲಿ ವಿಜಯನಗರಕ್ಕೆ ವ್ಯಾಪಾರ ಮಾಡಲು ಬರುವಂತಹ ವ್ಯಾಪಾರಿಗಳು ತಂಗುತ್ತಿದ್ದರು. ಈ ಹಿನ್ನೆಲೆಯಲ್ಲಿ ಉತ್ತರಕನ್ನಡ ಜಿಲ್ಲೆಯು ಕರಾವಳಿ ಪ್ರದೇಶದ ಪ್ರಮುಖ ವ್ಯಾಪಾರಿ ಕೇಂದ್ರ ಆಗಿತ್ತು. ಇದು ಕರ್ನಾಟಕದ ದಕ್ಷಿಣ ಒಳನಾಡು ಮತ್ತು ಸಮುದ್ರ ಮಾರ್ಗದ ಮಧ್ಯದಲ್ಲಿಯ ಪ್ರಮುಖ ಸ್ಥಳ ಆಗಿದೆ. ಇನ್ನೊಂದು ಬಹುಮುಖ್ಯವಾದ ಸಂಗತಿ ಅಂದರೆ ಯುದ್ಧಗಳ ಸಂದರ್ಭದಲ್ಲಿ ಪರಸ್ಪರ ಸ್ನೇಹಿತ ರಾಜ್ಯಗಳು ಸೈನಿಕ ಸಹಾಯ ಮಾಡುವುದು ಸಹಜ. ಹೀಗೆ ಯುದ್ಧ ಸಂದರ್ಭದಲ್ಲಿ ಸೈನಿಕ ಸಹಾಯ ನೀಡಲು ಬಂದಂತಹ ಮಿತ್ರ ಸೈನ್ಯವು ಮಾಳಿಗೆ ಬಾವಿಗಳ ಬಳಿಯಲ್ಲಿ ತಂಗುತ್ತಿತ್ತು. ಸೈನಿಕರು, ಕುದುರೆ ಮತ್ತು ಆನೆಗಳಿಗೆ ನೀರನ್ನು ಇದೇ ಬಾವಿಗಳಿಂದ ಪಡೆಯಲಾಗುತ್ತಿತ್ತು.[11] ಮಧ್ಯಕಾಲದಲ್ಲಿ ಈಗಿನ ಆಧುನಿಕ ಕಾಲದಂತೆ ಸಾರಿಗೆ ಸಂಪರ್ಕ ಸಾಧನಗಳಲ್ಲಿ ಅಭಿವೃದ್ಧಿ ಆಗಿರಲಿಲ್ಲ. ಅಂದಿನ ಕಾಲದಲ್ಲಿ ಸಾರಿಗೆ ಸಂಪರ್ಕಸಾಧನಗಳಾಗಿ ಪ್ರಾಣಿಗಳು, ಗಾಡಿಗಳು ಮತ್ತು ರಥಗಳು ಬಳಕೆಯಲ್ಲಿ ಇದ್ದವು. ಇವುಗಳಿಂದ ಪ್ರಯಾಣವನ್ನು ತ್ವರಿತವಾಗಿ ಮತ್ತು ವೇಗವಾಗಿ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಪ್ರವಾಸಿಗಳು ರಾತ್ರಿಯ ವೇಳೆಯನ್ನು ಒಂದು ನಿರ್ದಿಷ್ಟವಾದ ಪ್ರದೇಶಗಳಲ್ಲಿ ಕಳೆದು ನಂತರ ತಮ್ಮ ಪ್ರಯಾಣವನ್ನು ಮುಂದುವರಿಸುತ್ತಿದ್ದರು. ಹೀಗೆ ಪ್ರವಾಸ ಮಾಡುವಂತಹ ಪ್ರಯಾಣಿಕರು ತಂಗುವಂತಹ ಸ್ಥಳಗಳಲ್ಲಿ ಮಾಳಿಗೆ ಮತ್ತು ಮೆಟ್ಟಿಲು ಇರುವಂತಹ ಬಾವಿಗಳನ್ನು ಒಂದು ನಿರ್ದಿಷ್ಟವಾದ ಪ್ರದೇಶಗಳಲ್ಲಿ ಕಟ್ಟಿರುವುದು ಕಂಡುಬರುತ್ತದೆ. ಈ ಬಾವಿಗಳಲ್ಲಿ ಪಡಸಾಲೆಯನ್ನು ಕಟ್ಟುವ ಮುಖ್ಯ ಉದ್ದೇಶವು ಪ್ರವಾಸಿಗರ ಅನುಕೂಲಕ್ಕಾಗಿ. ಅಲ್ಲದೇ ಇಲ್ಲಿಯೇ ಉದ್ಯಾನವನ ಅಥವಾ ಮರದ ತೋಪು ಇರುತ್ತಿದ್ದರಿಂದ ಸೈನಿಕರು ಮತ್ತು ಪ್ರವಾಸಿಗಳು ವಿಶ್ರಾಂತಿ ಪಡೆಯಲು ಅನುಕೂಲ ಆಗಿತ್ತು. ರಾಜ ಪರಿವಾರದವರು ಪ್ರವಾಸವನ್ನು ಮಾಡುವಂತಹ ಸಂದರ್ಭದಲ್ಲಿ ಇವುಗಳ ಬಳಿಯಲ್ಲಿ ಸ್ವಲ್ಪಕಾಲ ವಿಶ್ರಾಂತಿಯನ್ನು ಪಡೆದುಕೊಂಡು ಮುಂದಿನ ಸ್ಥಳಗಳಿಗೆ ಪ್ರವಾಸ ಮಾಡುತ್ತಿದ್ದರು.


ಕಲೆ ಮತ್ತು ವಾಸ್ತುಶಿಲ್ಪ

ಗೋಲ್‌ಬಾವಿ (ಬೀಳಗಿ)


ಈ ಬಾಪಿಯನ್ನು ಕ್ರಿ.ಶ. 16 ನೇ ಶತಮಾನದಲ್ಲಿ ಉತ್ತರ ಕನ್ನಡ ಜಿಲ್ಲೆಯ ಸಿದ್ಧಾಪುರ ತಾಲ್ಲೂಕಿನ ಬೀಳಗಿ ಎಂಬ ಗ್ರಾಮವನ್ನು ಕೇಂದ್ರವಾಗಿಟ್ಟುಕೊಂಡು ಆಳಿದಂತಹ ಅರಸರುಗಳ ಆಳ್ವಿಕೆಯ ಕಾಲದಲ್ಲಿ ಅರಮನೆಯ ಆವರಣದಲ್ಲಿ ಕಟ್ಟಲಾಗಿದೆ. ಸ್ಥಳೀಯ ಜನತೆ ಇದನ್ನು ಗೋಲ್‌ಬಾವಿ ಎಂದು ಕರೆಯುತ್ತಾರೆ. ಕಲೆ ಮತ್ತು ವಾಸ್ತುಶಿಲ್ಪದ ದೃಷ್ಟಿಯಿಂದ ಮಹತ್ವವಾಗಿದೆ. ಚೌಕ ಆಕಾರದಲ್ಲಿ ಇರುವ ಇದನ್ನು ಪ್ರಾದೇಶಿಕವಾಗಿ ಸಿಗುವ ಜಂಬಿಟ್ಟಿಗೆ ಕಲ್ಲು ಮತ್ತು ಗಾರೆಯನ್ನು ಉಪಯೋಗಿಸಿ ಮಾಳಿಗೆಯಲ್ಲಿ ಕಟ್ಟಿದ್ದಾರೆ. ಇದರ ಒಳಪ್ರವೇಶಿಸಲು ಪೂರ್ವ ದಿಕ್ಕಿನಲ್ಲಿ ಪ್ರವೇಶವು ಮೂರು ಹಂತಗಳಲ್ಲಿ ಐ ಆಕಾರದಲ್ಲಿದೆ ಮೊದಲನೇ ಹಂತದಲ್ಲಿ 9 ಮೆಟ್ಟಿಲುಗಳಿವೆ. ಈ ಭಾಗವು ತೆರೆದ ಭಾಗವಾಗಿದೆ, ಇವುಗಳನ್ನು ದಾಟಿಕೊಂಡು ಒಂದು ನಡುನಿಲ್ಲೆಡೆಗೆ ಬರಬೇಕು. ಇದರ ಮೇಲೆ ಮೇಲ್ಛಾವಣಿಯನ್ನು ಕಟ್ಟಲಾಗಿದೆ. ಇಲ್ಲಿಂದ ದಕ್ಷಿಣಕ್ಕೆ ಎರಡನೇ ಹಂತದ ಆರು ಮೆಟ್ಟಿಲುಗಳಿವೆ. ಈ ಮೆಟ್ಟಿಲುಗಳನ್ನು ದಾಟಿಕೊಂಡು ಚೌಕಾಕಾರದ ಕೊಠಡಿ ಇದೆ. ಇದರ ಮೇಲ್ಛಾವಣಿಯಲ್ಲಿ ಸುಂದರವಾದ ಕಲ್ಲಿನ ಕಮಾನುಗಳ ಅಲಂಕಾರವನ್ನು ಮಾಡಿದ್ದಾರೆ. ಈ ಕೊಠಡಿಯ ಪಶ್ಚಿಮ ದಿಕ್ಕಿನ ದ್ವಾರದ ಮೂಲಕ ಬಾಪಿಯ ನಾಲ್ಕೂ ದಿಕ್ಕಿನಲ್ಲಿ ಇರುವ ಪಡಸಾಲೆಗೆ ಬರಬಹುದಾಗಿದೆ.




ಗೋಲ್‌ಬಾವಿ ಬೀಳಗಿ, ತಲನಕ್ಷೆ



ಗೋಲ್‌ಬಾವಿ ಬೀಳಗಿ ಪ್ರವೇಶದ್ವಾರ



ಗೋಲ್‌ಬಾವಿ ಬೀಳಗಿ ಪಡಸಾಲೆ



ಬಾವಿಗೆ ತೆರೆದುಕೊಂಡಿರುವ ಕಮಾನು ಕಿಟಕಿ, ಗೋಲ್‌ಬಾವಿ


ಇದು ಮೂರನೇ ಹಂತದ ಪ್ರವೇಶವಾಗಿದೆ. ಪಡಸಾಲೆಯಲ್ಲಿ ಬಾವಿಗೆ ತೆರೆದುಕೊಂಡಂತೆ ನಾಲ್ಕು ದಿಕ್ಕಿನಲ್ಲಿ ಒಂದೊಂದು ದೊಡ್ಡದಾದ ಕಮಾನು ಕಿಟಕಿಗಳು ಇವೆ. ಪಶ್ಚಿಮ ದಿಕ್ಕಿನ ಕಮಾನು ಕಿಟಕಿಯ ಬಲಭಾಗದ ಬುಡದಲ್ಲಿ ಲಜ್ಜಾಗೌರಿಯ ಶಿಲ್ಪ

ಇದೆ. ಪಡಸಾಲೆಯ ಮೇಲ್ಛಾವಣಿಯನ್ನು ಕಮಾನಿನ ತಂತ್ರಜ್ಞಾನದಲ್ಲಿ ಕಟ್ಟಲಾಗಿದೆ. ಇಲ್ಲಿ ಸಮಾನಾಂತರದಲ್ಲಿ ಇರುವಂತಹ ತೊಲೆಗಳನ್ನು ಕಮಾನಿನ ಆಕಾರದಲ್ಲಿ ಯೋಜಿಸಲಾಗಿದೆ. ಪಡಸಾಲೆಯ ಗೋಡೆಯ ನಾಲ್ಕೂ ದಿಕ್ಕಿನಲ್ಲಿ ತಲಾ ಎರಡೆರಡು ಸಾದಾ ಕಮಾನಿನ ಗೂಡುಗಳು ಇವೆ. ಉತ್ತರ ಮತ್ತು ಪಶ್ಚಿಮ ದಿಕ್ಕಿನ ಗೋಡೆಗಳಲ್ಲಿ ಈ ಗೂಡುಗಳ ಮಧ್ಯದಲ್ಲಿ ತರಂಗ ಕಮಾನು ಗೂಡುಗಳಿವೆ. ಆದರೆ ಪೂರ್ವ ಮತ್ತು ದಕ್ಷಿಣ ದಿಕ್ಕಿನಲ್ಲಿರುವ ಈ ತರಂಗ ಕಮಾನು ಗೂಡುಗಳು ಬಾಗಿಲುಗಳಾಗಿವೆ. ಪೂರ್ವದ ಬಾಗಿಲು ಮುಖ್ಯ ಪ್ರವೇಶವಾದರೆ, ದಕ್ಷಿಣ ಭಾಗದ ತರಂಗ ಕಮಾನಿನ ದ್ವಾರದ ಮೂಲಕ ಇದೇ ದಿಕ್ಕಿನ ಪಡಸಾಲೆಗೆ ಹೊಂದಿಕೊಂಡಿರುವ ಚೌಕ ಆಕಾರದ ಕೊಠಡಿಗೆ ಪ್ರವೇಶಿಸಬಹುದು. ಇಲ್ಲಿಯ ದಕ್ಷಿಣ ಭಾಗದ ಗೋಡೆಯಲ್ಲಿ ಸಾದಾ ಕಮಾನಿನ ಗೂಡುಗಳು ಇದ್ದರೆ ಪಶ್ಚಿಮ ಭಾಗದಲ್ಲಿ ಇದೇ ಕೊಠಡಿಗೆ ಹೊಂದಿಕೊಂಡಂತೆ ಕಮಾನು ದ್ವಾರವನ್ನುಳ್ಳ ಆಯುತಾಕಾರದ ಕೊಠಡಿ ಇದೆ. ಇದರ ಮೇಲ್ಛಾವಣಿಯನ್ನೂ ಸಹ ಕಮಾನು ತಂತ್ರಜ್ಞಾನದಲ್ಲಿ ಕಟ್ಟಲಾಗಿದೆ. ಪಡಸಾಲೆಗಳ ಮಧ್ಯದಲ್ಲಿ ಬಾವಿಗೆ ತೆರೆದುಕೊಂಡಂತೆ ಇರುವ ಕಮಾನು ಕಿಟಕಿಗಳ ಮೇಲ್ಭಾಗದಲ್ಲಿ ಬಾವಿಯ ಅಂಕಣದವರೆಗೂ ಪ್ರಸ್ಥರದ (Entablature) ಅಲಂಕರಣವನ್ನು ಹಲವು ಸಮಾಂತರ ದಿಂಡುಗಳ ಪಟ್ಟಿಗಳಿಂದ ನಿರ್ಮಿಸಿದ್ದಾರೆ. ತೀರಾ ಮೇಲಿನ ಪ್ರಸ್ಥರದ ನಾಲ್ಕು ದಿಕ್ಕಿನಲ್ಲಿ ಲಲಾಟಗಳಂತೆ ರೂಪಿಸಿದ ಚೌಕಟ್ಟುಗಳಲ್ಲಿ ಒಂದೊಂದು ಲಜ್ಜಾಗೌರಿಯ ಶಿಲ್ಪಗಳಿವೆ.

ಮುಸುಕಿನ ಬಾವಿ – ಸಿರ್ಸಿ

ಈ ಬಾವಿಯು ಉತ್ತರ ಕನ್ನಡ ಜಿಲ್ಲೆಯ ಸಿರ್ಸಿ ನಗರದ ನಾಡಿಗ ಗಲ್ಲಿ ಎಂಬ ಸ್ಥಳದಲ್ಲಿ ಕಂಡು ಬರುತ್ತದೆ. ಇದನ್ನು ಸೋದೆಯ ಅರಸನಾದ ಸದಾಶಿವ ನಾಯಕನು ಕ್ರಿ.ಶ 1606ರಲ್ಲಿ ಕಟ್ಟಿಸಿದನು. ಇದು ಇರುವ ಸ್ಥಳವನ್ನು ಅಂದು ಚನ್ನಪಟ್ಟಣ ಎಂದು ಕರೆಯುತ್ತಿದ್ದು, ಇಲ್ಲಿ ಅರಸರ ನಿವಾಸಗಳು ಇದ್ದವೆಂದು ತಿಳಿದು ಬಂದಿದೆ. ಇದನ್ನು ಭೂಮಿಯ ಒಳಭಾಗದಲ್ಲಿ ಇಟ್ಟಿಗೆ ಮತ್ತು ಗಾರೆಯನ್ನು ಉಪಯೋಗಿಸಿ ಕಟ್ಟಲಾಗಿದೆ. ಸ್ಥಳೀಯ ಜನರು ಇದನ್ನು ಮುಸುಕಿನ ಬಾವಿ ಎಂದು ಕರೆಯುತ್ತಾರೆ. ಇದು ಚೌಕ ಆಕಾರದಲ್ಲಿದ್ದು ಪೂರ್ವ ದಿಕ್ಕಿನಲ್ಲಿ ಪ್ರವೇಶದ್ವಾರವು ನೇರವಾಗಿದೆ. ಪ್ರವೇಶದ ಎಂಟು ಮೆಟ್ಟಿಲುಗಳ ನಂತರ ಚಚ್ಚೌಕದ ನಡುನಿಲ್ಲೆಡೆ ಇದೆ. ಇದಕ್ಕೆ ಹೊಂದಿಕೊಂಡಂತೆ ಕಚ್ಚುಕಮಾನಿನಿಂದ ಕೂಡಿದ ಕಮಾನು ಪ್ರವೇಶದ್ವಾರವಿದ್ದು ಇದನ್ನು ದಾಟಿಕೊಂಡು ಬಂದರೆ ಚೌಕ ಆಕಾರದ ಒಂದು ಕೊಠಡಿ ಇದೆ. ಇದರ ಉತ್ತರ ಮತ್ತು ದಕ್ಷಿಣ ಗೋಡೆಗಳಲ್ಲಿ ತಲಾ ಒಂದೊಂದು ಕಮಾನು ಗೂಡುಗಳಿದ್ದು ಇದರ ಮೇಲ್ಛಾವಣಿಯಲ್ಲಿ ಅಷ್ಟ ಭುಜಾಕೃತಿಯ ಗುಮ್ಮಟವನ್ನು ಕಟ್ಟಿದಂತೆ ಕಾಣುತ್ತದೆ. ಈಗ ಬಿದ್ದು ಹೋಗಿದ್ದು ಕೇವಲ ರಂಧ್ರ ಮಾತ್ರ ಇದೆ. ಈ ಕೋಣೆಯನ್ನು ದಾಟಿಕೊಂಡು ಬಾವಿಯ ನಾಲ್ಕು ದಿಕ್ಕಿನಲ್ಲಿ ಇರುವ ಕಮಾನುಗಳಿಂದ ಕೂಡಿದ ಪಡಸಾಲೆಗೆ ಬರಬಹುದಾಗಿದೆ. ಪ್ರತೀ ದಿಕ್ಕಿನ ಪಡಸಾಲೆಯಲ್ಲಿಯೂ ತಲಾ ನಾಲ್ಕು ಕಮಾನು ದ್ವಾರಗಳನ್ನು ಹಾದು ಹೋಗಬೇಕಾಗಿರುತ್ತದೆ. ಹಾಗೆಯೇ ಪ್ರತೀ ಪಡಸಾಲೆಯನ್ನು ಮೂರು ಚಚ್ಚೌಕಗಳಾಗಿ


ವಿಂಗಡಿಸಿದ್ದಾರೆ. ಒಂದು ಚಚ್ಚೌಕದಿಂದ ಇನ್ನೊಂದು ಚಚ್ಚೌಕಕ್ಕೆ ಹೋಗಲು ಕಚ್ಚು ಕಮಾನು ದ್ವಾರಗಳನ್ನು ಹಾದು ಹೋಗಬೇಕು. ಪಡಸಾಲೆಯ ಅಂಕಣಗಳಲ್ಲಿ ವಿವಿಧ ರೀತಿಯ ಗಾರೆಯಿಂದ ಮಾಡಿದ ಅಲಂಕರಣ ಚಿತ್ರಗಳಿವೆ. ಪೂರ್ವದಿಕ್ಕಿನ ಪಡಸಾಲೆಯ ಗೋಡೆಯಲ್ಲಿ ದೊಡ್ಡದಾದ ಕಮಾನು ಗೂಡುಗಳ ಮಧ್ಯದಲ್ಲಿ ದೀಪಗಳನ್ನು ಇಡಲು ಚಿಕ್ಕ ಚಿಕ್ಕ ಕಮಾನು ಗೂಡುಗಳಿವೆ. ಇದೇ ದಿಕ್ಕಿನ ಪಡಸಾಲೆಯ ಮಧ್ಯದ ಗೂಡು ಸಾದಾ ಕಮಾನಿನಿಂದ ಕೂಡಿದ್ದರೆ ಉಳಿದ ದಿಕ್ಕಿನ ಪಡಸಾಲೆಗಳ ಮಧ್ಯಭಾಗದಲ್ಲಿರುವಂತಹ ಗೂಡುಗಳು ತರಂಗ ಕಮಾನುಗಳಿಂದ ಕೂಡಿದ್ದು, ಅವುಗಳ ಮೇಲೆ ಗಾರೆಯ ಅಲಂಕಾರವನ್ನು ಮಾಡಿದ್ದಾರೆ. ಪಡಸಾಲೆಯ ಮೇಲ್ಛಾವಣಿಯನ್ನು ಗುಮ್ಮಟ ತಂತ್ರಜ್ಞಾನದಲ್ಲಿ ಕಟ್ಟಿದ್ದಾರೆ. ಬಾವಿಯ ನಾಲ್ಕು ದಿಕ್ಕಿನ ಪಡಸಾಲೆಯಲ್ಲಿ ತಲಾ ಮೂರು ಕಮಾನು ಕಿಟಕಿಗಳು ಬಾವಿಗೆ ತೆರೆದುಕೊಂಡಿವೆ. ಈ ಕಿಟಕಿಗಳ ಹೊರಭಾಗದ ಮೇಲೆ ನಯವಾದ ಗಾರೆಯ ಅಲಂಕಾರವನ್ನು ಮಾಡಲಾಗಿದೆ. ಉತ್ತರ ದಿಕ್ಕಿನ ಕಿಟಕಿಯ ಮೇಲ್ಭಾಗದಲ್ಲಿ ಗಾರೆಯಿಂದ ಮಾಡಿದ ಹೂಬಳ್ಳಿಯ ಅಲಂಕಾರದ ಎರಡೂ ಪಾರ್ಶ್ವಗಳಲ್ಲಿ ಒಂದೊಂದು ಅಶ್ವವ್ಯಾಳದ ಶಿಲ್ಪಗಳು ಕಾಣುತ್ತವೆ. ಇಲ್ಲಿಯೇ ಕೆಳಭಾಗದಲ್ಲಿ ಬಾವಿಯ ನೀರು ಹೊರಹೋಗಲು ಕೊಳವೆ ಆಕಾರದ ಕಾಲುವೆಯನ್ನು ರಚಿಸಲಾಗಿದೆ. ಈಶಾನ್ಯ ದಿಕ್ಕಿನಲ್ಲಿ ಒಂದು ಸುರಂಗ ಮಾರ್ಗ ಇತ್ತು ಎಂಬ ಪ್ರತೀತಿಯು ಇದೆ.



ಮುಸುಕಿನಬಾವಿ ಸಿರ್ಸಿ, ತಲನಕ್ಷೆ



ಮುಸುಕಿನ ಬಾವಿ ಪಾರ್ಶ್ವನೋಟ




ಪಡಸಾಲೆ ಮತ್ತು ಬಾವಿಗೆ ತೆರೆದುಕೊಂಡಿರುವ ಕಮಾನು ಕಿಟಕಿಗಳು

ಸದಾಶಿವಪ್ಪ ಜಿ.ಸಿ.

ಮಿರ್ಜಾನ ಕೋಟೆಯ ಮಾಳಿಗೆ ಬಾವಿಗಳು

ಮಿರ್ಜಾನ ಗ್ರಾಮವು ಉತ್ತರಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನಿಂದ ಹನ್ನೆರಡು ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಒಂದು ಚಿಕ್ಕದಾದ ಬೆಟ್ಟದ ಮೇಲೆ ಕ್ರಿ.ಶ. 16 ನೇ ಶತಮಾನದಲ್ಲಿ ಆಕರ್ಷಕವಾದ ಕೋಟೆಯನ್ನು ಕಟ್ಟಲಾಗಿದೆ. ಈ ಕೋಟೆಯು ಎರಡು ಒಳ ಆವರಣಗಳನ್ನು ಹೊಂದಿದ್ದು ಇವುಗಳಲ್ಲಿ ತಲಾ ಒಂದೊಂದು ವೃತ್ತಾಕಾರದ ಎರಡು ಬಾವಿಗಳನ್ನು ನಿರ್ಮಿಸಿದ್ದಾರೆ. ಇವಕ್ಕೆ ಪ್ರವೇಶದ ಮೆಟ್ಟಿಲುಗಳ ಮೇಲೆ ಛಾವಣಿಯನ್ನು ಕಟ್ಟಿರುವುದು ವಿಶೇಷವಾಗಿದೆ. ಕೋಟೆಯ ಮೊದಲನೇ ಆವರಣದಲ್ಲಿ ಐ ಆಕಾರದ ಪ್ರವೇಶ ದಾರಿಯನ್ನು ಹೊಂದಿರುವ ವೃತ್ತಾಕಾರದ ಬಾವಿ ಇದೆ. ಇದಕ್ಕೆ ಪ್ರವೇಶವು ದಕ್ಷಿಣದಿಂದ ಉತ್ತರಕ್ಕೆ ನಂತರ ಪಶ್ಚಿಮಕ್ಕೆ ಸಾಗುತ್ತದೆ. ಒಂದನೇ ಹಂತದಲ್ಲಿ ಎರಡು ಮೆಟ್ಟಿಲು ನಂತರ ಒಂದನೇ ನಡುನಿಲ್ಲೆಡೆ, ಎರಡನೇ ಹಂತದಲ್ಲಿ ಹದಿಮೂರು ಮೆಟ್ಟಿಲು ನಂತರ ಎರಡನೇ ನಡುನಿಲ್ಲೆಡೆ. ಇದಕ್ಕೆ ಹೊಂದಿಕೊಂಡಂತೆ ಮುಖ್ಯ ಕಮಾನು ಪ್ರವೇಶದ್ವಾರವನ್ನು ನಿರ್ಮಿಸಲಾಗಿದೆ. ಮೊದಲ ಎರಡು ಹಂತದ ಮೆಟ್ಟಿಲುಗಳು ತೆರೆದುಕೊಂಡಿದ್ದರೆ ಕಮಾನು ಪ್ರವೇಶದಿಂದ ಆರಂಭವಾಗುವ ಮೂರನೇ ಹಂತದ ಮೆಟ್ಟಿಲುಗಳಿಂದ ಬಾವಿಯ ಅಂಚಿನವರೆಗೂ ಮೇಲ್ಛಾವಣಿಯನ್ನು ಕಮಾನಿನ ತಂತ್ರಜ್ಞಾನದಲ್ಲಿ ಕಟ್ಟಲಾಗಿದೆ. ಇಲ್ಲಿ ಹತ್ತೊಂಬತ್ತು ಮೆಟ್ಟಿಲುಗಳು ಇವೆ. ಮೂರನೇ ನಡುನಿಲ್ಲೆಡೆಯಲ್ಲಿ ಪ್ರವೇಶದ ಮೆಟ್ಟಿಲುಗಳು ಪಶ್ಚಿಮಕ್ಕೆ ಏಕಪ್ರಕಾರವಾಗಿ ಬಾವಿಗೆ ಸಾಗುತ್ತವೆ.

ಬಾವಿಯನ್ನು ಹಲವು ಅಂತಸ್ತುಗಳಲ್ಲಿ ಕಟ್ಟಲಾಗಿದ್ದು ಪ್ರತೀ ಅಂತಸ್ತು ಬೇರ್ಪಡುವ ಭಾಗದಲ್ಲಿ ಸುತ್ತಲೂ ಕಾಲುಹಾದಿಯನ್ನು ನಿರ್ಮಿಸಲಾಗಿದೆ. ಮಿರ್ಜಾನ್ ಕೋಟೆಯ ಎರಡನೇ ಒಳ ಆವರಣದಲ್ಲಿರುವ ಬಾವಿಯನ್ನು ದೊಡ್ಡಬಾವಿ ಎಂದು ಕರೆಯುತ್ತಾರೆ. ಇದಕ್ಕೆ ಪ್ರವೇಶವು ನೇರವಾಗಿ ಪೂರ್ವದಿಕ್ಕಿನಲ್ಲಿ ಇದ್ದು ಮೆಟ್ಟಿಲುಗಳು ಏಕ ಪ್ರಕಾರವಾಗಿವೆ. ಇಲ್ಲಿನ ಇಪ್ಪತ್ತನೇ ಮೆಟ್ಟಿಲಿಗೆ ಹೊಂದಿಕೊಂಡಂತೆ ತರಂಗ ಕಮಾನುಗಳುಳ್ಳ ಪ್ರವೇಶದ್ವಾರ ಇದೆ. ಈ ಭಾಗದಲ್ಲಿ ಮೂರು ಮೆಟ್ಟಿಲುಗಳು ಇದ್ದು ನಂತರ ನಡುನಿಲ್ಲೆಡೆಯನ್ನು ನಿರ್ಮಿಸಲಾಗಿದೆ. ಈ ಹಂತದ ಮೇಲ್ಭಾಗದಲ್ಲಿ ಛಾವಣಿಯನ್ನು ಕಟ್ಟಲಾಗಿದೆ. ಬಾವಿಯನ್ನು ವೃತ್ತಾಕಾರವಾಗಿ ಮೂರು ಅಂತಸ್ತುಗಳಲ್ಲಿ ನಿರ್ಮಿಸಿ ಪ್ರತೀ ಅಂತಸ್ತು ಬೇರ್ಪಡುವ ಭಾಗದಲ್ಲಿ ಬಾವಿಯ ಸುತ್ತಲೂ ಕಾಲುಹಾದಿಯನ್ನು ನಿರ್ಮಾಣ ಮಾಡಲಾಗಿದೆ.



ಮಿರ್ಜಾನ ಮೊದಲನೇ ಆವರಣದ ಬಾವಿ ತಲನಕ್ಷೆ



ಮಿರ್ಜಾನ ಎರಡನೇ ಆವರಣದ ಬಾವಿ ತಲನಕ್ಷೆ



ಮಿರ್ಜಾನ ಒಂದನೇ ಆವರಣದ ಬಾವಿ



ಮಿರ್ಜಾನ ಒಂದನೇ ಆವರಣದ ಬಾವಿಯ ಕಮಾನು ಪ್ರವೇಶ ದ್ವಾರ



ಮಿರ್ಜಾನ ದೊಡ್ಡಬಾವಿಯ ಕಮಾನು ಪ್ರವೇಶ



ಮಿರ್ಜಾನ ದೊಡ್ಡಬಾವಿಯ ಮೇಲ್ಭಾಗದ ನೋಟ

ಉಪಸಂಹಾರ

ಮಾನವನು ತನ್ನ ಅಭಿರುಚಿ ಮತ್ತು ಉಪಯೋಗಕ್ಕೆ ತಕ್ಕಂತೆ ವಾಸ್ತು ಯೋಜನೆಗಳನ್ನು ರೂಪಿಸಿಕೊಳ್ಳುತ್ತಾನೆ. ಇದರಲ್ಲಿ ಜಲವಾಸ್ತು ಯೋಜನೆಯು ಪ್ರಮುಖವಾದುದಾಗಿದೆ. ಹೀಗೆ ರೂಪಿಸಿಕೊಂಡ ವಾಸ್ತುಗಳಲ್ಲಿ ಮಾಳಿಗೆ ಬಾವಿಗಳ ಕಟ್ಟುವಿಕೆಯು ಒಂದಾಗಿದೆ. ಆರಂಭದಲ್ಲಿ ವಾಸ್ತುಶಿಲ್ಪವು ಭವ್ಯವಾಗಿ ಇದ್ದಂತೆ ಕಾಣುವುದಿಲ್ಲ. ನಂತರದ ಕಾಲದಲ್ಲಿ ವಾಸ್ತು ಯೋಜನೆಯು ವಿಕಾಸ ಆಗಿದೆ. ಭಾರತೀಯ ಶಿಲ್ಪಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥಗಳಲ್ಲಿ ವಾಪಿ ಅಥವಾ ಮಾಳಿಗೆ ಬಾವಿಗಳನ್ನು ಹೇಗೆ ಭಿನ್ನ ರೀತಿಯಲ್ಲಿ ಕಟ್ಟಬಹುದು ಎಂಬುದರ ಬಗ್ಗೆ ಸಂಪೂರ್ಣ ಮಾಹಿತಿಗಳು ಸಿಗುತ್ತವೆ. ಇವು ಜಲಪೂಜಾ ಸಂಪ್ರದಾಯದ ಭಾಗವಾಗಿವೆ. ಆದರೆ ಈ ಧಾರ್ಮಿಕ ಆಚರಣೆಯ ಹಿನ್ನಲೆ ವಾಪಿಗಳಲ್ಲಿ ಸಾಮಾಜಿಕವಾಗಿ ಸ್ಪಷ್ಟವಾಗಿಲ್ಲ. ಕರ್ನಾಟಕದಲ್ಲಿ ಕ್ರಿ.ಶ 14ನೇ ಶತಮಾನದವರೆಗೆ ಆಳ್ವಿಕೆ ಮಾಡಿದ ರಾಜರುಗಳ ಆಡಳಿತ ಅವಧಿಯಲ್ಲಿ ಈ ರೀತಿಯ ವಾಸ್ತುಗಳು ನಿರ್ಮಾಣ ಆಗಿಲ್ಲ. ಹಾಗಾಗಿ ಇವನ್ನು ಕಟ್ಟುವ ತಂತ್ರಜ್ಞಾನವು ಪ್ರಾದೇಶಿಕವಾಗಿ ಆರಂಭವಾದಂತೆ ಅನಿಸುವುದಿಲ್ಲ. ಇಲ್ಲಿ ಅಧ್ಯಯನ ಮಾಡಲಾದ ಮಾಳಿಗೆ ಬಾವಿಗಳನ್ನು ಇಂಡೋ-ಇಸ್ಲಾಮಿಕ್ ಶೈಲಿಯಲ್ಲಿ ಆಕರ್ಷಕವಾಗಿ ಕಟ್ಟಲಾಗಿದೆ. ಭೌಗೋಳಿಕವಾಗಿ ವಿವಿಧ ಪ್ರದೇಶಗಳಲ್ಲಿ ವಾಪಿಗಳ ವಾಸ್ತುಶಿಲ್ಪವು ತೀರಾ ಭಿನ್ನವಾಗಿವೆ. ಇಲ್ಲಿ ಬಾವಿಯ ಸೌಂದರ್ಯ ಮತ್ತು ಆಕರ್ಷಣೆಗೆ ಹೆಚ್ಚು ಪ್ರಾಮುಖ್ಯತೆ ನೀಡಲಾಗಿದೆ. ಇದರೊಂದಿಗೆ ಪ್ರಸ್ತುತ ಸಂಶೋಧನಾ ಲೇಖನದಲ್ಲಿ ಅಧ್ಯಯನಕ್ಕೆ ಒಳಪಡಿಸಿರುವಂತಹ ಬಾವಿಗಳ ಸುತ್ತಲೂ ಕೈಸಾಲೆ ಮತ್ತು ಕೊಠಡಿಗಳು ಇರುವುದರಿಂದ ಉಪಯೋಗಗಳು ವಾಸ್ತುವಿನ್ಯಾಸಕ್ಕೆ ತಕ್ಕಂತೆ ಹೆಚ್ಚುತ್ತವೆ. ಆ ಕಾರ್ಯಗಳು ಹೀಗಿವೆ. ಉದ್ಯಾನವನಗಳು ಮತ್ತು ತೋಟಗಳ ಬೆಳವಣಿಗೆಗೆ, ಕುಡಿಯುವ ನೀರಿಗಾಗಿ, ವಿಹಾರಾರ್ಥವಾಗಿ, ಧಾರ್ಮಿಕ ಉದ್ದೇಶಗಳಿಗಾಗಿ ಮತ್ತು ಸಾಮಾಜಿಕ ಹಾಗೂ ಇತರ ಕಾರ್ಯಗಳಿಗೆ ಬಳಕೆಯಲ್ಲಿವೆ. ಉತ್ತರ ಕರ್ನಾಟಕದಲ್ಲಿ ಮಾಳಿಗೆ ಬಾವಿಗಳು ರಾಜ್ಯದ ಇತರ ಪ್ರದೇಶಗಳಿಗಿಂತ ಹೆಚ್ಚಾಗಿ ಕಂಡುಬರುತ್ತವೆ. ಕಾರಣ ಅಲ್ಲಿನ ಭೌಗೋಳಿಕ ರಚನೆಯ ಪ್ರಭಾವ ಇರಬಹುದಾಗಿದೆ. ಇದು ಬಯಲು ಪ್ರದೇಶವಾದ್ದರಿಂದ ಅಂತರ್ಜಲದ ಪ್ರಮಾಣ ಕಡಿಮೆ ಇರಬಹುದು. ಹಾಗಾಗಿ ಈ ಬಾವಿಗಳನ್ನು ಹೆಚ್ಚಾಗಿ ಕಟ್ಟಿ ಅವುಗಳಿಂದ ಯಥೇಚ್ಛವಾದ ನೀರಿನ ಉಪಯೋಗವನ್ನು ಪಡೆಯುತ್ತಿದ್ದರು. ನಮ್ಮ ಇತಿಹಾಸ ಮತ್ತು ಸಂಸ್ಕೃತಿಯ ಕುರುಹುಗಳಾದ ಇವುಗಳನ್ನು ಸಂರಕ್ಷಿಸುವುದು ನಮ್ಮ ಸಾಮಾಜಿಕ ಹೊಣೆಗಾರಿಕೆಯಾಗಿದೆ.

ಟಿಪ್ಪಣಿಗಳು ಮತ್ತು ಆಕರ ಸೂಚಿ

1. John Marshall, 1996: 24–25.
2. Sachau C. Edward, 1989: 144.
3. Jain Jutta, 1981: 10.
4. ಮೇಲಿನದೇ.: 15.

5. Medusa teler, 1866: 76.
6. Kittel F. Reverend, 1994: 1246.
7. Acharya P.K., 1978: 454.
8. Livingston Morna, 2002: 21.
9. Jain Jutta, ಪೂರ್ವೋಕ್ತ: 12
10. Livingston Morna, ಪೂರ್ವೋಕ್ತ: 13.
11. ಮೇಲಿನದೇ.: 14

* * *

- Acharya.P.K., 1978(Reprint), **An Encyclopedia of Hindu Architecture.** Bhopal : J.K. Publishing House.
- Livingston morna, 2002, **Steps to Water the ancient stepwells of India,** New York: Priceton architectural press.
- Couscence Henry, 1976, **Bijapur and its Architectural Remains.** Varanasi: Bharatiya Publishing House.
- Jain Jutta Neubeur, 1981, **The Stepwells of Gujarat. (An Art-Historical Perspective)** New Delhi: Abhinav Publications.
- Kittel.F.Reverend. 1994 (Reprint), **A Kannada English Dictionary.** New Delhi: Asian Educational Service.
- Patil.C.S., 1991, **Vijayanagara Progress of Research.** Mysore: Directorate of Archaeology and Museums.
- John Marshall, 1996 (Reprint), **MOHENJO-DARO and The Indus Civilization.** Vol-II. New Delhi: Asian Educational Services.
- Sachau C. Edward, 1989, **Alberunis India,**

ಭಾರತೀಯ ಸಂಸ್ಥಾನಗಳು: ಉಗಮ ಮತ್ತು ವರ್ಗೀಕರಣ

ನೈಸರ್ಗಿಕವಾಗಿ ಭಾರತ ಒಂದು ಸ್ವಸಂತೃಪ್ತ ದೇಶವಾಗಿದೆ. ಆದರೆ, ಕಾಲ ಘಟ್ಟಗಳಲ್ಲಿ ನಡೆದ ಐತಿಹಾಸಿಕ ದುರ್ಘಟನೆಗಳು ಭಾರತವನ್ನು ಹಲವಾರು ಪ್ರತ್ಯೇಕ ರಾಜಕೀಯ ಅಸ್ತಿತ್ವ ಹೊಂದಿದ ಭಾಗಗಳನ್ನಾಗಿ ವಿಂಗಡಿಸಿವೆ. ಬ್ರಿಟಿಷ ಪೂರ್ವದಲ್ಲಿ ಭಾರತವು ರಾಜ್ಯ ಮತ್ತು ಸಾಮಂತ ರಾಜ್ಯ ಇತ್ಯಾದಿಯಾಗಿ ವಿಭಜಿತಗೊಂಡಿದ್ದವು. ಬ್ರಿಟಿಷರ ಅವಧಿಯಲ್ಲಿ 'ಬ್ರಿಟಿಷ ಭಾರತ' ಮತ್ತು 'ಭಾರತೀಯರ(ಸಂಸ್ಥಾನಿ) ಭಾರತ' ಎಂದು ವಿಭಜಿಸಿದ್ದನ್ನು ಕಾಣುತ್ತೇವೆ. ಬ್ರಿಟಿಷ ಭಾರತದಲ್ಲಿ ನೇರವಾಗಿ ಬ್ರಿಟಿಷರ ಆಡಳಿತ ಸ್ಥಾಪಿತಗೊಂಡಿದ್ದರೆ, ಭಾರತೀಯರ ಭಾರತದಲ್ಲಿ ಸ್ಥಳೀಯ ಸಂಸ್ಥಾನಿಕರ ಆಡಳಿತ ಇತ್ತು.

ಬ್ರಿಟಿಷ ಭಾರತದಲ್ಲಿನ ಈ ಸಂಸ್ಥಾನಗಳು ಎಂದರೆ ಯಾವವು? ಯಾವುವುಗಳನ್ನು ನಾವು ಸಂಸ್ಥಾನಗಳೆಂದು ಕರೆಯಬಹುದು. ಈ ಕುರಿತು ವ್ಯಾಖ್ಯಾನಿಸುವುದು ಪ್ರಯಾಸಕರ ಕಾರ್ಯವಾಗಿದೆ.

ಸಾಮಾನ್ಯವಾಗಿ ಪವಿತ್ರ ಸ್ಥಳ, ಪವಿತ್ರ ವ್ಯಕ್ತಿ ಹುಟ್ಟಿದ ಸ್ಥಳ, ಪವಿತ್ರ ಘಟನೆ ನಡೆದ, ಪವಿತ್ರ ವ್ಯಕ್ತಿ ವಾಸಿಸಿದ ಸ್ಥಳವನ್ನು 'ಸಂಸ್ಥಾನ' ಎಂದು ಕರೆಯಲಾಗಿದೆ. ಅದಕ್ಕಾಗಿಯೇ ಕೆಲವು ಮಠಗಳನ್ನು

ಎ.ಬಿ. ವಗ್ಗರ
ಸಹಾಯಕ ಪ್ರಾಧ್ಯಾಪಕರು
ಶ್ರೀ ಸಿದ್ಧೇಶ್ವರ ಸರಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ
ನರಗುಂಡ, ಗದಗ ಜಿಲ್ಲೆ.
ಮೊ: 09343540724
vaggarappanna@gmail.com

'ಸಂಸ್ಥಾನ ಮಠ', 'ಮಹಾಸಂಸ್ಥಾನ ಮಠ' ಎಂದು ಕರೆಯುವುದನ್ನು ಕಾಣುತ್ತೇವೆ. ಬ್ರಿಟಿಷ ಅವಧಿಯಲ್ಲಿನ ಸಂಸ್ಥಾನಗಳನ್ನು ಕೆಲವರು ಇವು ಅನುಭವಿಸಿದಂತಹ ಪ್ರಭುತ್ವಗಳ ಮತ್ತು ಪ್ಯಾರಾಮೌಂಟ್ ಪ್ರಭುತ್ವದೊಂದಿಗೆ ಹೊಂದಿದ ಸಂಬಂಧಗಳ ಆಧಾರದ ಮೇಲೆ ಅರ್ಥ ನಿರೂಪಣೆ ಮಾಡಿದ್ದಾರೆ.

ಸರ್ ವಿಲಿಯಂ ಲೀ ವಾರ್ನರ್‌ರವರ ಪ್ರಕಾರ ಅರಸನು ತನ್ನ ಆಂತರಿಕ ಸಾರ್ವಭೌಮತ್ವಕ್ಕೆ ಸಂಬಂಧಿಸಿದ ಮತ್ತು ಇತರ ಯಾವುದೇ ಕಾರ್ಯಗಳನ್ನು ಬ್ರಿಟಿಷ್ ಸರಕಾರದ ಅನುಮತಿ ಮೇರೆಗೆ ಕಾರ್ಯ ನಿರ್ವಹಿಸುವ ಅಧಿಕಾರವನ್ನು ಹೊಂದಿದ ಮತ್ತು ಒಂದು ನಿರ್ದಿಷ್ಟ ಪ್ರಾಂತವನ್ನು ಒಳಗೊಂಡ ರಾಜಕೀಯ ಸಮೂಹವನ್ನೇ ಸಂಸ್ಥಾನ ಎಂದು ಕರೆದಿದ್ದಾರೆ.

1935ರ ಭಾರತ ಸರ್ಕಾರದ ಕಾಯ್ದೆಯ ಪರಿಚ್ಛೇದ 311 ರ (1) ನೆಯ ಉಪ-ಪರಿಚ್ಛೇದದಲ್ಲಿ, ಭಾರತೀಯ ಸಂಸ್ಥಾನ ಎಂದರೆ, ಅದೊಂದು ಸಂಸ್ಥಾನ, ಎಸ್ಟೇಟ್ ಇಲ್ಲವೇ ಜಾಗೀರ್ ಮುಂತಾದ ಒಂದು ಪ್ರಾಂತವನ್ನು ಒಳಗೊಂಡಿರುವುದಾಗಿದೆ. ಇದು ಬ್ರಿಟಿಷ್ ಭಾರತದ ಭಾಗವಾಗಿರದೇ, ನೇರವಾಗಿ ಬ್ರಿಟಿಷರ ಆಧೀನಕ್ಕೊಳಪಟ್ಟ, ಇಲ್ಲವೇ ಬ್ರಿಟಿಷ್ ಸಾರ್ವಭೌಮತ್ವವನ್ನು ಒಪ್ಪಿಕೊಂಡ ಸಂಸ್ಥಾನಿಕರ ಆಧೀನಕ್ಕೆ ಒಳಪಟ್ಟಿರುವಂಥವುಗಳನ್ನೇ ಸಂಸ್ಥಾನಗಳೆಂದು ಕರೆಯಲಾಗಿದೆ.

ಅದರಂತೆ ಒಂದು ಆಧುನಿಕ ವ್ಯಾಖ್ಯಾನದ ಪ್ರಕಾರ ಸಂಸ್ಥಾನ ಎಂದರೆ, ಆಂತರಿಕ ವ್ಯವಸ್ಥೆಯನ್ನು ಕಾಪಾಡಿಕೊಂಡು ಹೋಗಲು ಮತ್ತು ಬಾಹ್ಯ ಒತ್ತಡಗಳನ್ನು ತಡೆಗಟ್ಟುವುದಕ್ಕಾಗಿ ಒಂದುಗೂಡಿದ ಒಂದು ಪ್ರಾಂತ ಅಥವಾ ಪ್ರಾಂತಗಳ ಸದಸ್ಯರುಗಳ ಒಂದು ಸ್ವತಂತ್ರ ರಾಜಕೀಯ ಸಮೂಹವಾಗಿದೆ. ಹಾಗಾದರೆ, ರಾಜಕೀಯ ಸಮೂಹಗಳನ್ನು ಮಾತ್ರ ಸಂಸ್ಥಾನವೆನ್ನಬಹುದೆ ಎಂಬ ಪ್ರಶ್ನೆ ಬಂದಾಗ "ರಾಜ್ಯ ಎನ್ನುವುದು ಕೇವಲ ರಾಜಕೀಯ ವ್ಯವಸ್ಥೆಯಾಗಿರದೇ ಒಂದು ಸಾಂಸ್ಕೃತಿಕ ನಿರ್ಮಾಣವೂ ಆಗಿತ್ತು. ರಾಜ್ಯವನ್ನು ಪ್ರತಿನಿಧಿಸುತ್ತಿದ್ದ ಸಾಂಸ್ಕೃತಿಕ ಅಂಶಗಳನ್ನು ಪ್ರಾದೇಶಿಕ ಮಟ್ಟದ ಆಳ್ವಿಕೆಯಲ್ಲೂ ಅಂತರ್ಗತ ಮಾಡಿಕೊಳ್ಳುತ್ತ, ಪುನರುತ್ಪಾದಿಸುತ್ತ ಸ್ಥಾನಿಕ ಮನೆತನಗಳು ತಮ್ಮ ಪ್ರಭುತ್ವದ ಕಲ್ಪನೆಯನ್ನು ರೂಪಿಸಿಕೊಂಡವು" ಎಂದು ರಾಜಾರಾಮ ಹೆಗಡೆ ಮತ್ತು ಅಶೋಕ ಶೆಟ್ಟರ್ ಅಭಿಪ್ರಾಯಪಡುತ್ತಾರೆ. ಅಂದರೆ ರಾಜಕೀಯ ಮತ್ತು ಸಾಂಸ್ಕೃತಿಕ ಅಸ್ಮಿತೆಯೊಂದಿಗೆ ಈ ಸ್ಥಳೀಯ ಪ್ರಭುತ್ವಗಳು ಆಳರಸರಿಂದ ಉಂಬಳಿ ಇತ್ಯಾದಿಯಾಗಿ ಪಡೆಯದೆ ಸ್ವತಂತ್ರವಾಗಿ ಸಂಸ್ಥಾನವನ್ನು ಸ್ಥಾಪಿಸಿ, ಸ್ವತಂತ್ರ ಅಧಿಕಾರ ಹೊಂದಿದ್ದರೆ, ಅವರಿಗೆ ತಮ್ಮದೇ ಆದ ಲಾಂಛನ ಮುಂತಾದ ಸಂಸ್ಕೃತಿಯನ್ನು ಪ್ರತಿನಿಧಿಸುವ ಅಂಶಗಳು ಇರುತ್ತವೆ. ಈ ಸ್ವತಂತ್ರ ಅಧಿಕಾರ ಮತ್ತು ಸಂಸ್ಕೃತಿಯನ್ನು ಪ್ರತಿನಿಧಿಸುವ ಅಂಶಗಳ ಆಧಾರದಿಂದ ಸಂಸ್ಥಾನ ಎಂದು ಕರೆಯುವುದಾದರೆ, ಬ್ರಿಟಿಷ್ ಅವಧಿಯ ಕೆಲವು ಸಂಸ್ಥಾನಗಳಲ್ಲಿ ಮಾತ್ರ ಇವು ಕಂಡುಬರುತ್ತವೆ. ಇನ್ನುಳಿದವುಗಳು ಸಂಸ್ಥಾನಗಳ ಮಾದರಿಯಲ್ಲಿಯೇ ಸಣ್ಣ ಪ್ರಮಾಣದ ಪ್ರಭುತ್ವವನ್ನು ಹೊಂದಿದ್ದವು. ಮೈಸೂರು, ತಿರುವಾಂಕೂರು ಮುಂತಾದ ಸಂಸ್ಥಾನಗಳಂತೆ ಪ್ರತ್ಯೇಕ ಆಡಳಿತ ಮಂಡಳಿಯಾಗಲಿ,

ಲಾಂಛನಗಳಾಗಲಿ ಇರಲಿಲ್ಲ. ಆದ್ದರಿಂದ ಕೇವಲ ಸ್ಥಳೀಯ ಆಡಳಿತವನ್ನು ಹೊಂದಿದ ಇವುಗಳನ್ನು ಸಂಸ್ಥಾನಗಳೆನ್ನದೆ ಸ್ಥಳೀಯ ಆಡಳಿತ ಘಟಕಗಳೆನ್ನಬಹುದು.

ಅವರು ಹೊಂದಿದ ರಕ್ಷಣಾ ಪಡೆಯನ್ನು ಆಧರಿಸಿ ಸಂಸ್ಥಾನ ಎಂದು ಕರೆಯುವುದಾದರೆ, ಸಂಸ್ಥಾನಿಕರ ಪೊಲೀಸ್ ಪಡೆಯು ಐದು ಇಲ್ಲವೆ ಹತ್ತಕ್ಕೆ ಮಿಕ್ಕಿಲ್ಲ. ಇವು ಸಣ್ಣ ಸಂಸ್ಥಾನಗಳೆಂದು ಕರೆಯಿಸಿಕೊಳ್ಳಲು ಅರ್ಹವಾಗಿಲ್ಲ. ಇವುಗಳನ್ನು ಸಣ್ಣ ಜಾಗೀರ್‌ಗಳೆನ್ನಬಹುದು. ಆದರೂ ಬ್ರಿಟಿಷ್ ಕಾನೂನಿನ ದೃಷ್ಟಿಯಲ್ಲಿ ಇವು 'ಪರದೇಶ'ಗಳ ದರ್ಜೆಯನ್ನು ಪಡೆದಿವೆ. ಸಂಯುಕ್ತ ರಾಜ್ಯ ಶಾಸನವು ಈ ಸಂಸ್ಥಾನಗಳನ್ನು ತೀರ ಸಣ್ಣವೆಂದು ಸ್ವಲ್ಪವೂ ಪಕ್ಷಪಾತವನ್ನು ತೋರಿಸಿಲ್ಲ. ಬದಲಾಗಿ ಬ್ರಿಟಿಷ್ ಅವಧಿಯಲ್ಲಿ ಪ್ರಬಲ ಸಂಸ್ಥಾನಗಳೊಂದಿಗೆ, ಸಣ್ಣಪುಟ್ಟ ಸ್ಥಳೀಯ ಆಡಳಿತ ಪ್ರಭುತ್ವಗಳನ್ನು ಸಂಸ್ಥಾನಗಳೆಂದು ಕರೆದಿದ್ದಾರೆ. ಆದರೆ, ಇವುಗಳು ಬ್ರಿಟಿಷ್‌ರಿಂದ ಪಡೆದುಕೊಂಡ ರಿಯಾಯತಿಗಳಲ್ಲಿ, ಆಡಳಿತ ಕ್ಷೇತ್ರಗಳಲ್ಲಿ ಬಳಸಲಾಗುತ್ತಿದ್ದ ಪದಗಳಲ್ಲಿ ವ್ಯತ್ಯಾಸಗಳಿದ್ದವು. ಉದಾಹರಣೆಗೆ ಸಂಸ್ಥಾನಗಳ ದರ್ಬಾರಿ ಕಚೇರಿಗಳಲ್ಲಿ 'ದಿವಾನ್' ಮತ್ತು 'ಕಾರಭಾರಿ' ಇವರು ಅತ್ಯಂತ ಮಹತ್ವದ ಅಧಿಕಾರಿಗಳಾಗಿದ್ದರು. 'ದಿವಾನ್' ಇದು ದೇಶಾದ್ಯಂತ ಚಲಾವಣೆಯಲ್ಲಿ ಇದ್ದ ಪದ. ಸಾಮಾನ್ಯವಾಗಿ ಇದನ್ನು ಸಣ್ಣ ಪುಟ್ಟ ಸಂಸ್ಥಾನಗಳ ಮಂತ್ರಿಗಳಿಗೆ ಬಳಸಲಾಗುತ್ತಿತ್ತು. ಇವುಗಳ ಸಮಾನಾರ್ಥವಾಗಿ ಮುಸ್ಲಿಂ ಸಂಸ್ಥಾನಗಳಲ್ಲಿ 'ವಜೀರ್' ಎಂಬ ಪದವನ್ನು ಬಳಸುತ್ತಿದ್ದರು. ಇನ್ನೊಂದು ವ್ಯತ್ಯಾಸವೆಂದರೆ, ಪ್ರಬಲ ಸಂಸ್ಥಾನಿಕರಿಗೆ- ರಾಜಾ, ರಾಜಾಸಾಹಿಬ್, ಸರದೇಸಾಯಿ, ಠಾಕೂರ್ ಸಾಹಿಬ್, ಸುವಬ್ವಾ ಮುಂತಾದ ಬಿರುದುಗಳನ್ನು ಬ್ರಿಟಿಷರು ನೀಡಿದ್ದರು. ಆದರೆ, ಜಮಖಂಡಿ, ರಾಮದುರ್ಗದಂತಹ ಸಣ್ಣ ಸಂಸ್ಥಾನಿಕರಿಗೆ 'ಚೀಫ್' ಎಂದು, ಮೈಸೂರು ಹೈದರಾಬಾದನಂತಹ ದೊಡ್ಡ ಸಂಸ್ಥಾನಿಕರಿಗೆ 'ಇಸ್ ಹೈಯನೆಸ್' ಎಂಬ ಪದ ಬಳಸುತ್ತಿದ್ದರು.

ಸೀಮಿತ ನ್ಯಾಯಾಂಗ, ಆಡಳಿತ ಮತ್ತು ರಾಜಕೀಯ ಅಧಿಕಾರ ಹೊಂದುವ ಮೂಲಕ ಬ್ರಿಟಿಷ ಪ್ರಭುತ್ವಕ್ಕೆ ಆಧೀನವಾಗಿ ಭಾರತೀಯ ರಾಜರ ಆಳ್ವಿಕೆಗೆ ಒಳಪಟ್ಟಂತಹ ಪ್ರದೇಶಗಳನ್ನು ಸಂಸ್ಥಾನಗಳೆನ್ನಬಹುದು. ಇವು ಯಾವುದೇ ಏಕರೂಪದ ರಾಜಕೀಯ ವ್ಯವಸ್ಥೆಯನ್ನು ಹೊಂದಿರದೆ, ಪ್ರತ್ಯೇಕ ಮಾದರಿಯ ಆಡಳಿತ ವ್ಯವಸ್ಥೆಯನ್ನು ಹೊಂದಿದ್ದವು.

ಸಂಸ್ಥಾನಗಳ ಉಗಮ, ವ್ಯಾಪ್ತಿ ಮತ್ತು ಬೆಳವಣಿಗೆ

ಸಂಸ್ಥಾನಗಳ ಉಗಮ ಮತ್ತು ಬೆಳವಣಿಗೆಗಳು ಏಕಪ್ರಕಾರವಾಗಿರಲಿಲ್ಲ. ಕೆಲವು ಸಂಸ್ಥಾನಗಳು ಪ್ರಾಚೀನ ಕಾಲದಲ್ಲಿಯೇ ಅಸ್ತಿತ್ವದಲ್ಲಿ ಇರುವುದು ಕಂಡುಬರುತ್ತದೆ. ಇವು ಮುಖ್ಯವಾಗಿ ರಜಪೂತಾನ ರೆಜೆನ್ಸಿಯಲ್ಲಿ ಕಂಡುಬರುತ್ತವೆ. ಹೈದರಾಬಾದ್, ಮೈಸೂರಿನಂತಹ ಸಂಸ್ಥಾನಗಳು ಮಧ್ಯಯುಗೀನ ಕಾಲದಲ್ಲಿ ಅಸ್ತಿತ್ವಕ್ಕೆ ಬಂದವು. ಬನಾರಸದಂತಹ ಹೊಸ ಸಂಸ್ಥಾನಗಳನ್ನು ಬ್ರಿಟಿಷರು ರಾಜಕೀಯ ಪ್ರಭುತ್ವವನ್ನು ಕೇಂದ್ರೀಕರಿಸುವ ಕೊನೆಯ ಹಂತಗಳಲ್ಲಿ ಗುರುತಿಸಬಹುದು. ವಿಜಯನಗರದ ಆಳ್ವಿಕೆಯಲ್ಲಿನ ಮಾಂಡಲಿಕರು ವಿಜಯನಗರದ ಅವನತಿಯ ನಂತರ ಸ್ವತಂತ್ರ ಪ್ರಭುಗಳಾಗಿ ತಲೆ ಎತ್ತಿದರು. ಮೊಘಲರ ಕಾಲದಲ್ಲಿ ಸ್ವತಂತ್ರ ಮತ್ತು ಅರೆಸ್ವಾತಂತ್ರ್ಯವನ್ನು ಹೊಂದಿದ ಸಂಸ್ಥಾನಗಳು ಉದಯವಾದವು.

ಇದೇ ವೇಳೆಗೆ ಈಸ್ಟ್-ಇಂಡಿಯಾ ಕಂಪನಿ ಕೂಡ ಪ್ರಬಲ ಶಕ್ತಿಯಾಗಿ ಬೆಳೆಯತೊಡಗಿತ್ತು. ಹಲವು ಸಂಸ್ಥಾನಗಳು ಬ್ರಿಟಿಷರು ಮರಾಠರ ಒಕ್ಕೂಟವನ್ನು ಸೋಲಿಸುವಾಗ ಹುಟ್ಟಿಕೊಂಡವು. ಜೊತೆಗೆ ಪ್ರಚುರಗೊಳ್ಳುತ್ತಿದ್ದ ಸ್ವಾತಂತ್ರ್ಯ ಹೋರಾಟದ ವಿರುದ್ಧ ಸಂಸ್ಥಾನಗಳನ್ನು ತಡೆಯಸ್ನಾಗಿ ಬಳಸಿಕೊಳ್ಳುವ ನೀತಿಯು 1910 ರಿಂದ ಸ್ಪಷ್ಟಗೊಂಡಿತು. ಈ ಸಂದರ್ಭದಲ್ಲಿ ಎಷ್ಟೋ ಜಮೀನ್ದಾರರು ರಾಜರಾದರು. ರಾಜರುಗಳು ಮಹಾರಾಜರಾದರು. ಕಾಶಿ ಮುಂತಾದ ಕಡೆ ಹೊಸದಾಗಿ ಸಂಸ್ಥಾನಗಳು ಹುಟ್ಟಿಕೊಂಡವು. ಈ ಸಂಖ್ಯೆಯು 600ಕ್ಕಿಂತ ಹೆಚ್ಚಾಗಿ ಬೆಳೆಯಿತು. ಸಂಸ್ಥಾನಗಳ ವ್ಯಾಖ್ಯಾನದ ಅಸ್ಪಷ್ಟತೆಯಿಂದಾಗಿ ಇವುಗಳ ಸಂಖ್ಯೆ ಕೂಡಾ ಅಸ್ಪಷ್ಟವಾಗಿದೆ. ಜನವರಿ 1, 1927ರಂದು ಭಾರತ ಸರಕಾರ ಪ್ರಕಟಿಸಿದ ವರದಿಯಲ್ಲಿ 563, ಬಟ್ಲರ್ ವರದಿಯಲ್ಲಿ 562 ಸಂಸ್ಥಾನಗಳು ಎಂದು ಉಲ್ಲೇಖಿಸಲಾಗಿದೆ.

ಸಂಸ್ಥಾನಗಳ ಉದಯವನ್ನು ಐತಿಹಾಸಿಕ ನೆಲೆಯಲ್ಲಿ ನೋಡಿದಾಗ, ಪ್ರತಿಯೊಂದು ಆಳುವ ವರ್ಗ ತನ್ನ ವಂಶಪಾರಂಪರಿಕ ಕೊಡುಗೆಯನ್ನು ಮತ್ತೊಂದು ಆಕ್ರಮಣಕಾರಿ ಗುಂಪಿನಿಂದ ರಕ್ಷಿಸಿಕೊಳ್ಳುವ ಹೆಬ್ಬಯಕೆಯಿಂದ ಉಂಟಾದ ರಾಜಕೀಯ ಸಂಘರ್ಷದ ಫಲಿತಗಳಾಗಿವೆ. ಈ ಸಂಸ್ಥಾನಗಳ ನಕ್ಷೆಯನ್ನು ಮೂರನೆಯ ಮರಾಠಾ ಯುದ್ಧದ ನಂತರ (1818-1820) ನಿಶ್ಚಿತಗೊಳಿಸಲಾಯಿತು. ಬ್ರಿಟಿಷರೊಂದಿಗೆ ಒಪ್ಪಂದ, ಕರಾರುಗಳನ್ವಯ ಸಂಸ್ಥಾನಗಳೆಲ್ಲ ಬ್ರಿಟಿಷರ ಆಧೀನಕ್ಕೆ ಒಳಪಟ್ಟವು. ಅಧೀನ ಭಾರತೀಯ ಆಳರಸರನ್ನು ಇಂಗ್ಲೆಂಡದ ರಾಜಪ್ರಭುತ್ವಕ್ಕೆ ಚ್ಯುತಿ ಬಾರದ ಹಾಗೆ 'ರಾಜ' (ಕಿಂಗ್) ಎಂದು ಕರೆಯದೆ, 'ಪ್ರಿನ್ಸ್' ಎಂದು ಕರೆದಿದ್ದಾರೆ. ಬಹುಶಃ ಈ ನಾಮಧೇಯವನ್ನು ವಿಲೀನಿಕರಣಗೊಂಡ ಜರ್ಮನ್ ಸಂಸ್ಥಾನಗಳಿಂದ ಎರವಲು ಪಡೆದಿರಬಹುದು. ಯಾಕೆಂದರೆ, ಭಾರತದಲ್ಲಿಯೂ ಕೂಡಾ ಬ್ರಿಟಿಷರು ಸಂಸ್ಥಾನಿ ರಾಜರುಗಳಿಗೆ ಬಿರುದನ್ನು, ಕೆಲವು ರಿಯಾಯತಿಗಳನ್ನು ಉಳಿಸಿ, ತಮ್ಮ ಆಧೀನಕ್ಕೆ ಒಳಪಡಿಸಿಕೊಂಡಿದ್ದರು. ಇದರಿಂದ ವ್ಯಕ್ತವಾಗುವ ಇನ್ನೊಂದು ಅಂಶವೆಂದರೆ, ಬ್ರಿಟಿಷರು ಯಾವುದೇ ಸಮಯದಲ್ಲಿ ಸಂಸ್ಥಾನಿಕರಿಗೆ ಸಾರ್ವಭೌಮತ್ವ ಸೂಚಿಸುವ ಯಾವುದೇ ಪದನಾಮಗಳನ್ನು ಬಳಸಲಿಲ್ಲ. ಕೆಲವರ ಅಭಿಪ್ರಾಯದಂತೆ ಬ್ರಿಟಿಷರು ಬಳಸುತ್ತಿದ್ದ 'ಪ್ರಿನ್ಸ್' ಇಲ್ಲವೆ 'ಚೀಫ್' ಈ ಪದಗಳು ಅವರವರ ಪ್ರಾಂತಗಳಿಗೆ ಸಂಬಂಧಿಸಿದ ಆಂತರಿಕ ವ್ಯವಹಾರಗಳ ನಿರ್ವಹಣೆಯನ್ನು ಕಾರ್ಯಗತಗೊಳಿಸಲು ಇರುವಂತಹ ಘನತೆಯ ಅಭಿವ್ಯಕ್ತಿಯನ್ನು ಸೂಚಿಸುತ್ತವೆ.

ಬ್ರಿಟಿಷ ಪ್ರಾಂತಗಳಲ್ಲಿ ಜಾರಿಗೊಳಿಸಿದ ಕಾಯ್ದೆಗಳನ್ನು ತಮ್ಮ ಸಂಸ್ಥಾನಗಳಲ್ಲಿ ಜಾರಿಗೊಳಿಸುವ ಮೂಲಕ ತಮ್ಮ ಅಂತಸ್ತನ್ನು ಹೆಚ್ಚಿಸಿಕೊಂಡು. ನಾವು ಪಾಶ್ಚಾತ್ಯ ಮಾದರಿ ಆಡಳಿತ ಸ್ಥಾಪಿಸಿದ್ದೇವೆ ಎಂಬುದನ್ನು ತೋರಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಬ್ರಿಟಿಷ್ ಅವಧಿಯಲ್ಲಿನ ಸಂಸ್ಥಾನಗಳು ಭಾರತದ ಒಟ್ಟು ಭೂ ವಿಸ್ತೀರ್ಣದಲ್ಲಿ 538,138 ಚದರ ಮೈಲು ಭಾಗವನ್ನು 68,658,974ರಷ್ಟು ಜನಸಂಖ್ಯೆಯನ್ನು ಹೊಂದಿತ್ತು. ಇದು ಭಾರತದ ಒಟ್ಟು ಜನಸಂಖ್ಯೆಯ 1/5 ಭಾಗವಾಗಿತ್ತು. ಈ ಸಂಸ್ಥಾನಗಳ ಕಂದಾಯವು 34,500,000 ಡಾಲರ್ ಇತ್ತು. ಹೀಗೆ ಸಂಸ್ಥಾನಗಳ ಕ್ಷೇತ್ರಫಲ ಮತ್ತು ಜನಸಂಖ್ಯೆಗಳಲ್ಲಿ ಏಕರೂಪತೆ ಇರಲಿಲ್ಲವೋ, ಹಾಗೆಯೇ ಇವುಗಳ ಇತಿಹಾಸ ಮತ್ತು ಆಡಳಿತ ವಿಧಾನಗಳಲ್ಲೂ ಸಾಮ್ಯತೆ

ಇರಲಿಲ್ಲ. ಮೈಸೂರು, ಬರೋಡ ಮುಂತಾದ ಸಂಸ್ಥಾನಗಳು ಪ್ರಗತಿಪರ ಆಡಳಿತ ನೀತಿಗಳನ್ನು ಅನುಸರಿಸುತ್ತಿದ್ದರೆ, ಹಲವಾರು ಸಂಸ್ಥಾನಗಳಲ್ಲಿ ಅತ್ಯಂತ ಭೀಕರ ನಿರಂಕುಶಾಡಳಿತ ನಡೆಯುತ್ತಿತ್ತು.

ಸಂಸ್ಥಾನಗಳ ವರ್ಗೀಕರಣ

ಯಾವುದೇ ನಿರ್ದಿಷ್ಟ ಇಲ್ಲವೇ ವ್ಯವಸ್ಥಿತ ಮಾನದಂಡದ ಮೇಲೆ ವರ್ಗೀಕರಣ ಅಸಾಧ್ಯ. ಆದರೆ ಅವರ ಆಂತರಿಕ ಸ್ವಾತಂತ್ರ್ಯ, ಆಡಳಿತ ಇಲ್ಲವೇ ಬ್ರಿಟಿಷರೊಂದಿಗೆ ಹೊಂದಿದ ಸಂಬಂಧಗಳನ್ನು ಆಧರಿಸಿ ವಿಂಗಡಿಸಿದ್ದನ್ನು ಕಾಣಬಹುದು. ವಿಶಿಷ್ಠ ಮಾನದಂಡವನ್ನು ಬ್ರಿಟಿಷ್ ಅವಧಿಯ ಸಂಸ್ಥಾನಗಳಲ್ಲಿ ಹಲವಾರು ವಿದ್ವಾಂಸರು ವಿಭಿನ್ನ ರೀತಿಯಲ್ಲಿ ವರ್ಗೀಕರಿಸಿದ್ದಾರೆ. ಕೆಲವರು ಸಂಸ್ಥಾನಗಳು ಹೊಂದಿದ ಗನ್ ಸೆಲ್ಯೂಟ್ ಅರ್ಹತೆಯ ಹಾಗೂ ನರೇಂದ್ರ ಮಂಡಲ (ಛೇಂಬರ್ ಆಫ್ ಪ್ರಿನ್ಸೆಸ್)ದ ಸದಸ್ಯತ್ವದ ಆಧಾರಗಳ ಮೇಲೆ ವರ್ಗೀಕರಿಸಿದ್ದಾರೆ.

ಈ ಸಂಸ್ಥಾನಗಳನ್ನು ಮೊತ್ತ ಮೊದಲ ಬಾರಿಗೆ ವರ್ಗೀಕರಿಸಿದವರೆಂದರೆ ಸರ್. ಚಾರ್ಲ್ಸ್ ಮೆಟಕಾಫ್. ಇವರ ಪ್ರಕಾರ ಭಾಗಶಃ ಇಲ್ಲವೇ ಪರಿಪೂರ್ಣ ಸ್ವತಂತ್ರ ಪ್ರಭುತ್ವವನ್ನು ಹೊಂದಿದ ಸಂಸ್ಥಾನಗಳೆಂದು ಮತ್ತು ಇವುಗಳ ರಾಜರನ್ನು 'ಒಪ್ಪಂದ' ಮಾಡಿಕೊಂಡ ಪ್ರಿನ್ಸೆಸ್ (Treaty Princes) ಹಾಗೂ 'ಸನದ್' ಪಡೆದ ಚೀಫ್ಸ್ ಎಂದು ವರ್ಗಿಸಿದ್ದಾರೆ. ಗನ್‌ಸೆಲ್ಯೂಟ್ ಆಧಾರದ ಮೇಲೆ ಸಂಸ್ಥಾನಗಳನ್ನು ಎರಡು ವಿಭಾಗಗಳಲ್ಲಿ ವಿಂಗಡಿಸಿದ್ದಾರೆ. ಗನ್‌ಸೆಲ್ಯೂಟ್‌ಗೆ ಅರ್ಹರಾದವರು ಮತ್ತು ಈ ಅರ್ಹತೆಯನ್ನು ಹೊಂದದೆ ಇರುವವರು. ಇದಕ್ಕಿಂತ ಮುಂಚೆ ನ್ಯಾಯಾಧಿಕಾರದ ಶ್ರೇಣಿಯ ಆಧಾರದ ಮೇಲೆ ಏಳು ವರ್ಗಗಳಾಗಿ ವಿಂಗಡಿಸಲಾಗಿತ್ತು.

ಆಡಳಿತಾತ್ಮಕ ದೃಷ್ಟಿಯಿಂದ ಸಂಸ್ಥಾನಗಳನ್ನು ಎರಡು ವಿಧಗಳಾಗಿ ವಿಂಗಡಿಸಿದ್ದಾರೆ. ಮೊದಲನೆಯದು ಪಾಶ್ಚಾತ್ಯ ಮಾದರಿಯಲ್ಲಿ ತಮ್ಮ ಆಡಳಿತವನ್ನು ಆಧುನೀಕರಿಸುವ ಮೂಲಕ ಆರ್ಥಿಕ ಬೆಳವಣಿಗೆಯ ಕಡೆಗೆ ಗಮನ ಹರಿಸಿದ ಸಂಸ್ಥಾನಗಳು. ಇವು ಮಾನವ ಸಂಪನ್ಮೂಲಗಳ ಸದ್ಬಳಕೆಗಾಗಿ ಪ್ರಾತಿನಿಧಿಕ ಸಂಸ್ಥೆಗಳನ್ನು ಸ್ಥಾಪಿಸಿ, ಪ್ರಗತಿಪರ ಸಂಸ್ಥಾನಗಳೆಂದು ಗುರುತಿಸಲ್ಪಟ್ಟಿದ್ದವು ಉದಾ: ಮೈಸೂರು. ಎರಡನೆಯದಾಗಿ ಪ್ರಾಚೀನ ಆಡಳಿತಕ್ಕೆ ಬದ್ಧರಾಗಿ, ಮಧ್ಯಯುಗೀನ ಕಾಲದ ವಾತಾವರಣವನ್ನೇ ಹೊಂದಿದವುಗಳು. ಇವು ಒಂದೇ ಒಂದು ಕುಟುಂಬದ ಯಜಮಾನಿಕೆ ಹೊಂದಿದ ಅರೆ ಜಹಗೀರ್‌ದಾರಿ ಸಂಸ್ಥಾನಗಳು. ಉದಾ: ರಜಪೂತಾನದ ಹಲವು ಸಂಸ್ಥಾನಗಳು.

ಸಂಸ್ಥಾನಗಳು ಮತ್ತು ಬ್ರಿಟಿಷರ ನಡುವಿನ ಒಪ್ಪಂದಗಳ ಆಧಾರದ ಮೇಲೆ ಸಂಸ್ಥಾನಗಳನ್ನು ಡಿ.ಕೆ. ಸೇನರು ಮೂರು ವರ್ಗಗಳಾಗಿ ವರ್ಗೀಕರಿಸುತ್ತಾರೆ. (1) ಸಂರಕ್ಷಿತ (2) ಸಂರಕ್ಷಿತ ಮತ್ತು ಹೊಣೆಗಾರಿಕೆಯ ಮತ್ತು (3) ಸಾಮಂತ ಸಂಸ್ಥಾನಗಳು. ಆದರೆ, 1857 ರ ಮಹಾದಂಗೆಯ ನಂತರ ವಿಕ್ಟೋರಿಯಾ ಮಹಾರಾಣಿಯು ತನ್ನ ಘೋಷಣೆಯಲ್ಲಿ ಸಂಸ್ಥಾನಿಕರಿಗೆ ತಮ್ಮ ಹಕ್ಕು ಬಾಧ್ಯತೆ ಹಾಗೂ ಒಪ್ಪಂದಗಳ ಬಗ್ಗೆ ಭರವಸೆ ನೀಡಿದ್ದರು. ಆದ್ದರಿಂದ ಈ ವರ್ಗೀಕರಣವು ಸಮಂಜಸವಾಗಲಾರದು. ಸಂಸ್ಥಾನಗಳ

ಎಲ್ಲ ಆಧಾರಗಳ ವರ್ಗೀಕರಣಗಳಲ್ಲಿ ನ್ಯೂನ್ಯತೆಗಳು ಕಂಡುಬರುತ್ತವೆ.

ಒಟ್ಟಿನಲ್ಲಿ ಸಂಸ್ಥಾನಗಳ ಇತಿಹಾಸ ರಚನೆ ವಿಭಿನ್ನತೆ ಪಡೆದುಕೊಂಡಿದೆ. ಇಲ್ಲಿ ಓಲೈಕೆಯ ಅಂಶ ಹೆಚ್ಚಾದ್ದರಿಂದ, ಇನ್ನೊಂದೆಡೆ ಭಾರತವನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳುವ ಮತ್ತು ತೀವ್ರಗೊಳ್ಳುತ್ತಿದ್ದ ರಾಷ್ಟ್ರೀಯ ಆಂದೋಳನಕ್ಕೆ ತಡೆಯನ್ನಾಗಿ ಬಳಸುವ ಬ್ರಿಟಿಷರ ಇರಾದೆ ಇನ್ನಷ್ಟು ದ್ವಂದ್ವಕ್ಕೆ ಕಾರಣವಾದವು.

ಟಿಪ್ಪಣಿಗಳು ಮತ್ತು ಆಕರ ಸೂಚಿ

- ವಾರ್ನರ್, ವಿಲಿಯಂ ಲೀ., 1910, **ದಿ ನೇಟಿವ್ ಸ್ಟೇಟ್ಸ್ ಆಫ್ ಇಂಡಿಯಾ,** ಲಂಡನ್, ಪು. 31.
- ವೈಟ್ ಪೇಪರ್ಸ್., 1948, **ಇಂಡಿಯನ್ ಸ್ಟೇಟ್ಸ್,** ನ್ಯೂ ಡೆಲ್ಲಿ, ಪು. 17.
- ಹೆಗಡೆ ರಾಜಾರಾಮ, ಶೆಟ್ಟರ ಅಶೋಕ (ಸಂ.) **ಮಲೆ ಕರ್ನಾಟಕದ ಅರಸು ಮನೆತನಗಳು,** ಹಂಪಿ – ಪು. 1.
- **ಜಯಕರ್ನಾಟಕ,** 1939, ಸಂಪುಟ – 17, ಸಂಚಿಕೆ – 2, ಫೆಬ್ರುವರಿ– ಪು. 136.
- ಐನ್ ಕೋಪ್ಲ್ಯಾಂಡ್., 1982, **ದಿ ಬ್ರಿಟಿಷ್ ರಾಜ್ ಆ್ಯಂಡ್ ದಿ ಇಂಡಿಯನ್ ಪ್ರಿನ್ಸೆಸ್, ಪ್ಯಾರಾಮೌಂಟ್ಸಿ ಇನ್ ವೆಸ್ಟರ್ನ್ ಇಂಡಿಯಾ,** ನ್ಯೂ ಡೆಲ್ಲಿ, ಪು. 29.
- ಪಾಟೀಲ, ಎಸ್.ಎಚ್., **ಕಾಂಗ್ರೆಸ್ ಪಾರ್ಟಿ ಆ್ಯಂಡ್ ಪ್ರಿನ್ಸ್ಲಿ ಸ್ಟೇಟ್ಸ್** , ನ್ಯೂ ಡೆಲ್ಲಿ, ಪು. 6.
- ಗ್ರೋವರ್ ಬಿ.ಎಲ್., 2003, ಗ್ರೋವರ್, ಎಸ್., **ಮೋಡರ್ನ್ ಇಂಡಿಯನ್ ಹಿಸ್ಟರಿ,** ನ್ಯೂ ಡೆಲ್ಲಿ, ಪು. 356.
- ದೊರೆಸ್ವಾಮಿ ಅಯ್ಯಂಗಾರ, ಮ.ಅ., 1930, 'ಭಾರತೀಯ ಸಾಮಂತ ರಾಜರ ಚಳವಳಿ', **ಜಯಕರ್ನಾಟಕ,** ಸಂಪುಟ–9, ಸಂಚಿಕೆ – 2, ಡಿಸೆಂಬರ್, ಬೆಳಗಾವಿ, ಪು. 186.
- ಐನ್ ಕೋಪ್ಲ್ಯಾಂಡ್., **ದಿ ಬ್ರಿಟಿಷ್ ರಾಜ್ ಆ್ಯಂಡ್ ದಿ ಇಂಡಿಯನ್ ಪ್ರಿನ್ಸೆಸ್, ಪ್ಯಾರಾಮೌಂಟ್ಸಿ ಇನ್ ವೆಸ್ಟರ್ನ್ ಇಂಡಿಯಾ,** ನ್ಯೂ ಡೆಲ್ಲಿ, 1982, ಪು. 4.
- ಜೆಫ್ರಿ ರೊಬಿನ್., 1978, **ಪೀಪಲ್, ಪ್ರಿನ್ಸಸ್ ಆ್ಯಂಡ್ ಪ್ಯಾರಾಮೌಂಟ್ ಪಾವರ್,** ಡೆಲ್ಲಿ, ಪು. 9.
- ಸಿಂಗ್., ಜಿ.ಎನ್., **ದಿ ಕಿಂಗ್ಸ್ ಇಂಡಿಯನ್ ಆಲಾಯ್ಸ್: ದಿ ರಾಜಾಸ್ ಆ್ಯಂಡ್ ದೇರ್ ಇಂಡಿಯಾ.** 1916, ಪು. 152.
- **ಅದೇ,** ಪು. 153.
- **ಚುಡ್ಗರ್,** ಪಿ.ಎಲ್., **ಇಂಡಿಯನ್ ಪ್ರಿನ್ಸಸ್ ಅಂಡರ್ ದಿ ಬ್ರಿಟಿಷ್ ಪ್ರೊಟೆಕ್ಷನ್,** ಪು. 4.
- ಶಂಕರನಾರಾಯಣರಾವ್, ಎನ್.ಪಿ., **ಸ್ವಾತಂತ್ರ್ಯ ದಂಗೆಯ ಸಾವಿರ ತೊರೆಗಳು.**
- ಸಿಂಗ್ ಜಿ.ಎನ್., 1930, **ಇಂಡಿಯನ್ ಸ್ಟೇಟ್ಸ್ ಆ್ಯಂಡ್ ಬ್ರಿಟಿಷ್ ಇಂಡಿಯಾ,** ದೇರ್ ಫ್ಯೂಚರ್ ರಿಲೇಶನ್ಸ್, ಬನಾರಸ್, ಪು. 7.
- ಚುಡ್ಗರ್, ಪಿ.ಎಲ್., 1929, **ಇಂಡಿಯನ್ ಪ್ರಿನ್ಸಸ್ ಅಂಡರ್ ದಿ ಬ್ರಿಟಿಷ್ ಪ್ರೊಟೆಕ್ಷನ್,** ಪು. 3.
- ಅದೇ ಪು. 5.
- ಸಿಂಗ್ ಜಿ.ಎನ್., 1930, **ಇಂಡಿಯನ್ ಸ್ಟೇಟ್ಸ್ ಆ್ಯಂಡ್ ಬ್ರಿಟಿಷ್ ಇಂಡಿಯಾ,** ದೇರ್ ಫ್ಯೂಚರ್ ರಿಲೇಶನ್ಸ್, ಬನಾರಸ್, ಪು. 9, 10.

'ಲೋಕಸೇವಾನಿರತ' ಕೊಂಗಾಡಿಯಪ್ಪ
(೧೮೬೧-೧೯೫೧) ಒಂದು ಹೊಸ ಚಾರಿತ್ರಿಕ ಶೋಧ

'ಕೊಂಗಾಡಿಯಪ್ಪ' ಎಂಬುದು ಕೇವಲ ಒಂದು ಹೆಸರಾಗಿ ಉಳಿದಿಲ್ಲ. ಅದು ನಮ್ಮ ನೆಲದ (ದೊಡ್ಡಬಳ್ಳಾಪುರ) ಒಂದು ಮುಖ್ಯ ಮಾದರಿ. ಜನಮಾನಸದ ಸ್ಥಿರ ವಿನ್ಯಾಸಗಳ ಒಳಗಿನಿಂದಲೇ ಹೊರಬಂದು ವಿಭಿನ್ನವಾಗಿ ನಿಲ್ಲುವ ಮತ್ತೆ ಒಳಹೋಗುತ್ತ ಮಾತನಾಡುವ ವಿಶಿಷ್ಟ ಚಲನಶೀಲಗುಣ ಕೊಂಗಾಡಿಯಪ್ಪನವರನ್ನು 'ನಿಮ್ಮೊಳಗಿದ್ದೂ ನಿಮ್ಮಂತಾಗದ' ನೆಲೆಯಲ್ಲಿ ನಿಲ್ಲಿಸಿದೆ.

ಪ್ರಸ್ತುತ ಬರವಣಿಗೆಯಲ್ಲಿ ಕೊಂಗಾಡಿಯಪ್ಪನವರನ್ನು ಒಂದು ಹೊಸ ಪರಿಪ್ರೇಕ್ಷ್ಯದಲ್ಲಿ ಕಟ್ಟಿಕೊಡುವ, ಸಂಶೋಧನಾತ್ಮಕ ದಿಕ್ಕಿನಲ್ಲಿ, ನೆಲೆಯಲ್ಲಿ ತೋರಿಸುವ ಪ್ರಯತ್ನವಿದೆ. ಅವರ ಕಾಲದ ರಾಜಕೀಯ ಸ್ಥಿತ್ಯಂತರ, ಸಾಮಾಜಿಕ ಧ್ರುವೀಕರಣ, ದಲಿತರ ಬದುಕು, ಶಿಕ್ಷಣ, ವಸಾಹತುಶಾಹಿ ವಿರೋಧಿ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟ, ಅಭಿವೃದ್ಧಿ ಇತ್ಯಾದಿ ಸಮಾಜಮುಖಿಯಾದ ಅಧ್ಯಯನಕ್ಕೂ ಪ್ರಯತ್ನಿಸಲಾಗಿದೆ. ಆ ಮೂಲಕ ಅವರ ವ್ಯಕ್ತಿತ್ವವನ್ನು ತಾತ್ವಿಕ ಚಿಂತನೆಗಳನ್ನಾಗಿ ರೂಪಿಸಿರುವ ಮತ್ತು ಆ ಮೂಲಕ ಹೊಸ ಗ್ರಹಿಕೆಗಳನ್ನು ಮತ್ತು ಪರಿಪ್ರೇಕ್ಷ್ಯಗಳನ್ನು ಕಟ್ಟಿಕೊಟ್ಟಿರುವ ಪ್ರಯತ್ನಗಳನ್ನು, ಅವರನ್ನು ಹೊಸ ಆಲೋಚನೆಯಲ್ಲಿ ನೋಡುವ, ಸಂಶೋಧನಾತ್ಮಕ ನೆಲೆಯಲ್ಲಿ ಒಳಪಡುವ ಮೂಲಕ ಚರ್ಚಿಸಲಾಗಿದೆ.

ಎಸ್. ವೆಂಕಟೇಶ್
ದೃಶ್ಯ, ಸೋಮೇಶ್ವರ ಬಡಾವಣೆ
ದೊಡ್ಡಬಳ್ಳಾಪುರ-561203
ಬೆಂಗಳೂರು ಗ್ರಾಮಾಂತರ ಜಿಲ್ಲೆ.
98453 07342, 98450 18122.
drushya655@gmail.com

ಕೊಂಗಾಡಿಯಪ್ಪನವರಿದ್ದ ಅವಧಿ ಒಂದು ರೀತಿಯ ದೇಶೀಯ ಚಿಂತನೆಗಳು ಚಿಗುರೊಡೆದು ಹೆಮ್ಮರವಾಗುತ್ತಿದ್ದ ಕಾಲ. ಹಿಂದೂಧರ್ಮದ ಚೌಕಟ್ಟಿನಲ್ಲಿ ಕೋಮುಭಾವನೆಗಳು 'ಎಡೆ'ಬಿಚ್ಚಿ ಕೊಳ್ಳುತ್ತಿದ್ದ ಕಾಲ. ಸ್ವದೇಶಿ, ಸ್ವಧರ್ಮ, ಸ್ವಜಾತಿ, ಬ್ರಾಹ್ಮಣ-ಬ್ರಾಹ್ಮಣೇತರ, ಹಿಂದುಳಿದ, ದಲಿತ ಮುಂತಾದವರು ಅಪ್ರತ್ಯಕ್ಷ ಆಡಳಿತದಲ್ಲಿ ಗಟ್ಟಿಗೊಳ್ಳಲು ಮುಂದಾಗುತ್ತಿದ್ದ ಪಕ್ವಕಾಲವೂ ಆಗಿತ್ತು. ಇಂತಹ ಮಹತ್ವದ ವಿಷಯಗಳು ಕೊಂಗಾಡಿಯಪ್ಪ ಅವರನ್ನು ಕುರಿತು ಅಧ್ಯಯನ ಮಾಡುವಾಗ ಹಿನ್ನೆಲೆಯಾಗಿರಬೇಕು ಎಂಬುದೂ ಗಮನಾರ್ಹ. ಇವೆಲ್ಲಾ ಸಮಕಾಲೀನ ವಿಚಾರಗಳು ಕೊಂಗಾಡಿಯಪ್ಪನವರನ್ನು ಹೆಚ್ಚೆಚ್ಚು ಅರ್ಥಮಾಡಿಕೊಳ್ಳಲು ಸಹಾಯಕವಾಗುತ್ತವೆಂಬುದು ನನ್ನ ನಂಬಿಕೆ. ಇಂತಹ ಅಧ್ಯಯನಕ್ಕೆ ಸಮಕಾಲೀನ ವರದಿಗಳು, ಮ್ಯಾನ್ಯುಯಲ್‌ಗಳು, ನ್ಯೂಸ್ ಬುಲೆಟಿನ್‌ಗಳು, ಅವರೇ ಸಂಗ್ರಹಿಸಿದ ಕೆಲವು ವರದಿಗಳೇ ಪ್ರಮುಖ ಆಕರಗಳು. ಈ ಆಕರಗಳನ್ನು ಒಳಹೊಕ್ಕಲು ಇರುವ ಕಿಂಡಿಯೆಂದರೆ ಈ ಕಾಲದ ಮೂಲದಾಖಲೆಗಳ ಸಂಶೋಧನಾತ್ಮಕ ಅಧ್ಯಯನ. ಈ ಹಿನ್ನೆಲೆಯಲ್ಲಿ ಮೂಲ ದಾಖಲೆಗಳನ್ನು ಬಳಸಿಕೊಂಡು ಚರ್ಚೆ, ವಿಶ್ಲೇಷಣೆಯನ್ನು ಕೈಗೆತ್ತಿಕೊಂಡಿದೆ. ಆ ಮೂಲಕ ಪ್ರಸ್ತುತ ಲೇಖನದಲ್ಲಿ ಸ್ವಾತಂತ್ರ್ಯಪೂರ್ವದಲ್ಲಿ ದೊಡ್ಡಬಳ್ಳಾಪುರ ಅನುಭವಿಸಿದ ಕೆಲವು ಆಯಾಮಗಳನ್ನು ಚರ್ಚಿಸುವುದು ಮತ್ತು ಅದು ಕೊಂಗಾಡಿಯಪ್ಪನವರಂತಹ ಕೊಂಡಿಯ ಮೂಲಕ ಕೇಂದ್ರ ವ್ಯವಸ್ಥೆಯೊಂದಿಗೆ ಯಾವ ಸಂಬಂಧವನ್ನು ಹೊಂದಿತ್ತು ಎಂಬುದನ್ನು ನನ್ನದೇ ಆದ ದೃಷ್ಟಿಕೋನದಲ್ಲಿ ಚರ್ಚಿಸಲು ಪ್ರಯತ್ನಿಸಿದ್ದೇನೆ.

ಕೊಂಗಾಡಿಯಪ್ಪ ಮತ್ತು ವಸಾಹತುಶಾಹಿ ವಿರೋಧಿ ಸ್ವಾತಂತ್ರ್ಯ ಚಳವಳಿ

ಕೊಂಗಾಡಿಯಪ್ಪನವರ ಕಾಲದಲ್ಲಿ ಮೂರು ಮುಖ್ಯ ಮಾದರಿಗಳು ಗೋಚರಿಸುತ್ತವೆ.

1. ಗಾಂಧೀಜಿ ನೇತೃತ್ವದ ವಸಾಹತುಶಾಹಿ ವಿರೋಧಿ ಸ್ವಾತಂತ್ರ್ಯ ಚಳವಳಿ. 2. ಅಂಬೇಡ್ಕರ್ ನೇತೃತ್ವದ ಸಾಮಾಜಿಕ ಚಳವಳಿ. 3. ಕಮ್ಯೂನಿಸ್ಟರ ಸಮತಾವಾದಿ ಚಳವಳಿ. ಈ ಮೂರು ಮಾದರಿಗಳಲ್ಲಿ ಅವರವರ ಆದ್ಯತೆಗಳು ಸ್ಪಷ್ಟವಾಗಿವೆ. ಈ ಮೂರೂ ಮಾದರಿಗಳಲ್ಲೂ ಸ್ವಾತಂತ್ರ್ಯದ ಕಲ್ಪನೆಯಿದೆ. ಆದರೆ ಅದರ ಅರ್ಥಗ್ರಹಿಕೆ ಮತ್ತು ಆದ್ಯತೆಗಳಲ್ಲಿ ಸ್ವಲ್ಪಮಟ್ಟಿನ ವ್ಯತ್ಯಾಸವಿದೆ. ಹೀಗೆಂದು ಮೇಲಿನ ಮೂರೂ ಮಾದರಿಗಳನ್ನು ಪರಸ್ಪರ ವಿರೋಧಿ ನೆಲೆಗಳೆಂದು ಭಾವಿಸಬೇಕಾಗಿಲ್ಲ. ಇದೆಲ್ಲಾ ಹೇಳುವ ಮುಖ್ಯ ಕಾರಣವೆಂದರೆ ಕೊಂಗಾಡಿಯಪ್ಪನವರು ಇವೆಲ್ಲಾ ಸಂಘರ್ಷಗಳ, ಸಂಕ್ರಮಣಗಳ ಮೂಸೆಯಲ್ಲಿಯೇ ಪ್ರವರ್ಧಮಾನಕ್ಕೆ ಬಂದರೂ, ಈ ಮೇಲೆ ತಿಳಿಸಿದ ಮೂರೂ ಮಾದರಿಗಳಲ್ಲಿ ಯಾವೊಂದನ್ನೂ ತಮ್ಮ ಆದ್ಯತೆಯನ್ನಾಗಿ ಆರಿಸಿಕೊಳ್ಳದೆ/ಮಾಡಿಕೊಳ್ಳದೆ ಪ್ರಜ್ಞಾಪೂರ್ವಕವಾಗಿಯೇ ದೂರ ಉಳಿಯುತ್ತಾರೆ. ಅಷ್ಟರಮಟ್ಟಿಗೆ ಸಮಕಾಲೀನ ವೈಪರೀತ್ಯಗಳಿಗೆ, ವೈರುಧ್ಯಗಳಿಗೆ ಪ್ರಜ್ಞಾಪೂರ್ವಕವಾಗಿ ಸ್ಪಂದಿಸುವ ಆತುರ ತೋರದೆ ಸ್ಥಿತಪ್ರಜ್ಞರಾಗಿದ್ದರು. ಈ ನಿಟ್ಟಿನಲ್ಲಿ ಒಂದು ಸಾಮಾನ್ಯೀಕೃತ ನೆಲೆಯಲ್ಲೂ ಮುಖಾಮುಖಿಯಾದ ಉದಾಹರಣೆಗಳಿಲ್ಲ. ಇದು ನಿರ್ದಿಷ್ಟ ಚಾರಿತ್ರಿಕ ಸನ್ನಿವೇಶದಲ್ಲಿ ರೂಪುಗೊಂಡ ವಿಭಿನ್ನ ಹಾಗೂ ವಿಶಿಷ್ಟ ಚಿಂತನಾಕ್ರಮ/ವಿನ್ಯಾಸ. ಇದು ಚರಿತ್ರೆಯ ಅನಿವಾರ್ಯ ಆಯಾಮ ಎಂಬುದು ಇದರ ಇನ್ನೊಂದು ಮುಖ. ಆದರೆ ಒಂದು ಮಾತುಮಾತ್ರ ಸ್ಪಷ್ಟ. ಯಾವುದೇ ಕ್ರಿಯಾಶೀಲ ವ್ಯಕ್ತಿತ್ವ ರೂಪುಗೊಳ್ಳುವುದು ಒಂದು

ನಿರ್ದಿಷ್ಟ ಸಂದರ್ಭದಲ್ಲಿ ಮತ್ತು ಆ ಸಂದರ್ಭ ಒದಗಿಸುವ ಸವಾಲುಗಳೊಂದಿಗೆ ನಡೆಸುವ ಮುಖಾಮುಖಿಯಲ್ಲಿ.



ಕೊಂಗಾಡಿಯಪ್ಪ

ಕೊಂಗಾಡಿಯಪ್ಪನವರಿಗೆ ಸ್ವಾತಂತ್ರ್ಯ ಚಳವಳಿಯ ಬಗ್ಗೆ ಅಸಮಾಧಾನವಿದ್ದುದು ಹಲವು ದಾಖಲೆಗಳಿಂದ ಖಚಿತವಾಗುತ್ತದೆ. ಕರ್ನಾಟಕದ ಸ್ವಾತಂತ್ರ್ಯ ಹೋರಾಟದ ಮುಂಚೂಣಿ ನಾಯಕರಾದ, ಇದೇ ಊರಿನವರಾದ ಸರ್ವೋದಯ ನಾಯಕ ಟಿ. ಸಿದ್ಧಲಿಂಗಯ್ಯ, ರುಮಾಲೆ ಚನ್ನಬಸವಯ್ಯ, ರುಮಾಲೆ ಭದ್ರಣ್ಣ, ಮುಗುವಾಳಪ್ಪ, ನಾ. ನಂಜುಂಡಯ್ಯ, ಎನ್.ಸಿ. ತಿಮ್ಮಾರೆಡ್ಡಿ, ಕೆ. ನರಸಿಂಹ ಅಯ್ಯಂಗಾರ್, ವಂದೇ ಮಾತರಂ ಸುನಂದಮ್ಮ ಮುಂತಾದವರೆಲ್ಲಾ ರಾಷ್ಟ್ರನಾಯಕರಾದ ಗಾಂಧೀಜಿ, ನೆಹರು, ಪಟೇಲ್ ಅವರೊಂದಿಗೆ ಹೊಂದಿದ್ದ ಸಂಬಂಧಗಳು, ಸ್ವಾತಂತ್ರ್ಯದ ಅರಿವು ಮೂಡಿಸಲು ರಾಜ್ಯಾದ್ಯಂತ ಅವರುಗಳು ಕೈಗೊಂಡ ಪ್ರವಾಸ, ಭೂಗತರಾಗಿದ್ದುಕೊಂಡು ನಡೆಸಿದ ಹೋರಾಟ ಎಲ್ಲವೂ ಕೊಂಗಾಡಿಯಪ್ಪನವರಿಗೆ ಸ್ಪಷ್ಟವಾಗಿ ತಿಳಿದಿತ್ತು. ಈ ನಿಟ್ಟಿನಲ್ಲಿ ಅವರನ್ನು ಖಂಡಿಸುತ್ತಾರೆ, ಟೀಕಿಸುತ್ತಾರೆ. ಪ್ರಜ್ಞಾಪೂರ್ವಕವಾಗಿ ಕೊಂಗಾಡಿಯಪ್ಪನವರು ಇವರುಗಳಿಂದ ಅಂತರ ಕಾಯ್ದುಕೊಳ್ಳುತ್ತಾರೆ. ಎಷ್ಟರಮಟ್ಟಿಗೆ ಎಂದರೆ ಅತಿರೇಕ ಎನ್ನಿಸುವಷ್ಟು. ಇದಕ್ಕೆ ಒಂದು ಸ್ಪಷ್ಟ ಉದಾಹರಣೆಯನ್ನು ನೀಡಬಹುದು. ಕೊಂಗಾಡಿಯಪ್ಪನವರಿಗೆ ಮಹಾತ್ಮ ಗಾಂಧೀಜಿ ಅವರ ಬಗ್ಗೆ ಅಪಾರ ಗೌರವವಿತ್ತು. ಅವರ ಸರಳ ಜೀವನ, ಸತ್ಯ, ಅಹಿಂಸೆ, ಸೇವಾ ಮನೋಭಾವಗಳನ್ನು ತಮ್ಮ ಜೀವನದಲ್ಲೂ ರೂಢಿಸಿಕೊಂಡಿದ್ದರು. ಆದರೆ ಅಂತಹ ರಾಷ್ಟ್ರಮಟ್ಟದ ನಾಯಕ, ದೊಡ್ಡಮನುಷ್ಯ ಊರಿಗೆ ಬಂದಾಗ (ಜನವರಿ 4, 1934) ಅವರನ್ನು ಸ್ವಾಗತಿಸುವುದಿರಲಿ, ನೋಡಲೂ ಸಹ ಹೋಗುವುದಿಲ್ಲ. ಗಾಂಧೀಜಿಯವರು ಹರಿಜನೋದ್ಧಾರ ನಿಧಿಗಾಗಿ ದೇಶದೆಲ್ಲೆಡೆ ಪ್ರವಾಸ ಕೈಗೊಂಡಿದ್ದಾರೆಂಬುದು ತಿಳಿದಿದ್ದರೂ, ಅವರು ಸ್ವಾತಂತ್ರ್ಯ ಚಳವಳಿಯ ಭಾಗವಾಗಿ ಬಂದಿದ್ದಾರೆಂದು, ಪ್ರವಾಸ ಮಾಡುತ್ತಿದ್ದಾರೆಂದು ತೀರ್ಮಾನಿಸಿ ಉದ್ದೇಶಪೂರ್ವಕವಾಗಿ ದೂರ ಉಳಿಯುತ್ತಾರೆ. ಹರಿಜನ ನಿಧಿಗಾಗಿ ಸಂಗ್ರಹಿಸಿದ್ದ ಹಣವನ್ನು ಬೇರೆಯವರ ಮೂಲಕ ತಲುಪಿಸಿ ಕೈತೊಳೆದುಕೊಳ್ಳುತ್ತಾರೆ. ಆ ಮೂಲಕ ಇಡೀ ಘಟನೆಯಿಂದ ದೂರ ಉಳಿಯುತ್ತಾರೆ. ಗಾಂಧೀಜಿಯವರು ಅನಾರೋಗ್ಯದಿಂದ ವಿಶ್ರಾಂತಿ ಪಡೆಯಲು ನಾಲ್ಕಾರು ಬಾರಿ ಹತ್ತಿರದ ನಂದಿಬೆಟ್ಟಕ್ಕೆ ಬಂದಿದ್ದಾಗಲೂ ಸೌಜನ್ಯಕ್ಕಾದರೂ ಅವರನ್ನು ನೋಡಲು ಒಮ್ಮೆಯಾದರೂ ಹೋಗಲಿಲ್ಲ ಎಂಬುದೂ ಅಷ್ಟೇ ಗಮನಾರ್ಹ. ಆ ಮೂಲಕ ಅವರು ತಮ್ಮ ನಿಲುವನ್ನು, ಅಸಮಾಧಾನವನ್ನು ವ್ಯಕ್ತಪಡಿಸುತ್ತಾರೆ. ಆದರೆ ಕೊಂಗಾಡಿಯಪ್ಪ ಅವರು ಈ ವಿಚಾರವಾಗಿ ಈ ರೀತಿ

ನಡೆದುಕೊಳ್ಳುತ್ತಾರೆಂದು ಯಾರೂ ನಿರೀಕ್ಷಿಸಿರಲಿಲ್ಲ. ಆ ಮೂಲಕ ಅವರ ಇನ್ನೊಂದು ಮುಖ ಅನಾವರಣಗೊಳ್ಳುತ್ತದೆ. ಊರಿನ ಹಿತದೃಷ್ಟಿಯಿಂದ, ಏಳಿಗೆಯ ಕಾರಣಕ್ಕೆ ಇದು ಅವರಿಗೆ ಅನಿವಾರ್ಯವೂ ಆಗಿತ್ತು ಎಂಬುದು ಅದರ ಇನ್ನೊಂದು ಮುಖ. ಇದಕ್ಕೆ ಮುಖ್ಯಕಾರಣ ಅವರು ಅಪ್ಪಟ ರಾಜಭಕ್ತ/ಸ್ವಾಮಿನಿಷ್ಠ ಎಂಬುದು ಒಂದು ಕಡೆಯಾದರೆ, ಮಿರ್ಜಾ ಅವರ ಕೆಂಗಣ್ಣಿಗೂ ಗುರಿಯಾಗಬೇಕಾಗಬಹುದು, ಅವರಿಬ್ಬರ ಸ್ನೇಹದಲ್ಲಿ ಬಿರುಕು ಕಾಣಿಸಿಕೊಳ್ಳಬಹುದು ಎಂಬುದು ಇನ್ನೊಂದು ಅಂಶ. ಅವರ ದಿನಚರಿಯಲ್ಲಿ ಊರಿನ ಅನೇಕ ವಿಷಯಗಳ ಬಗ್ಗೆ ಸುಧೀರ್ಘವಾಗಿ ಬರೆಯುತ್ತಾರೆ. ಆದರೆ ಆಶ್ಚರ್ಯವೆಂದರೆ ಕೊಂಗಾಡಿಯಪ್ಪನವರು ಸ್ವಾತಂತ್ರ್ಯ ಚಳವಳಿಯ ಬಗ್ಗೆ ಅಪ್ಪಿತಪ್ಪಿಯೂ ಎಲ್ಲಿಯೂ ಪ್ರಸ್ತಾಪಿಸುವುದೇ ಇಲ್ಲ. ಊರಿಗೆ ಗಾಂಧಿಯಾದಿಯಾಗಿ ಕಸ್ತೂರಬಾ, ಸರ್ದಾರ್ ವಲ್ಲಭಾಬಾಯಿ ಪಟೇಲ್, ಕಮಲಾದೇವಿ ಚಟ್ಟೋಪಾಧ್ಯಾಯ, ಮೀರಾಬೆನ್, ಪಾಮಿಡಿ ಸುಬ್ಬರಾಮ ಶೆಟ್ಟರು, ಹರ್ಡೀಕರ್, ಕುಮಾರಿ ಮಣಿಬೆನ್ ಪಟೇಲ್, ಬಿ.ಎನ್. ಗುಪ್ತ, ಕೆ.ಟಿ. ಭಾಷ್ಯಂ ಮುಂತಾದ ನೂರಾರು ಕಾಂಗ್ರೆಸ್ ಧುರೀಣರು ಬಂದು ಹೋಗಿದ್ದಾರೆ. ಊರಲ್ಲಿ ಪ್ರತಿದಿನವೂ ಒಂದಲ್ಲಾ ಒಂದು ಹೋರಾಟ, ಚಳವಳಿ, ಮುಷ್ಕರ, ಗಲಭೆ, ಸತ್ಯಾಗ್ರಹ, ಹರತಾಳಗಳು ನಡೆದಿವೆ. ಬ್ರಿಟೀಷರಿಂದ ಲಾಠಿ ಪ್ರಹಾರ, ದಸ್ತಗಿರಿ, ಹಿಂಸೆ, ಅತ್ಯಾಚಾರ, ನಿಷೇಧಾಜ್ಞೆ ಎಲ್ಲವೂ ನಡೆದಿವೆ. ಊರಿಗೆ ಕೂಗಳತೆ ದೂರದಲ್ಲಿರುವ ವಿದುರಾಶ್ವತ್ಥದಲ್ಲಿ ನರಮೇಧವೇ ನಡೆದು ಹೋಯಿತು. ಆದರೆ ಈ ನಿಟ್ಟಿನಲ್ಲಿ ಕೊಂಗಾಡಿಯಪ್ಪನವರ ಮಹಾಮೌನ ನೋಡಿದರೆ ಸ್ವಾತಂತ್ರ್ಯ ಹೋರಾಟದ ಬಗ್ಗೆ ಅವರಿಗೆ ಒಲವಿರಲಿಲ್ಲ ಎಂಬುದು ಇನ್ನಷ್ಟು ಖಚಿತವಾಗುತ್ತದೆ. ವಸಾಹತುಶಾಹಿ ವಿರೋಧಿ ರಾಷ್ಟ್ರೀಯ ಚಳವಳಿಯ ಬಗ್ಗೆ ಇರುವ ಮೌನ ಇವರ ಗ್ರಹಿಕೆಯ ಕ್ರಮವನ್ನು ಖಚಿತಪಡಿಸುತ್ತದೆ.

ಕೊಂಗಾಡಿಯಪ್ಪ ಮತ್ತು ಶಿಕ್ಷಣ

ಶಿಕ್ಷಣ ಪ್ರತಿಯೊಬ್ಬ ಮಾನವನ ವ್ಯಕ್ತಿತ್ವವನ್ನು ಸುಶಿಕ್ಷಿತ ಮತ್ತು ಉತ್ತಮ ಸಾಮಾಜಿಕ ಕಳಕಳಿಯನ್ನು ಹೊಂದಿದವರನ್ನಾಗಿ ಮಾಡುವುದಲ್ಲದೆ ಜವಾಬ್ದಾರಿಯುತವಾದ ಎಚ್ಚರಿಕೆಯನ್ನು ವಹಿಸುವಂತೆ ಮಾಡುತ್ತದೆ ಎಂಬ ಜನವಾಣಿಯನ್ನು ಸಾಕಾರಗೊಳಿಸಲು 20ನೇ ಶತಮಾನದ ಆರಂಭದಿಂದಲೇ ಮೈಸೂರು ಸಂಸ್ಥಾನಕ್ಕೆ ಒಳಪಟ್ಟ ಭಾಗದಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿ ಅದರ ಅಭಿವೃದ್ಧಿಗೆ ಮತ್ತು ಸುಧಾರಣೆಗೆ ಶ್ರಮಿಸಿದ ಕೀರ್ತಿ ಆಗಿನ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರು, ದಿವಾನರಾದ ಎಂ. ವಿಶ್ವೇಶ್ವರಯ್ಯ ಮತ್ತು ಮಿರ್ಜಾ ಇಸ್ಮಾಯಿಲ್ ಅವರಿಗೆ ಸಲ್ಲುತ್ತದೆ. ಇವರ ಈ ಪ್ರಯತ್ನಕ್ಕೆ ದೊಡ್ಡಬಳ್ಳಾಪುರದಲ್ಲಿ ಕೊಂಗಾಡಿಯಪ್ಪನವರು ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಳ್ಳುವ ಮೂಲಕ ಇಲ್ಲಿ ಆಧುನಿಕ ಶಿಕ್ಷಣದ ಆರಂಭಕ್ಕೆ, ಪ್ರಗತಿಗೆ, ವಿಸ್ತರಣೆಗೆ ಕಾರಣರಾದರು ಎಂಬುದು ಗಮನಾರ್ಹ.

ಒಬ್ಬ ಶಾಲಾ ಮಾಸ್ತರರಾಗಿ ಅವರು ಶಿಕ್ಷಣದ ಮಹತ್ವವನ್ನು ಅರಿತಿದ್ದರು. ಹೀಗಾಗೇ ಕೊಂಗಾಡಿಯಪ್ಪನವರು ವಿದ್ಯಾರ್ಜನೆಗೆ ಹೆಚ್ಚು ಒತ್ತುಕೊಟ್ಟರು. ಜ್ಞಾನವಿಕಾಸಕ್ಕೆ ಶಿಕ್ಷಣವೊಂದೇ ಸಾಧನವೆಂದು ನಂಬಿದವರು ಅವರು. ಶಿಕ್ಷಣದ ಸಲುವಾಗಿ, ವಿಚಾರವಾಗಿ ಕೊಂಗಾಡಿಯಪ್ಪನವರು ಸರ್ಕಾರದ ಪ್ರತಿನಿಧಿಯೆಂಬಂತೆ ದುಡಿದಿದ್ದಾರೆ. ಆಧುನಿಕ ಶಿಕ್ಷಣವೇ ಸಕಲ ಸಮಸ್ಯೆಗಳಿಗೂ ಪರಿಹಾರವೆಂದು ಅವರು ಬಲವಾಗಿ ನಂಬಿದ್ದರು. ಈ ಹಿನ್ನೆಲೆಯಲ್ಲೇ ಅವರು ಸರ್ಕಾರದಿಂದ ಊರಲ್ಲಿ ಪ್ರಾಥಮಿಕ ಶಿಕ್ಷಣದಿಂದ ಮೊದಲುಗೊಂಡು ಮಾಧ್ಯಮಿಕ,

ಪ್ರೌಢ, ತಾಂತ್ರಿಕ, ವೃತ್ತಿಶಿಕ್ಷಣ ಎಲ್ಲವನ್ನೂ ಹಂತಹಂತವಾಗಿ ಆರಂಭಗೊಳ್ಳುವಂತೆ, ಮುನ್ನಡೆಯುವಂತೆ ಮಾಡುವಲ್ಲಿ ಯಶಸ್ವಿಯಾದರು. ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ಯಾವುದೇ ಹೊಸ ಯೋಜನೆ, ಕೋರ್ಸು ಬಂದರೂ ಅದನ್ನು ಮೊದಲು ಊರಿಗೆ ಮಂಜೂರು ಮಾಡಿಸಿಕೊಂಡು ಬರುತ್ತಿದ್ದರು. ಅಂತಹ ಕರ್ತೃತ್ವಶಕ್ತಿ ಕೊಂಗಾಡಿಯಪ್ಪನವರದು. ಊರಿನ ಅಭಿವೃದ್ಧಿಯ ದೃಷ್ಟಿಯಿಂದ ಅವರು ದಿವಾನರಾದ ವಿಶ್ವೇಶ್ವರಯ್ಯ ಮತ್ತು ಮಿರ್ಜಾ ಇಸ್ಮಾಯಿಲ್ ಅವರನ್ನು ತಮ್ಮ ಸ್ನೇಹ, ವಿಶ್ವಾಸದ ತೆಕ್ಕೆಯಲ್ಲಿ ಸಂಪೂರ್ಣವಾಗಿ ಬಳಸಿಕೊಂಡಿರುವುದು ಅನೇಕ ನೆಲೆಗಳಿಂದ ಈಗಾಗಲೇ ದೃಢಪಟ್ಟಿದೆ. ಇದರ ಪರಿಣಾಮವಾಗಿ ಊರಲ್ಲಿ ಪುರಸಭಾ ಶಾಲೆಗಳು, ಬಾಲಕಿಯರ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳು, ಪಂಚಮರ ಶಾಲೆಗಳು, ವಸತಿ ಶಾಲೆಗಳು, ವಯಸ್ಕರ ಶಿಕ್ಷಣ ಶಾಲೆಗಳು, ಕೈಗಾರಿಕಾ ಶಾಲೆ, ರಾತ್ರಿ ಶಾಲೆಗಳು ಮುಂತಾದ ಅನೇಕ ಶಾಲೆಗಳು ಪ್ರಾರಂಭಗೊಂಡವು. ಶಿಕ್ಷಣದ ಭಾಗವಾಗಿ ಮೊಟ್ಟಮೊದಲ ಬಾರಿಗೆ ಊರಿನಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಉಪನ್ಯಾಸಗಳನ್ನು ಏರ್ಪಡಿಸಿದರು. ಅಲ್ಲದೆ ಕುವೆಂಪು, ಬಿ.ಎಂ.ಶ್ರೀ., ಕೆ.ಹೆಚ್. ರಾಮಯ್ಯ, ವಿ. ಸೀತಾರಾಮಯ್ಯ, ವೆಂಕಟರಾಮಯ್ಯ ಮೊದಲಾದವರನ್ನು ಕರೆಯಿಸಿ ಊರಿನಲ್ಲಿ ಭಾಷಣ, ಉಪನ್ಯಾಸಗಳನ್ನು ಏರ್ಪಡಿಸಿ, ವಿದ್ಯೆಯ ಮಹತ್ವ ತಿಳಿಸುವುದರ ಜೊತೆಗೆ ಶಿಕ್ಷಣದ ಉತ್ತಮ ವಾತಾವರಣವನ್ನು ನಿರ್ಮಿಸಿದರು. ಆ ಮೂಲಕ ಓದುಗರನ್ನು ಬೆಳೆಸಿದರು. ಅವರಲ್ಲಿ ಓದುವ ಹುಮ್ಮಸ್ಸು ತುಂಬಿದರು. ಈ ಕೆಲಸವನ್ನು ಅವರು ನಿಷ್ಠೆಯಿಂದ, ನಿರ್ವಂಚನೆಯಿಂದ ನಿರ್ವಹಿಸಿದ್ದಾರೆ. ಒಟ್ಟಾರೆ ಊರಿನ ಶಿಕ್ಷಣಾಭಿವೃದ್ಧಿಯಲ್ಲಿ ಕೊಂಗಾಡಿಯಪ್ಪನವರ ಕೊಡುಗೆ ಗಮನಾರ್ಹವಾಗಿದೆ. ಇವರ ನಿಸ್ವಾರ್ಥ ಸೇವೆಯ ಫಲವಾಗಿ ಊರಲ್ಲಿ ಪ್ರತ್ಯೇಕವಾಗಿ ಮಹಿಳೆಯರಿಗೆ ವಿದ್ಯಾಭ್ಯಾಸ, ಹಿಂದುಳಿದ ಪಂಗಡ, ದಲಿತರು, ಪಂಚಮರಿಗೂ ವಿದ್ಯಾಭ್ಯಾಸದ ವಿವಿಧ ಸೌಕರ್ಯಗಳು ಕಲ್ಪಿತವಾದವು. ಸಾಕ್ಷರತೆಯ ದೃಷ್ಟಿಯಿಂದ ಪಾಶ್ಚಿಮಾತ್ಯ ಧೋರಣೆ ಮತ್ತು ವಸಾಹತುವಿನ ನೆರಳಿನಲ್ಲಿಯೇ ಈ ಭಾಗದಲ್ಲಿ ದಲಿತ ವರ್ಗಗಳ ಏಳಿಗೆಗೂ ಕಾರಣೀಭೂತರಾದರೆಂಬುದು ಗಮನೀಯ. ಈ ನಿಟ್ಟಿನಲ್ಲಿ ಅವರ ದಿನಚರಿ ಮತ್ತು ಪತ್ರಿಕಾ ವರದಿಗಳನ್ನು ಗಮನಿಸಬಹುದು.

ಅಪ್ಪಟ ರಾಜಭಕ್ತ / ಸ್ವಾಮಿನಿಷ್ಠ

ಕೊಂಗಾಡಿಯಪ್ಪನವರು ಅಪ್ಪಟ ರಾಜಭಕ್ತರು. ಎಷ್ಟರಮಟ್ಟಿಗೆ ಎಂದರೆ ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ಮಿರ್ಜಾ ಇಸ್ಮಾಯಿಲರ ಭಾವಚಿತ್ರವನ್ನು ದೇವರ ಮನೆಯಲ್ಲಿಟ್ಟು ಪೂಜಿಸುವಷ್ಟು. ಅವರ ಮೇಲೆ ಅಷ್ಟು ಭಕ್ತಿ-ಗೌರವ. ರಾಜರನ್ನಾಗಲೀ, ಅವರ ಆಡಳಿತವನ್ನಾಗಲೀ ಯಾರೂ ವಿರೋಧಿಸುವಂತಿರಲಿಲ್ಲ. ಅಂತಹವರನ್ನು ಒಪ್ಪುತ್ತಲೂ ಇರಲಿಲ್ಲ. ಸಹಿಸಲೂ ಇರುತ್ತಿರಲಿಲ್ಲ. ಈ ವಿಚಾರವಾಗಿ ಮಾತ್ರ ಅವರು ಹರಿಹಾಯುತ್ತಿದ್ದರು. ಅಲ್ಲದೆ ಈ ನಿಟ್ಟಿನಲ್ಲಿ ತಮ್ಮ ನೆಚ್ಚಿನ ಶಿಷ್ಯ ಟಿ. ಸಿದ್ಧಲಿಂಗಯ್ಯನವರೊಂದಿಗೆ ಯಾವಾಗಲೂ ಮುಸುಕಿನ ಗುದ್ದಾಟವಿದ್ದೇ ಇತ್ತು.

ಕೊಂಗಾಡಿಯಪ್ಪನವರು ಮಹಾರಾಜರು ಮತ್ತು ದಿವಾನರು ಮೈಸೂರು ಸಂಸ್ಥಾನವನ್ನು 'ಮಾದರಿ ರಾಜ್ಯ'ವನ್ನಾಗಿಸಿದರು ಎಂತಲೇ ಸಮರ್ಥಿಸುತ್ತಾರೆ. ಆದರೆ ಮಹಾರಾಜರೂ ಕೂಡ ವಸಾಹತುಶಕ್ತಿಯ ಸಾಮ್ರಾಜ್ಯಶಾಹಿ ಕನಸಿನ ಸಂಕೇತ ಎಂಬುದನ್ನು ಮರೆಯುತ್ತಾರೆ. ಮಹಾರಾಜರು 'ಪ್ರತ್ಯಕ್ಷ ದೇವರು' ಎಂದು ಭಾವಿಸುತ್ತಾರೆ. ಇವರ ಇಡೀ

ಜೀವನ ಚರಿತ್ರೆಯನ್ನು ಸೂಕ್ಷ್ಮವಾಗಿ ಒಳಗಣ್ಣಿನಿಂದ ನೋಡಿದರೆ ರಾಜರಿಗೇ ಮೊದಲ ಆದ್ಯತೆ. ಕೆಲವೊಮ್ಮೆ ಇದು ಅತಿರೇಕ ಎನಿಸುವುದೂ ಉಂಟು. ವ್ಯಕ್ತಿವೈಭವೀಕರಣ ಎನಿಸುವುದೂ ಉಂಟು. ಮತ್ತೆ ಕೆಲವೊಮ್ಮೆ ಇವರ ಕಾರ್ಯವೈಖರಿ, ನಡೆ-ನುಡಿ-ಮಾತುಕತೆ ಎಲ್ಲವೂ ರಾಜರ / ಒಡೆಯರ ಉಪ್ಪಿನ ಋಣಭಾರದಿಂದ ನಲುಗಿರುವಂತೆ / ಬಾಗಿರುವಂತೆ / ಬಳಲುತ್ತಿರುವಂತೆ ಭಾಸವಾಗುತ್ತದೆ. ಇನ್ನೂ ಕೆಲವೊಂದು ಸಂದರ್ಭಗಳಲ್ಲಿ ರಾಜತ್ವದ ಪ್ರತೀಕವಾಗಿಯೂ ಕಂಡುಬರುತ್ತಾರೆ. ಜನರಲ್ಲಿ ಬೆಳೆಯುತ್ತಿದ್ದ ಜನತಾಂತ್ರಿಕ ಆಶಯಗಳ ಬಗ್ಗೆ ಕೊಂಗಾಡಿಯಪ್ಪನವರಿಗೆ ಸಹಾನುಭೂತಿಯಿರಲಿಲ್ಲ. ಈ ಬೆಳವಣಿಗೆಯನ್ನು ಕಂಡು ಹೌಹಾರುತ್ತಿದ್ದರು. ಅವರಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರಲಿಲ್ಲ ಎಂಬುದಕ್ಕಿಂತ ಮಹಾರಾಜರ ಆಡಳಿತ ಎಲ್ಲಿ ಕೊನೆಗೊಳ್ಳುತ್ತದೋ ಎಂಬ ಆತಂಕ, ತಳಮಳಗಳೇ ಪ್ರಧಾನವಾಗಿ ಕಾಣಿಸಿಕೊಳ್ಳುತ್ತವೆ. ಈ ಹಿನ್ನೆಲೆಯಲ್ಲಿ ಅವರು ಸಮಕಾಲೀನ ರಾಜಕೀಯ ಮೇಲಾಟಗಳಿಂದ ದೂರವೇ ಉಳಿದರು ಎನ್ನಬಹುದು.

ಕೊಂಗಾಡಿಯಪ್ಪನವರ ಸ್ವಾಮಿನಿಷ್ಠೆಗೆ ಇನ್ನೊಂದು ಸ್ಪಷ್ಟ ಉದಾಹರಣೆಯೆಂದರೆ ಮಹಾರಾಜರಾಗಲೀ, ದಿವಾನರಾಗಲೀ ಅಥವಾ ಸರ್ಕಾರದ ಯಾವುದೇ ಪ್ರತಿನಿಧಿಯಾಗಲೀ ರೈಲಿನಲ್ಲಿ ಈ ಭಾಗದಲ್ಲಿ ಸಂಚರಿಸುವಾಗ ಕೊಂಗಾಡಿಯಪ್ಪನವರು ತಮ್ಮ ಭಾಜಭಜಂತ್ರಿ ಸಮೇತ ರೈಲ್ವೆನಿಲ್ದಾಣದಲ್ಲಿ ಹಾಜರಿದ್ದು, ಹಾರತುರಾಯಿಗಳನ್ನು ನೀಡಿ ಬರಮಾಡಿಕೊಳ್ಳುತ್ತಿದ್ದರು ಇಲ್ಲವೆ ಬೀಳ್ಕೊಡುತ್ತಿದ್ದರು. ಇದು ಕೊನೆಗೆ ಯಾವಮಟ್ಟಕ್ಕೆ ಹೋಯಿತೆಂದರೆ ಮಹಾರಾಜರಾಗಲೀ, ದಿವಾನರಾಗಲೀ ರೈಲಿನಲ್ಲಿ ಸಂಚರಿಸುವಾಗ ದೊಡ್ಡಬಳ್ಳಾಪುರ ಬಂದಕೂಡಲೇ ಕೊಂಗಾಡಿಯಪ್ಪನವರು ಇರುತ್ತಾರೆಂದು ಕಿಟಕಿ-ಬಾಗಿಲು ತೆರೆದು ನೋಡುವಂತಾಗಿತ್ತು. ತಮ್ಮ ರಾಜಭಕ್ತಿ, ಸ್ವಾಮಿನಿಷ್ಠೆಗಳಿಂದ ಅವರನ್ನೂ ಹಾಗೆ ಮಾಡಿಬಿಟ್ಟಿದ್ದರು. ಕೊಂಗಾಡಿಯಪ್ಪನವರು ನಾಲ್ವಡಿ ಕೃಷ್ಣರಾಜ ಒಡೆಯರ ವಿವಾಹ ಮಹೋತ್ಸವ ಕಾರ್ಯದಲ್ಲೂ ಭಾಗಿಯಾಗಿದ್ದರು. ಅರಮನೆಯಿಂದ ಇವರ ಜನೋಪಕಾರಿ ಗುಣಗಳಿಗೆ ಮೆಚ್ಚಿ 'ಲೋಕಸೇವಾನಿರತ' ಎಂಬ ಬಿರುದನ್ನು ನೀಡಿ ಗೌರವಿಸಲಾಗಿತ್ತು.

ಕೊಂಗಾಡಿಯಪ್ಪ ಮತ್ತು ಅಭಿವೃದ್ಧಿಯ ಹರಿಕಾರ ಮಿರ್ಜಾ ಇಸ್ಮಾಯಿಲ್

ದೊಡ್ಡಬಳ್ಳಾಪುರವು ಮಿರ್ಜಾ ಇಸ್ಮಾಯಿಲ್ ಅವರು ಮೈಸೂರು ಸಂಸ್ಥಾನದ ದಿನಾನರಾಗಿ ಬಂದಮೇಲೆ ಮಹತ್ವದ ತಿರುವನ್ನು ಅನುಭವಿಸಿತು. ಇದಕ್ಕೆ ಮುಖ್ಯಕಾರಣ ಕೊಂಗಾಡಿಯಪ್ಪ ಎಂಬುದನ್ನು ಮಾತ್ರ ಮರೆಯಬಾರದು. ಕೊಂಗಾಡಿಯಪ್ಪನವರು ಮಿರ್ಜಾ ಅವರೊಂದಿಗೆ ಹೊಂದಿದ್ದ ಅನ್ಯೋನ್ಯತೆಯನ್ನು ಇನ್ನಿತರ ನಾಯಕರೊಂದಿಗಾಗಲೀ ಅಥವಾ ಮಹಾರಾಜರೊಂದಿಗಾಗಲೀ ಹೊಂದಿರಲಿಲ್ಲ ಎಂಬುದು ಸರ್ವವಿದಿತ. ಇದು ಅವರ ಹೃದಯಾಂತರಾಳದಿಂದ ಹೊರಹೊಮ್ಮಿದ ಪ್ರೀತಿ, ಅಭಿಮಾನದ ಪ್ರತಿಫಲವೇ ಅಥವಾ ರಾಜತಾಂತ್ರಿಕ ಹಾಗೂ ವಾಸ್ತವಿಕ ಪ್ರಜ್ಞೆಗಳ ಫಲಿತಾಂಶವೇ ಎನ್ನುವುದು ಜಿಜ್ಞಾಸೆಯ ವಿಷಯವಾಗಿದೆ. ಮಿರ್ಜಾ ಅವರನ್ನು ಒಲೈಸಿಕೊಂಡರೆ ಊರಿಗೆ ಒಂದಷ್ಟು ಅಭಿವೃದ್ಧಿ ಕಾರ್ಯಗಳು ಬಂದಾವು ಎಂಬ ಪರಿಜ್ಞಾನವನ್ನು ಕೊಂಗಾಡಿಯಪ್ಪನವರು ಖಂಡಿತವಾಗಿಯೂ ಹೊಂದಿದ್ದರೆಂಬುದರಲ್ಲಿ ಯಾವುದೇ ಸಂಶಯವಿಲ್ಲ. ಇದಕ್ಕೆ ಪೂರಕವಾಗಿ ಮಿರ್ಜಾ ಇಸ್ಮಾಯಿಲರಿಗೆ ಪ್ರಿಯರಾಗಲು ಸ್ವಾತಂತ್ರ್ಯ ಚಳವಳಿಯ ಬಗ್ಗೆ ಕೊಂಗಾಡಿಯಪ್ಪನವರು ತಟಸ್ಥ / ಸ್ತಬ್ಧರಾಗಿದ್ದುದು ಕಂಡುಬರುತ್ತದೆ. ರಾಷ್ಟ್ರೀಯ

ಚಳವಳಿಗಾಗಲೀ, ಕಾಂಗ್ರೆಸ್ ಪಕ್ಷಕ್ಕಾಗಲೀ ಎಲ್ಲೂ ಮುಖಾಮುಖಿಯಾದದ್ದು ಕಂಡುಬರುವುದಿಲ್ಲ. ಕಾಂಗ್ರೆಸ್ ಹೋರಾಟದ ಬಗ್ಗೆ ಅವರು ವ್ಯಕ್ತಿಪಡಿಸಿದ ನಿಲುವಿನ ಹೊರತಾಗಿಯೂ ಮಿರ್ಜಾ ಇಸ್ಮಾಯಿಲ್ ಮತ್ತು ಅರಸೊತ್ತಿಗೆಯ ಬಗೆಗಿನ ಅವರ ನಿಷ್ಠೆ, ಊರಿನ ಅಭಿವೃದ್ಧಿಯ ಬಗ್ಗೆಗಿನ ಅವರ ಕಾಳಜಿ ಅಸದೃಶ್ಯ ಅನುಪಮವಾದದ್ದು. ಇವೆಲ್ಲ ಗುಣಗಳ ಹಿನ್ನೆಲೆಯಲ್ಲಿ ನೋಡಿದಾಗ ಅವರೊಬ್ಬ ಮುತ್ಸದ್ದಿ ಎನ್ನಿಸದೇ ಇರುವುದಿಲ್ಲ.



ಮಿರ್ಜಾ ಇಸ್ಮಾಯಿಲ್

ಅವರ ಈ ಮುತ್ಸದ್ಧಿತನದಿಂದಾಗೇ 1926 ರಲ್ಲಿ ಮಿರ್ಜಾರವರು ದಿವಾನ್ ಪದವಿಗೆ ಬಂದತಕ್ಷಣ ಕೊಂಗಾಡಿಯಪ್ಪನವರು ಇಲ್ಲಿನ ಪುರಸಭೆಯ ಪ್ರಪ್ರಥಮ ಅಧ್ಯಕ್ಷರಾಗಿ ಆಯ್ಕೆಯಾದರು. 1928 ರಲ್ಲಿ ಮೈಸೂರು ಸಂಸ್ಥಾನದಲ್ಲಿ ಎರಡು ಪುರಸಭಾ ಪ್ರೌಢಶಾಲೆಗಳನ್ನು ತೆರೆಯಲು ಸರ್ಕಾರ ಅನುಮತಿ ನೀಡಿತು. ಇವುಗಳಲ್ಲಿ ಒಂದು ಶಾಲೆಯನ್ನು ಕೊಂಗಾಡಿಯಪ್ಪನವರು ಮಿರ್ಜಾ ಸಾಹೇಬರಿಗೆ ಹೇಳಿ ತಮ್ಮ ಊರಿಗೆ ಮಂಜೂರು ಮಾಡಿಸಿಕೊಂಡರು. ಅದೇ ಇಂದಿನ ಸರ್ಕಾರಿ ಪ್ರೌಢಶಾಲೆ (ಸರ್ಕಾರಿ ಜೂನಿಯರ್ ಕಾಲೇಜ್). ಮರುವರ್ಷ ಅಂದರೆ 1929 ರಲ್ಲಿ ಮತ್ತೆ ಮಿರ್ಜಾರವರು ಇದೇ ಕೊಂಗಾಡಿಯಪ್ಪನವರನ್ನು ಬೆಂಚ್‌ಕೋರ್ಟಿಗೆ ಅಧಿಕಾರೇತರ ಅಧ್ಯಕ್ಷರನ್ನಾಗಿ ಸುಮಾರು ನಾಲ್ಕು ವರ್ಷಗಳ ಕಾಲ ನೇಮಿಸುತ್ತಾರೆ. ಮಿರ್ಜಾ ಸಾಹೇಬರ ಕಾಲದಲ್ಲೇ ಅಂದರೆ 1932ರಲ್ಲೇ ದೊಡ್ಡಬಳ್ಳಾಪುರಕ್ಕೆ ವಿದ್ಯುಚ್ಛಕ್ತಿ ಬಂತು. ಇದರ ಉದ್ಘಾಟನೆಗೆ ಆಗಿನ ಯುವರಾಜರಾದ ನರಸಿಂಹರಾಜ ಒಡೆಯರ್ ಅವರು ಆಗಮಿಸಿದ್ದರು. ಈ ರೀತಿಯ ವಿದ್ಯುದ್ದೀಪ ಬಂದ ತಾಲ್ಲೂಕುಗಳಲ್ಲಿ ದೊಡ್ಡಬಳ್ಳಾಪುರವೇ ಮೈಸೂರು ಸಂಸ್ಥಾನಕ್ಕೆ ಎರಡನೆಯದು. ಇಲ್ಲಿನ ರುಮಾಲೆಛತ್ರದ ಬಳಿಯಿರುವ ಗಣೇಶನ ಗುಡಿಯಲ್ಲಿ ಮೊಟ್ಟ ಮೊದಲಬಾರಿಗೆ ವಿದ್ಯುತ್ ದೀಪವನ್ನು ಹೊತ್ತಿಸಲಾಯಿತು. ಬೆಳೆಯುತ್ತಿದ್ದ ನಗರಕ್ಕೆ ವಿದ್ಯುತ್ ದೀಪವನ್ನು ಒದಗಿಸುವ ಸಲುವಾಗಿ ನಗರದಾದ್ಯಂತ ಮರದ ಕಂಬಗಳನ್ನು ನೆಟ್ಟು ತಂತಿಗಳನ್ನೆಳೆಯಲಾಯಿತು. ಇದಕ್ಕೆ ಮುಂಚೆ ರಸ್ತೆಗಳಲ್ಲಿ ಅಲ್ಲಲ್ಲಿ ನಟ್ಟಿದ್ದ ಕಂಬಗಳ ಮೇಲೆ ಸೀಮೆಎಣ್ಣೆ ಲಾಂದ್ರಗಳನ್ನಿಟ್ಟು ಪ್ರತಿದಿನವೂ ಎಣ್ಣೆಹಾಕಿ ದೀಪಹಚ್ಚುತ್ತಿದ್ದರು. ಮುನಿಸಿಪಾಲಿಟಿಯ ಆಳುಗಳು ಈ ಕೆಲಸವನ್ನು ಮಾಡುತ್ತಿದ್ದರು. ವಿದ್ಯುಚ್ಛಕ್ತಿ ಬಂದ ನಂತರ ದಿವಾನರು ಕೊಳವೆ ಬಾವಿಗೂ ಹಣ ಮಂಜೂರು ಮಾಡಿದರು. ಇದರಿಂದಾಗಿ ಊರಿಗೆ ಕೊಳವೆಬಾವಿ ನೀರು ಸರಬರಾಜಾಯಿತು. ಇದಕ್ಕೂ ಮುನ್ನ ಸೇದುವ ಬಾವಿಗಳಿಂದ ನೀರು ತರಬೇಕಾಗಿತ್ತು. ಊರಿಗೆ ವಿದ್ಯುತ್ ಬಂದಕೂಡಲೇ ಅಂದರೆ 1932ರಲ್ಲೇ ವಿದ್ಯುತ್‌ಚಾಲಿತ ಮಗ್ಗಗಳು ಬಂದು ಕಾರ್ಯನಿರ್ವಹಿಸತೊಡಗಿದವು. ಮಿರ್ಜಾ ಅವರ

ಕಾಲದಲ್ಲಿ ಬೆಂಗಳೂರಿಗೆ ಸಾರಿಗೆ ಬಸ್ ಬಂದಂತೆ ದೊಡ್ಡಬಳ್ಳಾಪುರಕ್ಕೂ ಬಸ್‌ಗಳು ಬಂದವು. ಈ ಹೊಸವಾಹನ ಬಂದಿದ್ದರಿಂದ ಜಟಕಾ ವ್ಯಾಪಾರಿಗಳಿಗೆ ಆದಾಯ ಕಡಿಮೆಯಾಯಿತು. ಇದಕ್ಕೆಲ್ಲಾ ದಿವಾನರೇ ಕಾರಣರೆಂದು ಜಟಕಾಜನ ಕೂಗಾಡಿದ್ದರಂತೆ.

ಅದೇ ರೀತಿಯಾಗಿ ದೊಡ್ಡಬಳ್ಳಾಪುರದಲ್ಲಿ ಮಿರ್ಜಾರವರ ಕಾಲದಲ್ಲಿ ಆದ ಇನ್ನೊಂದು ಬೆಳವಣಿಗೆಯೆಂದರೆ ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆ ಕಟ್ಟಡ ನಿರ್ಮಾಣ (1934). ಇದನ್ನು ಅವರು ದಾನಿಗಳಾದ ಶಾಂಪೂರ್ ಪಾಪಣ್ಣನವರ ಮುಖಾಂತರ ಮಾಡಿಸಿದರು. 1937 ರಲ್ಲಿ ಮಿರ್ಜಾರವರು ಕೊಂಗಾಡಿಯಪ್ಪನವರನ್ನು ಸರ್ಕಾರದಿಂದ ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಾಲಯ ಮತ್ತು ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯದ ಧರ್ಮದರ್ಶಿಗಳನ್ನಾಗಿ ನೇಮಕ ಮಾಡಿದರು. ಅಲ್ಲದೆ ಜಿಲ್ಲಾಬೋರ್ಡು, ತಾಲ್ಲೂಕು ಬೋರ್ಡುಗಳ ಸದಸ್ಯರನ್ನಾಗಿಯೂ ನೇಮಿಸಲಾಯಿತು. 1940ರಲ್ಲಿ ಆಲಂಪಲ್ಲಿ ಸಿದ್ಧಪ್ಪಶೆಟ್ಟರ ಮೂಲಕ ಪಶು ವೈದ್ಯಶಾಲೆ (ಆಸ್ಪತ್ರೆ)ಯನ್ನು ನಿರ್ಮಿಸಲಾಯಿತು.

ಕೊಂಗಾಡಿಯುಪ್ಪ ಮತ್ತು ಮಿರ್ಜಾ ಇಸ್ಮಾಯಿಲರ ಸಂಬಂಧ ಎಷ್ಟು ಗಟ್ಟಿಯಾಗಿತ್ತೆಂಬುದಕ್ಕೆ ಇನ್ನೊಂದು ಘಟನೆಯನ್ನು ದಾಖಲಿಸುವ ಮೂಲಕ ಸ್ಪಷ್ಟಪಡಿಸಬಹುದು. ಆ ಘಟನೆ ಹೀಗಿದೆ. ಕೊಂಗಾಡಿಯಪ್ಪನವರು ಒಮ್ಮೆ ಮಹಾರಾಜರಿಗೆ ಹೀಗೆ ಕಾಗದ ಬರೆಯುತ್ತಾರೆ. "ಮಹಾಸ್ವಾಮಿ ಪ್ರತೀವರ್ಷ ಮೈಸೂರಿನಲ್ಲಿ ದಸರಾಹಬ್ಬ ಬಹಳ ವಿಜೃಂಭಣೆಯಿಂದ ಜರುಗುತ್ತಿದೆ. ನಮ್ಮೂರಿಂದ ಯಾರೋ ಕೆಲವು ಶ್ರೀಮಂತ ಜನರು ಮಾತ್ರ ಬಂದುನೋಡಿ ಕಣ್ತುಂಬಿಸಿಕೊಳ್ಳುತ್ತಾರೆ. ಆ ಸಂಭ್ರಮವನ್ನು ನೋಡುವ ಭಾಗ್ಯ ಎಲ್ಲರಿಗೂ ಇಲ್ಲ. ಜನರಿಗೆ ದೇವರ ಸಮಾನರಾದ ತಮ್ಮ ದರ್ಶನಭಾಗ್ಯ ಲಭಿಸಬೇಕು. ತಾವು ಕೃಪೆಮಾಡಿ ಒಂದು ಸಾರಿ ನಮ್ಮೂರಲ್ಲಿ ತಮ್ಮ ಮೆರವಣಿಗೆ ಏರ್ಪಾಡು ಮಾಡಿಸಬೇಕು". ಮಹಾರಾಜರು ಕೊಂಗಾಡಿಯಪ್ಪನವರ ಮನವಿಯನ್ನು ನಯವಾಗಿ ತಿರಸ್ಕರಿಸುತ್ತಾರೆ. ಆದರೆ ಕೊಂಗಾಡಿಯಪ್ಪನವರು ಮಿರ್ಜಾ ಇಸ್ಮಾಯಿಲರ ಮುಖಾಂತರ ಮತ್ತೊಮ್ಮೆ ಮನವಿ ಮಾಡುತ್ತಾರೆ. ಈಗ ಮಹಾರಾಜರು ಇಲ್ಲವೆನ್ನದೆ ಯುವರಾಜರನ್ನು ಕಳುಹಿಸಿಕೊಡುತ್ತಾರೆ. ಸೈನ್ಯಸಮೇತ ಯುವರಾಜರು ಊರಿಗೆ ಬಂದು ತೆರೆದ ಕಾರಿನಲ್ಲಿ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ, ಜನರಿಗೆ ದರ್ಶನಭಾಗ್ಯ ನೀಡುತ್ತಾರೆ.

ಒಟ್ಟಾರೆಯಾಗಿ, ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ಮಿರ್ಜಾ ಇಸ್ಮಾಯಿಲ್ ಜೊತೆಯ 15 ವರ್ಷಗಳ ಆಳ್ವಿಕೆ ಮೈಸೂರು ಸಂಸ್ಥಾನದಂತೆಯೇ ದೊಡ್ಡಬಳ್ಳಾಪುರದ ಚರಿತ್ರೆಯ ದೃಷ್ಟಿಯಿಂದಲೂ ಮಹತ್ವದ ಕಾಲ. ಊರಿನ ಇಂದಿನ ಸ್ಥಿತಿಗತಿಗೆ ಈ 15 ವರ್ಷಗಳದೇ ನಿರ್ಣಾಯಕ ಪಾತ್ರ. ಊರಿನ ಭವಿಷ್ಯ ನಿರ್ಮಾಣಗೊಂಡಿದ್ದೇ ಈ 15 ವರ್ಷಗಳಲ್ಲಿ ಎಂಬುದು ಗಮನೀಯ. ಈ 15 ವರ್ಷಗಳನ್ನು ಊರಿನ ಜನೋಪಕಾರಿ ಕೆಲಸಗಳಿಗೆ ಬಳಸಿಕೊಂಡಿದ್ದು, ಊರನ್ನು ಅಭಿವೃದ್ಧಿ ಪಥದತ್ತ ತಂದಿದ್ದು ಮಾತ್ರ ಕೊಂಗಾಡಿಯಪ್ಪ ಎಂಬುದೂ ಅಷ್ಟೇ ವಾಸ್ತವ.

ಕಾಂಗ್ರೆಸ್ಸಿನ ಶಿವಪುರ ಧ್ವಜಸತ್ಯಾಗ್ರಹ, ವಿದುರಾಶ್ವತ್ಥ ದುರಂತ, ಅರಣ್ಯ ಚಳವಳಿ ಮತ್ತು ಚುನಾವಣೆಗಳಲ್ಲಿ ಕಾಂಗ್ರೆಸ್ ಬಾರಿಸಿದ ಜಯಭೇರಿಗಳು ಮಿರ್ಜಾರವರನ್ನು ಕ್ರುದ್ಧರನ್ನಾಗಿಸಿದಂತೆ ಕೊಂಗಾಡಿಯಪ್ಪನವರನ್ನೂ ಕಾಡಿದ್ದವು. ಏಕೆಂದರೆ

ಮಿರ್ಜಾರವರೊಂದಿಗೆ ಅಂತಹ ಸಂಬಂಧವಿತ್ತು ಅವರಿಗೆ. ಮಿರ್ಜಾ ಅವರು ಯಾವುದೇ ಜನತಾಂತ್ರಿಕ ಪ್ರತಿಭಟನೆಯನ್ನು ಗೂಂಡಾಗಿರಿ ಎಂದೇ ಜರಿಯುತ್ತಿದ್ದರು. ಅಂತೆಯೇ ಕೊಂಗಾಡಿಯಪ್ಪನವರು ಮಹಾರಾಜರ ಮತ್ತು ಮಿರ್ಜಾ ಅವರ ಅಧಿಕಾರವನ್ನು ಪ್ರಶ್ನಿಸುವ ಯಾರನ್ನೂ ಸಹಿಸುತ್ತಿರಲಿಲ್ಲ. ಜನರಲ್ಲಿ ಬೆಳೆಯುತ್ತಿದ್ದ ಸ್ವಾತಂತ್ರ್ಯ ಚಳವಳಿಯ ಆಶಯಗಳ ಬಗ್ಗೆ ಕೊಂಗಾಡಿಯಪ್ಪನವರಿಗೆ ಯಾವುದೇ ರೀತಿಯ ಸಹಾನುಭೂತಿಯಿರಲಿಲ್ಲ ಎಂಬುದೂ ಗಮನಾರ್ಹ. ಕಡೆಯವರೆಗೂ ಅವರು ಹಾಗೇ ಇದ್ದರೂ ಕೂಡ.

ಕಡೆಯದಾಗಿ ಒಂದು ಮಾತು. ಮಿರ್ಜಾ ಇಸ್ಮಾಯಿಲ್ಲರಿಗೆ ಸ್ಥಳೀಯ ರಾಜಕೀಯ ಮತ್ತು ಸ್ವಾತಂತ್ರ್ಯ ಚಳವಳಿಯಿಂದ ದೂರವಿರುವ, ಆದರೆ ಅದರ ಬಗ್ಗೆ ಪೂರ್ಣ ಅರಿವಿರುವ, ಹಾಗೂ ಮಹಾರಾಜರು ಮತ್ತು ದಿವಾನರ ಹಿತಾಸಕ್ತಿಯ ಮೂಲಕ ಊರಿನ ಹಿತವನ್ನು ಕಾಯಬಲ್ಲ, ಸರ್ಕಾರದೊಂದಿಗೆ ಸೂಕ್ತವಾಗಿ ವ್ಯವಹರಿಸಬಲ್ಲ, ಬೆಳೆಯುತ್ತಿದ್ದ ರಾಷ್ಟ್ರೀಯವಾದಿ ಹೋರಾಟವನ್ನು ಸಾಧ್ಯವಾದರೆ ನಿಯಂತ್ರಿಸುತ್ತಾ, ನಿಭಾಯಿಸಿಕೊಂಡು ಮುನ್ನಡೆಯಬಲ್ಲ ಮುತ್ಸದ್ದಿತನವಿದ್ದ ಸ್ಥಳೀಯ ಜನರ / ನಾಯಕರ ನೆರವು ಅತ್ಯಾವಶ್ಯಕವಾಗಿತ್ತು. ಈ ಹಿನ್ನೆಲೆಯಲ್ಲಿ ದಿವಾನ್ ಮಿರ್ಜಾ ಇಸ್ಮಾಯಿಲ್ ಅವರ ಕಣ್ಣಿಗೆ ಗೋಚರವಾದವರು ಕೊಂಗಾಡಿಯಪ್ಪ ಎಂಬುದು ಗಮನಾರ್ಹ. ಈ ವಿಚಾರಗಳೆಲ್ಲಾ ರಾಜಕೀಯ ಮೇಲಾಟದಲ್ಲಿ ಮೇಲ್ನೋಟಕ್ಕೆ ಕಾಣಿಸುವುದೇ ಇಲ್ಲ. ಹೊಸ ಪರಿಭಾಷೆಯಲ್ಲಿ ಸಮಕಾಲೀನ ರಾಜಕೀಯ, ಸಾಮಾಜಿಕ ಮತ್ತು ಆಂತರಿಕ ವಿದ್ಯಮಾನಗಳು, ಒತ್ತಡಗಳ ಕಕ್ಷೆಯ ಆಳಕ್ಕಿಳಿದಾಗ ಮಾತ್ರ ಗೋಚರವಾಗುತ್ತವೆ. ಹಾಗೆಯೇ ಈ ಒಳಸೂಕ್ಷ್ಮಗಳೆಲ್ಲಾ ಕೊಂಗಾಡಿಯಪ್ಪನವರಿಗೆ ತಿಳಿದಿರಲಿಲ್ಲವೆಂದರೂ ತಪ್ಪಾಗುತ್ತದೆ. ಅವರಿಗೆ ಎಲ್ಲವೂ ತಿಳಿದಿತ್ತು. ಊರಿಗೆ, ಊರ ಜನರಿಗೆ ಗರಿಷ್ಠ ಮಟ್ಟದಲ್ಲಿ ಅನುಕೂಲವಾಗಲೆಂದು ಈ ನಿಟ್ಟಿನಲ್ಲಿ ತಟಸ್ಥ ನೀತಿಯನ್ನು ಅನುಸರಿಸಿದರು ಎಂಬುದು ಗಮನೀಯ. ಈ ಆಯಕಟ್ಟಿನ ಪರಿಸ್ಥಿತಿಯನ್ನು ಕೊಂಗಾಡಿಯಪ್ಪ ಊರಿಗೋಸ್ಕರವಾಗಿ ಸಮರ್ಥವಾಗಿ ಬಳಸಿಕೊಂಡರು. ಇದಕ್ಕೆ ಸಮಕಾಲೀನ ಜನರ ನೈತಿಕ ಬೆಂಬಲವೂ ಇರದಿರಲಿಲ್ಲ.

ಕೊಂಗಾಡಿಯಪ್ಪ ಮತ್ತು ಅಸ್ಪೃಶ್ಯರು

ಸಾಮಾಜಿಕ ಕಳಂಕಗಳನ್ನು ಕಾರುಣ್ಯದ ನೆಲೆಯಲ್ಲಿ ನೋಡುತ್ತ, ಅವುಗಳ ವಿರುದ್ಧ ಹರಿಹಾಯದೆ, ಬದಲಾವಣೆಯ ಸಮಯಕ್ಕಾಗಿ ಕಾದುಕುಳಿತವರು ಕೊಂಗಾಡಿಯಪ್ಪನವರು. ಅಂದರೆ 'ಸಾಮಾಜಿಕ ಕ್ರಾಂತಿ' ಅವರ ಆದ್ಯತೆಯಾಗಲಿಲ್ಲ. ಹಾಗೆಂದು ಅವರು ಸಾಮಾಜಿಕ ಬದಲಾವಣೆಯನ್ನು ಬಯಸದೇ ಇರಲಿಲ್ಲ. ಹೀಗೆ ಹೇಳುತ್ತಾ ಹೋದರೆ ಕೊಂಗಾಡಿಯಪ್ಪನವರು ವಿಘಟಿತ ಅಥವಾ ದ್ವಂದ್ವಮೂಲ ವ್ಯಕ್ತಿತ್ವ ಎಂದು ತೀರ್ಮಾನಿಸುವ ಸಾಧ್ಯತೆಯುಂಟು.

ಕೊಂಗಾಡಿಯಪ್ಪನವರ ಹೆಗ್ಗಳಿಕೆಯೆಂದರೆ ಗಾಂಧೀಜಿಯವರು ಅಸ್ಪೃಶ್ಯತೆಯ ವಿರುದ್ಧ ಹೋರಾಟ ಪ್ರಾರಂಭಿಸುವ ಮೊದಲೇ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾದುದು. ಬಹಿಷ್ಕೃತರು ಏಳಿಗೆ ಹೊಂದಬೇಕಾದರೆ ಅಸ್ತಿತ್ವದಲ್ಲಿರುವ ಹಲವಾರು ಸಾಮಾಜಿಕ ಅನಿಷ್ಟಗಳ ನಿರ್ಮೂಲನೆ ಅತ್ಯವಶ್ಯಕವೆಂದು ಅವರು ಮನಗಂಡಿದ್ದರು. ಬ್ರಾಹ್ಮಣನಿರಲಿ, ಮಾದಿಗನಿರಲಿ ಅವರಿಗೆ ಎಲ್ಲರೂ ಒಂದೇ. ಅವರು ತಮ್ಮ ಮನೆಯಲ್ಲೇ ಹರಿಜನರಿಗೆ ಪಾಠ ಹೇಳಿಕೊಡುತ್ತಿದ್ದುದು ಗಮನಾರ್ಹ. ಹರಿಜನ ಕೇರಿಗಳಿಗೆ ಭೇಟಿನೀಡಿ ಸ್ವಚ್ಛತೆಯ ಬಗ್ಗೆ ಅವರಿಗೆ ತಿಳಿಹೇಳುತ್ತಿದ್ದರು.

ಹೀಗೆ ಅವರು ತಮ್ಮದೇ ಆದ ನೆಲೆಯೊಂದರಲ್ಲಿ ಈ ಜಾತಿಯ ಕಂದರಗಳನ್ನು ದಾಟುತ್ತಾ ಈ ಬೃಹತ್ ಸಮಸ್ಯೆಗೆ ಸ್ಪಂದಿಸಿದ್ದು ಒಂದು ಮಹತ್ವದ ಸಂಗತಿ. ಕೊಂಗಾಡಿಯಪ್ಪನವರು ನಮಗೆ ಅಸಾಮಾನ್ಯರಾಗುವುದು ಸಾಮಾನ್ಯರ ಬಗೆಗಿನ ಪ್ರಾಮಾಣಿಕ ಕಾಳಜಿಯಿಂದ. ದುರ್ಬಲವರ್ಗದವರ ಬಗೆಗೆ ಅವರಿಗಿದ್ದ ಕಳಕಳಿಯಿಂದ. ಊರಲ್ಲಿ ಹಿಂದುಳಿದ, ದಲಿತ, ಅಸ್ಪೃಶ್ಯ, ಪಂಚಮರಿಗೆ ಜೀವಚೈತನ್ಯ ಕೊಟ್ಟ ಕೊಂಗಾಡಿಯಪ್ಪನವರ ಧೀಮಂತಿಕೆ ನನ್ನಮಟ್ಟಿಗೆ ಪ್ರಶ್ನಾತೀತ. ಅವರು ತಮಗೆ ಲಭ್ಯವಿದ್ದ ಅವಕಾಶಗಳನ್ನು ಬಳಸಿಕೊಂಡು ಅತ್ಯಂತ ಪ್ರಾಮಾಣಿಕ ಕಳಕಳಿಯಿಂದ ಹಿಂದುಳಿದ ವರ್ಗಗಳಿಗೆ ಸ್ಥಾನಮಾನ ಮತ್ತು ಸವಲತ್ತುಗಳನ್ನು ಕಲ್ಪಿಸಿಕೊಟ್ಟರು ಮತ್ತು ಅವರನ್ನು ಮುಖ್ಯಧಾರೆಗೆ ಎಳೆದುತಂದರು ಎಂಬುದು ಸುಸ್ಪಷ್ಟ.

ಕೊಂಗಾಡಿಯಪ್ಪನವರ ದಿನಚರಿಗಳು

ಕೊಂಗಾಡಿಯಪ್ಪನವರು ಊರಲ್ಲಿ ತಾವು ಕೇಳಿದ, ತಿಳಿದು ಬಂದ ವಿಚಾರಗಳನ್ನೂ, ಘಟನೆಗಳನ್ನೂ, ಅವುಗಳ ಮೇಲಿನ ತಮ್ಮ ಪ್ರತಿಕ್ರಿಯೆಗಳನ್ನೂ, ದಿನಪತ್ರಿಕೆಗಳಲ್ಲಿ ಬರುತ್ತಿದ್ದ ವರದಿ, ವಿಚಾರಗಳನ್ನು ಸೇರಿಸಿ ದಿನಚರಿಯನ್ನು ಬರೆಯುತ್ತಿದ್ದರು. ಈ ಅವಿರತ ಕೆಲಸ ಸುಮಾರು 50 ವರ್ಷಗಳ ಕಾಲ ನಡೆದಿದೆ. ಹೀಗೆ ತಯಾರಾದ ಅನೇಕ ಸಂಪುಟಗಳು ಈಗ ಬೆಂಗಳೂರಿನ ಬಸವನಗುಡಿಯ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿವೆ. ದೊಡ್ಡಬಳ್ಳಾಪುರದ ಸ್ವಾತಂತ್ರ್ಯಪೂರ್ವ ಚರಿತ್ರೆಯನ್ನು ಅಭ್ಯಸಿಸುವವರಿಗೆ ಅವು ಅತಿಮುಖ್ಯ ಆಕರಗಳಾಗಿವೆ. ಅಲ್ಲದೆ ಈ ಪಟ್ಟಣದಲ್ಲಾದ ಅನೇಕ ರಾಜಕೀಯ ಮತ್ತು ಸಾಮಾಜಿಕ ಅಸ್ಮಿತೆಯ ಒಳಸುಳಿಗಳ ಅಧ್ಯಯನಕ್ಕೂ ನೆರವಾಗುತ್ತವೆ. ಇಲ್ಲಿನ ಸಾಂಸ್ಕೃತಿಕ ಬೇರುಗಳನ್ನು ಗ್ರಹಿಸಲು ಕೂಡ ಇವು ಮಹತ್ವದ ಸೂಚಿಗಳಾಗಬಲ್ಲವು.

ಯಾವುದೇ ಬದಲಾವಣೆಯು ಒಬ್ಬ ವ್ಯಕ್ತಿಯಿಂದಷ್ಟೇ ಸಾಧ್ಯವಾಗುವುದಿಲ್ಲ ಅಥವಾ ನಿರ್ಮಾಣಗೊಳ್ಳುವುದಿಲ್ಲ. ಆ ಕಾಲಘಟ್ಟದ ಮನೋವೈಖರಿ ಸಮಾಜದ ಜೊತೆಗಿನ ಸಂಘರ್ಷದಿಂದ ಉಂಟಾಗುವ ಮಂಥನದ ಮೂಲಕ ಚಿಮ್ಮುವ ಕಾರಂಜಿಯಾಗಿ ಆ ಸಮಯದಲ್ಲಿ ಉಂಟಾಗುವ ಅಭಿವೃದ್ಧಿ ಸಾಧನೆಗಳ ಸ್ವರೂಪವನ್ನು ಪಡೆಯುತ್ತವೆ. ಅಲ್ಲಿ ಕಂಡುಬರುವ ಪ್ರಧಾನ ವ್ಯಕ್ತಿಗಳು ಜರುಗುವ ಘಟನಾವಳಿಗಳಿಗೆ ಕ್ರಿಯಾಧಾತುವಾಗಿ ಮಾತ್ರ ಪರಿಣಮಿಸಬಹುದು. ಈ ಹಿನ್ನೆಲೆಯಲ್ಲಿ ದೊಡ್ಡಬಳ್ಳಾಪುರದ ಮಟ್ಟಿಗೆ ಕೊಂಗಾಡಿಯಪ್ಪನವರು ನಮಗೆ ಮುಖ್ಯರಾಗುತ್ತಾರೆ. ಒಬ್ಬವ್ಯಕ್ತಿಯ ಕಾಲಾವಧಿಯಲ್ಲಿ ಒಂದೂರು ಇಷ್ಟೆಲ್ಲಾ ಸ್ಥಿತ್ಯಂತರಗಳನ್ನು, ಬೆಳವಣಿಗೆಯನ್ನು ಕಂಡಿತು ಎಂಬುದೂ ಗಮನಾರ್ಹ. ಇದಕ್ಕಾಗಿ ಅವರು ಅತೀವವಾಗಿ ಶ್ರಮಿಸಿದ ಪರಿಯೂ ಉಲ್ಲೇಖಾರ್ಹ.

ಯಾವುದೇ ಪ್ರಗತಿಯ ನಡೆಗೆ, ಸಮಾಜದ ಬದಲಾವಣೆಗಳಿಗೆ ಸರ್ಕಾರ ಹಾಗೂ ನಾಯಕತ್ವದ ನಿಲುವು, ದೃಷ್ಟಿ, ಕನಸು ಬಹುಮುಖ್ಯವಾದ ಕಾರಣಗಳಾಗಿರುತ್ತವೆ. ನಾವು ಈ ಸಂದರ್ಭದಲ್ಲಿ ಥಾಮಸ್ ಕಾರ್ಲೈಲ್ ಅವರ ಇಂಗಿತವನ್ನು ನೆನಪಿಸಿಕೊಳ್ಳುವುದು ಉಚಿತವೆಂದು ಕಾಣುತ್ತದೆ. ಥಾಮಸ್ ಕಾರ್ಲೈಲ್ ತನ್ನ ಮಹತ್ವದ ಕೃತಿಯಾದ **ಹಿರೋಸ್, ಹಿರೋ ವರ್ಷಿಪ್ ಅಂಡ್ ಹಿರೋಯಿಕ್ಸ್ ಇನ್ ಹಿಸ್ಟರಿಯಲ್ಲಿ** ಒಂದೆಡೆ ಹೇಳುವಂತೆ ಜಗತ್ತಿನ ಬದಲಾವಣೆಗಳಿಗೆ ಹಾಗೂ ಜಗತ್ತಿನಲ್ಲಾಗುವ ಪ್ರಮುಖ ಘಟನಾವಳಿಗಳಿಗೆ ಕೆಲವು ವ್ಯಕ್ತಿಗಳು ಮಾತ್ರ ಕಾರಣರಾಗಿರುತ್ತಾರೆ. ಘಟನೆಗಳನ್ನು ರೂಪಿಸುವಲ್ಲಿ ಕೆಲವು

ವ್ಯಕ್ತಿಗಳ ಪ್ರಭಾವ ಅತ್ಯಾವಶ್ಯಕ. ಈ ಕಾರಣಕ್ಕಾಗಿಯೇ ಕಾರ್ಲೈಲ್ ಚರಿತ್ರೆಯನ್ನು ಮಹಾಪುರುಷರ ಕಥನವೆಂದಿದ್ದಾನೆ. ವಾಸ್ತವವೆಂದರೆ, ಅಂದಿನ ನಾಯಕತ್ವವನ್ನು ವಹಿಸಿಕೊಂಡ ವ್ಯಕ್ತಿಗಳ ಪಾತ್ರ ಎಷ್ಟು ಮುಖ್ಯವೋ ಅಷ್ಟೇ ಪ್ರಮಾಣದಲ್ಲಿ ಅವರುಗಳಿಗೆ ಸ್ಪಂದಿಸುವ ಸಮಾಜವೂ ಮುಖ್ಯವಾಗಿರುತ್ತದೆ. ಬದಲಾವಣೆಗಳಿಗೆ ಸ್ಪಂದಿಸುವ ಸಮಾಜದ ಅಗತ್ಯವೂ ಇಲ್ಲಿ ಬಹುಮುಖ್ಯವಾಗಿ ಕಂಡುಬರುತ್ತದೆ. ಈ ಎರಡೂ ವಲಯಗಳು ಪರಸ್ಪರ ಸ್ಪಂದಿಸಿದಾಗ ಮಾತ್ರ ಸಮಾಜವು ಮಹೋನ್ನತವಾದ ಬದಲಾವಣೆಯ ಕಡೆಗೆ ದಾಪುಗಾಲು ಹಾಕಲು ಸಾಧ್ಯವಾಗುತ್ತದೆ. ದೊಡ್ಡಬಳ್ಳಾಪುರದ ಸಂದರ್ಭದಲ್ಲಿಯೂ ಕೂಡ ಈ ಅಂಶಗಳು ಅಷ್ಟೇ ಪ್ರಸ್ತುತವಾದವು. ಈ ಹಿನ್ನೆಲೆಯಲ್ಲೂ ಕೂಡ ಕೊಂಗಾಡಿಯಪ್ಪನವರು ನಮ್ಮ ಸ್ಮೃತಿಪಟಲದಲ್ಲಿ ಪದೇಪದೇ ಬಂದು ಹೋದರೆ ಆಶ್ಚರ್ಯಪಡಬೇಕಾಗಿಲ್ಲ.

ಆಧುನಿಕ ದೊಡ್ಡಬಳ್ಳಾಪುರದ ಚರಿತ್ರೆಯಲ್ಲಿ ಕೊಂಗಾಡಿಯಪ್ಪನವರು ತಮ್ಮದೇ ಆದ ವಿಶಿಷ್ಟ ಛಾಪನ್ನು ಮೂಡಿಸಿದ್ದಾರೆ. ಅವರನ್ನು ಹೊರತುಪಡಿಸಿ ಆಧುನಿಕ ದೊಡ್ಡಬಳ್ಳಾಪುರದ ಇತಿಹಾಸ ಪೂರ್ಣಗೊಳ್ಳಲಾರದು. ಅವರ ಜೀವನ ಚರಿತ್ರೆಯನ್ನು ಅಭ್ಯಸಿಸುವುದೆಂದರೆ ದೊಡ್ಡಬಳ್ಳಾಪುರದ ಜನಮುಖಿ ಚರಿತ್ರೆಯನ್ನು ಅಭ್ಯಸಿಸಿದಂತೆಯೇ ಸರಿ. ಅಷ್ಟರಮಟ್ಟಿಗೆ ಅವರ ಜೀವನ–ಸಾಧನೆ–ವೈರುಧ್ಯಗಳಲ್ಲಿ ಅದು ಬೆಸೆದುಕೊಂಡಿದೆ. ಅವರ ಸಾಲುಮರ ನೆಡುವ ಕಾಯಕವಾಗಬಹುದು, ವಿದ್ಯಾರ್ಥಿಗಳಿಗೆ ಊಟ–ವಸತಿ ಕಲ್ಪಿಸುವ ಕಾಯಕವಾಗಬಹುದು, ಹರಿಜನರನ್ನು ಮುಖ್ಯಧಾರೆಗೆ ತರುವ ಅವರ ಪ್ರಯತ್ನವಾಗಬಹುದು, ಅವರ ವಿದ್ಯಾಭಿಮಾನವಾಗಬಹುದು ಎಲ್ಲದರಲ್ಲೂ ಊರಿನ ಹಿತದೃಷ್ಟಿಯನ್ನು ಕಂಡವರು. ಮುಖ್ಯಧಾರೆಯಿಂದ ಹೊರತಾದ ತಮ್ಮದೇ ಆದ ವೈಯಕ್ತಿಕವಾದೊಂದು ನೆಲೆಯಲ್ಲಿದ್ದುಕೊಂಡೇ ಸಮಾಜಸೇವೆಯಲ್ಲಿ ಗಂಭೀರವಾಗಿ ತೊಡಗಿಕೊಳ್ಳುತ್ತಾರೆ ಕೊಂಗಾಡಿಯಪ್ಪನವರು. ಆ ಮೂಲಕ ಊರಿನ ಚರಿತ್ರೆಯ ಒಳಸುಳಿಯ ಭಾಗವಾಗುತ್ತಾರೆ.

ಕೊಂಗಾಡಿಯಪ್ಪ–ನಮ್ಮ ಊರಿನ / ನೆಲದ ಬೆಳಕು. ಕ್ರಿಯಾಶೀಲ ಮನಸ್ಸಿನ ಒಂದು ಪ್ರತೀಕ. ಬದಲಾವಣೆಯ ಬಹುದೊಡ್ಡ ರೂಪಕ. ಊರಿನ ಗತಿಯನ್ನೇ ಬದಲಿಸಿದ ದೊಡ್ಡ ಸಾಂದ್ರಶಕ್ತಿ. ಅವರನ್ನು ಬೇರೆಯವರ ಜೊತೆಗಿಟ್ಟು ಹೋಲಿಸುವುದಾಗಲೀ ಅಥವಾ ನೋಡುವ ಪ್ರವೃತ್ತಿಯಾಗಲೀ ಸರಿಯಾದುದಲ್ಲ. ಹಾಗೇನಾದರೂ ಮಾಡಿದಲ್ಲಿ ಅದು ನಮಗೆ ನಾವೇ ಒಡ್ಡಿಕೊಳ್ಳುವ ಒಂದು ಮಿತಿಯಾಗುತ್ತದೆ. ಕೊಂಗಾಡಿಯಪ್ಪ ಸಮಾಜದ ಬಹುಮುಖಿ ಧಾರೆಗಳಲ್ಲಿ ಅನನ್ಯತೆಯನ್ನು ಮೆರೆಯುವುದರ ಜೊತೆಗೆ, ಒಟ್ಟು ಈ ಭಾಗದ ಸಂಸ್ಕೃತಿಯ ಭಾಗವಾಗಿ ಅಂತರ್ಗತಗೊಂಡಿದ್ದಾರೆ. ಇವರ ಕಾಲದಲ್ಲಿ ಊರು ಅನೇಕ ಸ್ಥಿತ್ಯಂತರಗಳಿಗೆ ಒಳಗಾಯಿತು. ಆಗ ನಮ್ಮ ಊರಿನ ಚರಿತ್ರೆಯಲ್ಲಿ ಸಾಮೂಹಿಕ ಕ್ರಿಯಾಶೀಲತೆಗೆ ಕಾರಣರಾದ 'ಕೊಂಗಾಡಿಯಪ್ಪ ಮಾದರಿ' ಮತ್ತೊಮ್ಮೆ ಸಿಗಲಾರದು ಎಂಬಷ್ಟು ಸ್ವಂತಿಕೆಯದು. ಇವರ ಪ್ರಯತ್ನದಿಂದ ಊರಿನಲ್ಲಿ ಕೈಗೂಡಿದ ಕಾರ್ಯಗಳು ಊರಿಗೆ ಮುಂದಿನ ಬೌದ್ಧಿಕ ಹಿನ್ನೆಲೆ ಮತ್ತು ಪ್ರೇರಣೆಯನ್ನು ಒದಗಿಸಿದವು. ಅಂತೆಯೇ ಸ್ವಾತಂತ್ರ್ಯ ಹೋರಾಟ ತೀವ್ರತೆಯನ್ನು ಪಡೆದುಕೊಂಡಿದ್ದರ ಹಿನ್ನೆಲೆಯಲ್ಲಿ ಅವರು ಅನುಭವಿಸಿದ, ಎದುರಿಸಿದ ಆತಂಕಗಳು, ತಳಮಳಗಳು, ತಲ್ಲಣಗಳು, ಅವರ ಅಸ್ಮಿತೆಯ ಆಲೋಚನೆಗಳೂ ಬಹಳ ಮುಖ್ಯವಾಗುತ್ತವೆ. ಅವರನ್ನು ಕುರಿತು ಚರ್ಚಿಸುವಾಗ ಈ

ಅಂಶಗಳನ್ನು ಖಂಡಿತ ಮರೆಯಲಾಗದು. ಅವರು ಸತ್ತಾಗಲೇ ಊರಿನ ಹೊಸ ಆಯಾಮದ ಅಧ್ಯಾಯ ಮುಗಿದಿತ್ತು. ಆದರೂ ಕೊಂಗಾಡಿಯಪ್ಪನವರಿಗೆ ಅವರನ್ನು ನೋಡದವರೊಂದಿಗೂ ಸಹ ಭಾವನಾತ್ಮಕ ಸಂಬಂಧವಿದೆ. ಈ ಸಂಬಂಧವೇ ಈ ಕ್ಷಣಕ್ಕೂ ನಮ್ಮನ್ನು ಭಾವುಕರನ್ನಾಗಿಸುತ್ತದೆ. ಈ ನಮ್ಮ ಭಾವುಕತೆಯ 'ಕಣ್ಣೀರು' ತುಂಬಿದ ಕಣ್ಣಿನಲ್ಲಿ ಕೊಂಗಾಡಿಯಪ್ಪ ನವರು ಇನ್ನೂ ಬದುಕಿದ್ದಾರೆ. ಅವರ ಆರೋಗ್ಯಕರ ನಿಲುವುಗಳನ್ನು ಒಳಗೊಂಡು, ಮೀರುವ ಮುನ್ನೋಟ ಮತ್ತು ಕ್ರಿಯಾಶಕ್ತಿಯೇ ಅವರ ಸಾರ್ಥಕ ಸ್ಮರಣೆಯಾಗಬೇಕು.

ಆಕರ ಸೂಚಿ

- ಎಸ್. ವೆಂಕಟೇಶ್, 2016, **ದೊಡ್ಡಬಳ್ಳಾಪುರ ಚಾರಿತ್ರಿಕ ಅಧ್ಯಯನ,** ದೃಶ್ಯ ಪ್ರಕಾಶನ, ಸೋಮೇಶ್ವರ ಬಡಾವಣೆ, ದೊಡ್ಡಬಳ್ಳಾಪುರ.
- ದೇ.ನಾ.ಶ್ರೀ ಮತ್ತು ಎಂ. ವಿಶ್ವನಾಥ್ (ಸಂ,), 1992, **ಲೋಕಸೇವಾನಿರತ, ಡಿ. ಕೊಂಗಾಡಿಯಪ್ಪ,** ಲೋಕಸೇವಾನಿರತ ಡಿ. ಕೊಂಗಾಡಿಯಪ್ಪ ಸ್ಮಾರಕ ಗ್ರಂಥ ಸಮಿತಿ, ವಸಂತನಗರ, ಬೆಂಗಳೂರು.
- **ಕೊಂಗಾಡಿಯಪ್ಪನವರ 60 ವರ್ಷಗಳ ಅಪ್ರಕಟಿತ ದಿನಚರಿ, ಸಂಪುಟ 1 ಮತ್ತು 2,** ಸಂಗ್ರಹ: ಶ್ರೀಕೊಂಗಾಡಿಯಪ್ಪ ಪದವಿ ಕಾಲೇಜು ಗ್ರಂಥಾಲಯ, ದೊಡ್ಡಬಳ್ಳಾಪುರ.
- ಕೊಂಗಾಡಿಯಪ್ಪನವರು 1918–19 ರಲ್ಲಿ ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ತಮ್ಮ ಸೇವಾ ಚಟುವಟಿಕೆಗಳ ಬಗ್ಗೆ ನೀಡಿರುವ ವರದಿ.
- ಊರಿನ ಅನೇಕ ಹಿರಿಯರೊಂದಿಗೆ ನಡೆಸಿದ ಸಂವಾದ–ಸಮಾಲೋಚನೆ.

■

ಮಯೂರ ಸಿನಿಮಾದ ಚಾರಿತ್ರಿಕ ವಿಶ್ಲೇಷಣೆ : ಡಾ. ರಾಜ್‌ಕುಮಾರ್ ಅಸ್ಮಿತೆ *

ಸಿನಿಮಾಕ್ಕೆ ಒಂದಲ್ಲ ಒಂದು ರೀತಿಯಲ್ಲಿ ಸಾಹಿತ್ಯದ ಸಂಬಂಧ ಇರುತ್ತದೆ. ಇದು ಸ್ವತಂತ್ರ ಸಾಹಿತ್ಯ ಕೃತಿಯಾಗಬಹುದು ಅಥವಾ ಸಿನಿಮಾಕ್ಕೆಂದೆ ಸಿದ್ಧವಾದ ಸಾಹಿತ್ಯವಾಗಬಹುದು. ಸಿನಿಮಾಕ್ಕೆ ತನ್ನದೆ ಆದ ಒಂದು ಕಥೆಯು ಮುಖ್ಯವಾಗಿರುವುದರಿಂದ ಎಲ್ಲಾ ಸಿನಿಮಾಗಳಿಗೂ ಸಾಹಿತ್ಯ ಅಗತ್ಯವಾಗಿ ಬೇಕು. ಕೆಲವು ನಿರ್ದೇಶಕರು ಸಾಹಿತ್ಯಕ್ಕೆ ಎಷ್ಟರಮಟ್ಟಿಗೆ ಋಣಿಯಾಗಿರುತ್ತಾರೆಂದರೆ ಫೆಡ್ ಜಿನ್ನರ್‌ಮನ್ ಎಂಬ ನಿರ್ದೇಶಕರ ಈ ಹೇಳಿಕೆಯನ್ನು ಗಮನಿಸಿದರೆ ಸ್ಪಷ್ಟವಾಗುತ್ತದೆ "ಚಲನಚಿತ್ರದ ಪ್ರಾರಂಭದಲ್ಲಿ ಲೇಖಕನು ಅಪೂರ್ವ ಕೊಡುಗೆ ನೀಡುತ್ತಾನೆ. ಸಾಹಿತ್ಯ ಸತ್ವ ಹಾಗೂ ಪರಿಣಾಮಗಳನ್ನು ದೃಶ್ಯಾಂತರಗೂಳಿಸುವುದಷ್ಟೇ ನನ್ನ ಕರ್ತವ್ಯ. ನಾನು ಲೇಖಕನಿಗೆ (ಸಾಹಿತ್ಯಕ್ಕೆ) ತುಂಬಾ ಹತ್ತಿರವಾಗಿ ಕೆಲಸಮಾಡುತ್ತೇನೆ." ವಿವಿಧ ಕಲಾ ಪ್ರಕಾರಗಳ ಅಂತರ್‌ಸಂಬಂಧವನ್ನು ಪಡೆದಾಗಲೂ ಸಿನಿಮಾಕ್ಕೆ ಹೆಚ್ಚಾಗಿ ಉಪಕೃತವಾಗುವುದು ಸಾಹಿತ್ಯದಿಂದ ಮಾತ್ರ ಸಾಹಿತ್ಯದೊಂದಿಗೆ ಸಿನಿಮಾದ ಸಂಬಂಧ ಅವಿನಾಭಾವವಾದುದು. ಕನ್ನಡ ಸಿನಿಮಾ ಮತ್ತು ಕನ್ನಡ ಸಾಹಿತ್ಯದ ಬಗ್ಗೆ ಹೇಳುವುದಾದರೆ, ಕನ್ನಡದ ಅನೇಕ ಪೌರಾಣಿಕ, ಸಾಮಾಜಿಕ, ಐತಿಹಾಸಿಕ ಸಾಹಿತ್ಯ ಕೃತಿಗಳು ಸಿನಿಮಾಗಳಾಗಿ ರೂಪ

ಶಿಲ್ಪ ಕೆ.ಎನ್.
ಸಂಶೋಧನಾ ವಿದ್ಯಾರ್ಥಿನಿ
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-583 276
ಮೊ: 09972900802
shilpakn26@gmail.com

ಗೊಂಡಿರುವುದನ್ನು ಕಾಣಬಹುದಾಗಿದೆ. ಐತಿಹಾಸಿಕತೆಯ ಹಿನ್ನೆಲೆ ಇರುವ ಮಯೂರ ಸಿನಿಮಾವು ಕಾದಂಬರಿ ಆಧಾರಿತ ಚಿತ್ರ. ಈ ಸಿನಿಮಾವು 1975ರಲ್ಲಿ ತೆರೆಕಂಡಿತು. ಈ ಲೇಖನದಲ್ಲಿ ದೇವುಡು ನರಸಿಂಹಶಾಸ್ತ್ರಿಗಳ ಜನಪ್ರಿಯ ಕಾದಂಬರಿ ಮಯೂರವನ್ನು ಆಧರಿಸಿ, ರಾಜಕುಮಾರ್ ನಾಯಕರಾಗಿ, ವಿಜಯ್ ನಿರ್ದೇಶನದಲ್ಲಿ ತೆರೆಕಂಡ 'ಮಯೂರ' ಸಿನಿಮಾದ ಬಗ್ಗೆ ಚರ್ಚಿಸಲಾಗಿದೆ. ದೇವುಡುರವರೆ ಮಯೂರ ಕಾದಂಬರಿಯು ಚರಿತ್ರೆಯಲ್ಲ ಆದರೂ ಈ ಕಥೆಯ ಒಂದೊಂದು ಅಂಶಕ್ಕೂ ಆಧಾರವಿದೆ ಎಂದು ಮುನ್ನುಡಿಯಲ್ಲಿ ಹೇಳಿದ್ದಾರೆ. ಮಯೂರ ಸಿನಿಮಾವು ರಾಜ್‌ಕುಮಾರ್ ಇಮೇಜ್‌ಗಾಗಿ ತಯಾರಾದ ಸಿನಿಮಾ ಎನ್ನುವ ಟೀಕೆಗಳಿರುವುದನ್ನು ಕಾಣಬಹುದಾಗಿದೆ.

ಈ ಲೇಖನದಲ್ಲಿ ಇತಿಹಾಸವು ಮನೋರಂಜನಾ ಹಿನ್ನೆಲೆಯಲ್ಲಿ ಸಿನಿಮಾವಾದಾಗ, ಸಿನಿಮಾದಲ್ಲಿನ ಚಾರಿತ್ರಿಕ ಅಂಶಗಳನ್ನು ಮತ್ತು ಸಂವಾದ ಸಂಕಥನಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಈ ಲೇಖನವು ಐದು ಭಾಗಗಳನ್ನು ಒಳಗೊಂಡಿದೆ. ಮೊದಲನೆಯ ಭಾಗದಲ್ಲಿ ಕದಂಬರಾಜ್ಯ ಸ್ಥಾಪನೆಯ ಬಗ್ಗೆ ಐತಿಹಾಸಿಕವಾಗಿ ಇರುವ ದಾಖಲೆಗಳು, ದಂತಕಥೆಗಳ ಕುರಿತ ವಿವರಗಳನ್ನು ನೀಡಲಾಗಿದೆ. ಕದಂಬರ ಮೂಲವನ್ನು ಕುರಿತ ವಿವರಗಳ ಬಗ್ಗೆ ಚರ್ಚಿಸಲಾಗಿದೆ. ಎರಡನೆಯ ಭಾಗದಲ್ಲಿ ಮಯೂರ ಸಿನಿಮಾವನ್ನು ವಿಶ್ಲೇಷಿಸಲಾಗಿದೆ. ಮೂರನೆ ಭಾಗದಲ್ಲಿ ಸಿನಿಮಾ ಮತ್ತು ಇತಿಹಾಸದ ನಡುವಿನ ಸಂವಾದವನ್ನು ಗುರುತಿಸಲಾಗಿದೆ. ನಾಲ್ಕನೆಯ ಭಾಗದಲ್ಲಿ ಐತಿಹಾಸಿಕ ವಸ್ತುವಿನಲ್ಲಿ ಸಮಕಾಲೀನತೆಯು ಧ್ವನಿಸಿರುವುದನ್ನು ಗುರುತಿಸಲಾಗಿದೆ. ಐದನೆಯ ಭಾಗದಲ್ಲಿ ರಾಜ್‌ಕುಮಾರ್ ಅಸ್ಮಿತೆಯನ್ನು ಗುರುತಿಸಲಾಗಿದೆ. ಆರನೆಯ ಭಾಗದಲ್ಲಿ ಉಪಸಂಹಾರವನ್ನು ಬರೆಯಲಾಗಿದೆ.

ಶಾತವಾಹನರ ಆಳ್ವಿಕೆಯ ನಂತರ ಕರ್ನಾಟಕದಲ್ಲಿ ಅಧಿಪತ್ಯ ಸ್ಥಾಪಿಸಿದವರೆಂದರೆ ಕದಂಬರು. ಇವರು ಕ್ರಿ.ಶ. 4ನೇ ಶತಮಾನದಿಂದ ಕ್ರಿ.ಶ 6ನೇ ಶತಮಾನದವರೆಗೆ ಆಳ್ವಿಕೆ ನಡೆಸಿದ್ದಾರೆ. ಕದಂಬರ ಮೂಲವನ್ನು ಸ್ಪಷ್ಟೀಕರಿಸುವ ಖಚಿತ ಆಧಾರಗಳು ನಮಗೆ ದೊರೆತಿಲ್ಲ. ಹಲವು ದಂತಕಥೆಗಳು ಮತ್ತು ಶಾಸನಗಳು ಕದಂಬರ ಮೂಲದ ಬಗ್ಗೆ ವಿವರಣೆ ನೀಡುತ್ತವೆ.

ಬೆಳಗಾವಿಯ ವಿರಕ್ತಮಠದಲ್ಲಿ ದೊರೆತ ತಾಮ್ರಪಟದ ಶಾಸನದ ಪ್ರಕಾರ ಶಿವನ ಬೆವರಿನ ಹನಿಯಿಂದ ಕದಂಬನ ಜನನವಾಯಿತಂತೆ. ಅವನಿಗೆ ನಾಲ್ಕು ನೀಳವಾದ ಬಾಹುಗಳು ಹಣೆಯಲ್ಲಿ ಒಂದು ಕಣ್ಣು ಇದ್ದವಂತೆ. ತನ್ನ ಪರಿಶುದ್ಧತೆಯಿಂದಲೂ ಪಾಂಡಿತ್ಯದಿಂದಲೂ ಸುಸಂಸ್ಕೃತನಾಗಿದ್ದ ಈ ಕದಂಬನಿಗೆ ತನ್ನ ಖಡ್ಗಶಕ್ತಿಯಿಂದಲೂ, ತೋಳಿನ ಬಲದಿಂದಲೂ ಅಜೇಯವಾದ ಯುದ್ಧ ಕವಚದಿಂದಲೂ ಭೂಮಂಡಲವನ್ನು ಗೆದ್ದ ಮಯೂರವರ್ಮನು ಹುಟ್ಟಿದನಂತೆ.[1]

ದಾವಣಗೆರೆ ತಾಲೂಕಿನ ಶಾಸನದ ಪ್ರಕಾರ, ಮಯೂರವರ್ಮನು ಕದಂಬವೃಕ್ಷದ ಅಡಿಯಲ್ಲಿ ರುದ್ರ ಮತ್ತು ವಸುಂಧರೆಗೆ ಜನಿಸಿದನಂತೆ. ಅವನ ಲಲಾಟದಲ್ಲಿ ನೇತ್ರವಿದ್ದುದರಿಂದ ಕೀರಿಟವನ್ನು ಬಿಗಿಯಲು ಸಾಧ್ಯವಾಗಲಿಲ್ಲವಂತೆ. ಆದ್ದರಿಂದ ಅವನ್ನು ಮಂಡಿಗೆ ಕಟ್ಟಲಾಯಿತಂತೆ.

ನೊಸಲೊಳುರಿಗಣ್ಣ ವಂದದಿ
ಮಿಸೆಮಅಯನಲ್ಲಿ ಪಟ್ಟಮಂ ಕಟ್ಟಿದ ಜಾನು
ಸಮುದ್ದೇಶದೊಳಂತದನೆಸದಿರೆ ಕಟ್ಟಿದರೆನಲ್ಕ ದಿನ್ನೇವೊಗಳ್ವೆಂ...

ಅವನು ಕದಂಬವೃಕ್ಷದ ನೆರಳಿನಲ್ಲಿ ಬೆಳೆದ ಮೇಲೆ, ಅವನ ವಂಶಕ್ಕೆ ಕದಂಬ ಎಂಬ ಹೆಸರು ಬಂದಿತಂತೆ. ಈ ಮುಕ್ಕಣ್ಣ ಕದಂಬ ಮಯೂರವರ್ಮನ ನಂತರ ಅನೇಕ ಅರಸರು ಆ ಪೀಳಿಗೆಯಲ್ಲಿ ಜನಿಸಿದರಂತೆ.[2]

ಸೊರಬದ ಶಾಸನವೊಂದರಲ್ಲಿ ಮಯೂರವರ್ಮನಿಗೂ ಜೈನ ತೀರ್ಥಂಕರ ಆನಂದ ಜಿನವ್ರತೀಂದ್ರನಿಗೂ ಸಂಬಂಧ ಕಲ್ಪಿಸಲಾಗಿದೆ. ಕದಂಬ ರಾಜ್ಯದ ಸ್ಥಾಪಕನು ಈ ತೀರ್ಥಂಕರನ ಸೋದರಿಯ ಸುತನೋ, ಬಂಧುವೋ ಇರಬಹುದೆಂಬ ರೀತಿಯಲ್ಲಿ ಮಯೂರವರ್ಮನ್ನು ವರ್ಣಿಸಲಾಗಿದೆ.[3]

ಮತ್ತೊಂದು ಕಥೆಯ ಪ್ರಕಾರ, ಪರಶುರಾಮನು ಹೈಗ(ಉತ್ತರ ಕನ್ನಡ) ಮತ್ತು ತುಳುವ(ದಕ್ಷಿಣ ಕನ್ನಡ) ಪ್ರದೇಶಗಳನ್ನು ಸಮುದ್ರನಿಂದ ಮತ್ತೆ ವಶಪಡಿಸಿಕೊಂಡ ಮೇಲೆ, ಶಿವ ಮತ್ತು ಪಾರ್ವತಿಯರು ಪಶ್ಚಿಮ ಘಟ್ಟಗಳಲ್ಲಿರುವ ಸಹ್ಯಾದ್ರಿ ಪರ್ವತಕ್ಕೆ ಬಂದರಂತೆ, ಅವರ ಲೀಲಾವಿನೋಧದ ಪರಿಣಾಮವಾಗಿ ಕದಂಬವೃಕ್ಷದ ಕೆಳಗೆ ಒಬ್ಬ ಬಾಲಕನು ಅವತರಿಸಿದನಂತೆ. ಅವನ ವಂಶಕ್ಕೆ ಕದಂಬ ವಂಶವೆಂಬ ಹೆಸರು ಬಂದಿತಂತೆ.

ಮತ್ತೊಂದು ದಂತಕಥೆಯ ಪ್ರಕಾರ, ವಲ್ಲಭಿಯ ಬ್ರಾಹ್ಮಣನೋರ್ವನ ಮನೆಗೆ ದರೋಡೆಕೋರರು ನುಗ್ಗಿದಾಗ, ನವಿಲೊಂದು (ಮಯೂರ) ಕಿರುಚಿಕೊಂಡಿತಂತೆ. ಬ್ರಾಹ್ಮಣನು ನಗುತ್ತಾ, ತನ್ನ ಪತ್ನಿಗೆ ಮಯೂರ ವೃತ್ತಾಂತವನ್ನು ನಿರೂಪಿಸಿದುದನ್ನು ಅವರು ಆಲಿಸಿದರಂತೆ. ಒಮ್ಮೆ ಬನವಾಸಿಗೆ ವಿಪ್ರನೋರ್ವನು ಅರಸನಾಗುವ ಆಸೆಯಿಂದ ತಪಸ್ಸನ್ನಾಚರಿಸಿದನಂತೆ. ಆಗ ಸ್ವರ್ಗದ ವಾಣಿಯೊಂದು, ಅವನು ನವಿಲಾಗಿ ಹುಟ್ಟಲಿರುವನೆಂದೂ ಅದರ ತಲೆಯನ್ನು ತಿನ್ನುವವನು ರಾಜನಾಗುವನೆಂದೂ ನುಡಿಯಿತಂತೆ. ಬ್ರಾಹ್ಮಣನು ವಾರಣಾಸಿಗೆ ಹೋಗಿ ಸತ್ತಮೇಲೆ ನವಿಲಾಗಿ ಹುಟ್ಟಿದನಂತೆ. ದರೋಡೆಕೋರರು ಅಲ್ಲಿಗೆ ಹೋಗಿ ನವಿಲನ್ನು ವಶಪಡಿಸಿಕೊಂಡರಂತೆ. ಅದರ ತಲೆ ಯಾರಿಗೆ ಸೇರಬೇಕೆಂಬ ವಿಚಾರದಲ್ಲಿ ಅವರಲ್ಲೇ ವಿವಾದವುಂಟಾಗಿ, ಛತ್ರದಲ್ಲಿ ತಂಗಿದ್ದ ಹೆಂಗಸಿನ ಬಳಿ ಹೋಗಿ, ಅದನ್ನು ಬೇಯಿಸಿ ಬಡಿಸಬೇಕೆಂದೂ ತಲೆಯ ಭಾಗ ಯಾರಿಗೆ ಹೋಯಿತೆಂಬುದನ್ನು ತಿಳಿಸಬೇಕೆಂದು ಕೇಳಿಕೊಂಡರು. ಅವಳು ಬಡಿಸಲು ಸಿದ್ಧತೆ ಮಾಡಿಕೊಳ್ಳುತಿದ್ದಾಗ, ಅವಳ ಮಗನು ಇದ್ದಕ್ಕಿದ್ದಂತೆಯೇ ತಲೆಯ ಭಾಗವನ್ನು ಕಿತ್ತುಕೊಂಡು ಅದನ್ನು ತಿಂದು ಹಾಕಿದನಂತೆ. ದರೋಡೆಕೋರರು ಆ ಬಾಲಕನನ್ನು ಅವನ ತಾಯಿಯನ್ನು ಕರೆದುಕೊಂಡು ಬನವಾಸಿಯ ಹೊರ ಭಾಗಕ್ಕೆ ಬಂದಾಗ, ರಾಜಗಜವು ಪುಷ್ಪಹಾರವೊಂದನ್ನು ಆ ಹುಡುಗನಿಗೆ ಅರ್ಪಿಸಿತಂತೆ. ನವಿಲಿನ ದೆಸೆಯಿಂದಾಗಿ ಅವನು 'ಮಯೂರವರ್ಮ'ನೆಂಬ ಹೆಸರಿನಿಂದ ಬನವಾಸಿಯ ಸಿಂಹಾಸನವನ್ನೇರಿದನಂತೆ.

ನಾಗರಖಂಡದ ಕದಂಬರ ಶಾಸನವೊಂದರಲ್ಲಿ ಪುತ್ರಸಂತಾನವಿಲ್ಲದ ನಂದ ಅರಸನು, ಕೈಲಾಸಪರ್ವತದಲ್ಲಿ ಶಿವನನ್ನು ಅನೇಕ ದಿವಸ ಪುಷ್ಪಗಳಿಂದ ಪೂಜಿಸಿದನೆಂದು ತನ್ನ ಕೋರಿಕೆ ಈಡೇರದಿದ್ದಾಗ ವ್ಯಾಕುಲಗೊಂಡನೆಂದೂ ಅವನನ್ನು ಹುರಿದುಂಬಿಸಲೋಸುಗವೋ

ಎಂಬಂತೆ, ಅಗೋಚರ ಹಸ್ತಗಳು ಕದಂಬವೃಕ್ಷದಿಂದ ಹೂಗಳು ಉದುರುವಂತೆ ಮಾಡಿದವೆಂದೂ ಅದೇ ಕಾಲಕ್ಕೆ ಕದಂಬ ಕುಲದ ಹೆಸರಿನಲ್ಲಿ ಈರ್ವರು ಪುತ್ರರು ಜನಿಸಿದರೆಂದೂ ಶಸ್ತ್ರಾಸ್ತ್ರಗಳ ಪ್ರಯೋಗದಲ್ಲಿ ಅವರಿಗೆ ತರಬೇತು ಕೊಡಬೇಕೆಂದು ಸ್ವರ್ಗೀಯ ವಾಣಿಯು ನುಡಿಯಿತೆಂದೂ ತಿಳಿಸಲಾಗಿದೆ.[4] ಆ ಪ್ರಕಾರ ಕೀರ್ತಿವರ್ಮ ಮತ್ತು ಮಯೂರವರ್ಮ ಹುಟ್ಟಿದರಂತೆ. ಆದರೆ ಈ ದಂತಕಥೆಗಳನ್ನಾಗಲಿ, ಕದಂಬರ ಉತ್ತರದ ಮೂಲವನ್ನಾಗಲಿ ಒಪ್ಪುವುದು ಸಾಧ್ಯವಿಲ್ಲ.

ತಾಳಗುಂದದ ಪ್ರಣವೇಶ್ವರ ದೇವಾಲಯದ ಮುಂಭಾಗದಲ್ಲಿ ನಿಲ್ಲಿಸಲ್ಪಟ್ಟಿರುವ ಕಂಬದಲ್ಲಿ, ಕಾವ್ಯಶೈಲಿಯಲ್ಲಿರುವ ಶಾಸನವು ಕದಂಬರ ಉಗಮದ ಬಗ್ಗೆ ನೈಜವಾದ ವಿವರಣೆಯನ್ನೊಳಗೊಂಡಿದೆ. ಚರಿತ್ರೆಯ ದೃಷ್ಟಿಯಿಂದ ಅದು ನಂಬಲರ್ಹವಾಗಿದೆ. ತಾಳಗುಂದದ ಶಾಸನದ ಪ್ರಕಾರ ಆಚಾರಶೀಲರಾದ ಬ್ರಾಹ್ಮಣ-ಮನೆತನಕ್ಕೆ ಸೇರಿದ ಮಯೂರಶರ್ಮನೆಂಬ ತರುಣನು, ತನ್ನ ಗುರುವಾದ ವೀರಶರ್ಮನೊಂದಿಗೆ ಪಲ್ಲವರ ರಾಜಧಾನಿಯಾಗಿದ್ದ ಕಾಂಚಿಗೆ ಪ್ರವಚನಕ್ಕಾಗಿ ಹೋದನು. ಅಲ್ಲಿದ್ದಾಗ ಅವನಿಗೂ ಪಲ್ಲವರ ಅಶ್ವಶಾಲೆಯವರಿಗೂ ಯಾವುದೊ ಕಾರಣಕ್ಕಾಗಿ ಕಲಹವಾಯಿತು. ಪಲ್ಲವರ ಉದ್ದಟತನದಿಂದ ಕೆರಳಿದ ('ತತ್ರ ಪಲ್ಲವಾಶ್ವಸಂಸ್ಥೇನ ಕಲಹೇನ ತೀವ್ರೇಣ ರೋಷಿತಾಃ) ಮಯೂರಶರ್ಮನು ಅವರ ಮೇಲೆ ಸೇಡು ತೀರಿಸಿಕೊಳ್ಳಲೋಸುಗ ಕ್ಷತ್ರಿಯನಾಗಲು ಸಂಕಲ್ಪ ಮಾಡಿದನು. ಅವನು ಶಸ್ತ್ರಸಜ್ಜಿತನಾಗಿ ಪಲ್ಲವರ ಕಾವಲುಗಾರರ ಪ್ರತಿಭಟನೆಯನ್ನು ಅಡಗಿಸಿ, ಕರ್ನೂಲು ಜಿಲ್ಲೆಯ ಶ್ರೀಪರ್ವತದ ದುರ್ಗಮವಾದ ಅರಣ್ಯವನ್ನು ಪ್ರವೇಶಿಸಿದನು. ಸಾಕಷ್ಟು ಸಾಮರ್ಥ್ಯವನ್ನು ಗಳಿಸಿಕೊಂಡ ಮೇಲೆ, ಸುತ್ತಮುತ್ತಲಿನ ಅರಸರಿಂದ ಮಯೂರಶರ್ಮನು ಕಪ್ಪ-ಕಾಣಿಕೆಗಳನ್ನು ವಸೂಲು ಮಾಡಿಕೊಳ್ಳಲಾರಂಭಿಸಿದ್ದನು. ಅದರ ನಿಮಿತ್ತವಾಗಿ ಪಲ್ಲವರಿಗೂ ಅವನಿಗೂ ಕಾಳಗವಾಗಿ, ಪರಾಭವಗೊಂಡ ಪಲ್ಲವರು ಮಯೂರಶರ್ಮನೊಂದಿಗೆ ಸಂಧಿಮಾಡಿಕೊಂಡರು. ಅರಸೊತ್ತಿಗೆಗೆ ಬೇಕಾದ ಸ್ವಲ್ಪ ಪ್ರದೇಶವನ್ನು ಬಿಟ್ಟುಕೊಟ್ಟರು. ಈ ರೀತಿ ಮಯೂರಶರ್ಮನ ನೇತೃತ್ವದಲ್ಲಿ ಕದಂಬ ರಾಜ್ಯವು ವೈಜಯಂತಿ ಅಥವಾ ಬನವಾಸಿಯಲ್ಲಿ ಬೆಳೆಯಿತು.[5] ಪ್ರಾಯಶಃ ಅವನ ನಿವಾಸದ ಎದುರು ಕದಂಬ ವೃಕ್ಷವಿದ್ದುದರಿಂದ ಅವನ ಸಂತತಿಗೆ 'ಕದಂಬಕುಲ'ವೆಂಬ ಹೆಸರಾಯಿತು.

ಮಯೂರ ಸಿನಿಮಾವು ಕಂಚಿಯಲ್ಲಿ ಮಲ್ಲಯುದ್ಧ ನಡೆಯುವ ಸನ್ನಿವೇಶದೊಂದಿಗೆ ಆರಂಭವಾಗುತ್ತದೆ. ಮಲ್ಲಯುದ್ಧದಲ್ಲಿ ಗೆದ್ದ ಮಯೂರನು ರಂಗಾಜಟ್ಟಿಗಳ ಶಿಷ್ಯನಾಗಿ ಮಲ್ಲಯುದ್ಧ, ಕತ್ತಿಕಾಳಗವನ್ನು ಕಲಿಯುತ್ತಾನೆ. ಅಶ್ವವಿಧ್ಯೆಯನ್ನು ಕಲಿತರೆ ಎಲ್ಲಾವಿದ್ಯೆಗಳನ್ನು ಕಲಿತಂತಾಗುತ್ತದೆಂಬ ಗುರುಗಳ ಮಾತಿನಂತೆ ಅಶ್ವವಿಧ್ಯೆಯನ್ನು ಕಲಿಯಲು ಮನಸ್ಸುಮಾಡುತ್ತಾನೆ. ಪಲ್ಲವ ರಾಜಕುಮಾರರು ಅಶ್ವವಿದ್ಯೆ ಕಲಿಯುತ್ತಿರುವುದನ್ನು ಕಳ್ಳತನದಿಂದ ವೀಕ್ಷಿಸುತ್ತಿರುವಾಗ, ಆಕಸ್ಮಿಕವಾಗಿ ನಡೆದೊಂದು ಘಟನೆಯಿಂದ ಪಲ್ಲವ ಯುವರಾಜ ವಿಷ್ಣುಗೋಪನಿಗೂ ಮಯೂರನಿಗೂ ಕಾಳಗವಾಗುತ್ತದೆ. ಅರಸು ಮಗನ ಜೊತೆ ಕಾಳಗ ಮಾಡಿದ ಕಾರಣಕ್ಕಾಗಿ ಪಲ್ಲವರು ಮಯೂರನನ್ನು ಶಿಕ್ಷಿಸಲು ತೀರ್ಮಾನಿಸುತ್ತಾರೆ. ಗುರುಗಳಾದ ರಂಗಾಜಟ್ಟಿಗಳ ಸಹಾಯ ಪಡೆದ ಮಯೂರನು ಸುರಕ್ಷಿತವಾಗಿ ಕೋಟೆಯಿಂದ ಪಾರಾಗಿ, ವೈಜಯಂತಿಯ ಮಂತ್ರಿ ಷಡಾನನಶರ್ಮ, ಸೇನಾಧಿಪತಿ ನರಸಿಂಹದತ್ತ ಹಾಗೂ ವೀರಶರ್ಮರ ಜೊತೆ ಸೇರುತ್ತಾನೆ. ಮಯೂರನು

ಬ್ರಾಹ್ಮಣನೋ, ಕ್ಷತ್ರೀಯನೋ ಎನ್ನುವ ಗೊಂದಲದಲ್ಲಿದ್ದಾಗ ವೀರಶರ್ಮನು ಮಯೂರನ ಜನ್ಮರಹಸ್ಯ ಹೇಳುತ್ತಾನೆ. ವೈಜಯಂತಿಪುರದಲ್ಲಿ ತ್ರಿನೇತ್ರ ಕದಂಬನ ವಂಶಸ್ಥ ಚಂದ್ರವರ್ಮನು ಆಳ್ವಿಕೆ ಮಾಡುತ್ತಿರುವಾಗ ಶಾತವಾಹನ ಮೂಲದ ನಾಗಶ್ರೀ ಎಂಬ ಹೆಣ್ಣು ಪಲ್ಲವರ ಶೇಖರವರ್ಮನ ಜೊತೆ ಸೇರಿ ಕದಂಬರಾಜ ಚಂದ್ರವರ್ಮನನ್ನು ಕೊಲ್ಲಿಸುತ್ತಾಳೆ. ರಾಣಿ ಪುಷ್ಪಾವತಿಯು ತನ್ನ ಮಗು ಮಯೂರನೊಂದಿಗೆ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾಳೆ. ಆದರೆ ಅದು ಸಾಧ್ಯವಾಗದಾದಾಗ ಮಗುವನ್ನು ರಾಜಗುರು ವೀರಶರ್ಮನ ಕೈಗೊಪ್ಪಿಸಿ ಸಾವನ್ನಪ್ಪುತ್ತಾಳೆ. ವೀರಶರ್ಮನು ಮಗುವನ್ನು ಕಾಪಾಡಲು ಬ್ರಾಹ್ಮಣನಾದ ಈಶಭಟ್ಟರ ಬಳಿ ಬೆಳೆಸುತ್ತಾನೆ. ಆ ಮಗುವೇ ನೀನು ಎಂಬ ಸತ್ಯವನ್ನು ಮಯೂರನಿಗೆ ತಿಳಿಸುತ್ತಾನೆ. ತನ್ನ ಜನ್ಮರಹಸ್ಯ ತಿಳಿದ ಮಯೂರನು ನಾನು ಕ್ಷತ್ರಿಯನೆಂದು ತಿಳಿದು ಕ್ಷತ್ರಿಯರ ರೀತಿ ಬಾಳಲು ನಿರ್ಧರಿಸುತ್ತಾನೆ. ಅಲ್ಲದೆ ಪಲ್ಲವರಿಂದ ಕದಂಬ ಸಾಮ್ರಾಜ್ಯವನ್ನು ಪಡೆದುಕೊಳ್ಳುವ ಪ್ರತಿಜ್ಞೆ ಮಾಡುತ್ತಾನೆ. ಕದಂಬಕುಲ ರಾಜಭಕ್ತರನ್ನೆಲ್ಲಾ ಜಾಗೃತಗೊಳಿಸಿ ತನ್ನದೆ ಒಂದು ಸೈನ್ಯಕಟ್ಟಿ ಪಲ್ಲವ ವಶದಲ್ಲಿದ್ದ ಶ್ರಿಶೈಲವನ್ನು ವಶಪಡಿಸಿಕೊಳ್ಳುತ್ತಾನೆ. ಬನವಾಸಿಯಲ್ಲಿ ನೀಲಕಂಠಗುಪ್ತನ ವೇಶದಲ್ಲಿದ್ದು ಪಲ್ಲವರ ರಾಜಪ್ರತಿನಿಧಿಗಳಾದ ದಂತಿವರ್ಮ ಮತ್ತು ನಂದಿವರ್ಮನ ಸ್ನೇಹ ಸಂಪಾದಿಸುತ್ತಾನೆ. ಜನರ ಪ್ರೀತಿಗಳಿಸುತ್ತಾನೆ. ಸಮಯ ನೋಡಿ ಅವಕಾಶ ಸಿಕ್ಕೊಡನೆಯೆ ದಂತಿವರ್ಮ ಮತ್ತು ನಂದಿವರ್ಮನಿಂದ ಬನವಾಸಿಯನ್ನು ವಶಪಡಿಸಿಕೊಳ್ಳುತ್ತಾನೆ. ಜನತೆಯ ಬೆಂಬಲವು ಮಯೂರನಿಗಿದ್ದಿದುದರಿಂದಾಗಿ ಅನ್ಯ ಮಾರ್ಗವಿಲ್ಲದೆ ಪಲ್ಲವರು ಮಯೂರನೊಂದಿಗೆ ಮೈತ್ರಿ ಬೆಳೆಸಿಕೊಳ್ಳುತ್ತಾರೆ. ಬನವಾಸಿಯಲ್ಲಿ ಆತನ ಸಾರ್ವಭೌಮ ಅಧಿಕಾರವನ್ನು ಒಪ್ಪಿಕೊಳ್ಳುತ್ತಾರೆ. ಹೀಗೆ ಕರ್ನಾಟಕದ ಪ್ರಥಮ ಸಿಂಹಾಸನಾಧೀಶ್ವರನಾದ ಮಯೂರನು ಕದಂಬ ಸಾಮ್ರಾಜ್ಯ ಸ್ಥಾಪಿಸಿದ ಬಗೆಯನ್ನು ಸಿನಿಮಾದಲ್ಲಿ ಕಾಣಬಹುದಾಗಿದೆ.

ಚರಿತ್ರೆಯಲ್ಲಿ ದಾಖಲಾಗಿರುವ ಕದಂಬರ ಮೂಲಕ್ಕೂ ಸಿನಿಮಾದಲ್ಲಿರುವ ಕದಂಬರ ಇತಿಹಾಸಕ್ಕೆ ಹೋಲಿಸಿದರೆ, ಚರಿತ್ರೆಯನ್ನು ಓದಿದವರು ಚರಿತ್ರೆಯನ್ನು ಕಥೆ ರೀತಿ ಕಟ್ಟಿರುವುದು ಕಂಡುಬರುತ್ತದೆ. ಇಲ್ಲಿ ಇತಿಹಾಸದ ಸತ್ಯಕ್ಕಿಂತ ಆಕರ್ಷಕ ಕಥೆಯ ರಚನೆಗೆ ಹೆಚ್ಚು ಗಮನ ನೀಡಲಾಗಿದೆ. ಕದಂಬರ ಇತಿಹಾಸ ರಚನೆಗೆ ದೊರೆತಿರುವ ಎಲ್ಲಾ ದಾಖಲೆಯನ್ನು ಗಮನಿಸಿ ದೇವುಡುರವರೆ ಹೊಸಕಥೆಯನ್ನು ಬರೆದಿದ್ದಾರೆ. ಮಯೂರವರ್ಮ, ಚಂದ್ರವರ್ಮ, ವೀರಶರ್ಮ, ಶಿವಸ್ಕಂದವರ್ಮ, ಸಿಂಹವಿಷ್ಣು ಇವೆ ಮೊದಲಾದ ಕದಂಬರ ಹೆಸರುಗಳನ್ನು ಬಿಟ್ಟರೆ ಉಳಿದ ಕಥೆ ಎಲ್ಲವೂ ಲೇಖಕರ ಕಲ್ಪನೆಯದ್ದೆ. ಮಯೂರಶರ್ಮನು ಮಯೂರವರ್ಮನಾಗಿ ಪಲ್ಲವರಿಂದ ಬನವಾಸಿಯನ್ನು ವಶಪಡಿಸಿಕೊಂಡು ಕದಂಬ ಸಾಮ್ರಾಜ್ಯ ಸ್ಥಾಪಿಸಿದ ಎನ್ನುವ ಐತಿಹಾಸಿಕ ಸತ್ಯ ಬಿಟ್ಟರೆ ಉಳಿದ ಎಲ್ಲಾ ವಿವರಗಳು ದೇವುಡು ರವರ ಕಥೆಯಾಗಿದೆ. ದೇವುಡುರವರೆ 'ಮಯೂರ' ಕೃತಿ ಚರಿತ್ರೆಯಲ್ಲ ಎಂದು ಮುನ್ನುಡಿಯಲ್ಲಿ ಹೇಳಿದ್ದಾರೆ. ಈ ಅಂಶವು ಇತಿಹಾಸ ಓದಿ ನಂತರ ಮಯೂರ ಸಿನಿಮಾ ನೋಡಿದಾಗ ಸ್ಪಷ್ಟವಾಗುತ್ತದೆ.

ಸಿನಿಮಾದಲ್ಲಿ ನಾವು ಕರ್ನಾಟಕ ಸಾಮ್ರಾಜ್ಯ, ಕನ್ನಡ, ಕನ್ನಡಿಗರು, ಕನ್ನಡಿಗರ ಪೌರುಷ, ಕನ್ನಡಿಗರ ಸಾಹಸ, ಕನ್ನಡಿಗರ ಸ್ವಾಭಿಮಾನ ಎನ್ನುವ ಪದಗಳು ಹೆಚ್ಚಾಗಿ ಬಳಕೆ ಮಾಡಿರುವುದನ್ನು ಗಮನಿಸಬಹುದು. ಕದಂಬರ ಸಾಮ್ರಾಜ್ಯ ಸ್ಥಾಪನೆಯ ಸಂದರ್ಭದಲ್ಲಿ

ಕನ್ನಡದ ಬಗ್ಗೆ ಯಾವುದೇ ಉಲ್ಲೇಖವಿಲ್ಲ. ಬಹುತೇಕ ಶಾಸನಗಳು ಸಂಸ್ಕೃತದಲ್ಲಿವೆ. ಕಾಕುತ್ಸವರ್ಮನ ಹಲ್ಮಿಡಿ ಶಾಸನದಲ್ಲಿ ನಮಗೆ ಕನ್ನಡದ ಬಗ್ಗೆ ಮಾಹಿತಿ ಸಿಕ್ಕಿದೆ. ಆದರೆ ಸಿನಿಮಾದಲ್ಲಿ ಮಯೂರವರ್ಮನ ಕಾಲದಲ್ಲೇ ಕನ್ನಡಕ್ಕೆ ಬಹಳ ಪ್ರಾಮುಖ್ಯತೆ ನಿಡಿರುವುದು ಸಮಕಾಲೀನ ಕನ್ನಡಪರ ಚಳವಳಿಗಳ ಪ್ರಭಾವವಾಗಿದೆ.

ಅಲ್ಲದೆ ಸಿನಿಮಾದ ಪ್ರಾರಂಭದಲ್ಲಿ "ಮಯೂರವನ್ನು ಓದಿದ ಕನ್ನಡಿಗನಿಗೆ ಕರ್ನಾಟಕದ ಅಭಿಮಾನವು ಒಂದಿಷ್ಟು ಹೆಚ್ಚಿದರೆ ಸಾಕು. ನಾನು ಈ ಗ್ರಂಥಕ್ಕೆ ಪಟ್ಟ ಶ್ರಮವು ಸಾರ್ಥಕವಾಗುವುದು". ಎನ್ನುವ ಸಾಲುಗಳು ಕರ್ನಾಟಕದ ಬಗ್ಗೆ ಕನ್ನಢಿಗರಿಗೆ ಅಭಿಮಾನ ಹೆಚ್ಚಲಿ ಎಂಬ ಸಂದೇಶವನ್ನು ದೇವುಡುರವರು ನೀಡಿದ್ದಾರೆ. ಇದು ಸಹ ಸಮಕಾಲೀನತೆಯು ಸಿನಿಮಾದ ಮೇಲೆ ಬೀರಿದ ಪ್ರಭಾವವಾಗಿದೆ. ಸಿನಿಮಾದಲ್ಲಿನ "ನಾನಿರುವುದು ನಿಮಗಾಗಿ ನಾಡಿರುವುದು ನಮಗಾಗಿ" ಎನ್ನುವ ಸಾಲುಗಳು ಗೋಕಾಕ್ ಚಳುವಳಿಯಲ್ಲಿ ರಾಜ್‌ಕುಮಾರ್ ಭಾಗವಹಿಸಿದ ಸಂದರ್ಭದಲ್ಲಿ ಹೆಚ್ಚು ಜನಪ್ರಿಯವಾಯಿತು. ಇಲ್ಲಿ ನಾವು ಸಮಕಾಲೀನ ರಾಜಕೀಯ, ಸಾಮಾಜಿಕ ಸಂದರ್ಭದಲ್ಲಿ ಸಿನಿಮಾವು ಪ್ರಭಾವ ಬೀರಿರುವುದನ್ನು ಕಾಣಬಹುದು.

ಮಯೂರ ಸಿನಿಮಾ ರಾಜ್‌ಕುಮಾರ್ ಅವರ ಇಮೇಜ್‌ಗಾಗಿಯೆ ರೂಪುಗೊಂಡ ಸಿನಿಮಾವಾಗಿತ್ತು[6] ಎನ್ನುವ ಹೇಳಿಕೆಯಲ್ಲಿ ಸತ್ಯವಿದೆ. ಭಾರತದ ರಾಜಕೀಯ ಸೈದ್ಧಾಂತಿಕ ಇತಿಹಾಸದ ಅವಿಭಾಜ್ಯ ಭಾಗವಾಗಿ ರಾಷ್ಟ್ರೀಯ ನಾಯಕನ ಸ್ಥಿತಿಗೆ ನಟ ರಾಜ್‌ಕುಮಾರ್ ಏರಿದರು. ಭಾರತದ ಚಲನಚಿತ್ರ ನಾಯಕರು ತಮ್ಮ ಜನಪ್ರಿಯತೆಯನ್ನು ರಾಜಕೀಯ ನಾಯಕರಾಗಲು ಬಳಸಿಕೊಂಡರು. ಆಂಧ್ರ ಮತ್ತು ತಮಿಳುನಾಡಿನಲ್ಲಿ ಸಿನಿಮಾ ನಾಯಕರು ರಾಜಕೀಯ ಪ್ರವೇಶಿಸಿ ಮುಖ್ಯಮಂತ್ರಿಗಳಾಗಿದ್ದರು. ರಾಜ್‌ಕುಮಾರ್ ಸಹ ರಾಜಕೀಯ ಪ್ರವೇಶಿಸಬಹುದೆಂಬ ಕುತೂಹಲ ಮತ್ತು ನಿರೀಕ್ಷೆಯಿತ್ತು. ರಾಜ್ಯದಾದ್ಯಂತ ಆವರಿಸಿದ್ದ ಗೋಕಾಕ್ ಚಳವಳಿಯ ಸಭೆಗಳಲ್ಲಿ ಸೇರುತ್ತಿದ್ದ ಅಪಾರ ಜನಸ್ತೋಮ ರಾಜ್‌ಕುಮಾರ್‌ರವರ ಆಗಮನಕ್ಕಾಗಿ ಕಾಯುತ್ತಿದ್ದುದು, ರಾಜ್‌ಕುಮಾರ್‌ರ ಜನಪ್ರಿಯತೆ ಅಧಿಕಗೊಳ್ಳಲು ಕಾರಣವಾಯಿತು. ಇದೆ ಸಂದರ್ಭದಲ್ಲಿ ಅನೇಕ ರಾಜಕೀಯ ನಾಯಕರು ರಾಜಕೀಯಕ್ಕೆ ರಾಜ್‌ರವರನ್ನ ಕರೆತರಲು ಪ್ರಯತ್ನಿಸುತ್ತಿದ್ದವು. ಭಾಷಾ ಪ್ರೇಮ ಹಾಗೂ ಹಿಂದುಳಿದ ವರ್ಗಗಳ ಚಳವಳಿಯ ಪ್ರಭಾವಗಳು ಮತ್ತು ರಾಜ್ಯದ ರೈತರಿಗೆ ಧ್ವನಿಕೊಟ್ಟ ಎಂ.ಡಿ. ನಂಜುಂಡಸ್ವಾಮಿ ನೇತೃತ್ವದ ಐತಿಹಾಸಿಕ ರೈತ ಚಳವಳಿ– ಇದೆಲ್ಲದರ ಸಾಮೂಹಿಕ ಹಾಗೂ ಸಾವಯವ ಲಾಭ ರಾಜ್‌ಕುಮಾರ್ ಪ್ರಾದೇಶಿಕ ಪಕ್ಷ ಕಟ್ಟಿದರೆ ಅದಕ್ಕೆ ಲಭಿಸುತ್ತದೆ ಎಂದು ಒಂದು ವರ್ಗ ಅಂದಾಜು ಮಾಡಿತು. ಆದರೆ ರಾಜ್‌ಕುಮಾರ್ ರಾಜಕೀಯದಲ್ಲಿ ಭಾಗವಹಿಸಲಿಲ್ಲ; ಚುನಾವಣೆಗೆ ನಿಲ್ಲಲಿಲ್ಲ. ರಾಜಕೀಯಕ್ಕೆ ಸೇರದಿದ್ದರೂ ರಾಜ್‌ಕುಮಾರ್ ಅವರ ಜನಪ್ರಿಯತೆ ಯಾವತ್ತೂ ಕಡಿಮೆಯಾಗಲಿಲ್ಲ. 1982 ರ ಗೋಕಾಕ್ ಚಳವಳಿಯಲ್ಲಿ ರಾಜ್‌ಕುಮಾರ್ ಪಾಲ್ಗೊಂಡಿದ್ದು, ಕೆಲವೆ ಜನರ ಹೋರಾಟವನ್ನು ಕರ್ನಾಟಕದ ಎಲ್ಲರ ಹೋರಾಟವನ್ನಾಗಿ ಬದಲಿಸಿತು. ಕರ್ನಾಟಕಕ್ಕೆ ರಾಜ್‌ಕುಮಾರ್‌ರೆ ನಾಯಕ. ರಾಜ್‌ಕುಮಾರ್ ಕರ್ನಾಟಕದ ಎಲ್ಲಾ ಕನ್ನಡಿಗರ ಪ್ರತಿನಿಧಿ ಎನ್ನುವ ಭಾವನೆಯನ್ನು ಕಾಣಬಹುದಾಗಿದೆ. ಸಿನಿಮಾ ಪ್ರಾರಂಭದಲ್ಲೇ ನಟಸಾರ್ವಭೌಮ, ಕನ್ನಡ ಕಂಠೀರವ, ರಸಿಕರ ರಾಜ ಎನ್ನುವ ಬಿರುದುಗಳೊಂದಿಗೆ ರಾಜ್‌ಕುಮಾರ್ ಹೆಸರನ್ನು ತೋರಿಸಿದ್ದಾರೆ. ಸಿನಿಮಾದಲ್ಲಿ

ರಾಜ್‌ಕುಮಾರ್‌ಗಾಗಿಯೆ ಅನೇಕ ಸಾಲುಗಳಿವೆ. "ಹೆಂಗಸರನ್ನು ಎದುರಿಟ್ಟು ರಾಜ್ಯ ಸಂಪಾದಿಸುವ ಅಗತ್ಯವಿಲ್ಲ. ಈ ಗಂಡು ಭೂಮಿಯಲ್ಲಿ ಗಂಡಾಗಿ ಹುಟ್ಟಿರುವುದು... ನಮ್ಮಲ್ಲಿ ಹರಿಯುತ್ತಿರುವುದು ಪೌರುಷದ ರಕ್ತ..." ಎನ್ನುವ ಮಾತುಗಳು ರಾಜ್‌ಕುಮಾರ್‌ರ ಅಸ್ಮಿತೆಗಾಗಿ ಇರುವ ಮಾತುಗಳಾಗಿವೆ. ಅಲ್ಲದೆ ವೀರಾಧಿವೀರ, ಹರಿಭಯಂಕರ, ಸಾಗರಗುಣ ಸಿಂಧೂರ, ಕರ್ನಾಟಕ ಚಕ್ರೇಶ್ವರನಿಗೆ ಜಯವಾಗಲಿ ಎನ್ನುವ ಬಿರುದುಗಳು ರಾಜ್‌ಕುಮಾರ್ ಇಮೇಜ್‌ಗಾಗಿ ತಯಾರಾದ ಹೇಳಿಕೆಗಳಾಗಿವೆ.

ಮಯೂರ ಸಿನಿಮಾದಲ್ಲಿ ಕೆಳವರ್ಗಗಳ ಅಸಾಹಯಕತೆಯನ್ನು ತೋರಿಸಲಾಗಿದೆ. ಅವರ ಆಸೆಗಳನ್ನು ಈಡೆರಿಸಿಕೊಳ್ಳಲಾಗದ ಸಂದರ್ಭದಲ್ಲಿನ ಸಂವೇದನೆಗಳನ್ನು ಕಾಣಬಹುದಾಗಿದೆ. ಶ್ರೇಣಿಕೃತ ವ್ಯವಸ್ಥೆಯಲ್ಲಿ ಜಾತಿ ವ್ಯವಸ್ಥೆಯಿದ್ದರೂ, ಅವುಗಳಲ್ಲಿ ಭಿನ್ನತೆಗಳಿದ್ದರೂ ಅವುಗಳ ನಡುವೆ ಒಪ್ಪಿತ ಮೌಲ್ಯಗಳು ಸಾಮಾನ್ಯವಾಗಿದ್ದು, ಅವು ಪರಸ್ಪರರನ್ನು ಬೆಸೆದಿವೆ. ಆದರೆ ಶ್ರೇಣಿಕೃತ ವ್ಯವಸ್ಥೆಯ ತಳಗಿನ ಜಾತಿಗಳು ಇತ್ತೀಚೆಗೆ "ಒಪ್ಪಿತ ಮೌಲ್ಯಗಳನ್ನು" ಒಪ್ಪಲಿಕ್ಕೆ ಸಿದ್ಧವಿರದ ಘಟನೆಗಳನ್ನು ನಾವು ಗಮನಿಸಬಹುದು. ಸಾಮಾಜಿಕ ಸಂಬಂಧಗಳನ್ನು ಗುರುತಿಸುವ ಈ ಪ್ರಕ್ರಿಯೆಯಲ್ಲಿ ದಬ್ಬಾಳಿಕೆ ಮಾಡುವ ಅಥವಾ ಅದಕ್ಕೆ ಪ್ರತಿಯಾಗಿ ಪ್ರತಿಭಟನೆ ತೋರುವ ಈ ಸಂದರ್ಭದಲ್ಲಿ ಜಾತಿಯ ಚರಿತ್ರೆಯ ಜೊತೆಗೆ ರೈತರ ಪ್ರತಿರೋಧಗಳನ್ನು ತಳುಕು ಹಾಕುತ್ತ, ಆ ಮೂಲಕ ಧಾರ್ಮಿಕ ನಂಬಿಕೆ ಮತ್ತು ಆಚರಣೆಗಳನ್ನು ಗಂಭೀರವಾಗಿ ತೆಗೆದುಕೊಳ್ಳಬಹುದಾಗಿದೆ ಎಂದು ಪಾರ್ಥ ಚಟರ್ಜಿ ಅವರು ಅಭಿಪ್ರಾಯಪಟ್ಟಿದ್ದಾರೆ. ಜಾತಿ ಎನ್ನುವ ಪರಿಭಾಷೆಯ ಮೂಲಕ ಬಹುಬಗೆಯ ಸಾಮಾಜಿಕ ಗುಂಪುಗಳ ಐಡೆಂಟಿಟಿ ಮತ್ತು ಭಿನ್ನತೆಗಳನ್ನು ಮಯೂರ ಸಿನಿಮಾದಲ್ಲಿ ಕೆಳವರ್ಗಗಳ ಪ್ರತಿಭಟನೆಯನ್ನ ಕಾಣಬಹುದಾಗಿದೆ. ಮಯೂರನು ಅರಸು ಮಕ್ಕಳ ಜೊತೆ ಹೋರಾಟದ ಸಂದರ್ಭದಲ್ಲಿ ಸಮಾಜದಲ್ಲಿನ ಮೇಲ್ವರ್ಗದವರು ಕೆಳವರ್ಗದವರ ಬಗ್ಗೆ ಹೊಂದಿರುವ ತಿರಸ್ಕಾರದ ಮನೋಭಾವನೆಯನ್ನು ಕಾಣಬಹುದಾಗಿದೆ. ಬನವಾಸಿಯಲ್ಲಿ ರೈತರು, ಕಾರ್ಮಿಕರು, ಮಹಿಳೆಯರು ರಾಜಶಾಹಿಪ್ರಭುತ್ವದ ವಿರುದ್ಧ ಪ್ರತಿಭಟನೆ ಮಾಡಿರುವುದನ್ನು ಕಾಣಬಹುದಾಗಿದೆ. ದುಡಿಯುವ ಜನತೆಯ ಹೋರಾಟವನ್ನು ಸಬಾಲ್ಟರ್ನ್ ಅಧ್ಯಯನಕಾರರು ಪ್ರತಿಭಟನೆ ಎಂದು ನಕಾರಾತ್ಮಕವಾಗಿ ನೋಡುವ ಬದಲು 'ಹೀರೋಯಿಕ್' ಎಂದು ನೋಡುವುದು ಸೂಕ್ತ ಎಂದು ವಿನಯ್ ಬಾಲ್‌ರವರ ಅಭಿಪ್ರಾಯವನ್ನು ಮಯೂರ ಸಿನಿಮಾದಲ್ಲಿ ಕಾಣಬಹುದಾಗಿದೆ. ರಾಜಪ್ರಭುತ್ವದ ವಿರುದ್ಧ ಮಯೂರನ ಪ್ರತಿಭಟನೆ, ರೈತರು, ಕಾರ್ಮಿಕರು, ಮಹಿಳೆಯರ ವಿರೋಧವನ್ನು ಪ್ರತಿಭಟನೆ ಎಂದು ಚಿತ್ರಿಸಿರುವುದನ್ನು ಕಾಣಬಹುದಾಗಿದೆ. ಆದರೆ ಮಯೂರನ ಪ್ರತಿಭಟನೆಗೆ ಜಯ ಲಭಿಸುತ್ತಿದ್ದಂತೆಯೇ ಆತನ ಮೂಲವನ್ನು ಮೇಲ್ವರ್ಗಕ್ಕೆ ಹೋಲಿಕೆ ಮಾಡಲಾಗಿರುವುದನ್ನು ಕಾಣುತ್ತೇವೆ. ಇಂದಿಗೂ ತಳಸಮುದಾಯದ ಪ್ರತಿಭಟನೆಯು ಕೇವಲ ಪ್ರತಿಭಟನೆ ಅಷ್ಟೇ. ಮೇಲ್ವರ್ಗದವರ ಪ್ರತಿಭಟನೆ ಮಾತ್ರ 'ಹೀರೋಯಿಕ್' ಆಗಿ ಪರಿಣಮಿಸುವುದು ಎನ್ನುವ ಅಂಶವು ಮಯೂರ ಸಿನಿಮಾದಲ್ಲಿ ವ್ಯಕ್ತವಾಗಿದೆ. 'ಮಯೂರನ ಗೆಲುವು' ಅನ್ನುವ ಅಂಶವು ಒಪ್ಪಿತವಾಗದಿರುವುದನ್ನು ಕಾಣಬಹುದಾಗಿದೆ. ಮಯೂರ ಮೂಲತಃ ಮೇಲ್ವರ್ಗದವನು. ಆತನ ಗೆಲುವು ಮೇಲ್ವರ್ಗದ ಗೆಲುವಾಗಿದೆ ಎನ್ನುವ ಅಂಶವು ಸಿನಿಮಾದಲ್ಲಿ ವ್ಯಕ್ತವಾಗಿರುವುದನ್ನು ಕಾಣಬಹುದಾಗಿದೆ.

ಶಿಲ್ಪ ಕೆ.ಎನ್.

* ಈ ಲೇಖನವನ್ನು ತಯಾರಿಸಲು ಸೂಕ್ತ ಮಾರ್ಗದರ್ಶನವನ್ನು ನೀಡಿದ ನನ್ನ ಪಿಎಚ್.ಡಿ ಅಧ್ಯಯನಕ್ಕೆ ಮಾರ್ಗದರ್ಶಕರಾಗಿರುವ ವಿಜಯ್ ಪೂಣಚ್ಚ ತಂಬಂಡ ಅವರಿಗೆ ನಾನು ಆಭಾರಿಯಾಗಿದ್ದೇನೆ.

ಟಿಪ್ಪಣಿಗಳು ಮತ್ತು ಆಕರ ಸೂಚಿ

1. ಎ.ಕ. 7, ಶಿಕಾರಿಪುರ–117.
2. ಎ.ಕ. 11, ದಾವಣಗೆರೆ–35.
3. ಎ.ಕ. 8, ಸೊರಬ–262.
4. ಎ.ಕ. 7, ಶಿಕಾರಿಪುರ–226.
5. ಅದೇ.–176.
6. ವಿಕ್ರಮ ಪತ್ರಿಕೆ, ವಿಜಯದಶಮಿ ವಿಶೇಷಾಂಕ (2007).

* * *

- ರೈಸ್, ಬಿ.ಎಲ್., (ಸಂ.), 1902, **ಎಪಿಗ್ರಾಫಿಯಾ ಕರ್ನಾಟಿಕ,** ಸಂಪುಟ 7 (ಭಾಗ–1), ಬೆಂಗಳೂರು: ಮೈಸೂರು ಪುರಾತತ್ತ್ವ ಇಲಾಖೆ.
- ರೈಸ್, ಬಿ.ಎಲ್., (ಸಂ.), 1904, **ಎಪಿಗ್ರಾಫಿಯಾ ಕರ್ನಾಟಿಕ,** ಸಂಪುಟ 8 (ಭಾಗ–2), ಬೆಂಗಳೂರು: ಮೈಸೂರು ಪುರಾತತ್ತ್ವ ಇಲಾಖೆ.
- ರೈಸ್, ಬಿ.ಎಲ್., (ಸಂ.), 1903, **ಎಪಿಗ್ರಾಫಿಯಾ ಕರ್ನಾಟಿಕ,** ಸಂಪುಟ 11, ಬೆಂಗಳೂರು: ಮೈಸೂರು ಪುರಾತತ್ತ್ವ ಇಲಾಖೆ.
- ನಂಜುಂಡಸ್ವಾಮಿ ಎಂ.ಎಸ್, 1971, **ಕದಂಬ ಗಂಗರ ಇತಿಹಾಸ,** ಧಾರವಾಡ: ಸಮಾಜ ಪುಸ್ತಕಾಲಯ.
- ಬರಗೂರು ರಾಮಚಂದ್ರಪ್ಪ, 2007, **ಸಿನಿಮಾ ಒಂದು ಜನಪದ ಕಲೆ,** ಬೆಂಗಳೂರು: ಅಂಕಿತ ಪುಸ್ತಕ.
- ಮಾಧವ ಪ್ರಸಾದ್ ಎಂ, 2003, 'ಸಿನಿಮಾ ಆ್ಯಸ್ ಎ ಸ್ಟೈಟ್ ಆಫ್ ನ್ಯಾಷಿನಲಿಸ್ಟ್ ಐಡೆಂಟಿಟಿ ಪಾಲಿಟಿಕ್ಸ್ ಇನ್ ಕರ್ನಾಟಕ', ತಂಬಂಡ ಪೂಣಚ್ಚ ವಿಜಯ್(ಸಂ), **ಜರ್ನಲ್ ಆಫ್ ಕರ್ನಾಟಕ ಸ್ಟಡೀಸ್ 1,** ಹಂಪಿ: ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ.
- ವಿಜಯ್ ಪೂಣಚ್ಚ ತಂಬಂಡ, 2009, **ಕೆಳವರ್ಗದ ಪ್ರತಿಭಟನೆ ಸಬಾಲ್ಟರ್ನ್ ಚರಿತ್ರೆ ಬರವಣಿಗೆ ಕ್ರಮ ಮತ್ತು ವಿಮರ್ಶೆ,** ಹಂಪಿ: ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ.
- ವಿಜಯ, ಸಿಂಗ್ ಎಂ.ಬಿ, ಸುಬ್ಬರಾವ್ ಬಿ.ಎನ್, 2001. **ಕನ್ನಡ ಚಲನಚಿತ್ರ ಇತಿಹಾಸ ಸಂಪುಟ 1,** ಹಂಪಿ: ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ.
- ಷೇಕ್ ಆಲಿ ಬಿ, (ಪ್ರ,ಸಂ), 1997. **ಕರ್ನಾಟಕ ಚರಿತ್ರೆ ಸಂಪುಟ 3,** ಹಂಪಿ: ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ.
- ಶ್ರೀಧರ ಮೂರ್ತಿ ಎನ್.ಎಸ್, 2010, **ಕನ್ನಡ ಚಿತ್ರರಂಗ ಒಂದು ವಿವೇಚನೆ,** ಮೈಸೂರು: ಅಂಬಾರಿ ಪ್ರಕಾಶನ.

ಪತ್ರಿಕೆಗಳು

- **ಪ್ರಜಾವಾಣಿ,** ಸಾಪ್ತಾಹಿಕ ಪುರವಣಿ, ಜುಲೈ 7, 2013

ಅಪ್ರಕಟಿತ ದಾಖಲೆಗಳು

- ಮಾನಸ ಕೆ.ಎ., 2003, **ಕನ್ನಡ ಕಾದಂಬರಿ ಆಧಾರಿತ ಚಲನಚಿತ್ರಗಳ ಅಧ್ಯಯನ,** ಕುವೆಂಪು ವಿಶ್ವವಿದ್ಯಾನಿಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ.
- ಶ್ರೀನಿವಾಸರಾಜು, 2016, **ಡಾ. ರಾಜಕುಮಾರ್ ಹಾಗೂ ಕನ್ನಡದ ಅಸ್ಮಿತೆಯ ಹುಡುಕಾಟಗಳು,** ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಚರಿತ್ರೆ ವಿಭಾಗಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ.
- ಕನ್ನಡ ಸಿನಿಮಾದ ಸಾಫ್ಟ್ ಪ್ರತಿ.

■

ಸತೀಶ್‌ಚಂದ್ರ: ಒಬ್ಬ ವಿಭಿನ್ನ ಚರಿತ್ರಕಾರ (೧೯೨೨-೨೦೧೭)

ಪ್ರದೀಪ್ ಕುಮಾರ್ ಶೆಟ್ಟಿ ಕೆ.
ಇತಿಹಾಸ ಉಪನ್ಯಾಸಕರು,
ಸರ್ಕಾರಿ ಪದವಿ ಪೂರ್ವ ಕಾಲೇಜು,
ಬೈಂದೂರು. ಕುಂದಾಪುರ–
ತಾಲ್ಲೂಕು, ಉಡುಪಿ– ಜಿಲ್ಲೆ.
ಮೊ: 9964022581
pradeephistory@gmail.com


ಸತೀಶ್‌ಚಂದ್ರ ನಾಲ್ಕು ವಿಭಿನ್ನ ಚರಿತ್ರೆಯ ಪಂಥಗಳನ್ನು ಪ್ರತಿನಿಧಿಸುತ್ತಿದ್ದರು. ಅಲೀಘರ್, ಅಲಹಾಬಾದ್, ಜೈಪುರ್ ಮತ್ತು ಜೆ.ಎನ್.ಯು ಎಂಬ ಆ ನಾಲ್ಕು ಸಂಪ್ರದಾಯಗಳು ಸತೀಶ್‌ಚಂದ್ರರನ್ನು ಒಬ್ಬ ವಿಭಿನ್ನ ಇತಿಹಾಸ ಕಾರರನ್ನಾಗಿಸಿತು. ಸುಮಾರು 1948ರ ಹೊತ್ತಿಗೆ ಅಲಹಾಬಾದ್ ವಿಶ್ವವಿದ್ಯಾಲಯದಿಂದ ಆರ್.ಪಿ.ತ್ರಿಪಾಠಿಯವರ ಮಾರ್ಗದರ್ಶನದಲ್ಲಿ ಅವರು ಬರೆದ, **ಪಾರ್ಟೀಸ್ ಅಂಡ್ ಪಾಲಿಟಿಕ್ಸ್ ಇನ್ ದಿ ಮೊಘಲ್‌ಕೋರ್ಟ್** ಕೃತಿಯು ಈಗಲೂ ಕೂಡಾ ಮಧ್ಯಯುಗೀನ ಚರಿತ್ರೆಯ ಅಧ್ಯಯನದ ಸಂದರ್ಭದ ಒಂದು ಪ್ರಮುಖ ಹಾಗೂ ಅಪರೂಪದ ಕೃತಿಯಾಗಿದೆ. ಮೊಘಲ್ ಸಾಮ್ರಾಜ್ಯದ ಪತನದ ಕುರಿತು ಈ ಕೃತಿ ವಿಶದವಾಗಿ ವಿವರಗಳನ್ನು ಮಂಡಿಸುತ್ತದೆ. ಅಲಹಾಬಾದ್ ಸ್ಕೂಲ್/ಪಂಥ ಶುದ್ಧವಾದ ರಾಷ್ಟ್ರೀಯತೆಯ ಆಯಾಮಕ್ಕೆ ಪ್ರಸಿದ್ಧಿ ಪಡೆದು, ಮಧ್ಯಕಾಲೀನ ಭಾರತದಲ್ಲಿದ್ದ ವೈರುಧ್ಯತೆಗಳನ್ನು ದೇಶದ ವಿವಿಧೆಡೆ ವಿವಿಧ ಸಮುದಾಯ ಮತ್ತು ಸಮಾಜಗಳಲ್ಲಿ ಗುರುತಿಸಲು ವಿಫಲವಾಗಿತ್ತು. ಇದೇ ಹೊತ್ತಿಗೆ ಮೊಘಲರು ಭಾರತೀಯ ರಾಜಕೀಯ ಮತ್ತು ಸಮಾಜವನ್ನು ಒಗ್ಗೂಡಿಸಿದ ಬಗೆಯನ್ನು ಅದು ನಿರ್ಲಕ್ಷಿಸಿತು.

ಇಂತಹ ಅಧ್ಯಯನಕ್ರಮದ ಅನುಭವವೂ ಸತೀಶ್‌ಚಂದ್ರರಿಗಾಗಿತ್ತು. ಬಹುಶಃ ನಂತರ ಪ್ರೊ. ಸಯೀದ್ ನೂರುಲ್ ಹಸನ್ ಮತ್ತು ಪ್ರೊಫೆಸರ್ ಮೊಹಮದ್ ಹಬೀಬ್‌ರೊಡಗೂಡಿ ಆಲೀಘರ್ ಮುಸ್ಲಿಂ ಯುನಿವರ್ಸಿಟಿಯಲ್ಲಿ ಯುವಕ ಸತೀಶ್ ಪಡೆದ ತರಬೇತಿಯು ಚರಿತ್ರೆಯನ್ನು ಗ್ರಹಿಸುವಲ್ಲಿ ದಾರಿದೀಪವಾಯಿತು. ಸುಮಾರು 1953ರಲ್ಲಿ ಸತೀಶ್‌ಚಂದ್ರ ಆಲೀಘರ್‌ನ ಚರಿತ್ರೆಯ ವಿಭಾಗವನ್ನು ಸೇರಿಕೊಂಡು, ಮಧ್ಯಕಾಲೀನ ಚರಿತ್ರೆಯ ಅಧ್ಯಯನಕ್ಕೆ ಹೊಸದಿಶೆಯನ್ನು ನೀಡಿದರು. ಒಂದು ಅನನ್ಯ ಮತ್ತು ಸಂಕೀರ್ಣವಾದ ಭಾರತದ ಕಲ್ಪನೆ ಮತ್ತದರ ವ್ಯಾಖ್ಯಾನ ಹಾಗೂ ಸಾಮಾಜಿಕ ಪ್ರಕ್ರಿಯೆಗಳನ್ನು ವಿವರಿಸಿದರು. ಈ ರೀತಿಯ ಸಂಗತಿಗಳು ಅವರನ್ನು ಮುಘಲರ ನಾಶವು ಅವರ ಧಾರ್ಮಿಕತೆ ಹಾಗೂ ಪ್ರಾದೇಶಿಕ ನೀತಿಗಳಿಂದ ಘಟಿಸಿತು ಎನ್ನುವಂತಹ ಹಳೆಯ ಪ್ರಮೇಯಗಳನ್ನು ಪುನರ್ ಪರಿಶೀಲಿಸುವಂತೆ ಮಾಡಿತು. ಜದುನಾಥ್ ಸರ್ಕಾರ್ ತಮ್ಮ ಕೃತಿಯಲ್ಲಿ ಔರಂಗಜೇಬನ ನೀತಿಗಳಿಂದಲೇ ಮುಘಲರ ನಾಶವಾಯ್ತು ಎನ್ನುವ ಪ್ರಮೇಯದ ಪರೀಕ್ಷೆಯೂ ಕೂಡಾ ಅವುಗಳಲ್ಲಿ ಮುಖ್ಯವಾದುದು. ಸತೀಶ್ ಮುಘಲ್ ಕಾಲದಲ್ಲಿನ ಜಾಗೀರ್‌ದಾರೀ ವ್ಯವಸ್ಥೆಯ ನಾಶದಿಂದ ಮುಘಲರ ನಾಶವುಂಟಾಯಿತೆನ್ನುತ್ತಾರೆ. ಜಾಗೀರ್‌ದಾರೀ ನಾಶವು ಉಳಿದ ಕಾರಣಗಳನ್ನು ಸೃಷ್ಟಿಸಿತೆನ್ನುವುದು ಇವರ ಅಭಿಪ್ರಾಯವಾಗಿದೆ. ಸಮಕಾಲೀನ ಭಾರತದಲ್ಲಿನ ರಾಜಕಾರಣದ ಸಂದರ್ಭ, ಧಾರ್ಮಿಕ ವಿವಾದ/ವಿದ್ಯಮಾನವನ್ನು ವಿವರಿಸುವ ಸಲುವಾಗಿ ಆರ್ಥಿಕತೆಯನ್ನು ಅದರ ವೈಫಲ್ಯವನ್ನು ಸ್ಪರ್ಶಿಸಿ ವಿವರಿಸುವ ಹೊತ್ತಿನ ಸಂಗತಿಯಾದ 'ಜೆಝಿಯಾ ತೆರಿಗೆ'ಯನ್ನೂ ಕೂಡಾ ಸತೀಶ್ ಇದೇ ನೆಲೆಯಲ್ಲಿ ನೋಡಿದರು. ಸುಮಾರು 22 ವರ್ಷಗಳ ಹಿಂದೆ ಸತೀಶ್ ನಡೆಸಿದ ಇದರ ಬಗೆಗಿನ ಅಧ್ಯಯನ ಇಂದು ಕೂಡಾ ಒಂದು ಮಾದರಿಯಾಗಿದೆ.

ಕೆಲವು ವರ್ಷಗಳ ನಂತರ ಸತೀಶ್ ಜೈಪುರ ವಿಶ್ವವಿದ್ಯಾನಿಲಯವನ್ನು ಸೇರಿ ಅಲ್ಲಿನ ಚರಿತ್ರೆ ವಿಭಾಗವನ್ನು ಬೆಳೆಸಿದರು. ವಿಶೇಷವಾಗಿ ಪ್ರಾದೇಶಿಕ ಭಾಷೆ ಮತ್ತು ಚರಿತ್ರೆಯನ್ನು ಅತ್ಯಂತ ವಿಶೇಷವಾಗಿ ಕೇಂದ್ರೀಕರಿಸಿ, ಪರ್ಶಿಯನ್ ಭಾಷೆಯ ಅಧ್ಯಯನವನ್ನೂ ಕೂಡಾ ಪ್ರೇರೇಪಿಸಿದರು. ಇದರಿಂದ ಮಧ್ಯಕಾಲೀನ ಚರಿತ್ರೆಯ ಸಂದರ್ಭದಲ್ಲಿನ ಮುಘಲ್ ಕೇಂದ್ರ ಹಾಗೂ ಪ್ರಾದೇಶಿಕ ಅಧಿಕಾರ ಸಂಬಂಧಗಳನ್ನು ಗಮನಿಸುವುದು ಸಾಧ್ಯವಾಯಿತು. ಇಂತಹ ಒಂದು ಚಾರಿತ್ರಿಕ ಸಂವಾದವು ಜೈಪುರ ವಿಶ್ವವಿದ್ಯಾನಿಲಯ ಹಾಗೂ ರಾಜಸ್ಥಾನದಲ್ಲಿ ಸ್ಥಳೀಯ ಭಾಷೆ ಹಾಗೂ ಸಾಹಿತ್ಯದ ಆರ್ಕೈವ್ಸ್ ಅನ್ನು ನಿರ್ಮಿಸುವಲ್ಲಿ ಕಾರಣವಾಯಿತು. ಸುಮಾರು 1970ರ ದಶಕದಲ್ಲಿ ಜೆ.ಎನ್.ಯು ನಿರ್ಮಾಣವಾದ ದಶಕದಲ್ಲಿ ಸತೀಶ್‌ಚಂದ್ರ ಅವರ ಆಯ್ಕೆ ಹಾಗೂ ಜೆ.ಎನ್.ಯು ಪ್ರವೇಶ ಅತ್ಯಂತ ಸಹಜವಾದುದೇ ಆಗಿತ್ತು. ಕ್ರಮೇಣ ಸತೀಶ್‌ಚಂದ್ರ ಯು.ಜಿ.ಸಿಯ ವೈಸ್‌ಚೇರ್‌ಮನ್ ಹಾಗೂ ಚೇರ್‌ಮನ್‌ಆಗಿ ಕಾರ್ಯ ನಿರ್ವಹಿಸಬೇಕಾಯಿತು. ಇಂತಹ ಕೆಲವು ವರ್ಷಗಳು ಸತೀಶ್‌ಚಂದ್ರ ಜೆ.ಎನ್.ಯು ವಿನ ಸಿ.ಹೆಚ್.ಎಸ್‌ನಿಂದ ದೂರ ಉಳಿಯಬೇಕಾಯಿತು.

ಯು.ಜಿ.ಸಿಯ ಚೈರ್‌ಮನ್ ಆಗಿ ಸತೀಶ್‌ಚಂದ್ರ ಉನ್ನತ ಶಿಕ್ಷಣ ಮತ್ತು ಅಕಡಮಿಕ್ಸ್‌ನಲ್ಲಿ ಸಾಕಷ್ಟು ಬದಲಾವಣೆಯನ್ನು ತಂದರು. ಇದು ಭಾರತೀಯ ಅಕಡೆಮಿಕ್ಸ್‌ನಲ್ಲಿ ಕೂಡಾ ದೂರದರ್ಶಿತ್ವದ ಬದಲಾವಣೆಯನ್ನು ತಂದಿತು. ಯೂನಿವರ್ಸಿಟಿಯ ಅಧ್ಯಾಪಕರುಗಳಿಗೆ

ಒಂದು ನೀತಿ ಸಂಹಿತೆಯನ್ನೂ ಕೂಡಾ ಈ ಕಾಲದಲ್ಲಿ ಜಾರಿಗೆ ತರಲಾಯ್ತು. ಇಂದಿಗೂ ಕೂಡಾ ಇದು ಭಾರತದಲ್ಲಿ ಚಾಲ್ತಿಯಲ್ಲಿದೆ. ಇದರ ಪ್ರಕಾರ ಅವರು ಯೂನಿವರ್ಸಿಟಿಯ ಆಡಳಿತವನ್ನೂ ಕೂಡಾ ಟೀಕಿಸಬಹುದಾಗಿದೆ. ಭಾರತದಲ್ಲಿ 1970ರ ದಶಕದ ತುರ್ತು ಪರಿಸ್ಥಿತಿಯ ಹೊತ್ತಿಗಂತೂ ಇದು ಶಿಕ್ಷಕರಿಗೆ ವರದಾನವಾಯ್ತು. ಆದರೆ ಸತೀಶ್‌ಚಂದ್ರ ಈ ಮೊದಲು ಭಾಗವಾಗಿದ್ದ ಯು.ಜಿ.ಸಿ. ಮಾತ್ರ ಇತ್ತೀಚಿನ ದಿನಗಳಲ್ಲಿ ತನ್ನ ಸತ್ವವನ್ನೇ ಕಳೆದುಕೊಂಡಿದೆ. 1977ರ ಹೊತ್ತಿಗೆ ಮೊರಾರ್ಜಿ ದೇಸಾಯಿ ಸರ್ಕಾರ ಬಂದಾಗ ಸತೀಶ್‌ಚಂದ್ರ ಅವರು ಇಂದಿರಾಗಾಂಧಿಯ ಅನುಯಾಯಿಯೆಂದು ಆಪಾದಿಸಿ ಸಾಕಷ್ಟು ತೊಂದರೆಯನ್ನೂ ಕೂಡಾ ನೀಡಲಾಗಿತ್ತು. ಆದರೆ ಸತೀಶ್ ಇಂತಹ ಅನುಭವವನ್ನು ಧೈರ್ಯದಿಂದಲೇ ಮುಖಾಮುಖಿಯಾಗಿದ್ದ ಕಾರಣ ಮೊರಾರ್ಜಿ ಬಳಗ ಪುನಃ ಅಂತಹ ತೊಂದರೆಯನ್ನು ನೀಡಲಿಲ್ಲವಾಗಿತ್ತು. ಆ ಕಾಲವೂ ಹಾಗೆ ಒಂದು ರೀತಿಯ ಪ್ರೌಢ ಮತ್ತು ನಾಗರಿಕವಾಗಿತ್ತು.



ಸತೀಶ್‌ಚಂದ್ರ

ಭಾರತದಲ್ಲಿ ಚರಿತ್ರಕಾರರೂ ಕೂಡಾ ನೇಶನ್ ಮೇಕಿಂಗ್ ಅಥವಾ ಅದನ್ನು ಕನ್ನಡದಲ್ಲಿ 'ರಾಷ್ಟ್ರಕಟ್ಟುವ' ಎನ್ನುವ ಶಬ್ದದಲ್ಲಿ ಕರೆಯಬಹುದಾದ ಪ್ರಕ್ರಿಯೆಯಲ್ಲಿ ಗಣನೀಯ ಪಾತ್ರವನ್ನು ವಹಿಸಿದ್ದರು. ಸಾಮಾಜಿಕ ಚಳವಳಿಗಳಲ್ಲೂ ಕೂಡಾ ಅವರು ಸಾಕಷ್ಟು ಮುಂಚೂಣಿಯಲ್ಲಿದ್ದರು. ಅವರು ಭಾರತದ ಅಭಿವೃದ್ಧಿ ಮತ್ತಿತರ ಸಂಗತಿಗಳ ಕುರಿತು ಸಾಕಷ್ಟು ಸಂವಾದವನ್ನು ಹುಟ್ಟು ಹಾಕುತ್ತಿದ್ದರು. ಆದರೆ ಇಂದಿನ ನವ ಉದಾರವಾದೀ ಪ್ರಜಾಸತ್ತೆ ಮಾತ್ರ ಇದೆಲ್ಲವನ್ನೂ ನಿರಾಕರಿಸಿ ಚರಿತ್ರೆ ಮತ್ತು ಚರಿತ್ರಶಾಸ್ತ್ರವನ್ನು ವ್ಯಂಗ್ಯಚಿತ್ರದ ಹಾದಿಗೆ ತಂದು ನಿಲ್ಲಿಸಿದೆ. ಸತೀಶ್‌ಚಂದ್ರ ಸುಮಾರು 17ನೆಯ ಶತಕದ ಹೊತ್ತಿಗೇನೇ ಜಾಗತಿಕವಾಗಿ ಹಾಗೂ ಭಾರತದಲ್ಲಿ ಸೃಷ್ಟಿಯಾದ ಬಂಡವಾಳಶಾಹೀತ್ವದ ಬಗೆಗೆ ವ್ಯಾಪಕ ಚರ್ಚಿಸುತ್ತಾ, ಸಮಕಾಲೀನ ಮತ್ತು ನಂತರದ ಭಾರತೀಯ ಸಮಾಜ ಮತ್ತು ಆರ್ಥಿಕತೆಯು ಇದಕ್ಕೆ ಸ್ಪಂದಿಸಿರಲಿಲ್ಲ ಎಂದು ಸಾಧಿಸುತ್ತಾರೆ. 17ನೇ ಶತಕದ ಭಾರತದಲ್ಲಿದ್ದ ಕೃಷಿ ಆರ್ಥಿಕತೆಯು ಈ ವ್ಯಾಪಾರೀ ಬಂಡವಾಳಶಾಹಿಯನ್ನು ಹುಟ್ಟುಹಾಕಲು ಕಾರಣವಾಗಲಿಲ್ಲವೆಂದರು. ಇಂತಹ ಚರ್ಚೆಯನ್ನು ಮುಂದೆ ಇರ್ಫಾನ್ ಹಬೀಬ್ ಹಾಗೂ ಬಿಪನ್‌ಚಂದ್ರ ಮುಂದುವರಿಸಿದರು. ಇದು ವಸಾಹತುಶಾಹೀ ಮೇಲೆ ಒದಗಿದ ಒಂದು ವಿಮರ್ಶೆಯ ರೀತಿಯಲ್ಲಿಯೂ ಒದಗಿತು.

ಪ್ರೊಫೆಸರ್ ಸತೀಶ್‌ಚಂದ್ರ ಭಾರತೀಯ ಅಕಡೆಮಿಕ್ಸ್ ಅನ್ನು ಅಂತಾರಾಷ್ಟ್ರೀಯ ಸ್ತರಗಳಿಗೊಯ್ದರು. ಅದೂ ಕೂಡಾ ಅತ್ಯಂತ ಸ್ವತಂತ್ರ ನೆಲೆಯಲ್ಲಿ. ಬಹುಶಃ ಯುನೆಸ್ಕೋವನ್ನು

ಪ್ರತಿನಿಧಿಸಿದ ಕೊನೆಯ ಅಕಡಮಿಕ್ ರಾಯಭಾರಿಯೆಂದರೆ ಸತೀಶ್‌ಚಂದ್ರ. ಯುನೆಸ್ಕೋ ಸೇರಿದಂತೆ ಅನೇಕ, ವೈಚಾರಿಕತೆಯನ್ನು ಪ್ರಧಾನವಾಗಿ ಪ್ರಕಟಪಡಿಸಿರುವ ಅನೇಕ ಸಂಘ, ಸಂಸ್ಥೆ ಚಳವಳಿಗಳಲ್ಲಿ ಭಾರತವನ್ನು ಪ್ರತಿನಿಧಿಸಿದ್ದು ಸತೀಶ್‌ಚಂದ್ರ. ತನ್ಮೂಲಕ ಸತೀಶ್, ನೇಶನ್ ಮೇಕಿಂಗ್ ಪ್ರಕ್ರಿಯೆಯ ಭಾಗಾಳುಗಳಾದರು. ಆರಂಭ ಮಧ್ಯಕಾಲೀನ ಚರಿತ್ರೆಯಿಂದ ಭಾರತವು ಹೊಂದಿರುವ ಚಾರಿತ್ರಿಕ ಸ್ಥಾನಮಾನವನ್ನು ಜಾಗತಿಕವಾಗಿ ಸತೀಶ್‌ಚಂದ್ರ ಸ್ಪಷ್ಟವಾಗಿ ಗುರುತಿಸಿದ್ದರು. ಬಹುಶ: ಇಂತಹ ಜ್ಞಾನವೇ ಅವರು ಅಂತಾರಾಷ್ಟ್ರೀಯ ಸಂದರ್ಭದ ರಾಯಭಾರವನ್ನು ವಹಿಸುವ ಸಾಮರ್ಥ್ಯವನ್ನು ನೀಡಿತು. ತೈಮೂರ್ ಸಾಂಸ್ಥಿಕ ಕೊಡುಗೆಗಳು ಹಾಗೂ ಬಳುವಳಿಯ ಬಗೆಗಿನ ಇವರ ವಿಶೇಷ ಅಧ್ಯಯನ ಹಲವು ಒಳನೋಟಗಳುಳ್ಳದ್ದಾಗಿದೆ. ಸತೀಶ್ ಪ್ರಕಾರ ಭಾರತವು, ಸೆಂಟ್ರಲ್ ಏಶ್ಯಾ ಮತ್ತು ತೈಮೂರ್‌ನಿಂದ ಸಾಕಷ್ಟು ಬಳುವಳಿಗಳನ್ನು ಪಡೆದ, ವಿಶೇಷವಾಗಿ ಮೊಘಲರು ಭಾರತದಲ್ಲಿ ಮೊತ್ತಮೊದಲು ಕಲ್ಪಿಸಿದ ಒಂದು ಪಂಥನಿರಪೇಕ್ಷತೆ (ಸೆಕ್ಯುಲರ್) ರಾಜ್ಯದ ಕಲ್ಪನೆಕೊಟ್ಟಿದ್ದು ತೈಮೂರ್ ಎನ್ನುವುದು ಸತೀಶ್ ಅಭಿಪ್ರಾಯ.

ಸತೀಶ್, 'ಸಿಲ್ಕ್ ರೋಡ್; ಎನ್ನುವ ಚಾರಿತ್ರಿಕ ಪರಿಕಲ್ಪನೆ ಮತ್ತು ಅನುಭವದ ಬಗ್ಗೆ ಸಾಕಷ್ಟು ತಕರಾರನ್ನು ಎತ್ತುತ್ತಾರೆ. ಅವರ ಪ್ರಕಾರ ಅದು ಸಿಲ್ಕ್ ರೋಡ್ ಅಷ್ಟೇ ಅಲ್ಲ, ಬದಲು ಅದರಲ್ಲಿ ಭಾರತದ ಬಹುತೇಕ ವಸ್ತುಗಳು ವ್ಯಾಪಾರವಾಗುತ್ತಿದ್ದ ಕಾರಣ, ಅದನ್ನು ಕೇವಲ ಸಿಲ್ಕ್ ರೋಡ್' ಎನ್ನುವುದು ತಪ್ಪೆನ್ನುವ ಅಭಿಪ್ರಾಯ ಅವರದ್ದಾಗಿತ್ತು. ತಮ್ಮ 'ಸ್ಟೇಟ್ ಅಂಡ್ ಇಕಾನಾಮಿಕ್ ಡೆವಲಪ್‌ಮೆಂಟ್ ಅಂಡರ್ ತೈಮೂರ್: ವಿತ್ ಸ್ಪೆಶಲ್ ರೆಫರೆನ್ಸ್ ಟು ದಿ ಸಿಲ್ಕ್ ರೋಡ್ ಎಂಡ್ ಗ್ರೇಟ್ 5 ಏಶ್ಯನ್ ಲ್ಯಾಂಡ್‌ರೂಟ್ಸ್' ಎನ್ನುವ ಪ್ರಬಂಧದಲ್ಲಿ ಈ ಸಂಗತಿಯನ್ನು ಚರ್ಚಿಸುತ್ತಾರೆ. ಭಾರತೀಯ ಚರಿತ್ರೆಯ ಒಂದು ಬಹುಚರ್ಚಿತ ಅಧ್ಯಾಯವಾದ, 'ಯೈಟೀಂಥ್ ಸೆಂಚುರಿ ಡಿಬೇಟ್' ಅನ್ನು ಭಾರತದ ಹೊರಗಿನ ಮತ್ತು ಒಳಗಿನ ಸ್ಥಳೀಯ ಶಕ್ತಿಗಳ ಮುಖಾಮುಖಿಯಾಗಿ ಅರ್ಥೈಸಲು ಪ್ರಯತ್ನಿಸುತ್ತಾರೆ. ಈ ಹೊತ್ತಿಗೆ ಮುಘಲ್ ಮತ್ತುಳಿದ ಭಾರತೀಯ ರಾಜರುಗಳು ಸೋಲಲು ಇದ್ದ ಮಹತ್ವದ ಕಾರಣವೆಂದರೆ ಅವರು 'ನೌಕಾ ಸೈನ್ಯವನ್ನು ಹೊಂದದಿದ್ದುದೆಂದು ಅಭಿಪ್ರಾಯಿಸುತ್ತಾರೆ. ಸತೀಶ್‌ಚಂದ್ರ ಇಂತಹ ವಾದಗಳನ್ನು ಮುಂದುವರಿಸಿ ಪರೀಕ್ಷಿಸುವ ಸಲುವಾಗಿ 'ಸೆಂಟರ್ ಫಾರ್ ಇಂಡಿಯನ್ ಓಶಿಯನ್ ಸ್ಟಡೀಸ್' ಅನ್ನು ಸ್ಥಾಪಿಸಿದರು. ತನ್ಮೂಲಕ ಭಾರತದ ಚರಿತ್ರೆಯ ಸಮುದ್ರದ ಮೇಲಿನ ವ್ಯಾಪಾರ ಮತ್ತದರ ರಾಜಕೀಯ ಆಯಾಮದ ಚರ್ಚೆಯನ್ನೂ ಕೂಡಾ ಬಹಳ ಗಂಭೀರವಾಗಿ ಪರಿಗಣಿಸುತ್ತಾರೆ.

ಬಹುಶ: ಭಾರತೀಯ ಪಠ್ಯಪುಸ್ತಕ ಚರಿತ್ರೆ ಮತ್ತು ಪರಂಪರೆಯಲ್ಲಿ ಅತ್ಯಂತ ಪ್ರಮುಖ ಎಂದು ಪರಿಗಣಿತವಾದ ಮೂರು ಪಠ್ಯಪುಸ್ತಕಗಳಲ್ಲಿ ಒಂದನ್ನು ಸತೀಶ್‌ಚಂದ್ರ ಬರೆದಿರುವುದು ಗಣನೀಯವಾಗಿದೆ. ಎನ್.ಸಿ.ಇ.ಆರ್.ಟಿಯು ತಂದ ಆರ್.ಎಸ್. ಶರ್ಮಾರ **ಏನ್ಶಿಯಂಟ್‌ಇಂಡಿಯಾ**, ಬಿಪನ್‌ಚಂದ್ರರ **ಮಾಡರ್ನ್‌ಇಂಡಿಯಾ** ಮತ್ತು ಸತೀಶ್‌ಚಂದ್ರ ಅವರ **ಮಿಡೀವಲ್ ಇಂಡಿಯಾ** ಅಂತಹ ಮೂರು ಪಠ್ಯಗಳಾಗಿವೆ. ಸುಮಾರು 2002ರ ಸುಮಾರಿಗೆ ಎನ್.ಡಿ.ಎ ಸರ್ಕಾರ ಇವುಗಳನ್ನು ನಿಷೇಧಿಸಿ ಅಥವಾ ವಾಪಾಸ್ ತೆಗೆದುಕೊಂಡು, ಮಕ್ಕನ್‌ಲಾಲ್–ಮೀನಾಕ್ಷಿಜೈನ್‌ರಂತಹ ಹಿಂದುತ್ವದ ತಂಡದ ಪಠ್ಯಗಳನ್ನು ತರುವವರೆಗೆ

ಈ ಮೂರು ಪಠ್ಯಗಳು ಅತ್ಯಂತ ಪ್ರಸಿದ್ಧ ಮತ್ತು ಅಕಡಮಿಕ್ ಆಗಿದ್ದುವು. ಅಂದು ಇವುಗಳನ್ನು ವಾಪಾಸ್ ತೆಗೆದುಕೊಂಡರೂ ಕೂಡಾ ಯು.ಪಿ.ಎಸ್.ಸಿ ಅಥವಾ ಕೇಂದ್ರ ಲೋಕಸೇವಾ ಆಯೋಗ ನಡೆಸುವ ಪರೀಕ್ಷೆಗಳಿಗೆ ಇವು ಅತ್ಯಂತ ಮೂಲಭೂತ ಪಠ್ಯಗಳೆನಿಸಿದುವು. ಈ ಕಾರಣಕ್ಕಾಗಿ ಈಗಲೂ ಕೂಡಾ ಇವುಗಳನ್ನು ಎನ್.ಸಿ.ಇ.ಆರ್.ಟಿಯು 'ವಿಶೇಷ ಉದ್ದೇಶಕ್ಕಾಗಿ' ಎಂಬ ಹಣೆಪಟ್ಟಿಯಲ್ಲಿ ಮುದ್ರಿಸುತ್ತಿದೆ. ಬಹುಶ: ಭಾರತದಲ್ಲಿ ಈ ಮೂರು ಪಠ್ಯಪುಸ್ತಕಗಳದ್ದು ಒಂದು ರೀತಿ ಚರಿತ್ರೆಯೇ ಸರಿ. ಯುವಪೀಳಿಗೆ ಈ ಚರಿತ್ರೆಯ ಪಠ್ಯಗಳಿಂದ ಒಂದು ಪ್ರಾಥಮಿಕ ನೆಲೆಯ ಸಂಶೋಧನೆಯ ಮೇಲಿನ ಬಹ್ವರ್ಥ ಮತ್ತು ಆಯಾಮದ ಚರಿತ್ರೆಯನ್ನು ತಿಳಿಯುವಂತಾಯಿತು. ಭಾರತದಲ್ಲಿನ ಇದರ ಓದುಗರು ಹೇಗೆ ಸುಮಾರು 8ನೆಯ ಶತಕದಿಂದ ಬ್ರಿಟಿಷರು ಆಳುವವರೆಗೆ ಭಾರತ ಚಾರಿತ್ರಿಕವಾಗಿ ವಿಕಾಸವಾದ ಕ್ರಮವನ್ನು ಈ ಕೃತಿಯ ಮೂಲಕ ಗ್ರಹಿಸುತ್ತಾರೆ. ಈ ಹೊತ್ತು ಸಂಘರ್ಷ, ತಳಮಳ ಹಾಗೂ ಬಿಕ್ಕಟ್ಟುಗಳ ಜತೆ-ಜತೆಯಲ್ಲೇ ಸಾಮರಸ್ಯ, ಕೊಡು-ಕೊಳ್ಳುವಿಕೆ, ಸಂಧಾನ ಮತ್ತು ದೇಸೀಕರಣದ ಪ್ರಕ್ರಿಯೆಗಳಂತಹ ಸಂಗತಿಗಳೂ ಕೂಡಾ ವಿಫುಲವಾಗಿ ನಡೆದಿದ್ದವೆನ್ನುವುದನ್ನೂ, ಹಾಗೂ ತನ್ಮೂಲಕ ಒಂದು ವಿನೂತನ ಬಗೆಯ ಸಾಹಿತ್ಯ, ಸಂಗೀತ, ಭಾಷೆ, ಕಲೆ-ವಾಸ್ತುಶಿಲ್ಪ ಮತ್ತು ಧರ್ಮ-ಸಂಪ್ರದಾಯ-ನಂಬುಗೆಗಳು ಕಸಿಗೊಂಡು ವಿಕಾಸಗೊಂಡ ಬಗೆಯನ್ನೂ ಕೂಡಾ ತಿಳಿಸುತ್ತದೆ. ಇಂತಹ ಸಮ್ಮಿಶ್ರ ಸಂಸ್ಕೃತಿಯನ್ನು ಗುರುತಿಸುವ ಕ್ರಮವೇ ಅತ್ಯಂತ ವಿನೂತನವಾದುದಾಗಿದೆ. ಇದೊಂದು ಸತೀಶ್‌ಚಂದ್ರ ಅವರ ಧೈರ್ಯ ಮತ್ತು ಬದ್ಧತೆಯ ನಿದರ್ಶನವಾಗಿಯೂ ಕೂಡಾ ತುಂಬಾ ಮುಖ್ಯವಾದುದು. ರಾಷ್ಟ್ರೀಯ ಬಿಕ್ಕಟ್ಟುಗಳು, ಕೋಮುವಾದ, ಚರಿತ್ರೆಯ ಕೋಮುವಾದೀಕರಣ, ಕೇಸರೀಕರಣ ಮುಂತಾದ ಸಂಗತಿಗಳಿಗೆ ವಿಮರ್ಶೀಯ ನೆಲೆಯ ಪ್ರತಿಕ್ರಿಯೆಯನ್ನು ನೀಡುತ್ತಾ ಪಂಥ ನಿರಪೇಕ್ಷತೆ (ಸೆಕ್ಯುಲರಿಸಂ) ಮತ್ತು ರಾಷ್ಟ್ರೀಯ ಸಮಗ್ರತೆಯ ಮೌಲ್ಯಗಳನ್ನು ಎತ್ತಿ ಹಿಡಿಯುವ ಸಾರ್ವಜನಿಕ ಬುದ್ಧಿಜೀವಿತ್ವದ ಆಯಾಮ ಮತ್ತು ಮನೋಭಾವವನ್ನೂ ಕೂಡಾ ಅವರು ಹೊಂದಿದ್ದರು. ಯುರೋಪಿನ ಅಥವಾ ಪಶ್ಚಿಮದ ವಿದ್ವಾಂಸರ ಟೀಕೆ ಟಿಪ್ಪಣಿಗಳ ಹೊರತಾಗಿಯೂ ಅವರು ತಮ್ಮ ನಿಲುವು ಮತ್ತು ಮನೋಭಾವದಿಂದ ಕದಲಲಿಲ್ಲ. ಇದೇ ಹೊತ್ತಿಗೆ ಚರಿತ್ರೆ ಮತ್ತು ಚರಿತ್ರಶಾಸ್ತ್ರವನ್ನು ವಿರೂಪಗೊಳಿಸಿದ ಬ್ರಿಟೀಷರು, ರಾಷ್ಟ್ರೀಯವಾದಿಗಳು, ಕೋಮುವಾದಿಗಳು ಹಾಗೂ ಗುರುತು-ಅಸ್ಮಿತೆಯ ರಾಜಕಾರಣ ಮಾಡುವ ಮೂಲಭೂತವಾದಿಗಳಿಗೆ ಶರಣಾಗಿ ಕನಿಕರವನ್ನೂ ತೋರಲಿಲ್ಲ. ಜೋಧಾಬಾಯಿ ಮತ್ತು ಪದ್ಮಾವತಿ ಬಗೆಗಿನ ಅವರ ಸ್ಫುಟವಾದ ಬರಹಗಳನ್ನು ಕೆಲವು ವಿದ್ವಾಂಸರು ನಿಗೂಢವೆನ್ನುವ ರೀತಿಯಲ್ಲಿ ತಟಸ್ಥತೆಯನ್ನು ತೋರಿದರೂ ಕೂಡಾ ಸತೀಶ್ ಖಡಾಖಂಡಿತವಾಗಿ ಅವುಗಳ ಚಾರಿತ್ರಿಕತೆಯನ್ನು ನಿರಾಕರಿಸಿದರು. ಅವರಿಗೆ ಆರ್ಯ-ದ್ರಾವಿಡ ಪರಿಕಲ್ಪನೆಗಳೂ ಕೂಡಾ ತೀರಾ ಚರಿತ್ರೆಯ ಅಪವ್ಯಾಖ್ಯಾನಗಳೇ ಆಗಿದ್ದುವು. ಬಹುಶಃ ಚರಿತ್ರೆ ಮತ್ತು ಅದರ ಸೆಕ್ಯುಲರ್ ನಿರ್ವಚನದ ಬಗೆಗಿನ ಸತೀಶ್ ಚಂದ್ರ ಅಂತವರ ಬದ್ಧತೆಯು ಸ್ವಾತಂತ್ರ್ಯೋತ್ತರ ಸಂದರ್ಭದ ಒಂದು ಸ್ವತಂತ್ರ, ವಸ್ತುನಿಷ್ಠ ಮತ್ತು ನಿರ್ಭಿಡೆಯ ಹಿಸ್ಟೋರಿಯೋಗ್ರಫಿಯ ಸಂಪ್ರದಾಯ ಬೆಳೆಯಲು ಕಾರಣವಾಯಿತು. ಇದು ಸ್ವಾತಂತ್ರ್ಯೋತ್ತರ ಸಂದರ್ಭದ ಅನೇಕ ಚಾರಿತ್ರಿಕ ವಿವಾದಗಳಿಗೆ ಅತ್ಯಂತ ನಿಷ್ಠುರ, ವೈಚಾರಿಕ ಮತ್ತು ಕಟುವಾದ ಉತ್ತರವನ್ನೂ ನೀಡಿತು.

ಸತೀಶ್‌ಚಂದ್ರ ಒಬ್ಬ ಮಾನವೀಯ ಅಂತಃಕರಣದ ವ್ಯಕ್ತಿಯೂ ಆಗಿದ್ದರು. ತಮ್ಮೆಲ್ಲಾ ವಿದ್ಯಾರ್ಥಿ ಮತ್ತು ಒಡನಾಡಿಗಳಿಗೆ 'ಸತೀಶ್ ಸಾಬ್' ಆಗಿದ್ದರು. 2014ರಲ್ಲಿ ಸತೀಶ್‌ಚಂದ್ರ ಇಂಡಿಯನ್ ಹಿಸ್ಟರಿ ಕಾಂಗ್ರೆಸ್‌ನ ಕಾರ್ಯದರ್ಶಿಯಾಗಿ ವಾರ್ಷಿಕ ಸಮ್ಮೇಳನವನ್ನು ತನ್ನ ವಿಶ್ವವಿದ್ಯಾನಿಲಯವಾದ ಜೆ.ಎನ್.ಯುವಲ್ಲೇ ಸಂಘಟಿಸಿದ್ದರು. ಹೃದಯಕ್ಕೆ ಆಗಷ್ಟೇ ಸ್ಟಂಟ್ ಅಳವಡಿಸಿಕೊಂಡಿದ್ದ, ಪ್ರತೀದಿನ ಡಯಾಲಿಸಿಸ್‌ಗೆ ಒಳಗಾಗಬೇಕಿದ್ದ ಸತೀಶ್, ನೇರವಾಗಿ ಆಸ್ಪತ್ರೆಯಿಂದಲೇ ಹಿಸ್ಟರಿ ಕಾಂಗ್ರೆಸ್‌ನ ಅಧಿವೇಶನಕ್ಕೆ ಬಂದಿದ್ದರು. ಇಂಡಿಯನ್ ಹಿಸ್ಟರಿ ಕಾಂಗ್ರೆಸ್‌ನ **ಕಂಪ್ರಹೆನ್ಸಿವ್ ಹಿಸ್ಟರಿ ಆಫ್ ಇಂಡಿಯಾ** ಸರಣಿಯ ಸಂಪಾದಕರಾಗಿ ತೀರಾ ಇತ್ತೀಚಿನವರೆಗೂ ಸಕ್ರಿಯರಾಗಿದ್ದರು. ಈಗಿನ ಅಕಡೆಮಿಕ್ ವಲಯ ಅತ್ಯಂತ ಸಂಕುಚಿತ, ಅವಕಾಶವಾದೀ, ಅ–ಸಂವೇದನಶೀಲವಾಗುತ್ತಿರುವ ಮತ್ತು ಮೂಲಭೂತವಾದಿಯಾಗುತ್ತಿರುವ ಸಂದರ್ಭದಲ್ಲಿ ಸತೀಶ್‌ಚಂದ್ರರಂತಹ ವಿದ್ವಾಂಸರ ನಿರ್ಗಮನ ಒಂದು ರೀತಿಯ ಬೌದ್ಧಿಕ ಮೌನ ಮತ್ತು ಶೂನ್ಯತೆಯನ್ನಷ್ಟೇ ಸೃಷ್ಟಿಸುತ್ತದೆ.

ಸತೀಶ್ ಚಂದ್ರ ಅವರ ಚರಿತ್ರೆಯ ಗ್ರಹಿಕೆ ರೂಪುಗೊಳ್ಳುವ ಸಂದರ್ಭದಲ್ಲಿ ಅಲಹಾಬಾದ್ ವಿಶ್ವವಿದ್ಯಾಲಯದ ವಾತಾವರಣ ವಿಶೇಷವಾಗಿ ಅಲ್ಲಿನ ದ್ವಂದ್ವ ಪೂರಿತ ವಾತಾವರಣ ಪ್ರಮುಖವಾದುದಾಗಿತ್ತು. ಅದು ಇವರನ್ನು ಅತ್ಯಂತ ಸಂಕೀರ್ಣವಾದ ಚರಿತ್ರೆಯ ಗ್ರಹಿಕೆ ಸಾಧಿಸಲು ಕಾರಣವಾಗಿಸಿತು. ಇಂತಹ ಗೃಹಿಕೆಯು ಮಧ್ಯಯುಗೀನ ಚರಿತ್ರೆಯ ಫಿರೋಜ್ ತುಘಲಕ್ ಹಾಗೂ ಔರಂಗಜೇಬ್ ಜತೆ ತೀರಾ ಆಪ್ತವಾಗಿರದಿದ್ದರೂ ಕೂಡಾ, ಇವರ ಬಗೆಗಿನ ಈ ಮೊದಲ ಕ್ರೂರ ಚರಿತ್ರ ಶಾಸ್ತ್ರೀಯ ನಿರೂಪಣೆಗಳಲ್ಲಿ ಒಂದಾದ ಜದುನಾಥ್ ಸರ್ಕಾರ್ ಅವರ ನಿರೂಪಣೆಯನ್ನು ತಾತ್ವಿಕವಾಗಿ ವಿರೋಧಿಸಿತು. ವಿಶೇಷವಾಗಿ ಔರಂಗಜೇಬ್ ಬಗ್ಗೆ ಫಿರೋಜ್ ಷಾ ತುಗಲಕ್ ಕ್ಕಿಂತಲೂ ಸಂಕೀರ್ಣ ನಿಲುವನ್ನು ಅಲಹಾಬಾದ್ ಹೊಂದಿತ್ತಾದ ಕಾರಣ, ಸುಮಾರು 1944ರಲ್ಲಿ ಸಿವಿಲ್ ಸರ್ವೀಸ್ ತಯಾರಿ ನಡೆಸುತ್ತಿದ್ದ ಸತೀಶ್ ಚಂದ್ರ, ಈ ದ್ವಂದ್ವದ ಕುತೂಹಲ ಮತ್ತದರ ಪರೀಕ್ಷೆಯಿಂದ ತಮ್ಮ ಪಿಎಚ್.ಡಿ ಮಾರ್ಗದರ್ಶಕ ಆರ್.ಪಿ. ತ್ರಿಪಾಠಿಯವರ ಒತ್ತಾಸೆ ಮನೋಭಾವದಿಂದ ಈ ದ್ವಂದ್ವವನ್ನು ಪರೀಕ್ಷಿಸುವ ಸಲುವಾಗಿ **ಪಾರ್ಟೀಸ್ ಆಂಡ್ ಪಾಲಿಟಿಕ್ಸ್ ಯಟ್ ದಿ ಮುಘಲ್ ಕೋರ್ಟ್** (ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್: 2002) ಎನ್ನುವ ವಿಷಯವಾಗಿ ಸಂಶೋಧನೆ ನಡೆಸಿದರು. ಸತೀಶ್ ಇದರ ಸಲುವಾಗಿ ಸ್ವತಃ ಕಲ್ಕತ್ತಾದಲ್ಲಿ ಆಗಷ್ಟೇ ನಿವೃತ್ತಿಯಾಗಿದ್ದ ಜದುನಾಥ್ ಸರ್ಕಾರ್ ಅವರ ಖಾಸಗೀ ಗ್ರಂಥಾಲಯದಲ್ಲಿ ತಿಂಗಳುಗಟ್ಟಲೆ ಕಳೆಯುವಂತಾಯಿತು. ನಂತರ ಪಾಟ್ನಾದ ಖುದಾಭಕ್ಷ್ ಗ್ರಂಥಾಲಯ, ಆಲಿಘಡ್ ಗ್ರಂಥಾಲಯ, ಮಧ್ಯಪ್ರದೇಶದ 'ಸಿತಾಮೋ' ಗ್ರಂಥಾಲಯ ಸೇರಿದಂತೆ ಹಲವು ವರ್ಷಗಳ ಕಾಲ ಗ್ರಂಥಾಲಯಗಳಲ್ಲಿ ಕಾಲ ಕಳೆಯಬೇಕಾಯಿತು. ಇದರಿಂದ ಸತೀಶ್ ಚಂದ್ರ ಎರಡು ಉಪಯೋಗಗಳನ್ನು ಪಡೆದರು. ಒಂದು: ಜದುನಾಥ್ ಸರ್ಕಾರ್ ಯಾವಾಗಲೂ ಆರ್.ಪಿ. ತ್ರಿಪಾಠಿ ಅವರಂತಹ ಅಲಹಾಬಾದ್‌ನ ಪ್ರಾಧ್ಯಾಪಕರುಗಳನ್ನು 'ಸೋಮಾರಿ'ಗಳೆಂದು ಜರಿಯುತ್ತಿದ್ದರು. ಅಂತವರ ಕೈಯಲ್ಲಿ ದಣಿವಾಗುವಷ್ಟು ಗ್ರಂಥಾಲಯ ಕೆಲಸದ ಅಣತಿ ಮತ್ತು ಮಾರ್ಗದರ್ಶನವನ್ನು ಪಡೆದಿದ್ದು. ಎರಡು: ಹೀಗೆ ಬೇರೆ ಬೇರೆ ಪಂಥಗಳನ್ನು ಪ್ರತಿನಿಧಿಸುತ್ತಿದ್ದ ಗ್ರಂಥಾಲಯ,

ವಿಶ್ವವಿದ್ಯಾಲಯಗಳಲ್ಲಿ ಸಂಚರಿಸಿ ಅಲ್ಲಿ ಆಚರಣೆಯಲ್ಲಿದ್ದ ತಾತ್ವಿಕ ವಾಗ್ವಾದಗಳಿಗೆ ತಮ್ಮನ್ನು ಒಡ್ಡಿಕೊಳ್ಳುತ್ತಾ ಅವುಗಳಲ್ಲಿನ ಒಳ್ಳೆಯ ವಿಷಯಗಳನ್ನು ಸ್ವೀಕರಿಸುತ್ತಾ ಆಕ್ಷೇಪಣೆಗಳಿಗೆ ತೀರಾ ಕ್ರಿಟಿಕಲ್ ಆದ ವಾದ ಮತ್ತು ವಿಮರ್ಶೆಯನ್ನು ರೂಪಿಸಿಕೊಳ್ಳಲು ಸಾಧ್ಯವಾಯಿತು. ಬಹುಶಃ ಈ ಸಾಧ್ಯತೆಯಿಂದ ಸತೀಶ್ ವಾದಗಳನ್ನು ಹೀರಿ, ಸಾಪೇಕ್ಷವಾಗಿ ಸ್ವೀಕರಿಸಿ, ತನ್ಮೂಲಕ ಇವುಗಳೆಲ್ಲವನ್ನೂ ಮೀರಿದ ಒಂದು ಸಂವಾದದ ಸ್ಥಿತಿಯನ್ನು ಈ ಮೂಲಕ ಸಾಧಿಸಲು ಕಾರಣವಾಯಿತು. ಮುಖ್ಯವಾಗಿ ಸತೀಶ್, ಅಲಹಾಬಾದ್ ಚರಿತ್ರೆ ಬರವಣಿಗೆಯ ಪಂಥ ಪ್ರತಿನಿಧಿಸುತ್ತಿದ್ದ, ಜರ್ಮನ್ ಚಾರಿತ್ರಿಕವಾದ ಹಾಗೂ ಅದು ಮುಖ್ಯವಾಗಿ ಪರಿಗಣಿಸಿದ್ದ 'ವಾಸ್ತವಾಂಶ' (ಫ್ಯಾಕ್ಟ್) ಮತ್ತು ಅದರ ಆಧಾರದ ಮೇಲಿನ ವಿವರಣೆಯಿಂದ ಕೊಡವಿಕೊಂಡು ಏಳಲು ಕಾರಣವಾಯಿತು. ನಂತರ ಸುಮಾರು 1953ರಲ್ಲಿ ಸತೀಶ್ ಪ್ರವಾಚಕರಾಗಿ ಅಲಿಘಡ್ ಮುಸ್ಲಿಂ ವಿಶ್ವವಿದ್ಯಾಲಯ ಸೇರುವ ಸಂದರ್ಭದಲ್ಲಿ ಭಾರತದಲ್ಲಿ ಆಗಷ್ಟೇ ಮಾರ್ಕ್ಸಿಸ್ಟ್ ಹಿಸ್ಟೋರಿಯೋಗ್ರಫಿ ಪ್ರವೇಶ ಕಂಡುಕೊಂಡಿತ್ತಾದ ಕಾರಣ, ಒಂದು ಸರ್ವ ಸಿದ್ಧವಾದ ತಾತ್ವಿಕ ಗ್ರಹಿಕೆ ಮತ್ತು ವಿಮರ್ಶೆ ನಂತರದ ಅವರ ಅಧ್ಯಯನಗಳಲ್ಲಿ ಕಂಡುಬಂದಿತು.

ಸತೀಶ್ ಚಂದ್ರ ಅವರ ಅತ್ಯಂತ ಆರಂಭದ ಚರಿತ್ರೆಯ ಬರವಣಿಗೆಯಾದ **ಪಾರ್ಟೀಸ್ ಅಂಡ್ ಪಾಲಿಟಿಕ್ಸ್ ಅಟ್ ದಿ ಮುಘಲ್ ಕೋರ್ಟ್** ಚರಿತ್ರಶಾಸ್ತ್ರೀಯ ದೃಷ್ಟಿಯಿಂದ ಕೂಡಾ ಬಹಳ ಮಹತ್ವದ ಪ್ರವೇಶವೆಂದೇ ಹೇಳಬಹುದು. ಈ ಕೃತಿಯಲ್ಲಿ ಜದುನಾಥ್ ಸರ್ಕಾರ್ ಅವರು ಮಧ್ಯಯುಗೀನ ಚರಿತ್ರೆ, ಮುಘಲರು ಮತ್ತು ಔರಂಗಜೇಬನ ವಿರುದ್ಧ ಮಾಡಿದ ಅನೇಕ ವಾದಗಳನ್ನು ಹೊಸ ತಥ್ಯ ಹಾಗೂ ವಿವರಣೆಗಳೊಂದಿಗೆ ಮುಖಾಮುಖಿಯಾಗಿಸಿದರು. ಅದುವರೆಗೂ ಮುಘಲರ ನಾಶ ಉಂಟಾಗಿದ್ದು ಔರಂಗಜೇಬನ ಧಾರ್ಮಿಕ ನೀತಿಯ ಕಾರಣದಿಂದ ಎನ್ನುವ ಪ್ರಮೇಯವನ್ನು ಅತ್ಯಂತ ಕ್ರಿಟಿಕಲ್ ಆಗಿ ನಿರ್ವಹಿಸಿ ನೋಡಿದರು. ಮುಘಲರ ನಾಶವು ಅತಿಯಾದ ಸಾಮ್ರಾಜ್ಯ ವಿಸ್ತಾರ, ಮಧ್ಯ ಏಷ್ಯಾದಿಂದ ವಲಸೆ ಬಂದ ಅನೇಕ ವಲಸಿಗ ಸಮುದಾಯಗಳು, ಮಹತ್ವಾಕಾಂಕ್ಷಿ ಕುಲೀನ ರಾಜಕಾರಣ, ಮರಾಠಾ ರಾಜಕಾರಣದ ಪ್ರಾಬಲ್ಯ ಮತ್ತು ವರ್ಧನೆಗಳಂತಹ ಅಂಶಗಳನ್ನು ಮುನ್ನೆಲೆಗೆ ತಂದರು. ಅವರು ನಿರೂಪಿಸಿದ 'ಜಾಗಿರ್‌ದಾರಿ ಬಿಕ್ಕಟ್ಟು' ಅಂತೂ ಮುಘಲರ ಅವನತಿಯ ಸಂದರ್ಭದ ಪ್ರಮುಖ ನಿರೂಪಣೆಯಾಗಿ ಇಂದಿಗೂ ಇದೆ. ಬಹುಶಃ ಅಲಹಾಬಾದ್ ಸಂದರ್ಭ ಮತ್ತು ತುರ್ತು 'ಸತೀಶ್ ಚಂದ್ರ ಇನ್ ಮೇಕಿಂಗ್'ಅನ್ನು ನಿರ್ವಹಿಸಿತು.

ಸತೀಶ್ ಚಂದ್ರ ಸುಮಾರು 1993ರಲ್ಲಿ ಬರೆದ **ಮುಘಲ್ ರಿಲೀಜಿಯಸ್ ಪಾಲಿಸೀಸ್: ದಿ ರಜಪೂತ್ಸ್ ಅಂಡ್ ದಿ ಡೆಕ್ಕನ್** ಕೃತಿಯು ಡೆಕ್ಕನ್ ಮತ್ತು ರಜಪೂತರ ನಡುವೆ ಮುಘಲರ ಧಾರ್ಮಿಕ ನೀತಿಯನ್ನು ಪರೀಕ್ಷಿಸುತ್ತದೆ. ಸುಮಾರು 1992–93ರ ಅಯೋಧ್ಯಾ ಬಿಕ್ಕಟ್ಟಿನ ಹೊತ್ತಿಗೆ ಹೊರ ಬಂದ ಈ ಕೃತಿ ಚರಿತ್ರೆಯನ್ನು ರಾಜಕೀಯ ಉದ್ದೇಶಗಳಿಗಾಗಿ ಬಳಸುವ ಮತ್ತು ನಿಯಂತ್ರಿಸುವ ವಿರುದ್ಧ ಮಾಡಿರುವ ತುಂಬಾ ಪ್ರಬಲವಾದ ಪ್ರತಿಕ್ರಿಯೆಯ ರೂಪದಲ್ಲೂ ಕಾಣಿಸುತ್ತದೆ. ಚರಿತ್ರೆಯನ್ನು ಸಪಾಟಾಗಿ ಕಾಣುವ ವಿರುದ್ಧದ ಮತ್ತು ಚರಿತ್ರೆಯ ಆನುಷಂಗಿಕ ಗುಣವಾದ ಪ್ರಕ್ರಿಯೆಯನ್ನು ಮನದಟ್ಟು ಮಾಡುವ ಪ್ರಯತ್ನವೂ ಕೂಡಾ ಈ ಕೃತಿಯಲ್ಲಿದೆ. ಆ ಕಾಲದ ಧಾರ್ಮಿಕ ಸಂಸ್ಥೆಗಳು ಮತ್ತು ಸ್ವರೂಪವಾದ

ಜೆಝಿಯಾ ತೆರಿಗೆ, ಧಾರ್ಮಿಕ ದಾನ (ಇನಾಮು)ಗಳು, ಇವುಗಳ ನಡುವಿನ ಪರಸ್ಪರ ಸಂಬಂಧ, ಇವುಗಳು ಹಾಗೂ ಸಾಮ್ರಾಜ್ಯದವರೆಗೆ ವಿಸ್ತೃತವಾದ ಕೇಂದ್ರೀಕೃತ ರಾಜಕೀಯ ವ್ಯವಸ್ಥೆಯ ಸಂಬಂಧವೇ ಮುಂತಾದ ವಿವೇಚನೆಗಳನ್ನು ಮುಂದಿಡುತ್ತದೆ. ಸತೀಶ್ ಪ್ರಕಾರ ಈ ಸಂಸ್ಥೆಗಳ ಸಂಕೀರ್ಣ ಸಂಬಂಧದ ನೆಲೆ ಗೋಚರವಾಗದಿದ್ದರೆ ಆಗಿನ ವಾಸ್ತವ, ನಂತರದ ಚರಿತ್ರೆ ಹಾಗೂ ಈಗಿನ ವರ್ತಮಾನ ಅರ್ಥವಾಗುವುದಿಲ್ಲವೆಂಬ ಮಾತು ಅತ್ಯಂತ ಗಮನಾರ್ಹವಾದುದಾಗಿದೆ. ಮುಘಲರ ಪತನದೊಂದಿಗೂ ಇದನ್ನು ತಾಳೆ ಹಾಕಿ ಸತ್ಯ ಶೋಧಿಸಬೇಕೆನ್ನುವುದು ಸತೀಶ್ ಅಭಿಪ್ರಾಯ. ಆದಾಗ್ಯೂ ಮುಘಲ್ ಧಾರ್ಮಿಕ ನೀತಿಯ ಚರ್ಚೆಯ ಸಂದರ್ಭದಲ್ಲಿ ಸತೀಶ್ ಅತ್ಯಂತ ಮುಖ್ಯವಾಗಿ ಗಮನಿಸುವುದು ಅತ್ಯಂತ ಪ್ರಬಲವಾದ ಸಾಮಾಜಿಕ ಮತ್ತು ಆರ್ಥಿಕ ಮೂಲಾಂಶಗಳತ್ತ. ಇವುಗಳೇ ಒಂದು ಸಂಕೀರ್ಣ ರಾಜಕೀಯ ಮತ್ತು ಧಾರ್ಮಿಕ ಪರಿವೇಷವನ್ನು ನಿರ್ಮಿಸುವಂತದ್ದು ಎನ್ನುವುದು ಇವರ ಅಭಿಪ್ರಾಯ. ಅದು ಸಮಕಾಲೀನ ಸಂದರ್ಭಕ್ಕೂ ಅನ್ವಯವಾಗುತ್ತದೆ ಎನ್ನುವುದು ಸತೀಶ್ ಅವರ ನಂಬಿಕೆ ಕೂಡಾ ಆಗಿತ್ತು. ಆಗಿನ ರಜಪೂತ, ದಖ್ಖನ್ನಿನ ರಾಜಕಾರಣ ಮತ್ತು ಸಮಾಜ ಸಮಕಾಲೀನ ಧಾರ್ಮಿಕ ನೀತಿಯನ್ನು ಅದರ ಸ್ವರೂಪವನ್ನು ನಿರ್ಮಿಸಿತ್ತೆನ್ನುವುದು ಅವರ ಪ್ರಮುಖ ವಾದವಾಗಿತ್ತು. ಈ ಕೃತಿಯ ಅನೇಕ ಬರಹಗಳು ಅದುವರೆಗಿನ ಸಾಂಪ್ರದಾಯಿಕ ಸಾಮ್ರಾಜ್ಯಶಾಹೀ–ವಸಾಹತುಶಾಹೀ–ರಾಷ್ಟ್ರೀಯವಾದೀ ಚರಿತ್ರೆಯ ವಿಭಾಗೀಕರಣವನ್ನು ಮೀರಿದುವು. ಉದಾಹರಣೆಗೆ ಅಂತಹ ಒಂದು ಲೇಖನದ ತಲೆಬರಹ ಹೀಗಿದೆ: 'ಮುಘಲ್ ರಜಪೂತ್ ರಿಲೇಷನ್ಸ್ ಡ್ಯೂರಿಂಗ್ ದಿ ಸವೆಂಟೀನ್ತ್ ಸೆಂಚುರಿ: ಪ್ರಾಬ್ಲಮ್ಸ್ ಆಫ್ ಎ ಕ್ಲಾಸ್ ಅಲಯನ್ಸ್'. ಈ ರೀತಿ ಇದು ಬರೀ ತಲೆ ಬರಹವಾಗದೇ ಅದುವರೆಗಿನ ಪೂರ್ವಾಗ್ರಹ ಪೀಡಿತ ಕೋಮುವಾದೀ ನಿರೂಪಣೆಗಳನ್ನು ಕೂಡ ತಾತ್ವಿಕವಾಗಿ ಮತ್ತು ವೈಚಾರಿಕವಾಗಿ ಮುಖಾಮುಖಿಯಾಗಿ ಹೊಸ ಪರಿಭಾಷೆ ಹಾಗೂ ಡಿಸ್‌ಕೋರ್ಸ್‌ಗಳಿಗೆ ಕಾರಣವಾಯಿತು. ಮುಘಲ್–ರಜಪೂತ್ ಸಂಬಂಧವನ್ನು ಸತೀಶ್ 'ಆಳುವ ವರ್ಗದ ನಡುವಿನ ವರ್ಗ ಮೈತ್ರಿ' ಎಂದೇ ಅಭಿಪ್ರಾಯಿಸುತ್ತಾರೆ. ಈ ಮೈತ್ರಿಯ ಮೂಲಭೂತ ದ್ರವ್ಯವೇ ರಾಜಕೀಯ ಮತ್ತು ಆರ್ಥಿಕ ಅಂಶಗಳಾಗಿದ್ದುವು. ಮುಘಲ್ ರಜಪೂತರ ಸಂಬಂಧದಲ್ಲಿ ಸತೀಶ್ ಮೂರು ಹಂತವನ್ನು ಗುರುತಿಸುತ್ತಾರೆ, ಒಂದು: ಅಕ್ಬರ್ ಅವಧಿ. ಎರಡು: ಜಹಾಂಗೀರ್ – ಷಾಜಾನ್ ಅವಧಿ. ಮೂರು: ಔರಂಗಜೇಬ್ ಅವಧಿ. ಅಕ್ಬರ್ ನಂತರದ ಅವಧಿಯಲ್ಲಿ ಅಕ್ಬರ್‌ನ ಪರಮಮಿತ್ರ ಮಾರ್ವಾರ್‌ನ ಮಹಾರಾಜ ಜಸ್ವಂತ್ ಸಿಂಗ್‌ನ ಸಾವು, ಅಕ್ಬರ್‌ನ ನಂತರದ ಮುಘಲ್ ಬಾದ್‌ಷಾರ ಮತಾಂಧ ನೀತಿಗಳು ಕೂಡಾ ಮುಘಲರ ನಾಶಕ್ಕೆ ಕಾರಣವೆಂದು ಅಭಿಪ್ರಾಯಿಸಿದರು. ಆದರೆ, ಧಾರ್ಮಿಕ ನೀತಿಯೇ ಮುಘಲರನ್ನು ನಾಶಪಡಿಸಿತು ಎಂದು ಅವರು ಒಪ್ಪದಾದರು. ಸತೀಶ್ ತಮ್ಮ ಅಧ್ಯಯನಗಳ ಮೂಲಕ ಔರಂಗಜೇಬನ ಕಾಲದಲ್ಲಿ ಪುನಃ ರಜಪೂತರು ಮುಘಲ್ ಸಾಮ್ರಾಜ್ಯದಲ್ಲಿ ತಮ್ಮ ಸ್ಥಾನಮಾನಗಳನ್ನು ಸಂಪಾದಿಸಿದರು ಎಂದು ಅಭಿಪ್ರಾಯಿಸುತ್ತಾರೆ. ನಂತರದ ಅವಧಿಯಲ್ಲಿ ಮರಾಠರು ರಜಪೂತರ ಸ್ಥಾನವನ್ನು ಕಬಳಿಸಿದ್ದು, ರಾಥೋಡ್ ಯುದ್ಧ ಕೂಡ (ಸತೀಶ್, 1993: 63–71) ಈ ರೀತಿಯ ಸಂಬಂಧವನ್ನು ಹಾಳುಗೆಡವಿತೇ ವಿನಃ ಔರಂಗಜೇಬನ ಧಾರ್ಮಿಕ ನೀತಿಯಲ್ಲ ಎಂಬ ಪ್ರಬಲ ವಾದಗಳನ್ನು ಮಂಡಿಸುತ್ತಾರೆ. ಒಂದು ನೆಲೆಯಲ್ಲಿ ರಾಷ್ಟ್ರೀಯವಾದೀ ಮತ್ತು

ಇದರ ಮೊದಲಿನ ಸಾಮ್ರಾಜ್ಯಶಾಹೀ ಕ್ರಮ ಅಥವಾ ಎಲಿಯಟ್ ಮತ್ತು ಡಾಸನ್‌ರ ಋಣಾತ್ಮಕ ಹಾಗೂ ಪೂರ್ವಾಗ್ರಹ ಪೀಡಿತ ಚರಿತ್ರಶಾಸ್ತ್ರೀಯ ಗ್ರಹಿಕೆ ಮತ್ತು ಮಂಡನೆಗಳಿಗೆ ವಿಮರ್ಶೀಯ ಮತ್ತು ಸಿಂಹಾವಲೋಕನ ಸಾಧಿಸಬೇಕಾದ ಜರೂರಿನ ರೀತಿಯ ಸಂದರ್ಭವನ್ನು ಸತೀಶ್ ಈ ರೀತಿಯ ವಾದಗಳ ಮೂಲಕ ಈ ಕೃತಿಯಲ್ಲಿ ಪ್ರತಿಪಾದಿಸುತ್ತಾರೆ. ಬಹುಶಃ **ಮುಘಲ್ ರಿಲೀಜಿಯಸ್ ಪಾಲಿಸೀಸ್** ಕೃತಿ ಮುಘಲ್ ಚರಿತ್ರೆಯ ಅತ್ಯಂತ ವಿವಾದಾತ್ಮಕ ಮಗ್ಗುಲನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡುತ್ತದೆ.

ಸತೀಶ್ ಚಂದ್ರ ಅವರು ಒಬ್ಬ ಸಾರ್ವಜನಿಕ ಬುದ್ಧಿಜೀವಿಯ ನಿಲುವನ್ನೂ ಕೂಡ ಪ್ರಕಟಪಡಿಸಿದ್ದರು ಅನೇಕ ಸಂದರ್ಭಗಳಲ್ಲಿ. ಚರಿತ್ರೆಯ ಅಪವ್ಯಾಖ್ಯಾನದ ಅನೇಕ ಸಂದರ್ಭಗಳಲ್ಲಿ ಸತೀಶ್ ತಮ್ಮ ಪ್ರಬುದ್ಧ ಪ್ರತಿಕ್ರಿಯೆಯನ್ನು ನೀಡಿದ್ದರು. ಅಂತಹ ಅನೇಕ ಪ್ರತಿಕ್ರಿಯೆಗಳು ಬರೀ ಜನಪ್ರಿಯ ಸಾಂದರ್ಭಿಕ ಹೇಳಿಕೆಗಳಾಗಿರದೇ ಒಂದು ಸಂಕೀರ್ಣ ಶೋಧ ಮತ್ತು ಅಕಾಡೆಮಿಕ್‌ನ ಫಲವಾಗಿ ಮೂಡಿವೆ. ಅಂತಹ ಅನೇಕ ಉದಾಹರಣೆಗಳಲ್ಲಿ ಎನ್.ಡಿ.ಎ ಸರ್ಕಾರ ಅಧಿಕಾರಕ್ಕೆ ಬಂದಾಗ ಎನ್.ಸಿ.ಇ.ಆರ್.ಟಿ. ಯು ಸಿಖ್ಖ್ ಗುರು ತೇಗ್ ಬಹಾದೂರ್ ಬಗೆಗೆ ಮಾಡಿದ ವಿವಾದದ ಸಂದರ್ಭವೂ ಮತ್ತು ಸತೀಶ್ ಆ ಸಂದರ್ಭ ಮಾಡಿದ ಪ್ರತಿಕ್ರಿಯೆಯೂ ಒಂದಾಗಿದೆ. ಅದೂ ಕೂಡಾ ಅದುವರೆಗೂ ಎನ್.ಸಿ.ಇ.ಆರ್.ಟಿ.ಯ ಮಧ್ಯಕಾಲೀನ ಭಾರತದ ಪಠ್ಯಪುಸ್ತಕದ ಕರ್ತೃ ಸತೀಶ್ ಚಂದ್ರರೇ ಆಗಿದ್ದರು. ಆಗಿನ ಎನ್.ಸಿ.ಇ.ಆರ್.ಟಿ ನಿರ್ದೇಶಕರಾಗಿದ್ದ ಜೆ.ಎಸ್. ರಜಪೂತ್, 'ಸತೀಶ್ ಚಂದ್ರ ತಮ್ಮ ಪಠ್ಯ ಪುಸ್ತಕದಲ್ಲಿ ಗುರುತೇಗ್ ಬಹಾದೂರ್ ಬಗೆಗೆ ಅವಮಾನಕಾರಿಯಾಗಿ ಬರೆದಿದ್ದಾರೆಂದು ಸಾಕಷ್ಟು ಟೀಕಾಪ್ರಹಾರವನ್ನೂ ಮಾಡಿದ್ದರು. ರಜಪೂತ್ ಇನ್ನೂ ಮುಂದುವರಿದು 'ಇಂತಹ ಅವಮಾನ ಮಾಡುವುದೇ ಸೆಕ್ಯೂಲರಿಸ್ಟ್‌ಗಳ ಚರಿತ್ರೆ ರಚನೆಯ ಬಳುವಳಿ ಮತ್ತು ಸಂಪ್ರದಾಯವೆಂದೂ ಜರಿದಿದ್ದರು. ಈ ರೀತಿಯ ಚರಿತ್ರಕಾರರದು ಬುಡಮೇಲು ಕೃತ್ಯಗಳೆಂದೂ, ಇದರ ಕುರಿತು ಗೃಹ ಸಚಿವರು ಸೂಕ್ತ ಕ್ರಮಕೈಗೊಳ್ಳಬೇಕೆಂದೂ ಒತ್ತಾಯಿಸಿದ್ದರು. ಆ ಸಂದರ್ಭದಲ್ಲಿ ಇಂತಹ ಬಿಗುವು ಮತ್ತು ಕೋಮುವಾದೀಯ ಸಂದರ್ಭವನ್ನು ಸತೀಶ್ ತಾತ್ವಿಕವಾಗಿ ಎದುರುಗೊಂಡಿದ್ದರು.

ಮೊತ್ತ ಮೊದಲನೆಯದಾಗಿ "1675ರ ಸುಮಾರಿಗೆ ಗುರುತೇಗ್ ಬಹಾದೂರ್‌ರನ್ನು ದೆಹಲಿಯಲ್ಲಿ ವಧಿಸಿದ್ದರ ಬಗ್ಗೆ ಯಾವುದೇ ರೀತಿಯ ಪರ್ಶಿಯನ್, ಪರ್ಶಿಯನೇತರ ಹಾಗೂ ಸಿಖ್ಖ್ ದಾಖಲೆಗಳು ಸಿಗದಿರುವುದು ಚರಿತ್ರಕಾರರಿಗೆ ನಿಜವಾದ ಬಿಕ್ಕಟ್ಟೆನ್ನುವುದು ಸತೀಶ್ ಅಭಿಪ್ರಾಯ. ಈ ಕುರಿತು ಬಂದಿರುವ ಹೆಚ್ಚಿನ ಬರವಣಿಗೆಗಳು 18ನೇಯ ಶತಮಾನದ ಸಂದರ್ಭದಲ್ಲಿ ಬಂದಿರುವಂತದ್ದು ಮತ್ತು ಅವುಗಳು ಹೆಚ್ಚು ನಂಬಲರ್ಹವಾಗಿಲ್ಲದಿರುವುದೂ ಇಂತಹ ಸಮಸ್ಯೆಯ ಸಾಂದ್ರತೆಯನ್ನು ಹೆಚ್ಚಿಸಿದೆ ಎನ್ನೋದು ಸತೀಶ್ ಅಭಿಪ್ರಾಯ. ಸುಮಾರು 1780ರ ಕೃತಿ ಗುಲಾಮ್ ಹುಸೈನ್ ತಬಾ **ತಬಾಯ್‌ಯ ಸಿಯಾರ್-ಉಲ್-ಮುತಖಿರ್ಮ್** ಮೊತ್ತ ಮೊದಲ ಬಾರಿಗೆ ಈ ಘಟನೆಯ ನೂರು ವರ್ಷದ ನಂತರ ಇದನ್ನು ದಾಖಲಿಸುತ್ತದೆ. ಇದರ ಪ್ರಕಾರ ಗುರುತೇಗ್ ಬಹಾದೂರ್ ಮತ್ತು ಆತನ ಇನ್ನೊಬ್ಬ ಸಮಕಾಲೀನ ಸೂಫಿ ಸಂತ ಹಫೀಝ್ ಆದಂ ಅನುಕ್ರಮವಾಗಿ ಹಿಂದೂ ಮತ್ತು ಸಿಖ್ಖ್‌ರಿಂದ ಹಣ ಸಂಗ್ರಹಿಸುತ್ತಿದ್ದುದರ ಬಗ್ಗೆ ಮೊಘಲ್ ಬೇಹುಗಾರರು

ಚಕ್ರವರ್ತಿ ಅಲಂಗೀರ್‌ಗೆ ಪತ್ರ ಬರೆಯುತ್ತಾರೆ. ಇಷ್ಟು ಉಲ್ಲೇಖವನ್ನು ಹೊರತು ಪಡಿಸಿಯೂ ಕೂಡ ಸಿಖ್ಖ್ ಧರ್ಮೀಯರು ಹೇಳುವ ಗುರುವನ್ನು ದೆಹಲಿಯಲ್ಲಿ ವಧಿಸಲಾಯ್ತು ಎನ್ನುವುದನ್ನೂ ಕೂಡಾ ಯಾವುದೇ ಕಾರಣಕ್ಕೂ ತಳ್ಳಿ ಹಾಕಲೂ ಆಗದು ಎನ್ನುತ್ತಾರೆ ಸತೀಶ್.

ಇದೇ ಹೊತ್ತಿಗೆ ಗುಲಾಮ್ ಹುಸ್ಸೈನ್ ಹೇಳುವ ತೇಗ್ ಬಹಾದೂರ್ ನಡೆಸಿರಬಹುದಾದ ವೃತ್ತಾಂತವನ್ನು ಸಿಖ್ಖರ ಮೇಲಿನ ಬಹುದೊಡ್ಡ ಆಕರ ಗ್ರಂಥವಾದ ಸೋಹನ್ ಲಾಲ್ ಕೃತ **ಉಮ್‌ದತ್-ಉತ್-ತವಾರಿಕ್** ಕೂಡ ಅನುಮೋದಿಸುತ್ತದೆ. ಗುರು ತೇಗ್ ಬಹಾದೂರ್ ತಾನು ಗದ್ದಿಯನ್ನು ಅಲಂಕರಿಸಿದ ಮೇಲೆ ಅವನ ಜತೆ ಸಾವಿರಾರು ಯೋಧರು ಮತ್ತು ಕುದುರೆ ಪಟುಗಳು ಅವನನ್ನು ಸುತ್ತಿಕೊಂಡಿದ್ದರು. ಈ ಕಾರಣದಿಂದ ಅನೇಕ ಜನ ಅಮೀರರು, ಜಮೀನ್ದಾರರು, ಇಝಾರಾದಾರರು, ದಿವಾನರು ಮತ್ತು ಅಧಿಕಾರಿಗಳಿಗೆ ವಿರುದ್ಧವಿದ್ದವರು ಅವನ ಆಶ್ರಯವನ್ನು ಹೊಂದಿದ್ದರು. ಈ ಪರಿಸ್ಥಿತಿಯು ಕ್ರಮೇಣ ತೇಗ್ ಬಹಾದೂರ್ ಬಗೆಗೆ, ಮುಘಲ್ ಚಕ್ರವರ್ತಿ ಅಲಂಗೀರ್‌ನಲ್ಲಿ ದೂರನ್ನು ಸಲ್ಲಿಸುವವರೆಗೆ ಕಾರಣವಾಯ್ತು. ಆಗ ಅಲಂಗೀರ್, ಗುರು ತೇಗ್ ಬಹಾದ್ದೂರ್‌ಗೆ ಈ ರೀತಿಯ ಚಟುವಟಿಕೆಗಳನ್ನು ನಿಲ್ಲಿಸಲು ಸೂಚನೆಗಳನ್ನು ನೀಡುತ್ತಾನೆ. ಸತೀಶ್ ಈ ಆಧಾರ ಮತ್ತು ಹಿನ್ನೆಲೆಯ ಮೇಲೆ ಎನ್.ಸಿ.ಇ.ಆರ್.ಟಿ.ಯ ಪಠ್ಯಪುಸ್ತಕವನ್ನು ಬರೆಯುತ್ತಾರೆ. 'ಸಿಖ್ಖ್ ಧರ್ಮವು ಜಾಟ್ ಕೃಷಿ ಕೂಲಿ ಕಾರ್ಮಿಕರಿರುವ, ಕರಕುಶಲಿಗಳ ಮತ್ತು ಕೆಳಜಾತಿಗಳೆಂದು ಕರೆಯಲ್ಪಡುತ್ತಿದ್ದ ಜನರ ನಡುವೆ ಅದರ ಸರಳ ತತ್ವಾಚರಣೆಯ ಸಮಾನತೆಯ ನಿಲುವಿನ ಹಾಗೂ ಗುರುವಿನ ಶ್ರೇಷ್ಠತೆಯ ಕಾರಣದಿಂದ ಬೆಳೆಯಿತು' ಎಂದು ಸಿಖ್ಖ್ ಧರ್ಮದ ಕುರಿತು ಬರೆಯುತ್ತಾರೆ. ಇಲ್ಲಿ 'ಗುರು' ಧಾರ್ಮಿಕ ನಾಯಕನೂ ಆದ ಕಾರಣ ಸಮಕಾಲೀನ ಅನ್ಯಾಯ ಮತ್ತು ದೌರ್ಜನ್ಯಗಳಿಗೆ ಪ್ರತಿಕ್ರಿಯೆ ನೀಡಿ ಸ್ಪಂದಿಸಿ ಅಂತಹ ಅನ್ಯಾಯಕ್ಕೊಳಗಾದವರ ಪರವಾಗಿ ಕೂಡಾ ನಿಲ್ಲಬೇಕಾಯಿತು. ಇಂತಹ ಸಂದರ್ಭದಲ್ಲಿ ಸ್ಥಳೀಯ ಅಧಿಕಾರಿಗಳು ಹಾಗೂ ಜಮೀನ್ದಾರರ ವಿರುದ್ಧ ಗುರು ನಿಲ್ಲಬೇಕಾಯಿತು. ಅಂತಹ ಸಂಘರ್ಷಗಳನ್ನೇ ಬಂಡಾಯಗಳೆಂದೂ ಚಿತ್ರಿಸಲಾಯ್ತು. ಈ ಎನ್.ಸಿ.ಇ.ಆರ್.ಟಿ ಪಠ್ಯದಲ್ಲಿ ಗುರು ತೇಗ್ ಬಹಾದೂರ್ ವಧೆಯ ಬಗ್ಗೆ ಇರುವ ಪ್ಯಾರಾ ಕೂಡಾ ಸಾಕಷ್ಟು ವಿವಾದವನ್ನು ಸೃಷ್ಟಿಸಿತ್ತು, ಅದೇನೆಂದರೆ, "ಸಿಖ್ಖ್ ಸಂಪ್ರದಾಯದ ಪ್ರಕಾರ ಗುರುವಿನ ವಧೆಗೆ ಪ್ರಮುಖವಾಗಿದ್ದ ಕಾರಣ, ಆ ಕಾಲದ ಕೆಲವು ಸಿಖ್ಖ್ ಕುಟುಂಬಗಳು ಉತ್ತರಾಧಿಕಾರಕ್ಕಾಗಿ ಸೃಷ್ಟಿಸಿದ ವಿವಾದ ಮತ್ತು ಕೆಲವು ಕುಟುಂಬಗಳು ಗುರುವನ್ನು ಸೇರಿದ ಕಾರಣ" ಎನ್ನುವುದಾಗಿ. ಸುಮಾರು ಗುರು ನಾನಕರು ಸತ್ತ ಕಾಲದಿಂದಲೇ ಉತ್ತರಾಧಿಕಾರಕ್ಕಾಗಿ ಸಿಖ್ಖ್ ಕುಟುಂಬಗಳಲ್ಲಿ ವಿವಾದ ಮತ್ತು ಅಂತಃಕಲಹ ಸೃಷ್ಟಿಯಾಗಿತ್ತು. ಉದಾ: ಉದಾಸಿಗಳದ್ದು. ಅದೇ ರೀತಿಯಲ್ಲಿ ತೇಗ್ ಬಹಾದೂರ್ ಗುರು ಆದಾಗ ಗುರು ಹರ್ ರಾಯ್‌ನ ಹಿರಿಯ ಮಗ ರಾಮ್‌ದಾಸ್ ಮತ್ತು ಅನೇಕ ಸೋಧಿಗಳು ಈತನನ್ನು ವಿರೋಧಿಸಿದರು. ಈ ಕಾರಣದಿಂದ ಗುರು ತೇಗ್ ಬಹಾದೂರ್ ದೆಹಲಿಗೆ ತನ್ನ ಸ್ಥಾನವನ್ನು ಬದಲಾಯಿಸಿದ ಎಂದು ಹೇಳಲಾಗುತ್ತದೆ. ಆದರೆ ಇಲ್ಲಿ ಆತ ಗುರು ಹರ್ ಕಿಶನ್‌ನ ಹಿರಿಯ ಸೋದರ ರಾಮ್ ರಾಯ್‌ನನ್ನು ಮುಖಾಮುಖಿಯಾಗಬೇಕಾಯಿತು.

ಹರ್ ಕಿಶನ್, ಔರಂಗಜೇಬ್ ಚಕ್ರವರ್ತಿ ಆದ ನಂತರ ಮೊಘಲ್ ರಾಜಾಸ್ಥಾನದಲ್ಲಿ ಅಧಿಕಾರಿಯಾಗಿದ್ದ. ಈತ ತೇಗ್ ಬಹಾದ್ದೂರ್‌ನ 'ಗದ್ದಿ'ಯನ್ನು ಪ್ರಶ್ನಿಸಿದ್ದ. ಸಮಕಾಲೀನ ಕೃತಿಕಾರ ಗುಲಾಂ ಮುಹಿನುದ್ದೀನ್ ಬುತೇ ಶಾಹ್, ತನ್ನ **ತಾರೀಖ್-ಇ-ಪಂಜಾಬ್**‌ನಲ್ಲಿ ಹೇಳುವಂತೆ, 'ಗುರು ತೇಗ್ ಬಹಾದೂರ್ ಒಮ್ಮೆ ಯಾತ್ರೆಗೆ ಹೋಗಿ 'ಮಖೋವಾಲ್'ಅನ್ನು ಸ್ಥಾಪಿಸಿದ. ಆಗ ರಾಮ್ ರಾಯ್‌ನ ಸಮ್ಮುಖದಲ್ಲಿ ತೇಗ್ ಬಹಾದೂರ್‌ನನ್ನು ಕರೆಸಲಾಗಿ ರಾಮ್ ರಾಯ್‌ನು, 'ಗುರುತೇಗ್ ಬಹಾದೂರ್‌ನಿಗೆ ಆತನ ಆಧ್ಯಾತ್ಮ ಮತ್ತು ಹಿರಿಮೆ ಹೆಚ್ಚೇ ಹೊರತು ಆತ ತನ್ನ ತಪ್ಪನ್ನು ಒಪ್ಪಿ ಕೊಳ್ಳುವವನಲ್ಲ'ವೆನ್ನುವ ಹಾಗೆ ಮುಘಲ್ ಚಕ್ರವರ್ತಿಗೆ ಅರಿಕೆ ಮಾಡುತ್ತಾ, ಈ ಕಾರಣದಿಂದ ಆತನನ್ನು ಶಿಕ್ಷಿಸಲೇಬೇಕಾಗುತ್ತದೆಂದು ಸೂಚಿಸುತ್ತಾನೆ. ಇದಲ್ಲದೇ ರಾಮ್ ರಾಯ್‌ನು, ಒಂದೋ, ಗುರು ತೇಗ್ ಬಹಾದೂರ್ ಪವಾಡಗಳನ್ನು ಸೃಷ್ಟಿಸಬೇಕು, ಇಲ್ಲವೋ ಆತ ಸಾವನ್ನು ಎದುರಿಸಬೇಕೆಂದು ಸೂಚಿಸುತ್ತಾನೆ. ಈ ನಂತರದ ಗುರುವಿನ ವಧಾ ಪ್ರಕರಣದ ಮಾಹಿತಿ ನಮಗೆ ಹೆಚ್ಚು ಸಂಬಂಧಿಸಿಲ್ಲವಾದರೂ ಕೂಡಾ ತೇಗ್ ಬಹಾದೂರ್‌ನ ಸಾವಿನ ಅಥವಾ ವಧೆಯ ಹಿಂದೆ ರಾಮ್‌ರಾಯ್ ಮತ್ತು ಆ ಕಾಲದ ಸಿಖ್ಖ ಕುಟುಂಬಗಳ ಪಾತ್ರವಿರುವುದಂತೂ ಸತ್ಯವೆನ್ನುವುದನ್ನು ಎನ್.ಸಿ.ಇ.ಆರ್.ಟಿ.ಯ ವಿವಾದದ ಸಂದರ್ಭದಲ್ಲಿ ಸಂಶೋಧನೆಯ ಮೂಲಕ ವಿವರಿಸುತ್ತಾರೆ. ರಾಮ್‌ರಾಯ್ ಮತ್ತು ಆಸ್ಥಾನದ ಅಮೀರರು ಈ ತಂತ್ರದಲ್ಲಿ ಭಾಗಿಯಾಗುತ್ತಾರೆಯೇ ಹೊರತು ಇತ್ತ ಪವಾಡ ಅತ್ತ ನಿಗೂಢತೆ ಎರಡನ್ನೂ ನಂಬದ ಔರಂಗಜೇಬ್ ಇದನ್ನು ನಿರ್ವಹಿಸಲಿಲ್ಲ ಎಂಬುದೂ ಸತೀಶ್ ಅಭಿಪ್ರಾಯ. ಆದರೆ ಪಠ್ಯಪುಸ್ತಕದಲ್ಲಿ ಮಾತ್ರ ಎಲ್ಲಿಯೂ ಕೂಡ ಸತೀಶ್ ಸಿಖ್ಖ ಗುರುವನ್ನು ಕೀಳಾಗಿ ನೋಡುವ, ಆತನ ಪ್ರತಿಷ್ಠೆಯನ್ನು ಕಡೆಗಣಿಸುವ ಪ್ರಯತ್ನ ನಡೆಸಲಿಲ್ಲವಾಗಿತ್ತು.

ಬಹುಶಃ ಸತೀಶ್ ಅವರ ಈ ರೀತಿಯ ತನಿಖೆ ಅಥವಾ ಸಾಕ್ಷ್ಯಗಳ ಅಡಿಯಲ್ಲಿ ಒಂದು ಚಾರಿತ್ರಿಕ ಘಟನೆಯನ್ನು ಪ್ರಶ್ನಿಸುವ ಹಾಗೂ ಪರೀಕ್ಷಿಸುವ ಮಾದರಿ ಮತ್ತು ನೆಲೆ ತುಂಬಾ ಪ್ರಮುಖವಾದುದು. ಭಾರತದ ಚರಿತ್ರಕಾರರು ಮತ್ತು ಮುಖ್ಯವಾಹಿನಿ ಚರಿತ್ರಕಾರರ ಸಂದರ್ಭದಲ್ಲಿ ಮತ್ತು ವಿಶೇಷವಾಗಿ ಚರಿತ್ರೆಯನ್ನು ತಮಗೆ ಹೇಗೆ ಬೇಕೋ ಹಾಗೆ ತಿರುಚುವ ಮತ್ತು ಕೋಮುವಾದೀಕರಣಗೊಳಿಸುವ ಸಂದರ್ಭದಲ್ಲಿ ಭಾರತದ ಉಗ್ರಬಲಪಂಥ ಇಂತಹ ಪ್ರಕ್ರಿಯೆಯನ್ನು ಗಮನಿಸಿ ಅಳವಡಿಸಿಕೊಳ್ಳಬೇಕು. ಆದರೆ ಭಾರತದಲ್ಲಿನ ಕೋಮುವಾದೀ ಚರಿತ್ರೆಯು ಪ್ರಶ್ನೆಗಳೊಂದಿಗೆ ಎದುರುಗೊಳ್ಳುವ ಕ್ರಮವನ್ನೇ ಬಿಟ್ಟಿದೆ. ವೈಚಾರಿಕ ಸಂಘರ್ಷ ಮತ್ತು ಮುಖಾಮುಖಿ ಅದರ ಆದ್ಯತೆಯಲ್ಲ. ಬದಲು ಸಂವಾದಗಳನ್ನು ಸಾಧಿಸದೆ ಎಲ್ಲವನ್ನೂ ಕೋಮು ರಾಜಕೀಯಕ್ಕಿಳಿಸುವ ಕ್ರಮವನ್ನೇ ಅದು ಆಚರಿಸುತ್ತಿದೆ. ವಿಚಾರವನ್ನು ವಿಚಾರದ ಮೂಲಕ ಎದುರುಗೊಳ್ಳದೇ ಅತ್ಯಂತ ಬೇಗನೇ ಬೀದಿಗೆ ಬರುವ, ದೈಹಿಕ ದೌರ್ಜನ್ಯ, ಗೂಂಡಾಗಿರಿ, ವಸ್ತು-ವ್ಯಕ್ತಿ ಸಂಸ್ಥೆ, ಗ್ರಂಥಾಲಯಗಳ ಮೇಲಿನ ಹಲ್ಲೆ ಇತ್ಯಾದಿಯೇ ಅವರ ಕಾರ್ಯಸೂಚಿಯಾಗಿದೆ. ಆದರೆ ಬಲಪಂಥೀಯನೊಬ್ಬ ಎನ್.ಸಿ.ಇ.ಆರ್.ಟಿ ನಿರ್ದೇಶಕನಾಗಿ ಇಂತಹ ಗೊಂದಲವನ್ನು ಸೃಷ್ಟಿಸಿದಾಗ, ವಿವಾದಾತ್ಮಕ ಹೇಳಿಕೆಗಳ ಬದಲಿಗೆ ಸತೀಶ್ ಮಾತ್ರ ಶಾಂತವಾಗಿ ಸಂವಾದದ ಪ್ರಜಾಸತ್ತೀಯ ಮಾರ್ಗವನ್ನೇ ಆಯ್ದುಕೊಂಡರು.

ಸತೀಶ್ ಚಂದ್ರ ಅವರ, **'ಸ್ಟೇಟ್, ಪ್ಲೂರಲಿಸಂ ಅಂಡ್ ದಿ ಇಂಡಿಯನ್ ಹಿಸ್ಟೋರಿಕಲ್ ಟ್ರೆಡಿಷನ್' (ಓ.ಯು.ಪಿ. 2008)** ಕೂಡಾ ಒಂದು ಬಹು ಮುಖ್ಯ ಕೃತಿಯಾಗಿ ಕೆಲವು ಚರ್ಚೆಗಳನ್ನು ನಮ್ಮ ಮುಂದಿಡುತ್ತದೆ. ಇದು ಅನೇಕ ಮಧ್ಯಯುಗೀನ ಚರಿತ್ರಕಾರರ ಅನೇಕ ಬಿಕ್ಕಟ್ಟುಗಳನ್ನು ಪರಿಹರಿಸುವ ಪ್ರಯತ್ನ ಮಾಡುತ್ತದೆ. ಮೊತ್ತಮೊದಲನೆಯದಾಗಿ ಮಧ್ಯಕಾಲೀನ ಯುಗದ ಬಗ್ಗೆ ಇರುವ 'ಮುಸ್ಲಿಂ ರಾಜರು-ಹಿಂದೂ ಪ್ರಜೆಗಳು' ಕಲ್ಪನೆ ಏನಿದೆ ಅಂತಹ ಏಕಶಿಲೀಯ ಪರಿಕಲ್ಪನೆಯೇ ಒಂದು ಮಿಥ್ಯ ಮತ್ತು ರಚನೆ ಎಂಬುದಾಗಿ ಇದು ಬಗೆಯುತ್ತದೆ. ಅಷ್ಟಕ್ಕೂ ಮಿಗಿಲಾಗಿ ಅದನ್ನು ಒಂದು ತೆರನ ಚರಿತ್ರಶಾಸ್ತ್ರೀಯ ಸಮಸ್ಯೆ ಮತ್ತು ಪ್ರಶ್ನೆಯಾಗಿಯೇ ನೋಡುತ್ತದೆ. ಚರಿತ್ರೆಶಾಸ್ತ್ರ ಇದನ್ನು ಒಂದು ಬಹು ಆಯಾಮಗಳುಳ್ಳ ಚಾರಿತ್ರಿಕ ಗುರುತು ಅಥವಾ ವಿದ್ಯಮಾನವಾಗಿ ನೋಡಬೇಕೆಂಬ ಒಳನೋಟಗಳನ್ನು ನೀಡುತ್ತದೆ. ಇದನ್ನು ಒಂದು ಭಾರತೀಯ, ಪಶ್ಚಿಮ ಹಾಗೂ ಸೆಂಟ್ರಲ್ ಏಷ್ಯಾದ ಸಮುದಾಯಗಳು ಮಧ್ಯಕಾಲೀನ ಸಂದರ್ಭದಲ್ಲಿ ನಡೆಸಿದ ಸಂಕೀರ್ಣ ಮತ್ತು ಬಹು ಸಂಪ್ರದಾಯಗಳ ಕೊಡು-ಕೊಳ್ಳುವಿಕೆಯ ರೂಪದಲ್ಲಿಯೇ ಗಮನಿಸಬೇಕು. ಮುಖ್ಯವಾಗಿ ಭಾರತದ ಗಡಿಯನ್ನು ಇಸ್ಲಾಮಿಕ್ ಸಂಪ್ರದಾಯವು ಪ್ರವೇಶಿಸಿದ ನಂತರ ಇಲ್ಲಿ ಒಂದು ರೀತಿಯ ಪ್ರಭಾವಿಯಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಮಾಜವನ್ನು ಸೃಷ್ಟಿಸಿತೆನ್ನುವುದೂ ಕೂಡಾ ಸತ್ಯಕ್ಕೆ ಹತ್ತಿರವಾದುದು. ಇಂತಹ ಸಂದರ್ಭದಲ್ಲೂ, ದೆಹಲಿ ಸುಲ್ತಾನರಿಂದ ಮುಘಲರವರೆಗೆ ಸಾಮಾಜಿಕವಾಗಿ ಜಾತಿ ತುಂಬಾ ಪ್ರಮುಖವಾದ ಗುರುತಾಗಿ ಹಿಂದೂ ಮತ್ತು ಮುಸ್ಲಿಮರ ನಡುವೆ ಆಚರಣೆಯಲ್ಲಿತ್ತು. ಆಗಿನ ಸಾಮಾಜಿಕ ಚಲನೆಯಲ್ಲಿ, ವಿಶೇಷವಾಗಿ ಈ ಇಬ್ಬರ ನಡುವೆ ಕೂಡಾ ಜಾತಿ ಅತ್ಯಂತ ನಿರ್ಣಾಯಕವಾದ ಒಂದು ಸಂಗತಿಯಾಗಿತ್ತು. ಬಹುಶಃ ಭಾರತೀಯ ಚರಿತ್ರೆಯ ಸಂಕೀರ್ಣತೆಗೂ ಕೂಡಾ ಇದು ಕಾರಣವಾಗಿದೆ. ಸತೀಶ್ ಚಂದ್ರರ ಮುಖ್ಯವಾದ ವಾದಗಳನ್ನು ನಾಲ್ಕು ಪರಿಕಲ್ಪನೆಗಳಲ್ಲಿ ಈ ಕೃತಿಯ ಮೂಲಕ ಗ್ರಹಿಸಬಹುದಾಗಿದೆ. ಒಂದು: ಭಾರತದಲ್ಲಿ ಸ್ಟೇಟ್ ವಿಕಾಸವಾದ ಬಗೆ, ಎರಡು: ಪೌರಾತ್ಯ ಪ್ರದೇಶಗಳಲ್ಲಿ ಪಟ್ಟಣಗಳ ಪ್ರಾಮುಖ್ಯತೆ, ಮೂರು: ನೌಕಾಯಾನದ ಪರಂಪರೆಯೂ ಸೇರಿದಂತೆ ಭಾರತೀಯ ಚಾರಿತ್ರಿಕ ಸಂಪ್ರದಾಯ ಮತ್ತು ನಾಲ್ಕು: ಭಾರತದ ಸಾಂಸ್ಕೃತಿಕ ಬಹುತ್ವವಾದೀಯ ಸಂಪ್ರದಾಯ. ಸತೀಶ್, ಒಂದು ನೆಲೆಯಲ್ಲಿ ಭಾರತದ ಈ ದೀರ್ಘ ಅವಧಿಯ ಸಾಮಾಜಿಕ ಸಂಸ್ಥೆಗಳನ್ನು ಮಧ್ಯಕಾಲೀನ ಚರಿತ್ರಶಾಸ್ತ್ರೀಯ ಸಂಪ್ರದಾಯಗಳಿಂದಲೇ ಗಮನಿಸಿದರು. ಆದರೆ ಇಡೀ ಕೃತಿಯ ಮುಖ್ಯವಾದ ಧೋರಣೆಯೆಂದರೆ, 'ಸೆಂಟ್ರಲ್ ಏಷ್ಯಾದಿಂದ ಸಮುದಾಯಗಳು ಹೇಗೆ ಸಮಕಾಲೀನ ಭಾರತದ ಸಮಾಜ, ರಾಜಕಾರಣ, ಸಂಸ್ಕೃತಿ ಮತ್ತು ಬದುಕನ್ನು ಪ್ರಭಾವಿಸಿದುವು? ಎನ್ನುವುದು ಮತ್ತು ಈ ಮುಖೇನ ಮಧ್ಯಕಾಲೀನ ಅವಧಿಯ ಭಾರತೀಯ ಸಮಾಜವು ವೈವಿಧ್ಯಮಯವಾಗಿತ್ತು ಹಾಗೂ ರಾಷ್ಟ್ರೀಯವಾದಿ ಮತ್ತು ಸಾಮ್ರಾಜ್ಯಶಾಹೀ ಚರಿತ್ರೆ ದಾಖಲಿಸಿರುವ ಹಾಗೆ ಏಕಶಿಲೀಯ, ಬದಲಾವಣೆರಹಿತ, ಜಡ ಸಮಾಜವಾಗಿರಲಿಲ್ಲ ಎಂಬ ಮಂಡನೆಯನ್ನು ತೀರಾ ಪ್ರಭಾವಿಯಾಗಿ ಮಂಡಿಸುತ್ತಾರೆ. ಇದು ಒಂದು ನೆಲೆಯ ತಾತ್ವಿಕ ಚರಿತ್ರಶಾಸ್ತ್ರೀಯ ಮುಖಾಮುಖಿಯಾಗಿಯೂ ಕೂಡಾ ನಮಗೆ ಕಂಡು ಬರುತ್ತದೆ. ■

ಕನ್ನಡಿಗರ ಸಂಜೀವಿನಿ 'ಕರ್ನಾಟಕ ಗತವೈಭವ'

ಕರ್ನಾಟಕದ ಇತಿಹಾಸ, ಅದರಲ್ಲೂ ಕರ್ನಾಟಕದ ಏಕೀಕರಣ ಚಳವಳಿಯ ಇತಿಹಾಸ ಬಲ್ಲ ಬಹುತೇಕ ಎಲ್ಲರಿಗೂ ಆಲೂರು ವೆಂಕಟರಾಯರ ಹೆಸರು ತಿಳಿದಿರುತ್ತದೆ. ಅವರನ್ನು ಕರ್ನಾಟಕ ಕುಲಪುರೋಹಿತ ಎಂಬ ಅನ್ವರ್ಥನಾಮ ದಿಂದಲೂ ಗುರುತಿಸಲಾಗುತ್ತದೆ. ಇತಿಹಾಸಕಾರರಿಗೆ ಆಲೂರರು ಪರಿಚಿತರಾಗಿರುವದು ಅವರ **'ಕರ್ನಾಟಕ ಗತವೈಭವ'** ಕೃತಿಯ ಮೂಲಕ. ಅದು ಶುದ್ಧ ಇತಿಹಾಸವಲ್ಲವೆಂದು ವಾದಿಸುವ ಇತಿಹಾಸಕಾರರೂ ಸಹ ಅದು ಕರ್ನಾಟಕದ ಬಗ್ಗೆ ಪ್ರೀತಿ ಹುಟ್ಟಿಸಿದ ಕೃತಿಯೆಂದು ಒಪ್ಪಿಕೊಳ್ಳುತ್ತಾರೆ.

ಯಾವುದೇ ಪ್ರದೇಶದ ಇತಿಹಾಸವು ಕೇವಲ ಇತಿಹಾಸಕಾರರಿಗೆ ಮಾತ್ರ ತಿಳಿದಿದ್ದರೆ ಸಾಲದು. ಅದು ಆಯಾ ಪ್ರದೇಶದ ಮಾತ್ರವಲ್ಲದೆ ಎಲ್ಲ ಕಾಲದ ಮತ್ತು ಎಲ್ಲ ಪ್ರದೇಶದ ಜನರಿಗೂ ತಿಳಿಯಬೇಕು. ಅದರಲ್ಲೂ ಸಾಮಾನ್ಯ ಜನರ ಅರಿವಿಗೆ ಬಾರದ ಇತಿಹಾಸ ಯಾವ ರೀತಿಯಲ್ಲೂ ಉಪಯುಕ್ತವಲ್ಲ. ಸಾಮಾನ್ಯ ಜನರಿಗೆ ತಿಳಿಯುವ ಇತಿಹಾಸಕ್ಕೆ ಅವರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ, ತಮಗೆ ತಿಳಿದ ಒಂದಷ್ಟು ಪುರಾಣ, ಜಾನಪದ ಮತ್ತು ಬೇರಾವುದೇ ಮೌಖಿಕ

ಎಚ್.ಎಸ್. ಗೋಪಾಲ ರಾವ್
'ಅಕ್ಷರ', ಐ.ವೈ.ಡಿ.2ನೇ ರಸ್ತೆ,
ಅರಸಿನಕುಂಟೆ,
ನೆಲಮಂಗಲ ತಾಲ್ಲೂಕು, ಬೆಂಗಳೂರು
ಗ್ರಾಮಾಂತರ ಜಿಲ್ಲೆ – 562 123
ಮೊ: 9448669922
hsgorao@yahoo.com

ಇತಿಹಾಸವನ್ನು ಸೇರಿಸಿ, ಇತಿಹಾಸಕ್ಕೆ ಒಂದು ಶಾಶ್ವತತೆಯನ್ನು ತಂದುಕೊಡುತ್ತಾರೆ. ಪುರಾಣ, ಜಾನಪದ, ಐತಿಹ್ಯ ಇತ್ಯಾದಿ ಮೌಖಿಕ ಸಾಹಿತ್ಯಗಳು ಉತ್ಪ್ರೇಕ್ಷೆಯಿಂದ ಕೂಡಿದ್ದರೂ ಉತ್ಪ್ರೇಕ್ಷೆಯ ಅಂಶಗಳನ್ನು ಗುರುತಿಸಿ, ಅದನ್ನು ಹೊರತುಪಡಿಸಿ, ಸತ್ಯದ ಎಳೆಯನ್ನು ಹಿಡಿದು ವ್ಯಾಖ್ಯಾನಿಸಿದರೆ ಪೂರ್ಣ ಸತ್ಯವಲ್ಲದಿದ್ದರೂ, ಸತ್ಯಕ್ಕೆ ಮತ್ತು ತರ್ಕಕ್ಕೆ ಸಮೀಪವೆನಿಸುವ ವಾಸ್ತವಗಳನ್ನು ತಿಳಿಯಬಹುದು. ಆಗ ಇತಿಹಾಸದ ಬಾಹ್ಯ ರೂಪವಾದರೂ ಅನಾವರಣಗೊಳ್ಳುತ್ತದೆ. ಕೆಲವು ಸಂದರ್ಭಗಳಲ್ಲಿ ಸತ್ಯದ ಬಾಹ್ಯ ಸ್ವರೂಪವಾದರೂ ತಿಳಿದಿದ್ದರೆ ಅದರ ಜಾಡು ಹಿಡಿದು ಸತ್ಯದ ಅಂತರಂಗವನ್ನು ತಿಳಿಯಲು ಪ್ರಯತ್ನಿಸಬಹುದು. ಈ ನಿಟ್ಟಿನಲ್ಲಿ ಆಲೂರರ **ಕರ್ನಾಟಕ ಗತವೈಭವ** ಒಂದು ಮಹತ್ವದ ಕೃತಿ.

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಭಾರತದ ಚರಿತ್ರೆಯ ಬಗ್ಗೆ ಜಾಗೃತಿ ಮೂಡಿಸುವ ಅಗತ್ಯವಿತ್ತು. ಅದರಿಂದ ಬ್ರಿಟಿಷ್ ಇತಿಹಾಸಕಾರರ ನಡುವೆಯೇ ಭಾರತೀಯ ಇತಿಹಾಸಕಾರರೂ ಭಾರತದ ಇತಿಹಾಸ ಕುರಿತು ಮಹತ್ವದ ಕೃತಿಗಳನ್ನು ರಚಿಸಿದರು. ಹಾಗೆಯೇ ಕರ್ನಾಟಕ ಏಕೀಕರಣಕ್ಕಾಗಿ ಹೋರಾಟ ನಡೆದಿದ್ದಾಗ ಕರ್ನಾಟಕದ ಇತಿಹಾಸ ಕುರಿತು ಅಭಿಮಾನ ಹುಟ್ಟಿಸುವ ಕೃತಿಗಳ ಅವಶ್ಯಕತೆ ಇತ್ತು. ಅದನ್ನು ಆಲೂರರಂತಹ ಹಿರಿಯರು ಅರಿತಿದ್ದರು. ಆಲೂರರ ಮೇಲೆ ಲೋಕಮಾನ್ಯ ತಿಳಕರ ಪ್ರಭಾವ ಅಧಿಕವಾಗಿತ್ತು. ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯದಲ್ಲಿ ಎಂದೂ ಹಿಂದೆ ಬೀಳದೆ, ಗುರಿಸಾಧನೆಗೆ ಬೇಕಾದ ಎಲ್ಲ ಸಿದ್ಧತೆಗಳನ್ನೂ ಮಾಡಿಕೊಂಡಿದ್ದ ಆಲೂರು ವೆಂಕಟರಾಯರು **ಕರ್ನಾಟಕ ಗತವೈಭವ** ರಚನೆಗೆ ಕೈಹಾಕಿದ್ದು ಆಕಸ್ಮಿಕವೇನಲ್ಲ. ಅದು ತನ್ನಷ್ಟಕ್ಕೆ ತಾನೇ ದಿಢೀರ್ ಎಂದು ಹುಟ್ಟಿಕೊಂಡ ಕಾರ್ಯಯೋಜನೆಯಲ್ಲ.

ಲೋಕಮಾನ್ಯ ತಿಳಕರು 26–11–1907ರಂದು ಗುರ್ಲ ಹೊಸೂರಿನಲ್ಲಿ ಮಾಡಿದ ಒಂದು ಭಾಷಣದ ಕೆಲವು ವಿಚಾರಗಳು ಆಲೂರರ ಮನಸ್ಸಿನಲ್ಲಿ ಅಚ್ಚೊತ್ತಿದಂತೆ ಕುಳಿತಿದ್ದವು ಎನಿಸುತ್ತದೆ. ಆ ಮಾತುಗಳೆಂದರೆ, 'ಮಹಾರಾಷ್ಟ್ರ ಬೇರೆ, ಕರ್ನಾಟಕ ಬೇರೆ ಅಲ್ಲ. ಎರಡರಲ್ಲಿಯೂ ಒಂದೇ ರಕ್ತವು ಆಡುತ್ತದೆ. ಎರಡೂ ದೇಶಗಳ ಭಾಷೆಯು ಮುಂಚೆ ಒಂದೇ ಅಂದರೆ ಕನ್ನಡವಿತ್ತು. ಭಾಷೆಯ ವಿಷಯದಲ್ಲಿ ಮಹಾರಾಷ್ಟ್ರವು ತನ್ನ ಮೊದಲ ಭಾಷೆ ಬಿಟ್ಟು ಮರಾಠೀಯಾಗಿದೆ.' ಈ ಮಾತುಗಳು ಆಲೂರರ ಕಿವಿಗಳಲ್ಲಿ ಸ್ಥಾಯಿಯಾಗಿ ನಿಲ್ಲಲು 1905ನೆಯ ಇಸವಿಯ ಮೇ 4ರಂದು ಆನೆಗೊಂದಿಯ ಆಕಸ್ಮಿಕ ದರ್ಶನದಿಂದ ಪಡೆದ ಅನುಭವ ಎನಿಸುತ್ತದೆ. ಆ ಹೊತ್ತಿಗೆ ಬಂಗಾಳದ ವಿಭಜನೆಯಾಗಿ, ವಿಭಜನೆಯನ್ನು ವಿರೋಧಿಸಿ ಬಂಗಾಳದಲ್ಲಿ ನಡೆದ ಚಳವಳಿಗಳ ಬಗ್ಗೆ ತಿಳಿದಿದ್ದ ಆಲೂರರಿಗೆ ಕರ್ನಾಟಕ ಅದೆಷ್ಟೊಂದು ಹೋಳುಗಳಾಗಿ ಒಡೆದುಹೋಗಿದೆ. ಇದನ್ನು ಒಂದು ಮಾಡುವ ಪ್ರಾಮಾಣಿಕ ಪ್ರಯತ್ನ ಏಕಾಗುತ್ತಿಲ್ಲ ಎಂಬ ಆಲೋಚನೆಗೆ ಇಂಬುಗೊಟ್ಟಿದೆ ಎನಿಸುತ್ತದೆ.

ಆನೆಗೊಂದಿಯಲ್ಲಿ ಮಾಧ್ವ ಯತಿಗಳ ನವಬೃಂದಾವನಗಳಿವೆ. ಅವುಗಳ ದರ್ಶನ ಮತ್ತು ಅಲ್ಲಿನ ಸೇವೆ ಮಧ್ವ ಮತೀಯರಿಗೆ ಮುಖ್ಯವಾದುದು. 1905ರ ಮೇ 4ರಂದು

ಆಲೂರರು ಆನೆಗೊಂದಿಗೆ ಹೋಗಿದ್ದುದು ನವಬೃಂದಾವನಗಳ ದರ್ಶನಕ್ಕಾಗಿ. ಆ ದರ್ಶನದಿಂದ ಕನ್ನಡಿಗರಿಗಾದದ್ದು **ಕರ್ನಾಟಕ ಗತವೈಭವ** ಎಂಬ ಅಮೂಲ್ಯ ಕೃತಿಯ ಲಾಭ. ಅಂದಿನ ತಮ್ಮ ಅನುಭವವನ್ನು ಆಲೂರು ವೆಂಕಟರಾಯರೇ ಅವರ 'ನನ್ನ ಜೀವನ ಸ್ಮೃತಿಗಳು' ಕೃತಿಯಲ್ಲಿ ಹೀಗೆ ದಾಖಲಿಸಿದ್ದಾರೆ:

"ಮೇ ತಿಂಗಳಲ್ಲಿ ನನಗೆ ಆನೆಗೊಂದಿಗೆ ಹೋಗುವ ಪ್ರಸಂಗ ಒದಗಿತು. ಆನೆಗೊಂದಿಯಲ್ಲಿ ನನ್ನ ಸಮೀಪದ ಆಪ್ತರಾದ ರಾಮರಾವ ಬಲಕುಂದಿ ಇವರು ಆ ಚಿಕ್ಕ ಸಂಸ್ಥಾನದ ಕಾರಭಾರಿಗಳು. ಆನೆಗೊಂದಿಯು ಒಂಭತ್ತು ಪ್ರಸಿದ್ಧ ವೈಷ್ಣವಸ್ವಾಮಿಗಳ ನವ ವೃಂದಾವನಗಳುಳ್ಳ ಸ್ಥಳವು. ನಮ್ಮ ಸಮೀಪದ ಆಪ್ತರೂ ಮನೆತನದ ಗುರುಗಳೂ ಆದ ಸಮೀರಣಾಚಾರ್ಯ ಪಾಂಫ್ರಿ ಇವರು ಗಜೇಂದ್ರಕರ ಬಾಳಾಚಾರ್ಯರೊಡನೆ ವಹಿವಾಟದಂತೆ ಆಲೂರಿನಲ್ಲಿ ಬಂದು ನಮ್ಮಲ್ಲಿದ್ದರು. ಅವರು ನನ್ನನ್ನು ಆನೆಗೊಂದಿಗೆ ಕರೆದುಕೊಂಡು ಹೋದರು. ಆಗ ನನಗೆ ಹಂಪೆಯ ಹತ್ತರವೇ ಆನೆಗೊಂದಿ ಇದೆ ಎಂಬುದೂ ಗೊತ್ತಿರಲಿಲ್ಲ; ಹಂಪೆ ಮತ್ತು ಆನೆಗೊಂದಿಗಳಲ್ಲಿಯೇ ವಿಜಯನಗರದ ಅರಸರಿದ್ದರೆಂಬುದೂ ಗೊತ್ತಿರಲಿಲ್ಲ. ಕರ್ನಾಟಕಕ್ಕೂ ಆ ಹಂಪೆ ಆನೆಗೊಂದಿಗಳಿಗೂ ಏನಾದರೂ ಐತಿಹಾಸಿಕ ಸಂಬಂಧವಿತ್ತೆಂಬುದರ ಅರಿವೂ ನನಗಿರಲಿಲ್ಲ" (**ನನ್ನ ಜೀವನಸ್ಮೃತಿಗಳು**, 1974, ಪು.81).

ಇಂತಹ ಪರಿಸ್ಥಿತಿಯಲ್ಲಿ ಆಲೂರರು ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದಂತೆ ಅಧ್ಯಯನ ಮಾಡಿದರು. ಕರ್ನಾಟಕದ ಪ್ರಮುಖ ಐತಿಹಾಸಿಕ ಸ್ಥಳಗಳ ದರ್ಶನ ಮಾಡಿದರು. ಫಲವಾಗಿ ರೂಪುಗೊಂಡದ್ದು **ಕರ್ನಾಟಕ ಗತವೈಭವ**.

ಕರ್ನಾಟಕ ಕುಲಪುರೋಹಿತ ಆಲೂರ ವೆಂಕಟರಾಯರ ಸಮಗ್ರ ಕೃತಿಗಳನ್ನು ಸಂಪಾದಿಸಿರುವ ಪ್ರಖ್ಯಾತ ಶಾಸನತಜ್ಞ ಹಾಗೂ ಇತಿಹಾಸಕಾರರಾದ ಶ್ರೀನಿವಾಸ ರಿತ್ತಿಯವರು ತಮ್ಮ ಪ್ರಸ್ತಾವನೆಯಲ್ಲಿ ಹೇಳುವ ಈ ಮಾತುಗಳು ಕರ್ನಾಟಕ ಗತವೈಭವದ ಬಗ್ಗೆ ಸಮರ್ಥ ವಿಮರ್ಶೆ ಎನಿಸುತ್ತದೆ. ಆ ಮಾತುಗಳು ಹೀಗಿವೆ:

"ಗತವೈಭವವು ಆಧುನಿಕ ಇತಿಹಾಸಕಾರರ ಇತಿಹಾಸದ ವ್ಯಾಖ್ಯೆಯ ಒರೆಗಲ್ಲಿಗೆ ಸರಿದೊರೆಯಾಗಿ ನಿಲ್ಲುತ್ತದೆಯೇ ಎಂಬ ಪ್ರಶ್ನೆ ಒಮ್ಮೊಮ್ಮೆ ಏಳುತ್ತದೆ. ಇತಿಹಾಸವೆಂದರೆ ಅದು ವಸ್ತುನಿಷ್ಠ (ಂಭರಿಜಭಿಣುತಜ) ಆಗಿರಬೇಕು; ಕಾಲ್ಪನಿಕತೆಗೆ, ಭಾವುಕತೆಗೆ ಇಲ್ಲಿ ಆಸ್ಪದವಿಲ್ಲ ಎಂಬುದು ಸಾಮಾನ್ಯವಾಗಿ, ವಿಶೇಷವಾಗಿ ಪಾಶ್ಚಾತ್ಯ ತಜ್ಞರ ಮತ. ಆದರೆ ಘಟನೆಗಳ ಬಗ್ಗೆ ಲೇಖಕನ ಅಭಿಪ್ರಾಯಗಳು, ಕಲ್ಪನೆಗಳು, ಭಾವನೆಗಳು, ಇವುಗಳ ಪ್ರಭಾವ ಲೇಖನದ ಮೇಲೆ ಬಿದ್ದೇಬೀಳುತ್ತದೆ. ಆದರೆ ಅದು ಅತಿರಂಜಿತ ಅಥವಾ ಅತಿಶಯೋಕ್ತಿಯ ಹಂತವನ್ನು ಮುಟ್ಟಬಾರದು... ಒಂದು ಬರಹವನ್ನು ವಿಮರ್ಶೆಯ ಒರೆಗಲ್ಲಿಗೆ ಹಚ್ಚುವಾಗ ಬರಹದ ಕಾಲವನ್ನು, ಸಂದರ್ಭವನ್ನು, ಉದ್ದೇಶವನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಈ ಗ್ರಂಥವನ್ನು ಬರೆಯಲಿಕ್ಕೆ ವೆಂಕಟರಾಯರಿಗೆ ಒಂದು

ನಿಶ್ಚಿತ ಉದ್ದೇಶವಿತ್ತು. ಅದನ್ನು ಸಾಧಿಸಲು ಅವಶ್ಯಕವಾದ ಘಟನೆಗಳನ್ನು ಎತ್ತಿಕೊಂಡದ್ದಲ್ಲದೆ ಅದಕ್ಕೆ ಪೂರಕವಾದ ಭಾಷೆಯನ್ನೂ ಸಹ ಬಳಸಿಕೊಂಡರು. ಅವರು ಇತಿಹಾಸವನ್ನು ಬರೆದರು ಎನ್ನುವುದಕ್ಕಿಂತ ಕರ್ನಾಟಕತ್ವದ ಭಾವನೆಯನ್ನು ಉದ್ದೀಪಿಸಲು ಇತಿಹಾಸವನ್ನು ಬಳಸಿಕೊಂಡರು." ಎಂದು ಈ ಕೃತಿಯ ಮಹತ್ವವನ್ನು ಮನಗಾಣಿಸಿದ್ದಾರೆ.

ಆ ಹೊತ್ತಿಗೆ ಪ್ರಕಟಗೊಂಡಿದ್ದ ಜೆ.ಎಫ್.ಫ್ಲೀಟ್ ಅವರ Dynasties of Canarese District ಗ್ರಂಥದಿಂದ ಆಲೂರರು ಐತಿಹಾಸಿಕ ಸಾಮಗ್ರಿಗಳನ್ನು ಸಂಗ್ರಹಿಸಿದ್ದಾರೆ.

1905ರಿಂದ ನಿರಂತರವಾಗಿ ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದ ಪ್ರಕಟಿತ ಗ್ರಂಥಗಳ ಅಧ್ಯಯನ, ಪ್ರಕಟಿತ ಶಾಸನಗಳಿಂದ ಮಾಹಿತಿ ಸಂಗ್ರಹ, ಐತಿಹಾಸಿಕ ಸ್ಥಳಗಳ ವೀಕ್ಷಣೆಯಿಂದ ಮಾಹಿತಿ ಸಂಗ್ರಹ ಹೀಗೆ ಅನೇಕ ವಿಷಯಗಳನ್ನು ಸಂಗ್ರಹಿಸಿ, 1917ರ ವೇಳೆಗೆ ಪ್ರಕಟಿಸಿದ **ಕರ್ನಾಟಕ ಗತವೈಭವ** ಕೃತಿಯು ಕನ್ನಡಿಗರ ಅಸ್ಮಿತೆಯನ್ನು ಎಚ್ಚರಿಸಲು ಎಲ್ಲ ಅವಕಾಶಗಳನ್ನೂ ಕಲ್ಪಿಸಿತು.

ಆಲೂರು ವೆಂಕಟರಾಯರು ಕರ್ನಾಟಕಕ್ಕೆ ಸಂಬಂಧಿಸಿದ ಶಾಸನಗಳ ಅಧ್ಯಯನಕ್ಕೆಂದು ಆಗ ಉದಕಮಂಡಲದಲ್ಲಿದ್ದ ಶಾಸನ ಇಲಾಖೆಯ ಕಛೇರಿಗೆ ಹೋಗಿ, ಶಿಲಾಲಿಪಿಗಳ ಸರ್ವೇಕ್ಷಣೆಗೆ ಬೇಕಾದ ಎಲ್ಲಾ ಯೋಜನೆಗಳನ್ನೂ ಸಿದ್ಧಪಡಿಸಿ, ಇಲಾಖೆಯ ನೆಲಮಂಗಲ ಲಕ್ಷ್ಮೀನಾರಾಯಣ ರಾಯರನ್ನು ಧಾರವಾಡಕ್ಕೆ ಕರೆಸಿಕೊಂಡು, ತಮ್ಮ ಮನೆಯಲ್ಲೇ ಇಟ್ಟುಕೊಂಡು ಧಾರವಾಡ ತಾಲ್ಲೂಕಿನಿಂದಲೇ ಸರ್ವೆ ಕಾರ್ಯಕ್ಕೆ ಚಾಲನೆ ನೀಡಿದ ವಿಷಯವನ್ನು ಅವರೇ ತಮ್ಮ **ನನ್ನ ಜೀವನಸ್ಮೃತಿಗಳು** ಕೃತಿಯಲ್ಲಿ ದಾಖಲಿಸಿದ್ದಾರೆ.

ಕರ್ನಾಟಕ ಗತವೈಭವ ಬಿಡುಗಡೆಯಾದದ್ದು ಶಕ ವರ್ಷ 1839ನೆಯ ಸಂವತ್ಸರದ ಭಾದ್ರಪದ ಶು.4 ಗಣೇಶ ಚತುರ್ಥಿಯಂದು. ಅದು 20-9-1917, ಗುರುವಾರಕ್ಕೆ ಸರಿಹೊಂದುತ್ತದೆ. ಅಂದರೆ 2017ರ ಸೆಪ್ಟೆಂಬರ್ 20ಕ್ಕೆ ಸರಿಯಾಗಿ 100 ವರ್ಷಗಳ ಹಿಂದೆ **ಕರ್ನಾಟಕ ಗತವೈಭವ** ಬಿಡುಗಡೆಯಾಗಿದೆ. ಒಂದು ಕೃತಿ, ಅದೂ ಇತಿಹಾಸಕ್ಕೆ ಸಂಬಂಧಿಸಿದ ಕೃತಿ ಪ್ರಕಟವಾಗಿ ಒಂದು ಶತಮಾನ ಪೂರೈಸಿದ್ದರೂ, ಅದಕ್ಕೆ ಇನ್ನೂ ಬೇಡಿಕೆ ಇದೆ ಮತ್ತು ಅದು ಪುನರ್ಮುದ್ರಣಗೊಳ್ಳುತ್ತಲೇ ಇದೆ ಎಂದರೆ ಅದರ ಮಹತ್ವ ಎಷ್ಟು ಎಂಬುದನ್ನು ಯಾರಾದರೂ ಊಹಿಸಬಹುದು.

ಅಷ್ಟೇ ಅಲ್ಲದೆ, **ಕರ್ನಾಟಕ ಗತವೈಭವವು** ಮುಂಬಯಿ, ಮದ್ರಾಸ್, ಮೈಸೂರು, ಹೈದರಾಬಾದ್ ಮತ್ತು ಬನಾರಸ್ ವಿಶ್ವವಿದ್ಯಾಲಯಗಳ ಮ್ಯಾಟ್ರಿಕ್, ಇಂಟರ್ ಮತ್ತು ಬಿ.ಎ., ಮೊದಲಾದ ಪರೀಕ್ಷೆಗಳಿಗೆ ಕೆಲವು ವರ್ಷಗಳ ಕಾಲ ಪಠ್ಯಪುಸ್ತಕವಾಗಿದ್ದುದನ್ನು ಆಲೂರು ವೆಂಕಟರಾಯರು ಕೃತಿಯ 6ನೆಯ ಆವೃತ್ತಿಯ ಪ್ರಸ್ತಾವನೆಯ ಸಂದರ್ಭದಲ್ಲಿ ಸ್ಮರಿಸಿದ್ದಾರೆ. ಅಂದರೆ **ಕರ್ನಾಟಕ ಗತವೈಭವ** ಕೃತಿಯು ಬಹುತೇಕ ಎಲ್ಲ ವಿದ್ಯಾರ್ಥಿಗಳ ಗಮನಕ್ಕೆ ಬರುವಂತೆ ಆಗಿನ ಶಿಕ್ಷಣ ಇಲಾಖೆಯ ಪಠ್ಯಪುಸ್ತಕ ಸಮಿತಿಯವರು ಗಮನಹರಿಸುತ್ತಿದ್ದರು ಎಂದರೆ ಕೃತಿಯ ಘಟ್ಟಿತನವನ್ನು ಮೆಚ್ಚಿಕೊಳ್ಳುವುದು ಅನಿವಾರ್ಯವಾಗುತ್ತದೆ.

ಒಟ್ಟು ಹದಿನಾರು ಪ್ರಕರಣಗಳು ಮತ್ತು ಎರಡು ಪೂರಕ ಪ್ರಕರಣಗಳ ಮೂಲಕ ಓದುಗರನ್ನು ತಲುಪಿರುವ **ಕರ್ನಾಟಕ ಗತವೈಭವ** ದ ಮೊದಲನೆಯ ಪ್ರಕರಣವೇ ಭಾರತದಂತೆಯೇ ಕರ್ನಾಟಕದ ಗತವೈಭವದ ನೆನಪುಗಳೊಂದಿಗೆ ಆರಂಭವಾಗುತ್ತದೆ. ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಇಡೀ ಭಾರತದ ಜನತೆಯನ್ನು ಅಣಿಮಾಡುವಾಗ ಭಾರತದ ಇತಿಹಾಸದ ವೈಭವವನ್ನು ನೆನಪು ಮಾಡಿಕೊಳ್ಳುವಂತೆಯೇ ಕರ್ನಾಟಕದ ಏಕೀಕರಣಕ್ಕೆ ಕನ್ನಡಿಗರ ಮನಸ್ಸನ್ನು ಅಣಿಗೊಳಿಸಲು ಕರ್ನಾಟಕದ ಇತಿಹಾಸ ಮತ್ತು ಪರಂಪರೆಯ ವೈಭವವನ್ನು ನೆನಪು ಮಾಡಿಕೊಳ್ಳುವುದು ಅತಿ ಮುಖ್ಯ ಎಂದು ಆಲೂರು ವೆಂಕಟರಾಯರು ತೀರ್ಮಾನಿಸಿದ್ದಂತೆ ಕಾಣುತ್ತದೆ. ಬಂಗಾಳ ವಿಭಜನೆಯಾದ ಸಂದರ್ಭದಲ್ಲಿ ಅಲ್ಲಿನ ಬಹುತೇಕ ಸಾಹಿತಿಗಳು ಭಾರತದ ಇತಿಹಾಸ ಮತ್ತು ಪರಂಪರೆಯ ಒಳ್ಳೆಯ ನೆನಪುಗಳನ್ನು ದಾಖಲಿಸಿದ್ದಾರೆ. ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಬಹುತೇಕ ಎಲ್ಲ ಸಾಹಿತಿಗಳು, ಕವಿಗಳು ಮತ್ತು ಕಲಾವಿದರು ಜನತೆಗೆ ಸ್ವಾತಂತ್ರ್ಯದ ವಿಚಾರವಾಗಿ ತಿಳಿವಳಿಕೆ ನೀಡುವುದು ತಮ್ಮ ಕರ್ತವ್ಯವೆಂದು ಭಾವಿಸಿದ್ದಂತೆ ಕಾಣುತ್ತದೆ. ಆದ್ದರಿಂದ ಬರೆಯಬಲ್ಲವರೆಲ್ಲರೂ, ನಾಟಕ ಆಡಬಲ್ಲವರೆಲ್ಲರೂ, ಹಾಡಬಲ್ಲವರೆಲ್ಲರೂ, ಹರಿಕಥೆ ಮಾಡುವವರೆಲ್ಲರೂ ತಮ್ಮ ಮಾಧ್ಯಮವನ್ನು ಈ ನಿಟ್ಟಿನಲ್ಲಿ ಸಮರ್ಥವಾಗಿ ಬಳಸಿಕೊಂಡಿದ್ದಾರೆ.

ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯ ಕಾಲಕ್ಕೆ ವಿಸ್ತಾರವಾಗಿದ್ದ ಕರ್ನಾಟಕವು ಅದರ ಪತನದ ಜೊತೆಗೆ ಸ್ವಲ್ಪ ಹಂಚಿಹೋಯಿತಾದರೂ, ನಂತರ ಟಿಪ್ಪುಸುಲ್ತಾನನ ಮರಣದ ನಂತರ ಅನೇಕ ಹೋಳುಗಳಾಗಿ ಒಡೆಯಿತು. ಗೆದ್ದವರು ತಮಗೆ ಬೇಕಾದ್ದನ್ನು ತಾವು ಇರಿಸಿಕೊಂಡು ಉಳಿದದ್ದನ್ನು ತಮ್ಮ ಗೆಲುವಿಗೆ ನೆರವಾದವರಿಗೆ ಹಂಚಿದರು. ಹೀಗಾಗಿ ಕರ್ನಾಟಕವು ಇಪ್ಪತ್ತೆರಡು ಭಾಗಗಳಾಗಿ ಛಿದ್ರವಾಗಿತ್ತು. ಅಲ್ಲೆಲ್ಲಾ ಕನ್ನಡ ಭಾಷೆ ಮತ್ತು ಸಂಸ್ಕೃತಿಗಳ ಮೇಲೆ ಅನ್ಯ ಭಾಷೆ ಮತ್ತು ಸಂಸ್ಕೃತಿಗಳ ಪ್ರಭಾವ ದಟ್ಟವಾಗಿಯೇ ಆಗಿ, ಕನ್ನಡ ಪ್ರದೇಶದಲ್ಲಿ ಕನ್ನಡಿಗರೇ ಪರದೇಶಿಗಳಂತೆ ಬದುಕಬೇಕಾದ ಪರಿಸ್ಥಿತಿಯಿತ್ತು. ಇದನ್ನು ಗಮನಿಸಿದ, ಭಾರತದ ಸ್ವಾತಂತ್ರ್ಯ ಹೋರಾಟದಲ್ಲೂ ತೊಡಗಿಕೊಂಡಿದ್ದ ಆಲೂರರಂತಹ ಕೆಲವು ಹಿರಿಯರು ಒಡೆದುಹೋಗಿದ್ದ ಕರ್ನಾಟಕವನ್ನು ಒಂದು ಮಾಡುವ ಕೆಲಸಕ್ಕೆ ಕೈಹಾಕಿ, ಆ ನಿಟ್ಟಿನಲ್ಲಿ ಜನರನ್ನು ಸಜ್ಜುಗೊಳಿಸಲು ಮಾಡಿದ ಪ್ರಯತ್ನಗಳಲ್ಲಿ 'ಕರ್ನಾಟಕ ಗತವೈಭವ'ದ ರಚನೆಯೂ ಬಹು ಮುಖ್ಯ ಪಾತ್ರ ವಹಿಸಿತು. ಆಲೂರು ವೆಂಕಟರಾಯರು ತಮ್ಮ ಗ್ರಂಥದ ಮೊದಲ ಪ್ರಕರಣದ ಕೊನೆಯಲ್ಲಿ "ಹಿಂದುಸ್ಥಾನದಲ್ಲಿಯ ಪ್ರತಿಯೊಂದು ಭಾಷೆಯಾದರೋ ತಮ್ಮ ಪೂರ್ವಜರ ಇತಿಹಾಸವನ್ನು ಉತ್ಸಾಹದಿಂದ ಸಂಶೋಧಿಸುತ್ತಿರಲು, ಕರ್ನಾಟಕ ಮಾತ್ರವು ಇನ್ನೂ ಕುಂಭಕರ್ಣ ನಿದ್ರೆಯಲ್ಲಿಯೇ ಇದೆ. ಇದೆಂಥ ದುಃಖದ ನೋಟ" ಆಲೂರು ವೆಂಕಟರಾಯರು ಕರ್ನಾಟಕ ಮತ್ತು ಕನ್ನಡ ಭಾಷೆಗಳ ಪೂರ್ವೇತಿಹಾಸವನ್ನು ತಿಳಿಯಲು ಮಾಡಿದ ಸಂಶೋಧನೆಯ ಫಲಿತವೇ

ಕರ್ನಾಟಕ ಗತವೈಭವ ಎನಿಸಿದರೆ ಆಶ್ಚರ್ಯವಿಲ್ಲ. ಪ್ರಕರಣವನ್ನು ಅಂತ್ಯಗೊಳಿಸುವಾಗ ಆಲೂರರು ಹೇಳುತ್ತಾರೆ. 'ಕನ್ನಡಿಗರೇ, ನಿಮ್ಮ 'ವಿಷಾದ'ವನ್ನು ಹೋಗಲಾಡಿಸಿ, ನಿಮ್ಮ ಮೇಲಿನ ನಿರಭಿಮಾನತೆಯ ಮುಸುಕನ್ನು ಹಾರುಹೊಡೆಯಲಿಕ್ಕೆ ನೀವು ನಿಮ್ಮ ಇತಿಹಾಸಕ್ಕೇ ಶರಣು ಹೋಗಿರಿ. ನಿಮ್ಮ ಮಂದದೃಷ್ಟಿಗೆ ಅದು ಮೇಲಾದ ಅಂಜನ'.

ಆಲೂರರು ತಮ್ಮ ಉದ್ದೇಶಕ್ಕೆ ತಕ್ಕಂತೆಯೇ ಕನ್ನಡಿಗರ ಆಲಸ್ಯವನ್ನು ಹೊರದೂಡಲು ಮಾಡಿದ ತಂತ್ರದ ಫಲವಾಗಿ ರೂಪುಗೊಂಡದ್ದು **ಕರ್ನಾಟಕ ಗತವೈಭವ.**

ಮೊದಲ ಪ್ರಕರಣಕ್ಕೆ 'ಈ ಮೃತವಾದ ಕರ್ನಾಟಕದಿಂದೇನು?' ಎಂಬ ಉಪಶೀರ್ಷಿಕೆ ಕೊಟ್ಟ ಆಲೂರರು, ಎರಡನೆಯ ಪ್ರಕರಣದ ಆರಂಭದಲ್ಲಿ 'ಕರ್ನಾಟಕವು ಮೃತರಾಷ್ಟ್ರವೇ?' ಎಂಬ ಪ್ರಶ್ನೆಗೆ ಉತ್ತರ ಹುಡುಕುವ ಪ್ರಯತ್ನ ಮಾಡಿದ್ದಾರೆ. 3ನೆಯ ಪ್ರಕರಣದಲ್ಲಿ ಕರ್ನಾಟಕದ ವಿಸ್ತಾರವನ್ನು ಕುರಿತ ವಿಚಾರಗಳನ್ನು ಮಂಡಿಸಿದ್ದಾರೆ. ಆಲೂರರು ಈ ಕೃತಿಯನ್ನು ಬರೆದ ಕಾಲಕ್ಕೆ ಕವಿರಾಜಮಾರ್ಗದ ಕರ್ತೃವು ನೃಪತುಂಗನೆಂದೇ ತಿಳಿಯಲಾಗಿತ್ತು. ಅವನ ಮಾತುಗಳನ್ನು ಉಲ್ಲೇಖಿಸಿ, ಕಾವೇರಿಯಿಂದ ಗೋದಾವರಿಯವರೆಗೆ ಇದ್ದ ನಾಡು ಕರ್ನಾಟಕ ಎಂದು ಹೇಳುವ ಸಂದರ್ಭದಲ್ಲಿ ನಂಜುಂಡ ಕವಿಯ ರಾಮನಾಥ ಚರಿತದ ಮಾತುಗಳಿಂದ ಕವಿರಾಜಮಾರ್ಗಕಾರನ ಮಾತಿಗೆ ಪುಷ್ಟಿ ನೀಡಿದ್ದಾರೆ. ಹಿಂದೆ ಕನ್ನಡ ಭಾಷಿಕರು ವಾಸ ಮಾಡುತ್ತಿದ್ದ ಎಲ್ಲೆಯನ್ನು ವಿವಿಧ ಮೂಲಗಳಿಂದ ತಿಳಿಯುವ ಪ್ರಯತ್ನ ಮಾಡಿರುವ ಆಲೂರರು ಹಿಂದೆ ಕರ್ನಾಟಕ ಎಷ್ಟು ವಿಸ್ತಾರವಾಗಿತ್ತು ಎಂಬ ಅಂದಾಜು ಮಾಡಿ, ಕರ್ನಾಟಕದ ಬಹುಭಾಗವು ಮರಾಠೀಮಯವಾಗುತ್ತಿರುವುದರ ಬಗ್ಗೆ ವಿಷಾದ ವ್ಯಕ್ತಪಡಿಸಿದ್ದಾರೆ. ಅದು ಅಂದು ಆಲೂರರು ಕಂಡಿದ್ದ ಪರಿಸ್ಥಿತಿ. ಆ ಪರಿಸ್ಥಿತಿಯನ್ನು ನಿವಾರಿಸಿ, ಕನ್ನಡ ಭಾಷಿಕ ಪ್ರದೇಶಗಳೆಲ್ಲವೂ ಒಂದಾಗಬೇಕೆಂಬ ಹಂಬಲ **ಕರ್ನಾಟಕ ಗತವೈಭವ** ಕೃತಿಯ ಹಿನ್ನೆಲೆಗಿದೆ. ನಾಲ್ಕನೆಯ ಪ್ರಕರಣದಲ್ಲಿ ಕನ್ನಡದ ಶ್ರೇಷ್ಠ ಅರಸರು, ಕವಿಗಳು, ವಿಭೂತಿ ಪುರುಷರು, ಧಾರ್ಮಿಕ ಗುರುಗಳ ಬಗ್ಗೆ ತಿಳಿಸಿದ್ದಾರೆ. ಐದನೆಯ ಪ್ರಕರಣದಲ್ಲಿ ಇತಿಹಾಸ ರಚನೆಗೆ ಬೇಕಾದ ಆಕರಗಳ ಬಗ್ಗೆ ವಿಷದವಾಗಿಯೇ ಚರ್ಚಿಸಿದ್ದಾರೆ. ಈ ಈ ಭಾಗದಲ್ಲಿ ಆಲೂರರಲ್ಲಿದ್ದ ಒಬ್ಬ ಸಮರ್ಥ ಇತಿಹಾಸಕಾರರನ್ನು ಗುರುತಿಸಲು ಸಾಧ್ಯವಿದೆ. ಶಾಸನಗಳು, ನಾಣ್ಯಗಳು, ಸ್ಮಾರಕಗಳು, ಸಾಹಿತ್ಯ ಕೃತಿಗಳು, ಪ್ರವಾಸಿ ಕಥನಗಳು, ಐತಿಹ್ಯಗಳು, ಐತಿಹಾಸಿಕ ದಾಖಲೆಗಳು ಇತ್ಯಾದಿ ಆಕರಗಳು ಕರ್ನಾಟಕದ ಇತಿಹಾಸ ರಚನೆಗೆ ಎಷ್ಟರ ಮಟ್ಟಿಗೆ ನೆರವಾಗಿವೆ ಎಂದು ದಾಖಲಿಸಿದ್ದಾರೆ. ಮುಂದಿನ ಹತ್ತನೆಯ ಪ್ರಕರಣದವರೆಗೆ ಕ್ರಮವಾಗಿ ಚಾಲುಕ್ಯಪೂರ್ವ, ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಕಲಚೂರ್ಯ–ಯಾದವರು, ವಿಜಯನಗರದ ಅರಸರು ಮುಂತಾದ ಕರ್ನಾಟಕವನ್ನಾಳಿದ ಪ್ರಮುಖ ರಾಜವಂಶಗಳ ಇತಿಹಾಸವನ್ನು ಸಂಕ್ಷಿಪ್ತವಾಗಿ ದಾಖಲಿಸಿ, ಹನ್ನೆರಡನೆಯ ಪ್ರಕರಣದಲ್ಲಿ ಕಾವ್ಯಗಳು ಮತ್ತು ವಿದೇಶೀ ಪ್ರವಾಸಿಗಳ ಪ್ರವಾಸ ಕಥನಗಳಲ್ಲಿ ಕರ್ನಾಟಕದ ವೈಭವ ಕುರಿತು ದಾಖಲಾಗಿರುವ ವಿಚಾರಗಳನ್ನು ವರ್ಣಿಸಿದ್ದಾರೆ. ಈ

ಭಾಗವೇ ಕರ್ನಾಟಕ ಗತವೈಭವದ ಮೂಲ ಎಳೆ. ಮುಂದಿನ ಪ್ರಕರಣಗಳಲ್ಲಿ ಕ್ರಮವಾಗಿ ವಾಸ್ತು, ಶಿಲ್ಪ, ಧರ್ಮ ಮತ್ತು ಸಾಹಿತ್ಯವನ್ನು ಕುರಿತು ಕರ್ನಾಟಕದಲ್ಲಿ ಲಭ್ಯವಿರುವ ಬಹುತೇಕ ಎಲ್ಲ ಸಾಮಗ್ರಿಗಳ ಅವಲೋಕನ ಮಾಡಿದ್ದಾರೆ. ಉಪಸಂಹಾರದ ಪ್ರಕರಣದಲ್ಲಿ ಈ ಕೃತಿ ರಚನೆಯ ಉದ್ದೇಶವನ್ನು ಮನಗಾಣಿಸಿ, 'ಕನ್ನಡಿಗರು ಹೇಡಿಗಳು, ಹಿಂದುಳಿದವರು, ಅಭಿಮಾನಶೂನ್ಯರು ಎಂದು ಮೊದಲಾದ ಕರ್ಣಕಟುವಾದ ನುಡಿಗಳಿಂದ ನಮ್ಮನ್ನು ಚುಚ್ಚುವವರಿಗೆ ನಾವು ನಮ್ಮ ಕ್ರಿಯಾಶಕ್ತಿಯಿಂದ ಉತ್ತರ ಕೊಡೋಣ. ಸಾಯಲಾದ ಕರ್ನಾಟಕಕ್ಕೆ ಇತಿಹಾಸದ ಸಂಜೀವನೀ ಮಾತ್ರೆಯನ್ನು ಹಾಕಿ ಚೇತನಗೊಳಿಸೋಣ' ಎಂಬ ನಿರೀಕ್ಷೆಯನ್ನು ಮುಂದಿಡುತ್ತಾರೆ. ಎರಡು ಪೂರಕ ಪ್ರಕರಣಗಳಲ್ಲಿ ಕರ್ನಾಟಕ–ಇತಿಹಾಸ–ಸಂಶೋಧನಕ್ಕೆ ಸಂಬಂಧಿಸಿದಂತೆ ಕೆಲಸ ಮಾಡುತ್ತಿರುವ ಇಲಾಖೆಗಳು, ವಿದ್ವಾಂಸರು ಮತ್ತು ಪ್ರಕಟಣೆಗಳ ಮೂಲಕ ದಾಖಲಾಗಿರುವ ಅವರ ಸಾಧನೆಗಳ ಬಗ್ಗೆ ಸ್ಪಷ್ಟಪಡಿಸಿ, ಕೊನೆಗೆ ವಿಷಯಕ್ಕೆ ಸಂಬಂಧಿಸದಿದ್ದರೂ, ಅವಶ್ಯಕವಾಗಿ ಓದುಗರ ಗಮನಕ್ಕೆ ತರಲೇಬೇಕು ಎಂದು ಅವರು ಭಾವಿಸಿದ ಶಾಸನ ಪಡಿಯಚ್ಚುಗಳನ್ನು ತೆಗೆಯುವ ಮತ್ತು ಅವುಗಳನ್ನು ಓದುವ ಕ್ರಮ ಹಾಗೂ ಕಾಲಕಾಲಕ್ಕೆ ಬದಲಾದ ಲಿಪಿ ಸ್ವರೂಪಗಳ ಬಗ್ಗೆ ತಿಳಿಸಿದ್ದಾರೆ.

ವಿದ್ವಾಂಸ ವಲಯವು **ಕರ್ನಾಟಕ ಗತವೈಭವ** ಕೃತಿಯನ್ನು ಇತಿಹಾಸ ಎಂದು ಒಪ್ಪದಿದ್ದ ಸಂದರ್ಭವಿತ್ತು. ಅವರ ಅಭಿಪ್ರಾಯವು ಇತಿಹಾಸದ ವ್ಯಾಖ್ಯೆಗೆ ಅನುಗುಣವಾಗಿತ್ತು. ಒಡೆದುಹೋಗಿದ್ದ ಕರ್ನಾಟಕವನ್ನು ಒಂದು ಮಾಡಲು ಸಾಧ್ಯವಾದ ಎಲ್ಲ ಪ್ರಯತ್ನಗಳನ್ನೂ ಮಾಡುವುದು ಅನಿವಾರ್ಯವೆನಿಸಿದ್ದ ಸಂದರ್ಭದಲ್ಲಿ ಕನ್ನಡಿಗರಿಗೆ ಅವರ ಪ್ರಾಚೀನ ವೈಭವದ ನೆನಪು ಮಾಡಿಕೊಡುವ ಅವಶ್ಯಕತೆಯಿತ್ತು. ರೋಗಿಯನ್ನು ವೈದ್ಯನ ಬಳಿಗೆ ಚಿಕಿತ್ಸೆಗೆಂದು ಕರೆತಂದಾಗ, ಪ್ರಮುಖವಾದ ಪರೀಕ್ಷೆಗಳನ್ನು ನಡೆಸಿ, ಚಿಕಿತ್ಸೆಯನ್ನು ಆರಂಭಿಸುವುದು ಮುಖ್ಯ. ಎಲ್ಲ ಕ್ರಮಬದ್ಧ ಪರೀಕ್ಷೆಗಳೂ ಆಗಿ ರೋಗ ಪತ್ತೆಯಾದನಂತರ, ಆ ರೋಗಕ್ಕೆ ಸಂಬಂಧಿಸಿದ ತಜ್ಞರಿಗೆ ಕಾಯುತ್ತಾ ಕೂರುವುದು ವೈದ್ಯನ ಲಕ್ಷಣವಲ್ಲ. ಮೊದಲಿಗೆ ತುರ್ತಾಗಿ ನೀಡಬೇಕಾದ ಚಿಕಿತ್ಸೆಯನ್ನು ಆರಂಭಿಸಿ, ನಂತರ ವಿಶೇಷ ಚಿಕಿತ್ಸೆಗಷ್ಟೇ ತಜ್ಞ ವೈದ್ಯರನ್ನು ಅವಲಂಬಿಸುವುದು ಜಾಣತನ. ಆಲೂರು ವೆಂಕಟರಾಯರು ರೋಗಪೀಡಿತರಾಗಿದ್ದ ಕನ್ನಡಿಗರಿಗೆ ತುರ್ತು ಚಿಕಿತ್ಸೆ ನೀಡುವ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿದ್ದಾರೆ. ಆದ್ದರಿಂದಲೇ ಪ್ರಕಟವಾಗಿ ಒಂದು ನೂರು ವರ್ಷಗಳಾದರೂ **ಕರ್ನಾಟಕ ಗತವೈಭವ** ಇಂದಿಗೂ ಉಳಿದಿದೆ; ಇದಕ್ಕೆ ಚಿರಂಜೀವಿತ್ವವಿದೆ ಎಂದು ಹೇಳಿದರೆ ಅದನ್ನು ಯಾರೂ ಉತ್ಪ್ರೇಕ್ಷೆಯೆಂದು ಭಾವಿಸಬೇಕಾಗಿಲ್ಲ. ಕನ್ನಡಿಗರ ಆಲಸ್ಯ ಅಳಿದ ದಿನವೂ, ಅದರ ಅಳಿವಿಗೆ ಕಾರಣವಾದ **ಕರ್ನಾಟಕ ಗತವೈಭವ** ಕನ್ನಡಿಗರ ಪಾಲಿಗೆ ಸಂಜೀವಿನಿಯಾಗಿಯೇ ಉಳಿಯುತ್ತದೆ.

■

ಪ್ರತಿಕ್ರಿಯೆ

ಎಸ್.ಕೆ. ಅರುಣಿ
ನಿರ್ದೇಶಕರು,
ಐ.ಸಿ.ಹೆಚ್.ಆರ್., ನವದೆಹಲಿ
skaruni@gmail.com

ಭಾರತೀಯ ಇತಿಹಾಸ ಅನುಸಂಧಾನ ಪರಿಷತ್ತು' ಅಥವಾ ಐ.ಸಿ.ಹೆಚ್.ಆರ್. ಮಾದರಿಯಲ್ಲಿ ಕರ್ನಾಟಕ ರಾಜ್ಯದಲ್ಲಿಯೂ ಸರ್ಕಾರದ ವತಿಯಿಂದ ಒಂದು ಸಂಸ್ಥೆ ಸ್ಥಾಪಿಸುವುದು ಅವಶ್ಯಕತೆ ಇದೆ ಎಂದು ಕಳೆದ ಸಂಚಿಕೆಯ (ಪುಸ್ತಕ 33–34) ಸಂಪಾದಕೀಯದಲ್ಲಿ ಹಂ.ಗು.ರಾಜೇಶ್ ಅವರು ವ್ಯಕ್ತಪಡಿಸಿರುವ ಅಭಿಪ್ರಾಯಕ್ಕೆ ನನ್ನ ಪ್ರತಿಕ್ರಿಯೆ.

1972ರಲ್ಲಿ ಇಂದಿರಾಗಾಂಧಿಯವರ ಸರ್ಕಾರದ ಅವಧಿಯಲ್ಲಿ ಐ.ಸಿ.ಹೆಚ್.ಆರ್. ಸಂಸ್ಥೆ ಚರಿತ್ರೆಯ ಸಂಶೋಧನೆಗಳಿಗೆ ಉತ್ತೇಜನ ಹಾಗೂ ವೈಜ್ಞಾನಿಕ ಸ್ವರೂಪ ನೀಡುವ ಉದ್ದೇಶದಿಂದ ಸ್ಥಾಪನೆಗೊಂಡಿತು. 1972 ರಿಂದ 1996 ರವರೆಗಿನ ಅವಧಿಯಲ್ಲಿ ತನ್ನ ವಿಸ್ತಾರವನ್ನು ವಿಸ್ತೃತಗೊಳಿಸಲು ಪ್ರಯತ್ನಿಸಿತ್ತಾದರೂ ಸಮಗ್ರ ರಾಷ್ಟ್ರ ವ್ಯಾಪಿಯಾಗಿ ಬೆಳೆಯಲು ಸಾಧ್ಯವಾಗಿರಲಿಲ್ಲ. ಕರ್ನಾಟಕದ ಇತಿಹಾಸಕಾರರಾದ ಎಸ್. ಶೆಟ್ಟರ್ ಅವರು ಐ.ಸಿ.ಹೆಚ್.ಆರ್.ನ ಅಧ್ಯಕ್ಷತೆ ವಹಿಸಿಕೊಂಡ ನಂತರ ಅವರ ಪ್ರಯತ್ನದ ಫಲವಾಗಿ ದಕ್ಷಿಣ ಭಾರತದ ಪ್ರಾದೇಶಿಕ ಕೇಂದ್ರವನ್ನು 1998ರ ಫೆಬ್ರವರಿಯ ತಿಂಗಳಲ್ಲಿ ಪ್ರಾರಂಭಿಸಿದರು. ಇದೇ ಸಂದರ್ಭದಲ್ಲಿಯೂ ಕರ್ನಾಟಕದ ಚರಿತ್ರೆಕಾರರು ಕರ್ನಾಟಕಕ್ಕೆ ಸ್ವತಂತ್ರವಾದ ಐ.ಸಿ.ಹೆಚ್.ಆರ್. ಮಾದರಿಯ ಸಂಸ್ಥೆಯ ಸ್ಥಾಪನೆಯ ಅವಶ್ಯಕತೆ ಇದೇ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಪಕ್ಕದ ಕೇರಳ ರಾಜ್ಯದಲ್ಲಿ ರಾಜ್ಯ ಗೆಜೇಟಿಯರ್ ಇಲಾಖೆಯನ್ನು ಸ್ಥಗಿತಗೊಳಿಸಿ ಅದನ್ನು ಕೆ.ಸಿ.ಹೆಚ್.ಆರ್. (ಕೇರಳ ಕೌನ್ಸಿಲ್ ಆಫ್ ಹಿಸ್ಟಾರಿಕಲ್ ರಿಸರ್ಚ್) ಎಂದು ಹೊಸ ನಾಮಕರಣ ಮಾಡಿ ಆ ಸಂಸ್ಥೆಗೆ ಒಬ್ಬ ಅಧ್ಯಕ್ಷರು ಹಾಗೂ ನಿರ್ದೇಶಕರನ್ನು ಸರ್ಕಾರ ನೇಮಕ ಮಾಡಿ ಸಂಸ್ಥೆಯನ್ನು ಪುನರುಜ್ಜೀವನಗೊಳಿಸಿದ್ದರು. ಅದೇ ರೀತಿಯಾಗಿ ಕರ್ನಾಟಕದಲ್ಲಿಯೂ ಗೆಜೇಟಿಯರ್ ಇಲಾಖೆಯನ್ನು ಒಂದು ಸಂಶೋಧನಾ ಇಲಾಖೆ ಹಾಗೂ ಅದರ ಮೂಲಕ ಸಂಶೋಧನೆಗೆ ಅನುದಾನ ನೀಡುವ ಸಂಸ್ಥೆಯನ್ನಾಗಿ ಮಾಡಬೇಕೆಂಬ ಅಭಿಪ್ರಾಯವನ್ನು ಹಲವಾರು ಹಿರಿಯ ಇತಿಹಾಸಕಾರರು ಹೊಂದಿದ್ದರು. ಕರ್ನಾಟಕದ ಚರಿತ್ರೆಯನ್ನು ಒಂದು ವೈಜ್ಞಾನಿಕ ಹಾಗೂ ವೈಚಾರಿಕ ಹಿನ್ನೆಲೆಯಲ್ಲಿ ರಚಿಸುವ ಹಾಗೂ ಅಭ್ಯಸಿಸುವ ತುರ್ತು ಅಗತ್ಯವನ್ನು ಚರಿತ್ರೆಕಾರರು ತುಂಬಾ ಮುತುವರ್ಜಿಯಿಂದ 21ನೆಯ ಶತಮಾನದ ಪ್ರಾರಂಭಿಕ ದಶಕದಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಪಟ್ಟಿದ್ದು ನಿಜ. ಆದರೆ ಹೊಸ ಸಂಸ್ಥೆಯ ರೂಪುರೇಷೆಗಳನ್ನು ಗುರುತಿಸಿ ಅವುಗಳಿಗೆ ಪೂರಕವಾಗಿ ಸರ್ಕಾರ ಸ್ಪಂದಿಸಿದರೇ. ಕೆ.ಸಿ.ಹೆಚ್.ಆರ್. ಮಾದರಿಯಲ್ಲಿಯೇ ಕರ್ನಾಟಕ ಚರಿತ್ರೆಯನ್ನು ರಚಿಸುವ ಹಾಗೂ ಅದರ ಸಂಶೋಧನೆಗೆ ಸೂಕ್ತ ಅನುದಾನದ ಅನುಕೂಲ ಮಾಡಿಕೊಡುವ ಒಂದು ಹೊಸ ಸಂಸ್ಥೆ ಸ್ಥಾಪಿತವಾಗಲು ಸಾಧ್ಯ. ■

ತುಮಕೂರು ಜಿಲ್ಲೆ, ತಿಪಟೂರು ತಾಲ್ಲೂಕು ಅರಳಗುಪ್ಪೆಯ ಕೆರೆಯ ಆವರಣದಲ್ಲಿದ್ದ ಅಪ್ರಕಟಿತ ಯೂಪಸ್ತಂಭ ಶಾಸನ

ಎಸ್. ಕಾರ್ತಿಕ್
413, ಕರ್ನಾಟಕ 'ಡಿ' ಗ್ರೂಪ್ ಎಂಪ್ಲಾಯಿಸ್ ಲೇಔಟ್, 1 ನೆಯ ಬ್ಲಾಕ್, 6 ನೆಯ ಮುಖ್ಯರಸ್ತೆ, ಲಿಂಗಧೀರನಹಳ್ಳಿ (ಹೇರೋಹಳ್ಳಿ), ಅಂದ್ರಹಳ್ಳಿ ಮುಖ್ಯರಸ್ತೆ, ಪಿಶ್ಸೋಡಂ ಅಂಚೆ, ಬೆಂಗಳೂರು–560091
ಮೊ: 9448324122
saigottan@gmail.com

ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನ ಅರಳಗುಪ್ಪೆ ಗ್ರಾಮದ ಕೆರೆಯ ಆವರಣದಲ್ಲಿ ಬಹಳ ಹಿಂದೆಯೇ ಇದ್ದು, ಪ್ರಕೃತ ಪ್ರಕಟವಾಗುತ್ತಿರುವ ಶಿಲಾಶಾಸನವು ಹನ್ನೊಂದು ಸಾಲುಗಳ ಪಾಠವನ್ನು ಒಳಕೊಂಡಿದ್ದು, ನಮ್ಮ ಗಮನಕ್ಕೆ ಬಂದಂತೆ ಇದುವರೆಗೂ ಪ್ರಕಟವಾಗಿಲ್ಲ. ಈಗ ಪ್ರಕಟವಾಗುತ್ತಿರುವ ಈ ಶಾಸನಪಾಠವು ಎಂ. ಹನುಮಂತರಾಯರು ಸಿದ್ಧಪಡಿಸಿಟ್ಟುಕೊಂಡಿದ್ದ, ಅವರದೇ ಸ್ವಹಸ್ತಾಕ್ಷರ ಪ್ರತಿಯನ್ನು ಅವಲಂಬಿಸಿದೆ. ಇದನ್ನು ಹನುಮಂತರಾಯರು ಕ್ರಿ.ಶ. 1940 ರ ಸುಮಾರಿನಲ್ಲಿ ಸ್ವತಃ ಕ್ಷೇತ್ರಕಾರ್ಯಕ್ಕೆ ತೆರಳಿ ಸಿದ್ಧಪಡಿಸಿರುವುದಾಗಿ ತಿಳಿದುಬರುತ್ತದೆ. ಇದರಲ್ಲಿ ಶಾಸನ ಮತ್ತು ಶಾಸನಪಾಠದ ಬಗೆಗೆ ಸಂಕ್ಷಿಪ್ತ ಮಾಹಿತಿಯೂ ಇದೆ. ಎಂ. ಹನುಮಂತರಾಯರು ಮೈಸೂರು ಪುರಾತತ್ತ್ವ ಇಲಾಖೆಯಲ್ಲಿ ಶಾಸನತಜ್ಞರಾಗಿ ನಂತರ ಉಪನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸಿ, ನಿವೃತ್ತಿಯ ನಂತರ ಮೈಸೂರು ವಿಶ್ವವಿದ್ಯಾನಿಲಯದ ಪ್ರತಿಷ್ಠಿತ ಯೋಜನೆಯಾದ ಎಪಿಗ್ರಾಫಿಯ ಕರ್ನಾಟಿಕ ಪರಿಷ್ಕೃತ 1 ರಿಂದ 8 ವರೆಗಿನ ಶಾಸನ ಸಂಪುಟಗಳ ಸಂಬಂಧದಲ್ಲಿ ಉಪಶಾಸನತಜ್ಞರಾಗಿ

ಸೇವೆಸಲ್ಲಿಸಿದರು (ಕ್ರಿ.ಶ. 17-12-1971 ರಿಂದ 30-11-1980 ರ ವರೆಗೆ). ಹನುಮಂತರಾಯರು ನಿಧನರಾಗುವ {ಕ್ರಿ.ಶ. 20-5-2007} ಮೊದಲು ತಮ್ಮಲ್ಲಿದ್ದ ಕೆಲವು ಶಾಸನಪಾಠಗಳನ್ನು ಎಪಿಗ್ರಾಫಿಯ ಕರ್ನಾಟಿಕ ಪರಿಷ್ಕೃತ ಸಂಪುಟಗಳ ಯೋಜನೆಯಲ್ಲಿಯೇ ಶಾಸನತಜ್ಞರಾಗಿ ಕಾರ್ಯನಿರ್ವಹಿಸಿ ಈಗ ನಿವೃತ್ತರಾಗಿರುವ {ಸೇವೆಗೆ ಸೇರಿದ ದಿನಾಂಕ : ಕ್ರಿ.ಶ. 16-12-1971, ನಿವೃತ್ತಿ : ಕ್ರಿ.ಶ. 30-9-2007} ಎಚ್.ಎಂ. ನಾಗರಾಜರಾಯರಿಗೆ ಕೊಟ್ಟರು. ಈ ಸಂಗ್ರಹದಲ್ಲಿದ್ದ ಪ್ರಕೃತ ಶಾಸನಪಾಠವನ್ನೊಳಕೊಂಡ ಎಂ. ಹನುಮಂತರಾಯರ ಸ್ವಹಸ್ತಾಕ್ಷರ ಪ್ರತಿಯನ್ನು ಎಚ್. ಎಂ. ನಾಗರಾಜರಾಯರು ಪ್ರಕೃತ ಲೇಖಕನಿಗೆ ಪ್ರಕಟನೆಗಾಗಿ ವಿಶ್ವಾಸದಿಂದ ಕೊಟ್ಟಿರುತ್ತಾರೆ. ಇದಕ್ಕಾಗಿ ನಾಗರಾಜರಾಯರಿಗೆ ನಮ್ಮ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ಶಾಸನಪಾಠವನ್ನು ಹಸ್ತಪ್ರತಿಯಲ್ಲಿರುವಂತೆಯೇ ಯಥಾವತ್ತಾಗಿ ದಾಖಲಿಸಲಾಗಿದ್ದು ಹನುಮಂತರಾಯರು ಬರೆದಿಟ್ಟುಕೊಂಡಿದ್ದ ಇಂಗ್ಲಿಷ್ ವಿವರಣೆಯನ್ನು ಕೆಳಗೆ ಯಥಾವತ್ತಾಗಿ ದಾಖಲಿಸಲಾಗಿದೆ {ಇಂಗ್ಲಿಷ್ ವಿವರಣೆಯ ಕನ್ನಡರೂಪ ಪ್ರಕೃತ ಲೇಖಕನದ್ದಾಗಿದೆ}.1

'Three of the Four Pillars Standing in the Tank-Yard at Aralaguppe Bear Inscription. All Are in Nagari and may belong to about the 16th or 17th Century A.D. Only one of them could be completely read which say that it is the Yupastambha of the Agnistoma'.

[ಕೆರೆಯ ಆವರಣದಲ್ಲಿ ಕಂಡುಬಂದಿರುವ ನಾಲ್ಕರಲ್ಲಿ 3 ಕಂಬಗಳು ಶಾಸನಗಳನ್ನು ಹೊಂದಿದೆ. ಎಲ್ಲವೂ ನಾಗರೀ ಲಿಪಿಯಲ್ಲಿದ್ದು ಇವುಗಳ ಕಾಲವನ್ನು ಬಹುಶಃ 16 ಅಥವಾ 17 ನೆಯ ಶತಮಾನಕ್ಕೆ ಸೇರಿಸಬಹುದು. ಇವುಗಳಲ್ಲಿ ಒಂದನ್ನು ಮಾತ್ರ ಸಂಪೂರ್ಣವಾಗಿ ಓದಲು ಸಾಧ್ಯವಿದ್ದು ಇದು ಅಗ್ನಿಷ್ಟೋಮ ಯಾಗದ ಯೂಪಸ್ತಂಭ ಎಂದು ತಿಳಿದುಬರುತ್ತದೆ]

ಅರಳಗುಪ್ಪೆಯು ಗಂಗ-ನೊಳಂಬರ ಕಾಲದಿಂದಲೂ ಪ್ರಸಿದ್ಧವಾದ ಸ್ಥಳವಾಗಿದ್ದು ಹೊಯ್ಸಳರ ಕಾಲದಲ್ಲಿ ಬಹುವಾಗಿ ಮುನ್ನೆಲೆಗೆ ಬಂದಿದೆ. ಇಲ್ಲಿರುವ ಕಲ್ಲೇಶ್ವರ ದೇವಾಲಯವು ತನ್ನ ಅದ್ವಿತೀಯ ವಾಸ್ತುವಿನಿಂದಾಗಿ ಪ್ರಸಿದ್ಧವಾಗಿದೆ.2 ಶಾಸನಗಳಲ್ಲಿ ಅರಳಗುಪ್ಪೆಯನ್ನು ಅಳರಿಗುಪ್ಪೆ ಎಂದು ಕರೆಯಲಾಗಿದೆ. ಅರಳಗುಪ್ಪೆಯಲ್ಲಿ ನಮ್ಮ ಗಮನಕ್ಕೆ ಬಂದಂತೆ ಇದುವರೆಗೂ ಐದು ಶಾಸನಗಳು ಮಾತ್ರ ಲಭ್ಯವಾಗಿದ್ದು, ಪ್ರಕಟವಾಗಿವೆ.3 ಇವುಗಳಲ್ಲದೆ ಇನ್ನೂ ಕೆಲವು ಅಪ್ರಕಟಿತ ಶಾಸನಗಳಿರುವಂತೆ ತೋರುತ್ತದೆ. ಇವುಗಳ ಪ್ರಕಟನೆ ಅತ್ಯಗತ್ಯವಾಗಿದೆ.

ಪ್ರಕೃತ ಪ್ರಕಟವಾಗುತ್ತಿರುವ ಯೂಪಸ್ತಂಭ ಶಾಸನದ ಲಭ್ಯ ಸ್ಥಳವನ್ನು ಎಂ. ಹನುಮಂತರಾಯರು ಅರಳಗುಪ್ಪೆಯಲ್ಲಿನ ಕೆರೆಯ ಆವರಣದಲ್ಲಿ ಬಿದ್ದಿರುವ ಕಂಭ ಎಂದು ದಾಖಲಿಸಿದ್ದಾರೆ. ಈ ಶಾಸನದ ಪಾಠವು ಕನ್ನಡ ಭಾಷೆ ನಾಗರೀ ಲಿಪಿಯಲ್ಲಿದ್ದು ಸ್ತಂಭದ ಮೇಲೆ ಕೆತ್ತಲಾಗಿದೆ. ಆದರೆ ಇಂದು ಕೆರೆಯ ಆವರಣದಲ್ಲಿ ಒಂದೆರಡು ಕಲ್ಲಿನ

ಯೂಪಸ್ತಂಭಗಳಿದ್ದು, ಅವು ಮುರಿದುಬಿದ್ದು ಹಾಳಾಗಿವೆ (ಚಿತ್ರ-1). ಇವುಗಳ ಮೇಲೆ ಶಾಸನವಾವುದೂ ಈಗ ಕಂಡುಬರುತ್ತಿಲ್ಲ. ಒಂದು ಸ್ತಂಭ ಮಾತ್ರ ಸುಸ್ಥಿತಿಯಲ್ಲಿ ನಿಂತಿದೆ (ಚಿತ್ರ-2). ಇದರ ಮೇಲೆ ಈಗ ಅಕ್ಷರಗಳೇನೂ ಕಂಡುಬರುತ್ತಿಲ್ಲ. ಇದರಿಂದ ಹನುಮಂತರಾಯರು ಸಂಗ್ರಹಿಸಿದ್ದ ಶಾಸನಪಾಠವಿದ್ದ ಯೂಪಸ್ತಂಭ ಹಾಳಾಗಿರಬಹುದು ಇಲ್ಲವೇ ಸುಸ್ಥಿತಿಯಲ್ಲಿ ನಿಂತಿರುವ ಯೂಪಸ್ತಂಭವೇ ಶಾಸನವಿದ್ದ ಸ್ತಂಭವಾಗಿದ್ದು ಶಾಸನಪಾಠ ನಾಶವಾಗಿರಬಹುದು ಎಂಬುದಾಗಿ ತಿಳಿಯಲು ಸಾಧ್ಯವಿದೆ.

ಪ್ರಕೃತ ಪ್ರಕಟವಾಗುತ್ತಿರುವ ಶಾಸನವು ಯೂಪಸ್ತಂಭ ಶಾಸನವಾಗಿರುವುದು ಪ್ರಮುಖ ಅಂಶ. ಇದರಲ್ಲಿ ಮಾಧವಭಟ್ಟರ ಮಗ ಮಾಯಿದೇವ ದೀಕ್ಷಿತರು ಮಾಡಿದ ಅಗ್ನಿಷ್ಟೋಮ ಯಾಗದ ಯೂಪಸ್ತಂಭ ಎಂಬ ವಿವರ ದಾಖಲಾಗಿದೆ. ಇದನ್ನು ಬಿಟ್ಟರೆ ಹೆಚ್ಚಿನ ಮಾಹಿತಿಯೇನೂ ಇದರಿಂದ ತಿಳಿದು ಬರುವುದಿಲ್ಲ. ಇಂದಿನ ಕರ್ನಾಟಕದಲ್ಲಿ ಯೂಪಸ್ತಂಭಗಳು ಮತ್ತು ಯೂಪಸ್ತಂಭಗಳನ್ನು ಉಲ್ಲೇಖಿಸುವ ಶಾಸನಗಳು ಹೆಚ್ಚೇನೂ ದೊರೆತಿರುವಂತೆ ತೋರುವುದಿಲ್ಲ. ಬೆಳಗಾವಿ ಜಿಲ್ಲೆ ವಡಗಾವ್ ಮಾಧವಪುರದಲ್ಲಿ ದೊರೆತಿರುವ ಕ್ರಿ.ಶ. ಸು. 2 ನೆಯ ಶತಮಾನದ, ಶಾತವಾಹನರ ಕಾಲದ, ಬ್ರಾಹ್ಮೀಲಿಪಿ, ಪ್ರಾಕೃತ ಭಾಷೆಯ ಶಾಸನವೇ ಲಭ್ಯ ಪ್ರಥಮ ದಾಖಲೆಯಾಗಿದೆ.4 ಇದರ ನಂತರದಲ್ಲಿ ಚಿಕ್ಕಮಗಳೂರು ಜಿಲ್ಲೆ ಮತ್ತು ತಾಲ್ಲೂಕಿನ ಹಿರೇಮಗಳೂರಿನಲ್ಲಿ ಬ್ರಾಹ್ಮೀ ಲಿಪಿ, ಪ್ರಾಕೃತ ಭಾಷೆಯ ಶಾಸನ ದೊರೆತಿದ್ದು, ಇದರ ಕಾಲವನ್ನು ಕ್ರಿ.ಶ. ಸು. 2-3 ನೆಯ ಶತಮಾನ ಎಂದು ಲಿಪಿಯ ಆಧಾರದಿಂದ ತಿಳಿಯಲಾಗಿದೆ.5 ಇದರಲ್ಲಿ ಅಶ್ವಯೂಪ ಎಂಬ ಬರಹವಿದೆ. ಕೋಲಾರ ಜಿಲ್ಲೆ, ಬಾಗೇಪಲ್ಲಿ ತಾಲ್ಲೂಕಿನ ಮಂಗಸಂದ್ರ ಗ್ರಾಮದಲ್ಲಿರುವ ಕನ್ನಡಲಿಪಿ, ತೆಲುಗು ಭಾಷೆಯ ಶಾಸನದಲ್ಲಿ ವಾಜಪೇಯ, ಸರ್ವತೋಮುಖ, ಪ್ರತಿವಸಂತಯಾಜಿ ಎಂದು ಪ್ರಸಿದ್ಧರಾದ ಸರ್ವಕ್ರತು ಸೋಮನಾಥ ದೀಕ್ಷಿತರ ಸರ್ವಪೃಷ್ಠಾಪ್ತೋರ್ಯಾಮದ ಯೂಪಕಂಭ ಎಂಬ ಉಲ್ಲೇಖವಿದೆ. ಈ ಶಾಸನದ ಕಾಲವನ್ನು ಚಾಂದ್ರಮಾನ ಪಂಚಾಂಗದಂತೆ ಕ್ರಿ.ಶ. 20-2-1418, ಶನಿವಾರವೆಂದು ಹೇಳಬಹುದು.6 ಕೋಲಾರ ಜಿಲ್ಲೆ, ಮುಳಬಾಗಲು ತಾಲ್ಲೂಕಿನ ಆವನಿಯಲ್ಲಿ 'ಯೂಪಕಂಭ' ಎಂದು ಮಾತ್ರ ಬರಹವಿರುವ ಕನ್ನಡ ಲಿಪಿಯ ಶಾಸನವೊಂದಿದೆ. ಇದರ ಕಾಲವನ್ನು ಕ್ರಿ.ಶ. ಸು. 1550 ಎಂದು ತಿಳಿಯಲಾಗಿದೆ.7 ಇವುಗಳನ್ನು ಹೊರತುಪಡಿಸಿದರೆ ಹೆಚ್ಚಿನ ಉದಾಹರಣೆಗಳು ದೊರೆತಿರುವಂತೆ ತೋರುವುದಿಲ್ಲ. ಕನ್ನಡ ಕಾವ್ಯಗಳು, ಶಾಸನಗಳಲ್ಲಿ ಯೂಪಸ್ತಂಭಗಳ ಉಲ್ಲೇಖವೇನೋ ಬಹಳವಾಗಿಯೇ ದೊರಕುತ್ತದೆ. ಇವುಗಳ ಬಗೆಗೆ ಎಂ. ಚಿದಾನಂದಮೂರ್ತಿ ಅವರು ಅಧ್ಯಯನಗೈದು ವಿಸ್ತೃತವಾದ ಸಂಪ್ರಬಂಧವನ್ನು ರಚಿಸಿದ್ದಾರೆ.8 ಪ್ರಕೃತ ಲೇಖನದಲ್ಲಿ ಶಾಸನಪಾಠದ ಪ್ರಕಟನೆಯನ್ನೇ ಮುಖ್ಯವಾಗಿರಿಸಿಕೊಳ್ಳಲಾಗಿರುವುದರಿಂದ ಯೂಪಸ್ತಂಭಗಳ ಬಗೆಗೆ ಯಾವುದೇ ಹೆಚ್ಚಿನ ವಿಶ್ಲೇಷಣೆಯನ್ನು ಮಾಡಲು ಹೋಗಿಲ್ಲ. ಆಸಕ್ತರು ಹೆಚ್ಚಿನ ಮಾಹಿತಿಗೆ ಎಂ. ಚಿದಾನಂದಮೂರ್ತಿ ಅವರ ಸಂಪ್ರಬಂಧವನ್ನು ಗಮನಿಸಬೇಕಾಗಿ ವಿನಂತಿ. ಇದರಲ್ಲಿ ಶಾಸನಗಳು, ಸಾಹಿತ್ಯ ಕೃತಿಗಳು ಇವುಗಳಲ್ಲಿನ


ದಾಖಲಾತಿಗಳು, ಸಮಸ್ಯೆಗಳು ಮುಂತಾದ ಅನೇಕ ಅಂಶಗಳು ವಿಶದವಾಗಿ ಪ್ರತಿಪಾದಿತವಾಗಿವೆ. ಅರಳಗುಪ್ಪೆಯ ಕೆರೆಯ ಅಂಗಳದಲ್ಲಿ ಮುರಿದುಬಿದ್ದಿರುವ ಯೂಪಸ್ತಂಭಗಳನ್ನು ಸಂರಕ್ಷಿಸುವ ಕಾರ್ಯ ಜಾಗ್ರತೆಯಾಗಿ ನಡೆಯಬೇಕಾಗಿದೆ. ಏಕೆಂದರೆ ಇಂತಹ ರಚನೆಗಳು ಕರ್ನಾಟಕದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದೊರೆತಿಲ್ಲ. ಇವುಗಳೊಂದಿಗೆ ಶಾಸನಗಳನ್ನೂ ಸಂರಕ್ಷಿಸಬೇಕು. ಎಂ. ಹನುಮಂತರಾಯರ ಕಾರಣದಿಂದ ಪ್ರಕೃತ ಶಾಸನದ ಪಾಠ ಲಭ್ಯವಾಗಿರುವುದು ಸಂತಸದ ಸಂಗತಿಯಾಗಿದೆ. ಇದರ ಸಂಪೂರ್ಣ ಶ್ರೇಯಸ್ಸು ಹನುಮಂತರಾಯರಿಗೇ ಸಲ್ಲಬೇಕು. ಇದೇ ರೀತಿಯಾಗಿ ಹೆಚ್ಚಿನ ಅಧ್ಯಯನ ಮತ್ತು ಶೋಧ ಕಾರ್ಯ ನಡೆದರೆ ಮತ್ತಷ್ಟು ಅಪ್ರಕಟಿತ ಶಾಸನಗಳು, ಹೊಸ ವಿವರಗಳು ಬೆಳಕಿಗೆ ಬರುವುದರಲ್ಲಿ ಯಾವುದೇ ಸಂದೇಹವಿಲ್ಲ.

[ಈ ಲೇಖನಕ್ಕೆ ಅಗತ್ಯವಿದ್ದ ಅರಳಗುಪ್ಪೆಯ ಯೂಪಸ್ತಂಭಗಳ ಛಾಯಾಚಿತ್ರಗಳನ್ನು ನೀಡಿದ ಶಾಸನತಜ್ಞ ಪಿ.ವಿ. ಕೃಷ್ಣಮೂರ್ತಿ ಅವರಿಗೂ, ಸುಂಕಂ ಗೋವರ್ಧನ ಅವರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.]

ತಿಪಟೂರು ತಾಲ್ಲೂಕು ಅರಳಗುಪ್ಪೆಯ ಕೆರೆಯ ಆವರಣದಲ್ಲಿದ್ದ ಯೂಪಸ್ತಂಭ ಶಾಸನ

ಶಾಸನಪಾಠ

1 ಮಾ
2 ಧವ ಭ
3 ಟ್ಟರ ಮ
4 ಕ್ಕಳು
5 ಮಾಯಿ
6 ದೇವ ದೀ
7 ಕ್ಷಿತರ
8 ಮಗ್ನಿ
9 ಷ್ಟೋಮ
10 [ದ] ಯೂ
11 ಪ ಸ್ತಂ[ಭ]



ಚಿತ್ರ–1



ಚಿತ್ರ–2

ಆಧಾರಸೂಚಿ ಮತ್ತು ಟಿಪ್ಪಣಿಗಳು

1. ಎಂ. ಹನುಮಂತರಾಯರ ಬಗೆಗೆ ಹೆಚ್ಚಿನ ವಿವರಗಳಿಗೆ ನೋಡಿ : ಎಚ್. ಎಂ. ನಾಗರಾಜರಾವ್, 2013, 'ಸರಳ ಹಿರಿಯ ಶ್ರೀ ಎಂ. ಹನುಮಂತರಾವ್', **ಚಿತ್ರ–ಚೌಕಟ್ಟು (ವ್ಯಕ್ತಿಚಿತ್ರ ಮಾಲೆ)**, ಮೈಸೂರು: ರಚನಾ ಪ್ರಕಾಶನ. ಪುಟ: 24–29.

2. ಅರಳಗುಪ್ಪೆಯ ಕಲ್ಲೇಶ್ವರ ದೇವಾಲಯ ಮತ್ತು ವಾಸ್ತುಶಿಲ್ಪ ಇವುಗಳ ಬಗೆಗೆ ಹೆಚ್ಚಿನ ಮಾಹಿತಿಗೆ ಕೆಳಗೆ ನೀಡಿರುವ ಆಕರಗಳನ್ನು ನೋಡಬಹುದು :

(ಅ) Sarma I. K., 1992, **'Temples of the Gangas of Karnataka',** Architectural Survey of Temples, Number-6, New Delhi: Archaeological Survey Of India. Pp. 88-91.

(ಆ) Sheshadri M., 1995, 'Ashtadikpala figures from Aralaguppe', **Shesha Chandrika {Compendium of Dr. M.Shehadri's works}** (Ed.) B.R.Gopal,

D.V. Devaraj, Mysore: Directorate of Archaeology and Museums of Karnataka. Pp 291-292, with Pictures.

(ಇ) ಶಿವರುದ್ರಸ್ವಾಮಿ ಎಸ್. ಎನ್., 2009, 'ಅರಳಗುಪ್ಪೆಯ ಕಲ್ಲೇಶ್ವರ ದೇಗುಲದ ಅಷ್ಟದಿಕ್ಪಾಲಕರ ಪಟ್ಟಿಕೆ', **ತುಮಕೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ತ್ವ** (ಸಂ.) ಆರ್. ಗೋಪಾಲ್, ಮೈಸೂರು: ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ. ಪುಟ: 168–179.

3. ಲೂಯಿ ರೈಸ್ ಬಿ., (ಸಂ.), 1904, **ಎಪಿಗ್ರಾಫಿಯ ಕರ್ನಾಟಿಕ, ಸಂಪುಟ–12** (ತುಮಕೂರು ಜಿಲ್ಲೆ), ಬೆಂಗಳೂರು: ಮೈಸೂರು ಪುರಾತತ್ತ್ವ ಇಲಾಖೆ. ತಿಪಟೂರು ತಾಲ್ಲೂಕು, ಶಾಸನ ಸಂಖ್ಯೆ: 55–59.

4. Vadgaon-Madhavpur Memorial Pillar Inscription of Somayasas, [Day] 10082 - S. Sankaranarayanan, **Epigraphia Indica, volume-39,** No-28, Pp. 183-188.

5. ಎಪಿಗ್ರಾಫಿಯ ಕರ್ನಾಟಿಕ, ಸಂಪುಟ–11 (ಪರಿಷ್ಕೃತ), ಚಿಕ್ಕಮಗಳೂರು–78, ಪುಟ: 44.

6. ಲೂಯಿ ರೈಸ್ ಬಿ., (ಸಂ.), 1905, **ಎಪಿಗ್ರಾಫಿಯ ಕರ್ನಾಟಿಕ, ಸಂಪುಟ–10,** ಭಾಗ–1, 2 (ಕೋಲಾರ ಜಿಲ್ಲೆ), ಬೆಂಗಳೂರು: ಮೈಸೂರು ಪುರಾತತ್ತ್ವ ಇಲಾಖೆ. ಬಾಗೇಪಲ್ಲಿ ತಾಲ್ಲೂಕು, ಶಾಸನ ಸಂಖ್ಯೆ–17.

7. ಕೃಷ್ಣಮೂರ್ತಿ ಪಿ.ವಿ., 1994, **ಸುಗುಟೂರು ವೀರಶೈವ ಅರಸುಮನೆತನ,** ಧಾರವಾಡ: ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ. ಪುಟ: 73–74.

8. ಚಿದಾನಂದಮೂರ್ತಿ ಎಂ., 2010 (ಪರಿಷ್ಕೃತ, ವಿಸ್ತೃತ), 'ಯೂಪಸ್ತಂಭಗಳು', **ಹೊಸತು ಹೊಸತು,** ಬೆಂಗಳೂರು: ಸಪ್ನ ಬುಕ್ ಹೌಸ್. ಪುಟ: 645–657.

■

ಇತಿಹಾಸ ದರ್ಪಣದ ಹಿಂದಿನ ಸಂಚಿಕೆಗಳ ದರ ಪಟ್ಟಿ

ಸಂಚಿಕೆಗಳು	ರೂ.	✓	ಪುಸ್ತಕಗಳು	ರೂ.	✓
ಇತಿಹಾಸ ದರ್ಪಣ ಪುಸ್ತಕ –1*	10		ಇತಿಹಾಸ ದರ್ಪಣ ಪುಸ್ತಕ –16	40	
ಇತಿಹಾಸ ದರ್ಪಣ ಪುಸ್ತಕ –2*	10		ಇತಿಹಾಸ ದರ್ಪಣ ಪುಸ್ತಕ –17	60	
ಇತಿಹಾಸ ದರ್ಪಣ ಪುಸ್ತಕ –3*	10		ಇತಿಹಾಸ ದರ್ಪಣ ಪುಸ್ತಕ –18	70	
ಇತಿಹಾಸ ದರ್ಪಣ ಪುಸ್ತಕ –4*[1]	90		ಇತಿಹಾಸ ದರ್ಪಣ ಪುಸ್ತಕ –19	75	
ಇತಿಹಾಸ ದರ್ಪಣ ಪುಸ್ತಕ –5	10		ಇತಿಹಾಸ ದರ್ಪಣ ಪುಸ್ತಕ –20	75	
ಇತಿಹಾಸ ದರ್ಪಣ ಪುಸ್ತಕ –6,7*	20		ಇತಿಹಾಸ ದರ್ಪಣ ಪುಸ್ತಕ –21,22	150	
ಇತಿಹಾಸ ದರ್ಪಣ ಪುಸ್ತಕ –8 [2]	100		ಇತಿಹಾಸ ದರ್ಪಣ ಪುಸ್ತಕ –23	80	
ಇತಿಹಾಸ ದರ್ಪಣ ಪುಸ್ತಕ –9	20		ಇತಿಹಾಸ ದರ್ಪಣ ಪುಸ್ತಕ –24	90	
ಇತಿಹಾಸ ದರ್ಪಣ ಪುಸ್ತಕ –10	30		ಇತಿಹಾಸ ದರ್ಪಣ ಪುಸ್ತಕ –25 [4]	180	
ಇತಿಹಾಸ ದರ್ಪಣ ಪುಸ್ತಕ –11	30		ಇತಿಹಾಸ ದರ್ಪಣ ಪುಸ್ತಕ –26	75	
ಇತಿಹಾಸ ದರ್ಪಣ ಪುಸ್ತಕ–12, 13[3]	110		ಇತಿಹಾಸ ದರ್ಪಣ ಪುಸ್ತಕ –27	100	
ಇತಿಹಾಸ ದರ್ಪಣ ಪುಸ್ತಕ –14	30		ಇತಿಹಾಸ ದರ್ಪಣ ಪುಸ್ತಕ –28	100	
ಇತಿಹಾಸ ದರ್ಪಣ ಪುಸ್ತಕ –15	40		ಇತಿಹಾಸ ದರ್ಪಣ ಪುಸ್ತಕ – 29	100	

ಒಟ್ಟು ಮೊತ್ತ ....

ಹಿಂದಿನ ಸಂಚಿಕೆಗಳು ಬೇಕಾಗಿರುವವರು ಅವಶ್ಯವಿರುವ ಸಂಚಿಕೆಗಳನ್ನು ಗುರುತು ಮಾಡಿ, ಅವುಗಳ ಒಟ್ಟು ಮೊಬಲಗುವನ್ನು **"Editor, Itihasa Darpana"** ಹೆಸರಿಗೆ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ತೆಗೆಸಿದ **ಚೆಕ್ / ಡಿ.ಡಿ** ಮೂಲಕ ಪಟ್ಟಿಯನ್ನು ನಮ್ಮ ವಿಳಾಸಕ್ಕೆ ಕಳುಹಿಸಿ ಕಳುಹಿಸಕೊಟ್ಟಲ್ಲಿ ತಮಗೆ ಅಂಚೆಯ ಮೂಲಕ ಕಳುಹಿಸಿಕೊಡಲಾಗುವುದು.

ವಿಶೇಷ ಕೊಡುಗೆ: ***ಇತಿಹಾಸ ದರ್ಪಣ*** ನಿಯತಕಾಲಿಕೆಯ ಎಂಟನೇ ವಾರ್ಷಿಕೋತ್ಸವದ ಪ್ರಯುಕ್ತ ರೂ. 500/– ಮೇಲ್ಪಟ್ಟ ಮೊತ್ತದ ಸಂಚಿಕೆಗಳ ಖರೀದಿಯ ಮೇಲೆ ಶೇ 15% ರಷ್ಟು ಹಾಗೂ ರೂ. 1000/– ಮೇಲ್ಪಟ್ಟ ಮೊತ್ತದ ಪುಸ್ತಕ ಖರೀದಿಯ ಮೇಲೆ ಶೇ 25% ರಷ್ಟು ವಿಶೇಷ ರಿಯಾಯಿತಿಯನ್ನು ನೀಡಲಾಗುವುದು.

-ಸಂಪಾದಕರು.

ನಮ್ಮ ವಿಳಾಸ: ಸಂಪಾದಕರು, ಇತಿಹಾಸ ದರ್ಪಣ, #33/ಎ, ಐ.ಟಿ.ಐ ಕಾಲೇಜು ಹತ್ತಿರ, ಕೆಂಪೇಗೌಡನಗರ, ವಿಶ್ವನೀಡಂ – ಅಂಚೆ, ಬೆಂಗಳೂರು – 560091. ಮೊ. 7829404063.

ಕೃಷ್ಣ(ದೇವ)ರಾಯ ಮತ್ತು ವಿಜಯನಗರ ಸಾಮ್ರಾಜ್ಯ – ವಿಶೇಷ ಸಂಚಿಕೆ.
ನಮ್ಮ ಬೆಂಗಳೂರು – ವಿಶೇಷ ಸಂಚಿಕೆ.
ಕರ್ನಾಟಕದಲ್ಲಿ ಪುರಾತತ್ವ ಅಧ್ಯಯನಗಳು – ವಿಶೇಷ ಸಂಚಿಕೆ.
ಹೈದರಾಲಿ ಮತ್ತು ತೀಪೂ ಸುಲ್ತಾನರ ಮೂಲ ದಾಖಲೆ– ವಿಶೇಷ ಸಂಚಿಕೆ.
ಸಂಚಿಕೆಗಳು ಲಭ್ಯವಿರುವುದಿಲ್ಲ.

ITIHASA DARPANA (Kannada Quarterly) : A Peer Reviewed Journal of Historical Research in Kannada, Book: 35, October-December 2017, Pages: 104, Edited by: Rajesh H.G. # 33/A, Near I.T.I. College, Kempegowda Nagara, Vishwaneedam Post, Bengaluru-560 091. Mob.: 7829404063. *Email: itihasadarpana@gmail.com, Website: itihasadarpana.wordpress.com*



ISSN 232-1359

ರಕ್ಷಾಪುಟ ಚಿತ್ರ: ಶೃಂಗಾರಮಯ ವೇಷ ಭೂಷಣಗಳಿಂದ ಕೂಡಿದ ಮನುಷ್ಯರು, ಯಲ್ಲಮ್ಮನಗುಡ್ಡ (ಚಿತ್ರ: ಮೋಹನ ಆರ್.)

ಬೆಲೆ: ₹90/-